ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 3
ಸಂಚಿಕೆ 2
ಏಪ್ರಿಲ್ - ಜೂನ್ 1974

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 3 No. 2 April–June 1974

Chief Editor : Dr. G. S. Sivarudrappa

ವಾರ್ಷಿಕ ಚಂದಾ : ರೂ. 6–00
ರೂ. 4–00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

ಪರಿವಿಡಿ

ಜ್ಞಾನ ಭಾರತಿಗೆ

ಜಿ. ಎಸ್. ಶಿವರುದ್ರಪ್ಪ

ಜಯ್ ಜ್ಞಾನಭಾರತೀ
ಶಾಸ್ತ್ರ ಕಲಾ ವಿಜ್ಞಾನದ
ಚೈತನ್ಯದ ಮೂರುತಿ

ಕರ್ನಾಟಕ ಹೃದಯದಲ್ಲಿ
ವಿಶ್ವಪ್ರಜ್ಞೆಯರಳಿಸಿ
ಶೃತಿ ಮಾಡಿದ ತಂತಿಗಳಲಿ
ಕಿರಣದ ಬೆರಳಾಡಿಸಿ
ಕಣ್ಮನಗಳ ತೆರೆಯುವಂಥ
ಮಹಾ ಮಾತೃರೂಪಿಣಿ

ಬಿಡುವಿಲ್ಲದ ದುಡಿಮೆಯಲ್ಲಿ
ಶ್ರದ್ಧೆಯಾಗಿ ವ್ಯಾಪಿಸಿ
ಸದ್ದಿಲ್ಲದ ಸಾಧನೆಯಲಿ
ಬುದ್ಧಿಯನ್ನು ತೊಡಗಿಸಿ,
ಶ್ರೇಯಸ್ಸನು ಬೆಳೆಯುವಂಥ
ವಿದ್ಯಾಲಯ ಮೂರುತಿ

ಶಕ್ತಿ ಧೈರ್ಯ ಶಾಂತಿ ಸಮತೆ
ವಿಶ್ವಾಸವ ಮೂಡಿಸಿ,
ನವಮಾನವ ನಿರ್ಮಾಣದ
ತೇಜಸ್ಸನು ಊಡಿಸಿ
ಋಜು ಪಥದಲಿ ಮುನ್ನಡೆಸುವ
ಧ್ರುವಮಂಡಲ ರೂಪಿಣಿ

ವಸ್ತುಕ ವರ್ಣಕ ಕಾವ್ಯ ವಿಚಾರ

ಎ. ಶ್ರೀಪಾದ

ಹಳಗನ್ನಡ ಸಾಹಿತ್ಯದಲ್ಲಿ ಇಂದಿನ ವಿಮರ್ಶಕರಿಗೆ ವಾದಗ್ರಸ್ತವಾಗಿ ಹಾಗೂ ಗೊಂದಲಮಯವಾಗಿ ಉಳಿದಿರುವ ವಿಷಯಗಳೆಂದರೆ 'ವಸ್ತುಕ' ಮತ್ತು 'ವರ್ಣಕ' ಎಂಬ ಎರಡು ಕಾವ್ಯಭೇದಗಳು. ಇವುಗಳ ವಿಚಾರವಾಗಿ ಇರುವ ಕಗ್ಗಂಟನ್ನು ಬಿಡಿಸಲು ವಿದ್ವಾಂಸರು ಪ್ರಯತ್ನಿಸಿದ್ದಾರೆ. ಅವರಲ್ಲಿ ಡಾ॥ ಎ. ಆರ್ ಕೃಷ್ಣಶಾಸ್ತ್ರಿಗಳು, ಕಡೆಂಗೋಡ್ಲು ಶಂಕರಭಟ್ಟರು ಮತ್ತು ಡಾ॥ ಕೆ. ಕೃಷ್ಣ ಮೂರ್ತಿ ಅವರು ವಿಚಾರಪೂರ್ಣವೂ, ಸಂಶೋಧನಾತ್ಮಕವೂ ಆದ ವಿವರಗಳನ್ನು ಪ್ರಕಟಪಡಿಸಿದ್ದಾರೆ. ಈ ಮಹನೀಯರ ವಿಚಾರಸರಣಿಯು ಗಮನೀಯವಾದುದು ಮತ್ತು ಅನುಸರಣೀಯವಾದುದು. ಆದರೂ ಅವರ ವಿಚಾರವೇ ಕೊನೆಯ ನಿರ್ಣಯವಲ್ಲ ಎಂಬ ಅನುಮಾನ ಅವರ ಲೇಖನದಿಂದ ಉಂಟಾಗುತ್ತದೆ. ಅಲ್ಲದೆ ತಮ್ಮ ಅಭಿಪ್ರಾಯಗಳೇ ಸಿದ್ಧಾಂತವೆಂದು ಅವರೂ ಹೇಳಿಲ್ಲವಾದುದರಿಂದ, ಇನ್ನೂ ಮುಂದಿನ ಸಂಶೋಧನೆಗೆ ಅವರು ಹಾದಿ ಮಾಡಿಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಈ ಪ್ರಬಂಧವು ಮುನ್ನಡೆದುದಾಗಿದೆ. ಇದರಲ್ಲಿಯೂ ಸಮಗ್ರತೆಯಾಗಲಿ ಇದಮಿತ್ಥಂ ಎಂಬ ಸಿದ್ಧಾಂತವಾಗಲಿ ಇದೆ ಎಂದು ಭಾವಿಸಲಾಗದು.

ಕವಿ ರತ್ನಾಕರನು ಭರತೇಶವೈಭವದಲ್ಲಿ ಪ್ರಾಸಂಗಿಕವಾಗಿ ಕನ್ನಡದ ಓದುಗಬ್ಬ ಹಾಡುಗಬ್ಬ ಎಂಬ ಎರಡು ಕಾವ್ಯಭೇದಗಳ ವಿಚಾರವಾಗಿ ಹೇಳಿ ಅವು ಕಬ್ಬಿನಂತೆ ರಸವತ್ತಾಗಿರಬೇಕು, ಬಿದಿರಿನಂತೆ ಇರಬಾರದು[1] ಎಂದು ಹೇಳುತ್ತಾನೆ. ಅಲ್ಲದೆ 'ರಳಕುಳ ಶಿಥಿಲ ಸಮಾಸ'ಗಳು ಕೆಲವು ಇದ್ದರೆ ಈ ಕಾವ್ಯದಲ್ಲಿ ಉಂಟು ಇಲ್ಲವಾದರೆ ಇಲ್ಲ, ಏಕೆಂದರೆ ಅವುಗಳ ಕೋಟಲೆ ಏಕೆ ಹಾಡುಗಬ್ಬದಲ್ಲಿ ಎಂಬುದು ಅವನ ಅಭಿಪ್ರಾಯ[2]. ಇದರಿಂದ ನಮಗೆ ಓದುಗಬ್ಬದ ನಿರ್ಬಂಧ, ಹಾಡುಗಬ್ಬದ ಸ್ವಾತಂತ್ರ್ಯ ಮನೋಭಾವಗಳು ಮನವರಿಕೆಯಾಗುತ್ತವೆ. ಹಾಗೆಯೇ ಮುಂದುವರೆದು,

> ಸಕಲ ಲಕ್ಷಣವು ವಸ್ತುಕಕೆ, ವರ್ಣಕಕಿಷ್ಟು । ವಿಕಳವಾದರು ದೋಷವಿಲ್ಲ ।
> ಸಕಲ ಲಕ್ಷಣಕಾಗಿ ಬಿರುಸು ಮಾಡಿದರೆ ಪು। ಸ್ತಕದ ಬದನೆಕಾಯಹುದು । [3]

---

[1] ಭರತೇಶವೈಭವ ಸಂಗ್ರಹ, ಪುಟ 1 ಪದ್ಯ 2

[2] ಅದೇ, ಪುಟ 1 ಪದ್ಯ 5

[3] ಅದೇ, ಪುಟ 2 ಪದ್ಯ 6

ಎಂದು ಹೇಳುತ್ತಾನೆ. ಎಂದರೆ ವಸ್ತುಕಕ್ಕೆ ಅಲಂಕಾರಾದಿ ಹದಿನೆಂಟು ವರ್ಣನೆಗಳು ಬೇಕು. ವರ್ಣಕದಲ್ಲಿ ಅದರ ಸಮಸ್ಯೆ ಅಷ್ಟಾಗಿ ಇಲ್ಲ ಎಂದು ಅರ್ಥವಾಗುತ್ತದೆ. ಮುಂದೆ ಆತನೆ 'ಪ್ರಚುರದಿ ಪದಿನೆಂಟು ರಚನೆಯ ಕಾವ್ಯಕ್ಕೆ ರಚಿಸುವರ್ ಆನಂತು ಪೇಳೆ '[4] ಎಂದು ಹೇಳಿಕೊಂಡಿರುವುದನ್ನು ಗಮನಿಸಬೇಕು.

ಹಾಗಾದರೆ ಈ 'ವಸ್ತುಕ' 'ವರ್ಣಕ' ಕಾವ್ಯಭೇದಗಳ ಲಕ್ಷಣವೇನು ? ಇವು ಓದುಗಬ್ಬ ಹಾಡುಗಬ್ಬಗಳೇ ? ಅಥವ ಕಥಾವಸ್ತುನಿಷ್ಠವಾದ ಕಾವ್ಯಗಳು 'ವಸ್ತುಕ'ವಾಗಿ ವರ್ಣನಾನಿಷ್ಠವಾದ ಕಾವ್ಯಗಳು 'ವರ್ಣಕ'ಗಳೆನಿಸಿಕೊಂಡವೆ ಹೇಗೆ ? ಎಂಬುದನ್ನು ನಾವು ವಿಚಾರಿಸಬೇಕಾಗಿದೆ. ಶಬ್ದಾರ್ಥಗಳನ್ನು ಗಮನದಲ್ಲಿಟ್ಟುಕೊಂಡು ಅರ್ಥಹೇಳಬೇಕಾದರೆ ವಸ್ತುನಿಷ್ಠವಾದುದು 'ವಸ್ತುಕ', ವರ್ಣನಾನಿಷ್ಠವಾದುದು 'ವರ್ಣಕ' ಎಂದು ಹೇಳಬೇಕಾಗುತ್ತದೆ. ಆದರೆ ವಸ್ತುಕ ವರ್ಣಕಗಳೆಂದು ಹೆಸರಿಸುವ ಕಾವ್ಯಗಳನ್ನು ಓದಿನೋಡಿದರೆ ತದ್ವಿರುದ್ಧವಾಗಿವೆ. 'ವಸ್ತುಕ' ಎಂದು ಕರೆಸಿಕೊಂಡಿರುವ ಕೃತಿಗಳಲ್ಲಿ ವರ್ಣನೆಯೇ ಹೆಚ್ಚಿರುವುದನ್ನೂ, ಕೆಲವು ವರ್ಣಕ ಕಾವ್ಯಗಳಲ್ಲಿ ವಸ್ತುವೇ ಪ್ರಧಾನವಾಗಿರುವುದನ್ನೂ ಸಹ ನಾವು ಕಾಣಬಹುದು. ಆದುದರಿಂದ ಈ ಕಾವ್ಯಭೇದಗಳಿಗೆ ನಿಖರವಾದ ಲಕ್ಷಣವನ್ನು ಹೇಳುವುದು ಕಷ್ಟಕರವಾದ ಸಂಗತಿಯಾಗಿದೆ. ಈ ವಿಚಾರದ ಬಗ್ಗೆ ವಿದ್ವಾಂಸರ ಅಭಿಪ್ರಾಯವನ್ನು ಪರಿಶೀಲಿಸುವುದು ಸೂಕ್ತ.

ಡಾ॥ ಎ. ಆರ್. ಕೃಷ್ಣಶಾಸ್ತ್ರಿಗಳು ಕನ್ನಡ ಕೈಪಿಡಿಯಲ್ಲಿ ಇವೆರಡರ ಬಗ್ಗೆ ಹಳಗನ್ನಡ ಕಾವ್ಯಗಳನ್ನು ಪರಿಶೀಲಿಸಿ, "ಸಂಸ್ಕೃತ ಚಂಪೂಲಕ್ಷಣವನ್ನು, ಸರಣಿಯನ್ನು ಅನುಸರಿಸಿ ಬರೆದಿರುವ ಗದ್ಯಪದ್ಯಾತ್ಮಕವಾದ ಕಾವ್ಯಕ್ಕೆ ವಸ್ತುಕವೆಂದು, ಯಾವುದೊಂದು ವಿಶೇಷ ಕಾವ್ಯಲಕ್ಷಣಗಳನ್ನಾಗಲಿ ಸಂಸ್ಕೃತ ಕಾವ್ಯ ಮಾದರಿಯನ್ನಾಗಲಿ, ಇಟ್ಟುಕೊಳ್ಳದೆ ಬರೆದಿರುವ ಪದ್ಯಕಾವ್ಯಕ್ಕೆ ವರ್ಣಕವೆಂದು ಹೆಸರು ಸಲ್ಲುವಂತೆ ಹೇಳಬೇಕಾಗುತ್ತದೆ "[5] ಎಂದು ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ' ಇದರ್ಕೆ ವಸ್ತುಕಮೆಂದುಂ ಪೆಸರ್ '[6] ಎಂದು ಅಪ್ರತಿಮ ವೀರಚರಿತ್ರೆಯಲ್ಲಿ ಹೇಳಿದ ಮಾತು ಇವರಿಗೆ ಆಧಾರವಾಗಿದ್ದಂತೆ ಕಾಣಿಸುತ್ತದೆ.

ಕೃಷ್ಣಶಾಸ್ತ್ರಿಗಳ ಈ ಹೇಳಿಕೆಯನ್ನು ಕಡೆಂಗೋಡ್ಲು ಶಂಕರಭಟ್ಟರು ಒಪ್ಪಿಲ್ಲ. ಅವರು ಕೊಡುವ ಕಾರಣ "ವಸ್ತುಕ (ಎನ್ನುವ) ಪದವು ವ್ಯಾಪಕಾರ್ಥವನ್ನು

---

[4] ಭರತೇಶವೈಭವ ಸಂಗ್ರಹ, ಪುಟ 2 ಪದ್ಯ 10

[5] ಕನ್ನಡ ಕೈಪಿಡಿ, ಸಂ 1 ಪುಟ 184 (1955)

[6] ಅದೇ ಪುಟ 185

ಒಳಗೊಂಡಿರುವುದರಿಂದ ಗದ್ಯಪದ್ಯಾತ್ಮಕವಾಗಿ ಅಥವ ಚಂಪೂರೂಪದಲ್ಲಿ ರಚಿತವಾದ ಕೆಲ ಕಾವ್ಯಗಳನ್ನು ಆ ಪದದಲ್ಲಿ ಅಳವಡಿಸಿಕೊಳ್ಳಬಹುದೇ ಹೊರತು ಈ ಎರಡಲ್ಲಿ ಅಭೇದಾಧ್ಯವಸಾಯ ಮಾಡುವುದು ಯುಕ್ತವಲ್ಲ"[7] ಎಂದು ಹೇಳಿ ಚಂಪುವಿನ ಹುಟ್ಟಿಗೆ ಕರ್ನಾಟಕವೇ ಮೂಲವಾದುದರಿಂದ ಕೃಷ್ಣಶಾಸ್ತ್ರಿಗಳ ಹೇಳಿಕೆಗೆ ಆಧಾರ ವಿಲ್ಲ ಎನ್ನುತ್ತಾರೆ.[8] ಆದರೆ ಚಂಪು ಎಂಬ ಹೆಸರು ಕನ್ನಡದ್ದೇ ಹೊರತು ಅದರ ಲಕ್ಷಣವನ್ನು ಸಂಸ್ಕೃತದ ಮಿಶ್ರಕಾವ್ಯದಲ್ಲಿ ನಾಟಕಗಳಲ್ಲಿ ಕಾಣಬಹುದಾಗಿದೆ. ಅಲ್ಲದೆ 7ನೇ ಶತಮಾನದ ದಂಡಿಯು ಕಾವ್ಯಾದರ್ಶದಲ್ಲಿ 'ಮಿಶ್ರಾಣಿ ನಾಟಕಾದೀನಿ ತೇಷಮ-ನ್ಯತ್ರ ವಿಸ್ತರಃ । ಗದ್ಯಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೆ'[9] ಎಂದು ಚಂಪುವಿನ ಲಕ್ಷಣವನ್ನು ಹೇಳುತ್ತಾನೆ. ಯಾವಾಗಲೂ ಮೊದಲು ಲಕ್ಷ್ಯ, ಆಮೇಲೆ ಲಕ್ಷಣ. ಆದುದರಿಂದ ಸಂಸ್ಕೃತದಲ್ಲಿ ಚಂಪು ಇದ್ದಿಲ್ಲವೆಂದು ಹೇಳಲು ಆಧಾರವೇನು? ಡಾ॥ ರಂ. ಶ್ರೀ. ಮುಗಳಿಯವರು 'ಹೆಚ್ಚಿನ ಸಂಶೋಧನೆಯಿಂದ ಚಂಪೂ ರೂಪವು ಮೂಲತಃ ಸಂಸ್ಕೃತವೆಂದು ತಿಳಿದರೂ ಸಹ ಅದು ಕನ್ನಡ ಸಾಹಿತ್ಯದ ಮಹಾಕಾವ್ಯ ಗಳಲ್ಲಿ ತಾಳಿದ ರೂಪವು ಮಾತ್ರ ಸಂಸ್ಕೃತದ ಅನುಕರಣ ಫಲವಲ್ಲವೆಂದು, ವೈಶಿಷ್ಟ್ಯಪೂರ್ಣವೆಂದು ಧೈರ್ಯವಾಗಿ ಹೇಳಬಹುದು'[10] ಎನ್ನುತ್ತಾರೆ. ಹೀಗೆ ನೋಡಿದರೆ ಕೃಷ್ಣಶಾಸ್ತ್ರಿಗಳ ಹೇಳಿಕೆಗೆ ಸಬಲವಾದ ಆಧಾರವು ದೊರೆತಂತೆ ಆಗುತ್ತದೆ. ಆದರೆ

ಶ್ರಾವಕ ಜನದುಪವಾಸಂ। ಜೀವದಯಾಷ್ಟಮಿಯೊಳಾಗೆ ಪಾರಣೆ ಕಿವಿಗ।
ಳ್ಗೀ ವಸ್ತುಕಥನದಿಂದುದ್। ಭಾವಿಸೆ ಕವಿ ಭಾಳಲೋಚನಂ ವಿರಚಿಸಿದಂ ॥ [11]

ಎಂದು ಜನ್ನನು ಯಶೋಧರ ಚರಿತೆಯಲ್ಲಿ ಹೇಳಿಕೊಂಡಿದ್ದಾನೆ. ಇದು ಚಂಪೂ ಕೃತಿಯಲ್ಲ. ಇಲ್ಲಿ ಕಂದಗಳೇ ಪ್ರಧಾನವಾಗಿ ಅಲ್ಲಲ್ಲಿ ವೃತ್ತಗಳು ಬಂದಿವೆ. ಆದುದ ರಿಂದ ಚಂಪುವೆಂದರೆ ಮಾತ್ರ ವಸ್ತುಕ ಕಾವ್ಯ ಎಂಬುದಕ್ಕೆ ಆಧಾರವಿಲ್ಲ. ಕೃಷ್ಣಶಾಸ್ತ್ರಿ ಗಳ ಹೇಳಿಕೆಯನ್ನು ಹೀಗೆ ಬದಲಿಸಿಕೊಳ್ಳಬಹುದೆಂದು ತೋರುತ್ತದೆ: ಸಂಸ್ಕೃತ ವೃತ್ತಗಳನ್ನು ಆರ್ಯೆಯ ರೂಪಾಂತರವಾದ ಕಂದಗಳನ್ನು ಅನುಸರಿಸಿ ಬರೆದಿರುವ, ಓದಲು ವಿಶಿಷ್ಟವಾದ ಕಾವ್ಯ 'ವಸ್ತುಕ'ವೆಂದೂ, ತ್ರಿಪದಿ, ಷಟ್ಪದಿ, ರಗಳೆ ಪಿರಿಯಕ್ಕ ರಾದಿ ದೇಸಿ ಛಂದಸ್ಸಿನಲ್ಲಿ ಹೇಳಿದ, ಹಾಡಲು ಬರುವಂತಹ ಕಾವ್ಯಗಳನ್ನು ವರ್ಣಕ

---

[7] ಕಡೆಂಗೋಡ್ಲು ಶಂಕರಭಟ್ಟ, 'ವಾಙ್ಮಯ ತಪಸ್ಸು' ಪುಟ 60

[8] ಅದೇ.

[9] ಡಾ॥ ರಂ. ಶ್ರೀ. ಮುಗಳಿ, 'ತವನಿಧಿ' ಪುಟ 40

[10] ಅದೇ, ಪುಟ 44

[11] 'ಯಶೋಧರ ಚರಿತೆ' (ಸಂ) ಕೆ. ವಿ. ರಾಘವಾಚಾರ್. ಒಂದನೇ ಅವತಾರ, ಪದ್ಯ 3

ವೆಂದೂ ಹೇಳಬಹುದು. ಇಲ್ಲಿ ಎ. ಆರ್. ಕೃಷ್ಣಶಾಸ್ತ್ರಿಗಳು ವರ್ಣಕವೆಂದರೆ ಹಾಡುಗಬ್ಬವಿರಬಹುದೇ ಎಂದು ಅನುಮಾನಿಸಿರುವುದನ್ನು ಗಮನಿಸಬೇಕು.[12]

ಕಡೆಂಗೋಡ್ಲು ಶಂಕರಭಟ್ಟರು 'ವರ್ಣಕ'ದ ಬಗ್ಗೆ ಹೀಗೆ ಹೇಳುತ್ತಾರೆ: 'ಯಾವುದು ಪರಮಾರ್ಥವೋ ಅದೇ 'ವಸ್ತು'. ಅದನ್ನು–ಶ್ರೇಯವನ್ನು ಬೋಧಿಸುವುದು 'ವಸ್ತುಕ'; ಲೌಕಿಕ ಯೋಗಕ್ಷೇಮಕರವಾದುದು ಪ್ರೇಯವನ್ನು ಉಪದೇಶಿಸುವುದು ವರ್ಣಕ......[13] ವಸ್ತು ಕಾವ್ಯನಾಯಕರ ಜೀವಿತವು ಶಾಂತೈಕರಸದ ಕಡೆಗೆ ಹರಿಯುವುದಿದ್ದರೆ 'ವರ್ಣಕ'. ಕಾವ್ಯನಾಯಕರ ಜೀವಿತದಲ್ಲಿ ಅನೇಕ ಭಾವರಸ ತರಂಗಗಳು ಒಂದರಮೇಲೊಂದಾಗಿ ಎದ್ದು ಹೊಡೆದು ಕೊನೆಗೆ ಅರ್ಥವೂ ಕಾಮವೂ ಲಭಿಸಿದರೆ ಅದೇ ಪರಮ ಲಾಭವೆಂಬ ಸಂತೃಪ್ತಿ ಉಂಟಾಗುವುದು ಎಂದು 'ವಸ್ತುಕ' 'ವರ್ಣಕ' ಕಾವ್ಯಲಕ್ಷಣವನ್ನು ಹೇಳುತ್ತಾರೆ. ಈ ವಿಚಾರ ಸರಣಿಯನ್ನು ಸುಲಭವಾಗಿ ಒಪ್ಪಲಾಗುವುದಿಲ್ಲ. ಏಕೆಂದರೆ ಷಡಕ್ಷರಿಯು 'ರಾಜಶೇಖರವಿಳಾಸ'ದಲ್ಲಿ

ಆ ಕತೆಯಂ ಕೃತಾರ್ಥಸುಮನೋಲತೆಯಂ ವರಮಲ್ಲಣಾರ್ಯರು
ರ್ವೀ ಕವಿರಾಜರಾಜನುತಮಾಗಿರೆ ವರ್ಣಕದಿಂದೆ ಭಾವರ
ತ್ನಾಕರಮಾಗೆ ಪೇಳ್ದರದನೊಪ್ಪಿರೆ ವಸ್ತುಕಮಾಗಿ ಪೇಳ್ವುದಾ
ಲೋಕಿತಕಾವ್ಯಬೃಂದದೊಳಗಿಲ್ಲದ ಮಂಜುಳ ಯುಕ್ತಿಪುಂಜದಿಂ.[14]

ಎಂದು ಹೇಳಿದ್ದಾನೆ. ಒಂದೇ ಕಥಾವಸ್ತುವನ್ನು ಮಲ್ಲಣಾರ್ಯ 'ವರ್ಣಕ'ದಲ್ಲಿ ಷಡಕ್ಷರಿ 'ವಸ್ತುಕ'ದಲ್ಲಿ ರಚಿಸಿದ್ದಾರೆ. ಎರಡೂ ಕಥೆಗಳಲ್ಲಿಯೂ ಬರುವ ಕಥಾನಾಯಕರ ಗುರಿ ಒಂದೇ ಆಗಿದೆ. ಭೀಮಕವಿಯು 'ಬಸವ ಪುರಾಣ'ವನ್ನು ವರ್ಣಕದಲ್ಲಿ ಹೇಳಿದರೆ, ಅದನ್ನೇ ಷಡಕ್ಷರಿ 'ವೃಷಭೇಂದ್ರವಿಜಯ'ವೆಂದು ವಸ್ತುಕದಲ್ಲಿ ರಚಿಸಿದ್ದಾನೆ. ಪಂಪ ಭರತನ ಕಥೆಯನ್ನು ಆದಿಪುರಾಣದಲ್ಲಿ ವಸ್ತುಕವಾಗಿ ಹೇಳಿದರೆ, ರತ್ನಾಕರನು ವರ್ಣಕದಲ್ಲಿ ಹೇಳಿದ್ದಾನೆ. ವಿಚಾರಿಸಿದರೆ ವರ್ಣಕ ಕವಿಗಳು ಹೇಳಿದ ಕಥೆಗಳ ಕಥಾನಾಯಕರೂ ಸಹ ಶಾಂತೈಕರಸದಿಂದ ಮುಕ್ತಿಯನ್ನು ಪಡೆದ ಸಿದ್ಧರಿದ್ದಾರೆ. ಶಂಕರಭಟ್ಟರನ್ನು ಅನುಸರಿಸಿ ಈ ಕಾವ್ಯಭೇದಗಳ ಲಕ್ಷಣವನ್ನು ಹೇಳುವುದು ಸರಿಯಾಗುವುದಿಲ್ಲ. ಶಂಕರಭಟ್ಟರು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಪಂಪನ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನವಿಜಯ'ದ ಪದ್ಯಗಳ

---

12 ಕನ್ನಡ ಕೈಪಿಡಿ. ಸಂ. 1 ಪುಟ 186

13 ಕಡೆಂಗೋಡ್ಲು ಶಂಕರಭಟ್ಟ, 'ವಾಙ್ಮಯ ತಪಸ್ಸು' ಪುಟ 74

14 ರಾಜಶೇಖರವಿಳಾಸ, ಪ್ರಥಮಾಶ್ವಾಸ ,ಪದ್ಯ 78

ವ್ಯಾಖ್ಯಾನವನ್ನು ತಮ್ಮ ವಿಚಾರಗಳಿಗೆ ಹೊಂದುವಂತೆ ಮಾಡಿಕೊಂಡಿರುವಂತೆ ಕಾಣಿಸುತ್ತದೆ. ಆ ಎರಡು ಪದ್ಯಗಳು ಹೀಗಿವೆ :

ತ್ರಿದಶ ಸ್ತುತ್ಯಮಿದಾದಿ ದೇವ ಚರಿತಂ ಕರ್ಣಾಮೃತ ಸ್ಯಂದಿಯು
ಕ್ಕಿದು ಭವ್ಯಾವಳಿಗೆಂದು ಪೇೞಿಸೆ ಬುಧರ್ ಸ್ವರ್ಗಾಪವರ್ಗಕ್ಕಮಾ
ಸ್ಪದಮಪ್ಪಾದಿಪುರಾಣ ವಸ್ತುಕ ಕೃತಿಯಿಂ ಪೇೞ್ದು ಬೆಡಂಗಪ್ಪಮಾ
ರ್ಗದೊಳಂ ದೇಸಿಯೊಳಂ ಪೊದಳ್ದಿ ಸೆಪಿನಂ ಸಂಸಾರ ಸಾರೋದಯಂ[15]

[ಆದಿಪುರಾಣ]

ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳೊಡಂಬಡೆಯೆ ಪೇೞ್ವೊಡೆ ಪಂಪನೆ ಪೇೞ್ಗು ಮೆಂದು ಪಂ
ಡಿತರೆ ತಗುಳ್ದು ಬಿಚ್ಚಳಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ[16]

[ವಿಕ್ರಮಾರ್ಜುನ ವಿಜಯ]

ಈ ಪದ್ಯಗಳನ್ನು ಗಮನಿಸಿ ಶಂಕರಭಟ್ಟರು ಆದಿಪುರಾಣ 'ವಸ್ತುಕ' ವೆಂದು ವಿಕ್ರಮಾರ್ಜುನ ವಿಜಯ 'ವರ್ಣಕ' ವೆಂದು ಭಾವಿಸಿದ್ದಾರೆ. ಜೊತೆಗೆ ಒಂದು ಆಗಮಿಕ ಕಾವ್ಯ ಇನ್ನೊಂದು ಲೌಕಿಕ ಕಾವ್ಯವಾಗಿರುವುದೂ ಸಹ ಇದಕ್ಕೆ ಕಾರಣ ವೆಂದು ಹೇಳಿ ಲೌಕಿಕ. ಆಗಮಿಕ ವಿಚಾರಗಳನ್ನೇ ಜಾಲಾಡಿದ್ದಾರೆ. ಪಂಪನಲ್ಲೇ ಈ ದೃಷ್ಟಿಯನ್ನು ನಾವು ಕಾಣಲಾರೆವು. ಪಂಪ ಆದಿಪುರಾಣವನ್ನು 'ವಸ್ತುಕೃತಿಯಿಂ' ಎಂದು ಕರೆದಷ್ಟು ಸುಲಭವಾಗಿ ವಿಕ್ರಮಾರ್ಜುನ ವಿಜಯವನ್ನು 'ವರ್ಣಕ ಕೃತಿಯಿಂ' ಎಂದು ಕರೆದಿಲ್ಲವೆಂಬುದನ್ನು ನಾವು ಗಮನಿಸಬೇಕು. ವಿಕ್ರಮಾರ್ಜುನ ವಿಜಯ ಪ್ರಬಂಧವಲ್ಲಿ 'ವರ್ಣಕಂ ಕಥೆಯೊಳೊಡಂಬಡೆಯೆ'ಎಂದು ಹೇಳಿದ್ದಾನೆ. ಎಂದರೆ ಈ ವಸ್ತುಕ ಕೃತಿಯಲ್ಲಿ ಹಾಡುಗಬ್ಬಗಳು ಕಥೆಗೆ ಹೊಂದಿಕೆಯಾಗುವಂತೆ ಬಂದಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದಂತೆ ಕಾಣಿಸುತ್ತದೆ.

ಆದಿಪುರಾಣ ಆದಿಕವಿಯ ಆದಿಕಾವ್ಯ. ಅದು 'ವಸ್ತುಕ' ಎಂದರೆ ಪ್ರಧಾನವಾಗಿ ಸಂಸ್ಕೃತ ಛಂದೋಮಾರ್ಗಾನುಸಾರಿಯಾಗಿ ಓದುಗಬ್ಬವಾಗಿ ರಚಿಸಿದ ಮಾರ್ಗಕಾವ್ಯ. ಆದರೂ ದೇಸಿ ಮಟ್ಟುಗಳಾದ ಅಕ್ಕರ, ರಗಳೆ ಮುಂತಾದ ವರ್ಣಕ ಕಾವ್ಯದ ವಾಹಕಗಳು ಅಲ್ಲಲ್ಲಿ ಪ್ರಯೋಗವಾಗಿವೆ. ಇಂತಹ ಈ ಕಾವ್ಯದ ಸವಿಯನ್ನುಂಡ ಪಂಡಿತರು ಮಾರ್ಗ ದೇಸಿಗಳ ಅಥವ ವಸ್ತುಕ ವರ್ಣಕಗಳ ಸಮನ್ವಯವನ್ನು ಕಂಡು ವಿಕ್ರಮಾರ್ಜುನ ವಿಜಯವನ್ನು ಬರೆಸುವಾಗ 'ಕಥೆ ಪಿರಿದಾದೊಡಂ ಕಥೆಯ ಮೆಯ್ಗಿಡಲೀಯದೆ' ಭಾರತವನ್ನು ಬರೆಯುವ ಸಾಹಸವನ್ನು ಮಾಡಿದರೆ ಪಂಪನೇ ಮಾಡ

15, 16 ನೋಡಿ. ಕಡೆಂಗೋಡ್ಲು ಶಂಕರ ಭಟ್ಟ, ವಾಙ್ಮಯ ತಪಸ್ಸು, ಪುಟ 50

ಬೇಕು, ಅವನೇ 'ವರ್ಣಕಂ ಕಥೆಯೊಳೊಡಂಬಡೆಯೆ' ಹೇಳಬಲ್ಲ ಸಾಮರ್ಥ್ಯವನ್ನು ಉಳ್ಳವನು ಎಂಬ ಅಭಿಪ್ರಾಯವನ್ನು ಪಟ್ಟರು. ಎಂದರೆ ಹಾಡುಗಬ್ಬಗಳಾದ ರಗಳೆ ಅಕ್ಕರ ಮುಂತಾದವುಗಳನ್ನು ಈ ಪ್ರಬಂಧದಲ್ಲಿ ಅಳವಡಿಸುವ ಸಾಮರ್ಥ್ಯ ಪಂಪನಿಗೆ ಮಾತ್ರಸಾಧ್ಯ ಎಂದು ಹೇಳಿದರು ಎಂದು ವ್ಯಾಖ್ಯಾನ ಮಾಡುವುದು ಸರಿಯೆಂದು ತೋರುತ್ತದೆ. ವಿಕ್ರಮಾರ್ಜುನ ವಿಜಯದಲ್ಲಿ ಈ ಹೇಳಿಕೆ ಸಾಧಿತವಾಗಿದೆ. ಆದುದ ರಿಂದ ಪಂಪಕವಿ ಲೌಕಿಕವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಕ್ರಮಾರ್ಜುನ ವಿಜಯ ವನ್ನು ವರ್ಣಕದಲ್ಲಿ ಬರೆದಿದ್ದಾನೆ ಎನ್ನುವುದು ಸರಿಯಾದ ವಿಚಾರವಾಗುವುದಿಲ್ಲ. ಪಂಪಾದಿಕವಿಗಳೂ ಸಹ ವಸ್ತುಕವೆಂದರೆ ಸಂಸ್ಕೃತ ಮಾರ್ಗಾನುಸಾರಿಯಾಗಿ ಪ್ರೌಢವಾದ ಛಂದೋಗತಿಯಲ್ಲಿ ರಚಿತವಾದ ಓದುಗಬ್ಬವೆಂತಲೂ ವರ್ಣಕವೆಂದರೆ ದೇಸೀ ಮಟ್ಟುಗಳಲ್ಲಿ ರಚಿತವಾದ ಹಾಡುಗಬ್ಬವೆಂಬ ಅಭಿಪ್ರಾಯದವರಾಗಿದ್ದರೆಂಬು ದನ್ನು ಊಹಿಸಬಹುದಾಗಿದೆ.

ಎ. ಆರ್. ಕೃಷ್ಣಶಾಸ್ತ್ರಿಗಳು ಕನ್ನಡ ಕೈಪಿಡಿಯಲ್ಲಿ " 'ವಸ್ತುಕ' 'ವರ್ಣಕ' ಇವು ಸಂಸ್ಕೃತ ಶಬ್ದಗಳು ಆದರೂ ಸಂಸ್ಕೃತ ಆಲಂಕಾರಿಕರಾರೂ ಈ ಕಾವ್ಯ ಭೇದ ವನ್ನು ಹೇಳಿಲ್ಲ "[17] ಎಂದು ಹೇಳಿದ್ದಾರೆ. ಇದನ್ನು ಗಮನಿಸಿ ಸಂಸ್ಕೃತ ವಿದ್ವಾಂಸರಾದ ಡಾ॥ ಕೆ. ಕೃಷ್ಣಮೂರ್ತಿಗಳು ಸಂಸ್ಕೃತ ಕವಿಗಳಲ್ಲಿ ಆ ಶಬ್ದಗಳು ಪ್ರಾಸಂಗಿಕವಾಗಿ ಪ್ರಯೋಗವಾಗಿರುವುದನ್ನು ತೋರಿಸಿಕೊಟ್ಟಿದ್ದಾರೆ. ಕ್ರಿ. ಶ. ಸುಮಾರು 1100 ರಲ್ಲಿ ಇದ್ದ ವಾದಿರಾಜನ ಯಶೋಧರ ಚರಿತೆಯಲ್ಲಿ ಈ ಪದಗಳ ಪ್ರಯೋಗವಾಗಿದೆ. ಈ ಕಾವ್ಯಕ್ಕೆ ವ್ಯಾಖ್ಯಾನವನ್ನು ಬರೆದ ಚಿಕ್ಕಣ್ಣಾತ್ಮಜ ಲಕ್ಷ್ಮಣನು 'ವಸ್ತುಕ' 'ವರ್ಣಕ'ಗಳ ಲಕ್ಷಣವನ್ನು ಹೀಗೆ ಹೇಳುತ್ತಾನೆ: 'ಯಥಾವದ್ವಸ್ತುಕಥನಂ ವಸ್ತುಕಂ ಉಪಮೋತ್ಪ್ರೇಕ್ಷಾದಿ ವರ್ಣನಾಂಕಿತಾ ಕವಿತಾ ಕವಿತ್ವ ವರ್ಣಕಮ್''[18] ಬಹುಶಃ ಇವನ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ಕೆಲಮಟ್ಟಿಗೆ ಕಡೆಗೋಡ್ಲು ಶಂಕರ ಭಟ್ಟರ ವಾದವನ್ನು ಅನುಸರಿಸಿ ಡಾ॥ ಕೃಷ್ಣಮೂರ್ತಿಗಳು 'ಧರ್ಮಕಥಾ ನಿರೂಪಣೆಗೆ ಸ್ಥಾನ ವಿಲ್ಲದ ಆದರೆ ಅಲಂಕಾರಗಳ ಚಮತ್ಕಾರಕ್ಕೆ ಪರಮ ಪ್ರಾಶಸ್ತ್ಯವಿರುವ ಲಘುರಚನೆ ಗಳೆಲ್ಲವೂ ವರ್ಣಕವೆನಿಸುವುದು ಸಹಜವಾಗಿ ಸಿದ್ಧವಾಗುತ್ತದೆ. ವಸ್ತುಕದಲ್ಲಿ ಧರ್ಮದ ಮಹತ್ವ ಹೆಚ್ಚು, ಕಾವ್ಯದ ಆಕರ್ಷಣೆ ಪ್ರಾಸಂಗಿಕ. ಆದರೆ ವರ್ಣಕದಲ್ಲಿ ಧರ್ಮದ ಲೇಪ ಅಲ್ಪ, ಸೌಂದರ್ಯಸೃಷ್ಟಿಯೇ ಅಧಿಕ. ಹೀಗೆ ಕೇವಲ ಪ್ರಕೃತಿ ವರ್ಣನೆ ಸ್ತ್ರೀ ಪ್ರಶಂಸೆ ರಾಜಸ್ತುತಿ ಮುಂತಾದುವನ್ನು ಕುರಿತ ಚಾಟುಶ್ಲೋಕಗಳೆಲ್ಲ ಸಾಮಾನ್ಯ ವಾಗಿ 'ವರ್ಣಕ'ವೆನಿಸುತ್ತವೆ, 'ವಸ್ತುಕ'ವಲ್ಲ ... ಅಂತೂ ವಸ್ತುಕವು ಕಥಾವಸ್ತು

---

[17] ಕನ್ನಡ ಕೈಪಿಡಿ. ಸಂ. 1 ಪುಟ 186

[18] ಡಾ॥ ಕೆ. ಕೃಷ್ಣಮೂರ್ತಿ, 'ಕನ್ನಡದಲ್ಲಿ ಕಾವ್ಯತತ್ತ್ವ' ಪುಟ 79

ಪ್ರಧಾನ; ವರ್ಣಕವು ಕವಿಕಲ್ಪನಾಸಿದ್ಧ, ಚಮತ್ಕಾರ ಪ್ರಧಾನ ಎಂದು ನಾವು ಒಂದು ರೀತಿಯಲ್ಲಿ ನಿರ್ಣಯಿಸಿಕೊಳ್ಳಬಹುದು'[19] ಎನ್ನುತ್ತಾರೆ. ಈ ಮಾತು ಕನ್ನಡ ಕಾವ್ಯಗಳಿಗೆ ಅನ್ವಯಿಸುವುದಿಲ್ಲವೆಂದು ತೋರುತ್ತದೆ. ಏಕೆಂದರೆ 'ಮನುಜರ ಮೇಲೆ ಸಾವವರ ಮೇಲೆ ಅಕ್ಕಟಾ ತನತನಗಿಂದ್ರ, ಚಂದ್ರ, ರವಿ, ಕರ್ಣ, ದಧೀಚಿ, ಬಲೀಂದ್ರರೆಂದು ಮೇಣನವರತಂ ಪೊಗಳ್ದು ಕೆಡಬೇಡೆಲೆ ಮಾನವ' ಎಂದು ಗುಡುಗಿದ ಹರಿಹರ 'ವರ್ಣ ಕವಿ ಕರ್ಣಾವತಂಸ.' ಶಿವನನ್ನು ಶಿವನವರನ್ನು ಕುರಿತು ವಸ್ತು ಪ್ರಧಾನವಾದ, ಮುಕ್ತಿಹೇತುವಾದ, ಭಕ್ತಿಭರಿತವಾದ ರಗಳೆಗಳನ್ನು ವರ್ಣಕದಲ್ಲಿ ಬರೆದಿದ್ದಾನೆ. ಇವನು ತನ್ನ ಕೃತಿಗಳಲ್ಲಿ ಕೇವಲ ಪ್ರಕೃತಿ ವರ್ಣನೆ ಸ್ತ್ರೀಪ್ರಶಂಸೆ ಮಾಡಿರುವನೇ? ಭೀಮಕವಿಯ 'ಬಸವ ಪುರಾಣ' ವರ್ಣಕ ಕಾವ್ಯ. ಇದರಲ್ಲಿಯೂ ಕಥಾವಸ್ತುವಿದೆ. ಧರ್ಮಜಿಜ್ಞಾಸೆ ಇದೆ. ರಾಘವಾಂಕನ 'ಹರಿಶ ಂದ್ರ ಕಾವ್ಯ'ವೂ ಸಹ ವರ್ಣಕ,ಕಾವ್ಯವೇ. ತೊರವೆ ರಾಮಾಯಣವನ್ನು ಬರೆದ ಕುಮಾರ ವಾಲ್ಮೀಕಿ 'ಸರಸ ವರ್ಣಕ ಕವಿಗಳೊಳು ಭಾಸುರ ಕುಮಾರವ್ಯಾಸನೊಬ್ಬನು' ಎಂದು ಕುಮಾರವ್ಯಾಸನನ್ನು ಹೊಗಳಿದ್ದಾನೆ. ಇವರ ಕಾವ್ಯಗಳಲ್ಲಿ ಧರ್ಮಕಥಾ ನಿರೂಪಣೆಗೆ ಸ್ಥಾನವಿಲ್ಲವೇ? ಇವು ಬರೀ ಅಲಂಕಾರ ಚಮತ್ಕಾರಕ್ಕೆ ಪ್ರಾಶಸ್ತ್ಯವಿರುವ ಲಘುರಚನೆಗಳೇ? ಎಂಬುದನ್ನು ವಿಚಾರಿಸಬೇಕಾಗುತ್ತದೆ. ಆದುದರಿಂದ ಕೃಷ್ಣಮೂರ್ತಿಗಳ ಅಭಿಪ್ರಾಯವನ್ನು ಸುಲಭವಾಗಿ ಒಪ್ಪಲಾಗುವುದಿಲ್ಲ. 'ವಸ್ತುಕ' 'ವರ್ಣಕ' ಎಂಬುದಕ್ಕೆ ಓದುಗಬ್ಬ ಹಾಡುಗಬ್ಬ ಎಂಬ ಅರ್ಥ ಉಂಟಾಗಿದ್ದು 12ನೇ ಶತಮಾನದಿಂದ ಎಂದು ಹೇಳುತ್ತಾರೆ[20]. ಇದಕ್ಕೆ ಸರಿಯಾದ ಆಧಾರವಿಲ್ಲ. ವಸ್ತುಕ ವರ್ಣಕಕ್ಕೆ ಈ ಅರ್ಥಕಲ್ಪನೆ ಪಂಪನ ಕಾಲದಿಂದಲೂ ಇದ್ದೇ ಇದೆ ಎಂಬುದನ್ನು ನಾವು ಹಿಂದೆಯೇ ನೋಡಿದ್ದೇವೆ.

ಈ ಎರಡು ಶಬ್ದಗಳ ಅರ್ಥವೇನೇ ಇರಲಿ ಈ ಪದಪ್ರಯೋಗಗಳು ಸಂಸ್ಕೃತ ಕಾವ್ಯದಲ್ಲಿ ಪ್ರಾಸಂಗಿಕವಾಗಿ ಬಂದಿವೆಯೇ ಹೊರತು ಅವುಗಳ ಲಕ್ಷಣವನ್ನು ಆ ಕಾವ್ಯಗಳಲ್ಲಿ ಹುಡುಕುವುದು ತಪ್ಪಾಗುತ್ತದೆ. ಏಕೆಂದರೆ ಆ ಕಾವ್ಯಗಳಲ್ಲಿ ಈ ಕಾವ್ಯ ಭೇದಗಳ ಲಕ್ಷಣವನ್ನು ಹೇಳಲು ಯಾರೂ ಪ್ರಯತ್ನಿಸಿಲ್ಲ. ಸೋಮದೇವನ 'ಯಶಸ್ತಿಲಕ'ದ ಒಂದು ಶ್ಲೋಕವನ್ನು ಉದ್ಧರಿಸಿ ಅದರಲ್ಲಿ ವಸ್ತುಕ ವರ್ಣಕ ಕಾವ್ಯ ಭೇದಗಳನ್ನು ಹುಡುಕಲು ಡಾ|| ಕೆ. ಕೃಷ್ಣಮೂರ್ತಿಗಳು ಪ್ರಯತ್ನಿಸಿದ್ದಾರೆ. ಆದರೆ ಅವರು ಅಲ್ಲಿ ಇಲ್ಲದ ಅರ್ಥವನ್ನು ಹುಡುಕುತ್ತಿದ್ದಂತೆ ಕಾಣುತ್ತದೆ.[21]

---

19 ಅದೇ. ಪುಟ 82

20 ಡಾ|| ಕೆ. ಕೃಷ್ಣಮೂರ್ತಿ, 'ಕನ್ನಡದಲ್ಲಿ ಕಾವ್ಯತತ್ವ'

21 ಅದೇ.

ಕಿಂಚಿತ್ಕಾವ್ಯಂ ಶ್ರವಣಸುಭಗಂ ವರ್ಣನೋದೀರ್ಣ ವರ್ಣಂ
ಕಿಂಚಿದ್ವಾಚ್ಯೋಚಿತ ಪರಿಚಯಂ ಹೃಚ್ಚಮತ್ಕಾರಕಾರೀ

ಇನ್ನೊಂದು ಸಂಗತಿಯೆಂದರೆ ಶಾಂತಿನಾಥನ ಸುಕುಮಾರ ಚರಿತೆಯ ಬಗ್ಗೆ ಅವರು ತಳೆದ ನಿಲುವು (ಇವನ ಕಾಲ ಕ್ರಿ. ಶ. 1060). ಈತ ತನ್ನ ಕಾವ್ಯವನ್ನು 'ಶಾಸ್ತ್ರ ವಸ್ತುಕ ಕವೀಂದ್ರರ್ ಬಗೆಗೊಳ್ವಿನಂ' ರಚಿಸಿದ್ದಾನೆ. 'ಪೊಗೞ್ದೀರಂತೆ ಸಮಸ್ತ ವಸ್ತುಕವಿಗಳ್ ಜಲ್ಪಿಪ್ಪಿನಂ ಬಂಧುರೋಕ್ತಿಗಳಂ ನೀನಭಿವರ್ಣಿಸು' ಎಂದು ಪಂಡಿತ ಮಂಡಳಿ ಕೇಳಿಕೊಂಡಿದ್ದಕ್ಕೆ ಚಂಪುವಿನಲ್ಲಿ ಸುಕುಮಾರಚರಿತೆಯನ್ನು ಬರೆದಿದ್ದಾನೆ. ಆತ ಚಂಪು ಎಂದು ಹೇಳಿಕೊಂಡಿದ್ದಾನೆ. ವರ್ಣಕದ ಮಾತನ್ನು ತನ್ನ ಕಾವ್ಯದಲ್ಲಿ ಎಲ್ಲಿಯೂ ತಂದಿಲ್ಲ. ಡಾ॥ ಕೃಷ್ಣಮೂರ್ತಿಗಳು ಇವನು ಶಿಕಾರಿಪುರದ ಶಾಸನ 136 ರಲ್ಲಿ ಸುಕುಮಾರ ಚರಿತೆಯ ಬಗ್ಗೆ ಹೇಳಿಕೊಂಡಿರುವ 'ಸುಕರ ರಸ ಭಾವದಿಂ ವರ್ಣಕದಿಂ ತತ್ತ್ವಾರ್ಥನಿಚಯದಿಂ ಸೂಕ್ತಮೆನೆಲ್ ಸುಕುಮಾರ ಚರಿತಮಂ' ಹೇಳಿದೆನು ಎಂಬ ಮಾತನ್ನು ಗಮನಿಸಿ, ಇದರಲ್ಲಿ ಧರ್ಮಕಥಾ ನಿರೂಪಣೆ ಇರುವುದರಿಂದ 'ವಸ್ತುಕ', ವರ್ಣಕಾದಿ ಲೌಕಿಕ ವಿಚಾರಗಳೂ ಸಹ ಬಂದಿರುವುದರಿಂದ ವರ್ಣಕ ಎಂದು ಭಾವಿಸಿದ್ದಾರೆ.[22] ಇದು ಸರಿಯಾದ ಅಭಿಪ್ರಾಯವಲ್ಲ. ಇಲ್ಲಿ ಪ್ರಮುಖವಾಗಿ ನಾವು ಗಮನಿಸಬೇಕಾದ ಸಂಗತಿ ಬೇರೆ. ವಸ್ತುಕ ಕಾವ್ಯದಲ್ಲಿ ವರ್ಣಕಗಳಾದ ಹಾಡುಗಬ್ಬಗಳನ್ನು ಇವನು ಸಮಾವೇಶಗೊಳಿಸಿರುವುದನ್ನು ನಾವು ಅವನ ಕಾವ್ಯದಲ್ಲಿ ನೋಡಬಹುದು. ಸುಕುಮಾರ ಚರಿತೆಯ 2,5,7,8,10ನೇ ಆಶ್ವಾಸಗಳಲ್ಲಿ ಹಾಡುಗಬ್ಬಗಳಾದ ತ್ರಿಪದಿ, ಅಕ್ಕರಗಳು, ಎರಡು ಪುಟದಷ್ಟು ದೀರ್ಘವಾದ ಸೊಗಸಾದ ರಗಳೆ, ವರ್ಣಕ ವಿಶಿಷ್ಟವಾದ ಮಟ್ಟುಗಳು ಬಂದಿವೆ. ಆದುದರಿಂದ 'ವರ್ಣಕದಿಂ' ಎಂದರೆ ಹಾಡುಗಬ್ಬದಿಂದ ಕೂಡಿದ ಎಂದು ಹೇಳುವುದು ಸರಿಯೆಂದು ತೋರುತ್ತದೆ.

ಹಾಡುಗಬ್ಬಗಳಲ್ಲಿ ತಮ್ಮ ಕೃತಿಗಳನ್ನು ಬರೆದ ಕವಿಗಳಾರೂ ಅವುಗಳನ್ನು ವಸ್ತುಕ ಎಂದು ಕರೆದುಕೊಂಡಿಲ್ಲ, ವರ್ಣಕವೆಂದೇ ಕರೆದುಕೊಂಡಿದ್ದಾರೆ. ಕವಿ ನಂಜುಂಡನು ಕುಮಾರ ರಾಮ ಸಾಂಗತ್ಯದಲ್ಲಿ 'ಉಭಯ ವಸ್ತುಕ ಕವಿತೆಯನೊರೆವೆನು' ಎಂದು ಹೇಳಿಕೊಂಡಿರುವುದು ತನ್ನ ಸಾಮರ್ಥ್ಯದ ವಿಚಾರವಾಗಿ ಮಾತ್ರ.

ಅತ್ರ್ಯಸೋಯೇತ್ಕ ಇಹ ಸುಕೃತೀ ಕಿಂ ತು ಯುಕ್ತಂ ತದುಕ್ತಂ
ಯದ್-ವ್ಯುತ್ಪತ್ತ್ಯೈ ಸಕಲ ವಿಷಯೇ ಸ್ವಸ್ಯ ಚಾನ್ಯಸ್ಯ ಚ ಸ್ಯಾತ್

ಸೋಮದೇವನು ಕಿವಿಗಿಂಪಾದ ಒಂದು ಜಾತಿಯ ಕಾವ್ಯದಲ್ಲಿ ಅಕ್ಷರಗಳ ಸೊಬಗು ಎದ್ದು ಕಾಣುವಂತಿರುವುದನ್ನು ಮುಖ್ಯವಾಗಿ ಹೇಳಿರುವುದರಿಂದ ಅರ್ಥಾಲಂಕಾರದಂತೆ ಶಬ್ದಾಲಂಕಾರವನ್ನೂ ಜೋಡಿಸುವ ಜಾಣ್ಮೆಯನ್ನು ಎತ್ತಿ ತೋರಿಸುತ್ತಿದ್ದಾನೆ. ಇದೇ ವರ್ಣಕ ಎಂದು ನಮಗೆ ತೋರುತ್ತದೆ. ಇನ್ನೊಂದು ಜಾತಿಯ ಕಾವ್ಯ ಹೃದಯಕ್ಕೆ ತಂಪು; ಇದರ ಸ್ವಾರಸ್ಯ ಅರ್ಥ ಅಥವ ವಸ್ತುವಿನ ಉಚಿತ ಪರಿಚಯದಿಂದುಂಟಾಗುವುದು. ಇದೇ ವಸ್ತುಕವಿರಬೇಕು ಎಂದು ಡಾ|| ಕೆ. ಕೃಷ್ಣಮೂರ್ತಿಗಳು ಹೇಳುತ್ತಾರೆ.

[22] ಡಾ॥ ಕೆ. ಕೃಷ್ಣಮೂರ್ತಿ, 'ಕನ್ನಡದಲ್ಲಿ ಕಾವ್ಯತತ್ತ್ವ' ಪುಟ 86

ಓದುಗಬ್ಬವಾದ ವಸ್ತುಕವನ್ನಾಗಲಿ ಅವರ ಲಕ್ಷಣವನ್ನಾಗಲೀ ಈ ಪದ ಕವಿತೆಯುಲ್ಲಿ ಅಳವಡಿಸುವ ಉದ್ದೇಶವನ್ನು ಹೊಂದಿದ್ದಾನೆ ಎಂಬುದು ಸರಿಯುಲ್ಲ.[23]

ಇದರಿಂದ ವಸ್ತುಕವೆಂದರೆ ಓದಲು ವಿಶಿಷ್ಟವಾದ ಕಾವ್ಯ, ವರ್ಣಕವೆಂದರೆ ರಾಗವಾಗಿ ಹಾಡಲು ಬರುವ ಕಾವ್ಯ ಎಂದು ಹೇಳಬಹುದು. ಆದರೆ ಓದುಗಬ್ಬಕ್ಕೆ ವಸ್ತುಕ ಎಂದು ಹಾಡುಗಬ್ಬಕ್ಕೆ ವರ್ಣಕ ಎಂದು ಹೆಸರು ಬರಲು ಕಾರಣ ವೇನೆಂಬುದನ್ನು ಪರಿಶೀಲಿಸಬೇಕಾಗುತ್ತದೆ.

ವಸ್ತುಕ

ನಮ್ಮ ಕನ್ನಡ ಕವಿಗಳ ದೃಷ್ಟಿಯುಲ್ಲಿ 'ವಸ್ತುಕ' ಮತ್ತು 'ವರ್ಣಕ' ಕಾವ್ಯ ಭೇದಗಳಿಗೆ ವಿಶಿಷ್ಟವಾದ ಅರ್ಥವಿದ್ದಂತೆ ಕಾಣಿಸುತ್ತದೆ. ಒಂದು ಕಾವ್ಯವೆಂದಮೇಲೆ ವಸ್ತುವೂ ಇರುತ್ತದೆ, ವಸ್ತುವಿಗೆ ತಕ್ಕ ವರ್ಣನೆಯೂ ಇರುತ್ತದೆ. ಅಂದಮೇಲೆ ಕಥಾ ವಸ್ತುವನ್ನು ವರ್ಣನೆಯುನ್ನು ವಿಭಾಗಿಸಿ ಕಾವ್ಯವನ್ನು ಹೇಗೆ ಬರೆಯುಲು ಸಾಧ್ಯ ? ವಸ್ತುವೆಂದರೆ ಕಥಾವಸ್ತುವೆಂದು ವರ್ಣನೆಯೆಂದರೆ ಅಲಂಕಾರಾದಿ ವರ್ಣನೆಗಳೆಂದು ಇರಬಹುದಾದರೂ 'ವಸ್ತುಕ' 'ವರ್ಣಕ' ಕಾವ್ಯ ಭೇದಗಳ ದೃಷ್ಟಿಯಿಂದ ಈ ಅರ್ಥ ವನ್ನು ಕೊಡುವುದು ಸೂಕ್ತವಲ್ಲ. ಈ ಕಾವ್ಯ ಭೇದಗಳ ದೃಷ್ಟಿ ಕನ್ನಡಿಗರ ಚಂಪೂ ಎಂಬ ಕಾವ್ಯಸೃಷ್ಟಿಯುಷ್ಟೇ ಅದ್ಭುತವಾಗಿದೆ.

'ಚಂಪು' ಹೇಗೆ ಸಂಸ್ಕೃತ ಮಾರ್ಗ ಕಾವ್ಯಗಳ ಛಂದಸ್ಸನ್ನು ಅನುಸರಿಸಿ ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿ ಬಂದಿತೋ ಹಾಗೆಯೇ 'ವಸ್ತುಕ'ವೂ ಸಹ ಮಾರ್ಗಕಾವ್ಯ ಪ್ರಭಾವದಿಂದಲೇ ಬಂದಿದೆ ಎಂದು ಹೇಳಬಹುದು. ವಸ್ತು ಎಂದರೆ ನಿಜವಾದುದು, ಸ್ಥಿರವಾದುದು, ಸತ್ಯಸ್ಥಿತಿಗೆ ಅನುಗುಣವಾದುದು[24] ಎಂದು ಮುಂತಾಗಿ ಅರ್ಥಗಳಿವೆ. ಅದರ ಜೊತೆಯುಲ್ಲಿ ವಸ್ತುಕ ಎಂದರೆ ಮೂಲಸತ್ವವನ್ನು ಉಳ್ಳದ್ದು, ಅನುಸರಣೀಯ ವಾದುದು, ಕಥೆಯುನ್ನು ಹೇಳುವುದು ಎಂಬ ಅರ್ಥಗಳಿವೆ. ಹೀಗೆ 'ವಸ್ತುಕ' ಕಾವ್ಯ ಗಳು ಸಂಸ್ಕೃತದ ಮೂಲಸತ್ವವನ್ನು ಇಟ್ಟುಕೊಂಡು ಅದನ್ನು ಅನುಸರಿಸಿ ರಚಿತ ವಾಗಿರುವುದರಿಂದ 'ವಸ್ತುಕ' ಎಂಬ ಹೆಸರು ಬಂದಿರಬೇಕು. ಅಂತ 'ವಸ್ತುಕ' 'ವರ್ಣಕ'ಗಳು ಕ್ರಮವಾಗಿ ಮಾರ್ಗ ಹಾಗು ದೇಸೀ ಛಂದೋಗತಿಗಳಲ್ಲಿ ಬಂದವುಗಳು ಎಂದು ಹೇಳಬಹುದು.

---

[23] ನೋಡಿ. ಇದೇ ಲೇಖಕನ, 'ಉತ್ಸಾಹ' 1972ರಲ್ಲಿ "'ಉಭಯ ವಸ್ತುಕ' ಎಂದರೇನು?" ಎಂಬ ಲೇಖನ.

[24] ಕಡೇಗೋಡ್ಲು ಶಂಕರ ಭಟ್ಟ, 'ವಾಙ್ಮಯ ತಪಸ್ಸು' ಪುಟ 60

ಸಂಸ್ಕೃತ ಛಂದಸ್ಸು ಅಕ್ಷರಗಣ ಪ್ರಧಾನವಾದುದು. ಇದು ಸ್ವರ ಸಂಗೀತ ದಿಂದ ಕೂಡಿದುದು; ಎಂದರೆ ಇದು ತಾಳಲಯಗಳಿಗೆ ಸಿಗದಂತೆ ರಾಗವಾಗಿ ಓದಲು ಮಾತ್ರ ಬರುವಂಥದು. ಕನ್ನಡದಲ್ಲಿ ವಸ್ತುಕವೆಂದು ಕರೆಸಿಕೊಂಡ ಕಾವ್ಯಗಳೆಲ್ಲಾ ಓದುಗಬ್ಬಗಳು. ಅಕ್ಷರಗಣ ಪ್ರಧಾನವಾದ ವೃತ್ತ ಹಾಗು ಆರ್ಯೆಯ ರೂಪಾಂತರ ವಾದ ಕಂದಗಳಿಂದ ಕೂಡಿವೆ. ಕಂದಗಳು ಮಾತ್ರಾಗಣ ಘಟಿತವಾಗಿದ್ದರೂ ಸಹ ಅದು ಸ್ವರ ಸಂಗೀತವನ್ನೇ ಅಪೇಕ್ಷಿಸುವುದರಿಂದ ತಾಳಕ್ಕೆ ಹೊಂದುವುದಿಲ್ಲ (ಕೆಲವು ವೃತ್ತಗಳು ನಿಯತವಾದ ತಾಳದಿಂದ ಕೂಡಿವೆ. ಆದರೆ ಅವು ಹೆಚ್ಚು ಕನ್ನಡ ವಸ್ತುಕ ಕಾವ್ಯಗಳಲ್ಲಿ ಬಳಕೆಯಾಗಿಲ್ಲ). ಅವು ಸ್ವರ ಸಂಗೀತದಲ್ಲಿ ರಾಗವಾಗಿ ಓದಲು ಬರುವಂತಹವು.

ಸಂಗೀತ ದೃಷ್ಟಿಯಿಂದಲೂ ಸಹ ನಾವು ಈ ಸಮಸ್ಯೆಯನ್ನು ಬಿಡಿಸಬಹುದು. ಕನ್ನಡದಲ್ಲಿ ಮಾರ್ಗಕಾವ್ಯ ಹಾಗು ದೇಸಿ ಕಾವ್ಯ ಎಂಬ ಭೇದವಿರುವಂತೆ ಮಾರ್ಗ ಸಂಗೀತ ದೇಸೀ ಸಂಗೀತ ವೆಂಬ ಭೇದಗಳಿವೆ ಎಂಬುದನ್ನು ನಾವು ಗಮನಿಸಬೇಕು.[25] ಈ ಸಂಗೀತಕ್ಕೂ ಈ ಕಾವ್ಯಭೇದಗಳಿಗೂ ಸಂಬಂಧವಿದ್ದಂತೆ ಕಾಣಿಸುತ್ತದೆ. ಮಾರ್ಗ ಸಂಗೀತಕ್ಕೆ ಅಳವಟ್ಟದ್ದು ಮಾರ್ಗಕಾವ್ಯ, ಅದು 'ವಸ್ತುಕ'. ದೇಸೀ ಸಂಗೀತಕ್ಕೆ ಅಳ ವಟ್ಟದ್ದು ದೇಸೀ ಕಾವ್ಯ, ಅದು ವರ್ಣಕ. ಶಾರ್ಙ್ಗದೇವನು ಸಂಗೀತ ರತ್ನಾಕರದಲ್ಲಿ ಈ ಸಂಗೀತ ಭೇದಗಳನ್ನು ಹೇಳುತ್ತಾನೆ. ಅವನ ದೃಷ್ಟಿಯಲ್ಲಿ ಮಾರ್ಗ ಸಂಗೀತ ಶ್ರೇಷ್ಠವಾದುದು, ದೇಸೀ ಸಂಗೀತ ಕೀಳಾದುದು. ಹಾಗೆಯೇ 'ವಸ್ತುಕ' 'ವರ್ಣಕ'ಕವಿ ಗಳ ಬಗ್ಗೆ ಹೇಳುತ್ತಾ 'ವರೋ ವಸ್ತುಕವಿರ್ವರ್ಣಕವಿರ್ಮಧ್ಯಮ ಉಚ್ಯತೆ'[26] ಎಂದು ವರ್ಣಕ ಕವಿ ಮಧ್ಯಮ ಕವಿ, ವಸ್ತುಕ ಕವಿ ಶ್ರೇಷ್ಠ ಕವಿ ಎಂಬ ಅಭಿಪ್ರಾಯವನ್ನು ಪಡುತ್ತಾನೆ. ಈ ಸಂಗೀತ ಲಕ್ಷಣವನ್ನು ಪರಿಶೀಲಿಸುವುದರಿಂದ ವಸ್ತುಕ ವರ್ಣಕ ಕಾವ್ಯ ಲಕ್ಷಣಗಳನ್ನು ಗೊತ್ತು ಹಚ್ಚಬಹುದು.

ಹರಿಪಾಲದೇವನು ಸಂಗೀತ ಸುಧಾಕರದಲ್ಲಿ 'ಮಾರ್ಗದೇಶೀವಿಭಾಗೇನ ಸಂಗೀತಂ ದ್ವಿವಿಧಂ ಮತಂ'[27] ಎಂದು ಹೇಳುತ್ತಾನೆ. ಮಾರ್ಗ ಸಂಗೀತವೆಂದರೆ ಭರತಾದಿಗಳು ಪ್ರಯೋಗ ಮಾಡಿರುವ ಸಂಗೀತ. ಇದಕ್ಕೆ ವೇದಗಾನ, ಸಾಮಗಾನ, ಗಂಧರ್ವಗಾನವೆಂದು ಕರೆಯುತ್ತಾರೆ. ಇದು ವೇದಾದಿ ಮಂತ್ರಗಳನ್ನು ಘೋಷಿಸಲು ಹಾಗು ವೃತ್ತ, ಕಂದಗಳನ್ನು ಓದಲು ಸಹಾಯಕವಾದ ಸಂಗೀತ. ಕನ್ನಡದ ವಸ್ತುಕ ಅಥವ ಮಾರ್ಗ ಕಾವ್ಯಗಳು ಈ ವೃತ್ತ ಕಂದಗಳಲ್ಲಿ ಇರುವುದರಿಂದ ಇವನ್ನೂ ಸಹ

---

25 'ಕರ್ಣಾಟಕ ಸಂಗೀತ ಸುಧಾ' ಪುಟ 10

26 ಡಾ॥ ಕೆ. ಕೃಷ್ಣಮೂರ್ತಿ, 'ಕನ್ನಡದಲ್ಲಿ ಕಾವ್ಯತತ್ತ್ವ' ಪರಿಶಿಷ್ಟ-ನೋಡಿ.

27 'ಕರ್ಣಾಟಕ ಸಂಗೀತ ಸುಧಾ' ಪುಟ 10

ಹಾಗೆ ರಾಗವಾಗಿ ಓದಬೇಕು, ಇವಕ್ಕೆ ತಾಳಲಯವಿಲ್ಲ. ನೃತ್ಯಕ್ಕೆ ಕುಣಿತಕ್ಕೆ ಹೊಂದಿಕೆಯಾಗುವುದಿಲ್ಲ. ಹೀಗೆ ಸಂಸ್ಕೃತ ಮಾರ್ಗಾನುಸಾರಿಯಾಗಿ ಅದರ ಛಂದೋ ಬಂಧವನ್ನು ಅನುಸರಿಸಿ ರಚಿತವಾದ ಕಾವ್ಯ 'ವಸ್ತುಕ' ಕಾವ್ಯ.

" ವರ್ಣಕ "

ಕನ್ನಡ ಛಂದಸ್ಸಿನ ಮೂಲ ದ್ರಾವಿಡದಲ್ಲಿದೆ. ಇದು ಅಂಶಗಣ ಪ್ರಧಾನ. ಇದು ತಾಳ ಸಂಗೀತ ಹಾಗು ರಾಗ ಸಂಗೀತಕ್ಕೆ ಹೊಂದಿಕೆಯಾದುದು. ಆದುದರಿಂದ ಇದು ವರ್ಣಕ. ವರ್ಣಕವೆಂದು ಕರೆದ ಕೃತಿಗಳನ್ನೆಲ್ಲ ರಾಗವಾಗಿ ತಾಳ ಲಯ ಭಾವ ಗಳಿಗೆ ಅನುಗುಣವಾಗಿ ಹಾಡಬಹುದು. ಕನ್ನಡದಲ್ಲಿ ಜನಪದ ಗೀತೆಗಳೆಲ್ಲವೂ ದೇಸೀ ಛಂದಸ್ಸಿನಲ್ಲಿ ರಚಿತವಾಗಿವೆ. ದೇಸೀ ಸಂಗೀತವು ಹುಟ್ಟಿದ್ದು ಜನಪದ ಸಂಗೀತದ ಪ್ರಭಾವದಿಂದ. ಜನಪದ ಸಂಗೀತದ ಆಧಾರದ ಮೇಲೆ ಶಾಸ್ತ್ರೀಯ ಸಂಗೀತ ಬೆಳೆದು ಬಂದಿತು. ಆದುದರಿಂದಲೇ ಇದರಲ್ಲಿ ನೃತ್ಯಕ್ಕೆ ಅಳವಡುವ ತಾಳಗಳು ನಿರ್ಮಿತ ವಾಗಿದ್ದು.

> ಅಧುನಾ ಗೀಯತೆ ಯಚ್ಚಾನಿಯತಂ ಕಾಮಚಾರತಃ
> ದೇಶೇ ದೇಶೇ ಪ್ರಚಾರತಂ ತತ್ಸರ್ವದೇಶಿಸಂಮತಂ
> ತದಪಿ ದ್ವಿವಿಧಂ ಜ್ಞೇಯಂ ದಕ್ಷಿಣೋತ್ತರ ಭೇದತಃ [28]

ಆಯಾದೇಶಗಳಲ್ಲಿ ಅಲ್ಲಿಯ ಜನವನ್ನು ರಂಜಿಸಿ ನಿರ್ಮಾಣವಾದ ಸಂಗೀತವೇ ದೇಸೀ ಸಂಗೀತ. ಇದರಲ್ಲಿ ದಕ್ಷಿಣೋತ್ತರ ಭೇದವಿದೆ.[29] ಇದು ಜನಪ್ರಿಯವಾಗಿಯೂ ಇದೆ. ರಾಗ, ಭಾವ, ತಾಳ ಲಯಗಳಿಂದ ರಸರಂಜಿತವಾಗಿದ್ದು ನೃತ್ಯಕ್ಕೆ ಕುಣಿತಕ್ಕೆ ಸರಿಹೊಂದುತ್ತದೆ. ಕನ್ನಡದ ವರ್ಣಕ ಕಾವ್ಯಗಳನ್ನು ಈ ಸಂಗೀತದಲ್ಲಿ ಹಾಡ ಬಹುದು, ಹಾಡಿ ನರ್ತಿಸಬಹುದು. ಈ ಸಂಗೀತದಲ್ಲಿ 'ವರ್ಣ' ಎಂಬ ಸಂಗೀತ ಭೇದವಿದೆ. ಇದರಲ್ಲಿ ಬರುವ ವರ್ಣಗಳು ಪಾಂಡಿತ್ಯದಿಂದ ಕೂಡಿದ ರಚನಾ ವಿಶೇಷಗಳು. ಇವು ನೃತ್ಯಕ್ಕೆ ವಿಶಿಷ್ಟವಾದುವು. ವರ್ಣಗಳಲ್ಲಿ ತಾನವರ್ಣ, ಪದ ವರ್ಣ, ರಾಗಮಾಲಿಕವರ್ಣ, ಪದಜತಿ ವರ್ಣಗಳೆಂಬ ಭೇದಗಳಿವೆ.[30] ಇವು ಕುಣಿತಕ್ಕೆ ರಚಿಸಲ್ಪಟ್ಟವು. ನಿಧಾನವಾಗಿ ಹಾಡತಕ್ಕವು. ಹೆಜ್ಜೆಯಂತೆ ಭಾವ ಮತ್ತು ಗತಿಗಳು. ಪದವರ್ಣ ನಾಟ್ಯಕಲೆಗೆ ಮುಖ್ಯವಾದುದು. ಇದರಲ್ಲಿ ಸಾಹಿತ್ಯ ಕುಣಿತಕ್ಕೆ

---

[28] 'ಕರ್ನಾಟಕ ಸಂಗೀತ ಸುಧಾ' : ಪುಟ 10

[29] ಅದೇ, ಪುಟ 10

[30] ಅದೇ, ಪುಟ 73

ಭಾವಕ್ಕೆ ತಕ್ಕಂತೆ ರೂಪುಗೊಂಡಿರುತ್ತದೆ ಎಂದು ತಿಳಿದು ಬರುತ್ತದೆ.[31] ಪದವರ್ಣದಿಂದ ವರ್ಣಕ ಎಂಬುದು ಬಂದಿತೇನೋ? ಹಾಗೆ ನೋಡಿದರೆ 'ಪದಕವಿತೆ' 'ವರ್ಣಕವಿತೆ' 'ಸೊಬಗಿನ ಸೋನೆಯು ವರ್ಣ' ಎಂಬ ಪದ ಪ್ರಯೋಗಗಳನ್ನು ಕನ್ನಡ ಸಾಹಿತ್ಯದಲ್ಲಿ ನೋಡಬಹುದು.

ಕನ್ನಡ 'ವರ್ಣಕ' ಕಾವ್ಯಗಳಲ್ಲಿ ಪ್ರಯೋಗವಾಗಿರುವ ದ್ರಾವಿಡ ಮಟ್ಟುಗಳು ರಾಗ, ಭಾವ, ತಾಳ ಲಯಗಳಿಂದ ಕುಣಿತಕ್ಕೆ ಅಳವಟ್ಟಿರುವುದನ್ನು ನಾವು ಯಕ್ಷಗಾನ ಬಯಲಾಟ ನಾಟಕಗಳಲ್ಲಿ ಕಾಣಬಹುದು. 'ವರ್ಣಕ' ಎಂಬ ಕಾವ್ಯ ಭೇದವು ಬಹುಶಃ ಯಕ್ಷಗಾನ ಬಯಲಾಟಗಳಿಂದ ಬಂದಂತೆ ತೋರುತ್ತದೆ. ಹಳಗನ್ನಡ ಸಾಹಿತ್ಯದಲ್ಲಿ ಯಕ್ಷಗಾನವನ್ನು ಎಕ್ಕಲಗಾಣ ಎಂದು ಕರೆಯುತ್ತಿದ್ದರು. (ಎಕ್ಕಮದ್ದಳೆ—ಯಕ್ಷಗಾನಕ್ಕೆ ಉಪಯೋಗಿಸುವ ಒಂದು ವಾದ್ಯ ವಿಶೇಷ). ಕವಿರಾಜಮಾರ್ಗಕಾರ 'ಚತ್ತಾಣ' 'ಬೆದಂಡೆ'ಗಳ ಕಾವ್ಯಗಳನ್ನು ಹೇಳುತ್ತಾನೆ. ಚತ್ತಾಣ ವರ್ಣಕ ಕಾವ್ಯಕ್ಕೆ ಮೂಲವಾದ ಕಾವ್ಯ ಭೇದವಿರಬೇಕು. ಇದು ಬಯಲಾಟದಲ್ಲಿ ಅಳವಟ್ಟು ಪ್ರಚಾರದಲ್ಲಿ ಇದ್ದಂತೆ ಕಾಣಿಸುತ್ತದೆ. ಇಲ್ಲವೆ ಅದು ಬಯಲಾಟದ ಸಾಹಿತ್ಯವಿರಬೇಕು. ನಾಗವರ್ಮನು ಪಾಡು ಮೆಲ್ಪಾಡು ಮುಂತಾದ ಪದ್ಯ ಲಕ್ಷಣವನ್ನು ಹೇಳುತ್ತಾನೆ. 'ಬೆದಂಡೆ ಎಂಬುದು ಕೇಳಲಿಕ್ಕೂ ನೋಡಲಿಕ್ಕೂ ಇರುವ ದೇಶೀಗಾನದ ದೃಶ್ಯಕಲೆ' ಎಂದು ಕೆ. ಪಿ. ವೆಂಕಟಪ್ಪ ಶೆಟ್ಟರ ಮತ 'ನಾಟ್ಯಿಗರಣಗಳಲ್ಲಿ ರೂಢಿಗೊಂಡ ಅತ್ಯುತ್ತಮವಾದ ಮೋಹಿನಿ ಕಲೆಯಾದ ಯಕ್ಷಗಾನವೇ ಈ ಬೆದಂಡೆ ಗಬ್ಬವಾಗಿರಬಹುದು' ಎಂದು "ಯಕ್ಷಗಾನ ಕಲೆ" ಎಂಬ ಲೇಖನದಲ್ಲಿ ಹೇಳಿರುವರು. ಮುಳಿಯ ತಿಮ್ಮಪ್ಪಯ್ಯನವರೂ ಸಹ ಇದೇ ಅಭಿಪ್ರಾಯವನ್ನು ಪಟ್ಟಿದ್ದಾರೆ.[32]

ಯಕ್ಷಗಾನ ಬಯಲಾಟಗಳು ದ್ರಾವಿಡ ಸಂಸ್ಕೃತಿಯ ಕೊಡುಗೆಗಳು. ಇವು ಸಂಸ್ಕೃತ ನಾಟಕಗಳಿಗಿಂತ ವಿಭಿನ್ನವಾದ ಸಂಸ್ಕಾರಗಳನ್ನು ಹೊಂದಿವೆ. ಯಕ್ಷಗಾನ ಬಯಲಾಟಗಳು ಕ್ರಿಸ್ತ ಪೂರ್ವದಿಂದಲೂ ನಡೆದು ಬಂದ ಪದ್ಧತಿಯಿರಬೇಕು. ಇದು ಬಹುಮಟ್ಟಿಗೆ ಜನಪದದಲ್ಲಿ ಬೆಳೆದು ಬಂದ ಸಾಹಿತ್ಯ. ಸಂಸ್ಕೃತದವರು ತಮ್ಮ ದೃಶ್ಯ ಕಾವ್ಯಗಳನ್ನು ಗಂಧರ್ವಗಾನವೆಂದು ಕರೆದುಕೊಂಡರೆ, ದ್ರಾವಿಡದವರು ಯಕ್ಷಗಾನವೆಂದು ಕರೆದಿದ್ದಾರೆ. ಅವರು ಹೀಗೆ ಯಕ್ಷಗಾನವೆಂದು ಕರೆದುಕೊಂಡಿದ್ದರಲ್ಲಿ ಔಚಿತ್ಯವಿದೆ. ಯಕ್ಷ ಎಂದರೆ ಸ್ವರ್ಗವರ್ಗದಲ್ಲಿ ಮನುಷ್ಯಧರ್ಮವನ್ನುಳ್ಳವರು. ಇವರು ಮೋಹಿನೀ ವಿದ್ಯೆಯನ್ನು ಬಲ್ಲವರು. ಇವರು ನಾಟ್ಯಾದಿ ಶಾಸ್ತ್ರಗಳಲ್ಲಿ ಬಲ್ಲಿದರು,

---

31 ಅದೇ, ಪುಟ 73, 74, 77

32 'ಕವಿರಾಜ ಮಾರ್ಗ'ದ ಸಂಪಾದಕರಾದ ಎಂ. ವಿ. ಸೀತಾರಾಮಯ್ಯನವರು ಟಿಪ್ಪಣಿ ಭಾಗದಲ್ಲಿ ವಿವರಿಸಿದ್ದಾರೆ. ಪುಟ 134

ವಿಚಿತ್ರ ವ್ಯಕ್ತಿಗಳು, ಇವರಿಗೆ ತುರಂಗ ವದನವಿದೆಯಂತೆ. ಈ ಯಕ್ಷರ ಅಧಿಪತಿ ಕುಬೇರ. ಇವನು ಲಂಕೆಯಲ್ಲಿದ್ದ, ದಕ್ಷಿಣದವನು. ತನ್ನ ತಮ್ಮನಾದ ರಾವಣನಿಂದ ಪರಾಜಿತನಾಗಿ ಅಲಕಾವತಿಗೆ ಬಂದನಂತೆ.[33] ಹೀಗೆ ಅವನು ಅಲಕಾವತಿಗೆ ಹೋಗು ವಾಗ ಅವನ ಅನುಯಾಯಿಗಳು ಇಲ್ಲಿಯೇ ಉಳಿದರು. ಅವರೇ ಯಕ್ಷಗಾನದ ಆದ್ಯ ಪ್ರವರ್ತಕರು. ದಕ್ಷಿಣದವನಾದ ಕುಬೇರನಿಗೆ ಮಗನೊಬ್ಬನಿದ್ದ. ಅವನ ಹೆಸರು 'ವರ್ಣಕ' ಅಥವ 'ವರ್ಣಕವಿ' ಎಂದು Sanskrit - English Dictionary (by Sir M. Monier-Williams) [34] ಇಂದ ತಿಳಿದು ಬರುತ್ತದೆ. ಇವನೇ ಯಕ್ಷಗಾನಕ್ಕೆ ಸಂಗೀತ ವರ್ಣಗಳನ್ನು ರಚಿಸಿರಬೇಕು. ಇವನು ರಚಿಸಿದ ಮಟ್ಟುಗಳನ್ನು ಹಾಡಿ ದವರು ವರ್ಣಕರು. "ವರ್ಣಕ" ಎಂದರೆ 'A strolling player or singer' ಎಂಬ ಅರ್ಥವನ್ನೂ ಅದೇ ನಿಘಂಟು ತಿಳಿಸುತ್ತದೆ. [35]

ಇದರಿಂದ ವರ್ಣಕ ಎಂದರೆ ಮುಖವಾಡ ಧರಿಸಿ ಬಯಲಾಟವನ್ನು ಆಡುವವರು ಅಥವ ಬೀದಿವಾಡುಗಳನ್ನು ಹೇಳುವವರೆಂದು ಅರ್ಥವಾಗುತ್ತದೆ. ಯಕ್ಷಗಾನದಲ್ಲಿ ಬರುವ ಪಾತ್ರಗಳು ಮುಖವಾಡವನ್ನು ಹಾಕಿಕೊಂಡು ಹಾಡಿ ನರ್ತಿಸುವುದನ್ನು ಈಗಲೂ ನಾವು ನೋಡುತ್ತೇವೆ. ಹೀಗೆ ಹಾಡಲು ನರ್ತಿಸಲು ಸಹಾಯಕವಾದ ಮಟ್ಟುಗಳೆಲ್ಲವು ದ್ರಾವಿಡದ ತ್ರಿಪದಿ, ಪಿರಿಯಕ್ಕರ, ಷಟ್ಪದಿ, ಏಳೆ, ಸಾಂಗತ್ಯ, ಜಾಲ ಪದಗಳಾದುದರಿಂದ ವರ್ಣಕರ ಬಾಯಿಂದ ಬಂದ ಹಾಡುಗಬ್ಬಗಳೆಲ್ಲ ವರ್ಣಕದ ಮಟ್ಟುಗಳಾದವು. ಆದುದರಿಂದ ಅವು ವರ್ಣಕಗಳೆಂದು ಹೆಸರು ಪಡೆದವು. ಇವು ಕನ್ನಡದ ಕಾವ್ಯಗಳ ವಾಹಕವಾದುದರಿಂದ ಆ ಛಂದಸ್ಸಿನಲ್ಲಿ ಬರೆದ ಕಾವ್ಯಗಳೆಲ್ಲವನ್ನು ವರ್ಣಕ ಕಾವ್ಯಗಳೆಂದು ಕರೆದರು ಎಂದು ಯೋಚಿಸಬಹುದು. ಏನೇ ಆಗಲಿ 'ವರ್ಣಕ' ಕಾವ್ಯವೆಂದರೆ ಹಾಡುಗಬ್ಬವೆಂದು ಸಿದ್ಧವಾಗುತ್ತದೆ. 'ವರ್ಣಕವಿ ಕರ್ಣಾವತಂಸ'ನಾದ ಹರಿಹರನ ರಗಳೆ, ಕಾವ್ಯಗಳಲ್ಲಿ ಈ ರೀತಿಯ ಕುಣಿತದ ಲಕ್ಷಣ ವನ್ನು ಕಾಣಬಹುದು. ಅವನು ಬರೆದ ವರ್ಣಕ ಕಾವ್ಯಗಳೆಲ್ಲವೂ ರಗಳೆ ಮಟ್ಟಿನಲ್ಲಿವೆ.

ಬೇಡರ ಕಣ್ಣಪ್ಪನು ಶಿವನೆದುರು ಕುಣಿದ ಕುಣಿತವನ್ನು ಗಮನಿಸಬಹುದು.

ಬಾಗುತಂ ಕೈಚಪ್ಪಳಿಕ್ಕುತಂ ಬೀಗುತಂ
ತೂಗುತಂ ತೊನೆವುತೊಂದೇ ಕಾಲಲಾಡುತಂ

---

[33] ಕೆ. ಎಂ. ಕೃಷ್ಣರಾವ್, 'ಯಕ್ಷಗಾನ ಸಾಹಿತ್ಯ' ಪುಟ 65

[34] ಪುಟ 924 ನೋಡಿ.

[35] ಅದೇ ಪುಟ 925

ಉಬುಬೆಂದು ಬೊಬ್ಬಿಟ್ಟು ಕೂ ಎಂದು ಕೂಗಿಟ್ಟು
ಆಬುಬೆಂದು ನಿಂದಾರ್ದು ನಾಲ್ದೆಸೆಗೆ ಕೊಣಕಿಟ್ಟು
ಮತ್ತೆ ಮತ್ತೆದ್ದಾಡಿ ಒಲೆದಾಡಿ ಮಲೆದಾಡಿ
ಬಾಯಿಂದ ಕೊಂಬು ಮಾವುರಿ ಕಹಳೆಗಳನೂದಿ
ಬಾಯಿಂದ ಕರಡೆಯಂ ಬಾರಿಸುತೆ ಕೊಳಲೂದಿ

ಇಂತಹ ವರ್ಣನೆಗಳನ್ನು ಮಾಡಿ, ಹಾಡಿ ಕುಣಿದಾಡಿದುದರಿಂದಲೇ ಹರಿಹರ 'ವರ್ಣಕವಿ'.

ಈ ಹಾಡುಗಬ್ಬಗಳಲ್ಲಿ ಕೃತಿಯನ್ನು ರಚಿಸಿರುವುದರಿಂದ ರತ್ನಾಕರವರ್ಣಿಯ ಭರತೇಶವೈಭವದಲ್ಲಿ ಬರುವ ಪೂರ್ವನಾಟಕ ಸಂಧಿಯಂತೂ ಯಕ್ಷಗಾನದ ವರ್ಣನೆಯೇ ಆಗಿದೆ.

ಡಕ್ಕೆ ನಾಟ್ಯಾನಕ ಚಂಪೆ ಕಿಂಕಿಣಿ ಡೌಡೆ । ಕುಕ್ಕುರು ತುಡುಮು ರಿಂಜೆಯುವ
ತಕ್ಕಿಟ ತೋಕಿಟ ತೋಂಗಿ ತೋಹಂಗಿ ತೋ । ಧಿಕ್ಕಿಟಯೆನೆ ಕೇಳಿಸಿದರು

ಇಲ್ಲಿ ಬರುವ ವಾದ್ಯವಿಶೇಷಗಳು ಯಕ್ಷಗಾನದಲ್ಲಿ ಬರುವ ವಾದ್ಯಗಳೇ. ಕೊನೆಯದಂತು 'ತಕ್ಕಿಟ, ತೋಕಿಟ, ತೋಂಗಿ ತೋಹಂಗಿ ತೋ । ಧಿಕ್ಕಿಟಯೆನೆ ಕೇಳಿಸಿದರು'ಎಂಬ ಮಾತಂತು ಯಕ್ಷಗಾನಕ್ಕೆ ಹೇಳಿಸಿದ್ದು. ವರ್ಣಕ ಸಂಗೀತದ ಪಲ್ಲವಿ. ಹೀಗೆ, ಯಕ್ಷಗಾನದ ಒಲವನ್ನು ತೋರಿಸಿರುವುದರಿಂದಲೇ ಇವನು ರತ್ನಾಕರವರ್ಣಿ ಎಂದು ಪ್ರಸಿದ್ಧನಾದ.

ವರ್ಣಕ ಕಾವ್ಯದ ಬೆಳವಣಿಗೆ

ಕರ್ನಾಟಕದ ಜನಪದ ಭಾವನೆಯಲ್ಲಿ ಮಿಂಚಿದ ಈ ಸಾಹಿತ್ಯದ ಇತಿಹಾಸ ಎಷ್ಟು ಹಿಂದಕ್ಕೆ ಹೋಗುತ್ತದೆ ಎಂದು ನಿಕರವಾಗಿ ಹೇಳಲು ಸಾಧ್ಯವಿಲ್ಲ. ಅತ್ಯಂತ ಹಿಂದಿನಿಂದಲೂ ವರ್ಣಕ ಕಾವ್ಯ ಪ್ರಚಾರದಲ್ಲಿದ್ದಿರಬೇಕು. ಕನ್ನಡದಲ್ಲಿ ಮೊಟ್ಟ ಮೊದಲು ವರ್ಣಕದ ಮಟ್ಟಾದ ತ್ರಿಪದಿಯಲ್ಲಿ ದೊರೆಯುವ ಕೃತಿ ಕಪ್ಪೆ ಅರಭಟ್ಟನ ಸ್ವಭಾವ ಚಿತ್ರವುಳ್ಳ ಬಾದಾಮಿ ಶಾಸನ. ಇದು ಕನ್ನಡದ ವೀರನೊಬ್ಬನ ವರ್ಣನೆ. ಹೀಗೆ ದೇಸೀ ಛಂದಸ್ಸಿನಲ್ಲಿ ರಚಿತವಾಗುತ್ತಿದ್ದ ದೇಶದ ವೀರರ ವರ್ಣನೆಗಳನ್ನು, ಜೀರನ ಕಥೆಯೇ ಎಂದು ಪಂಡಿತರು ಅಣಕ ಮಾಡಿದಂತೆ ಕಾಣಿಸುತ್ತದೆ. ಈ ಛಂದಸ್ಸಿನಲ್ಲಿ ಸಾಹಿತ್ಯ ಪ್ರಕಾರ ಹಿಂದಿನಿಂದಲೂ ಏಕೆ ಬೆಳೆದು ಬರಲಿಲ್ಲ ಎಂಬುದನ್ನೂ, ಇದಕ್ಕೆ ಅಡೆತಡೆಗಳ ಕಾರಣವನ್ನೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನೋಡಬಹುದು. ಕ್ರಿಸ್ತಶಕದ ಪ್ರಾರಂಭದಿಂದಲೂ ಕರ್ನಾಟಕವು ಸಂಸ್ಕೃತ ಪ್ರಭಾವಕ್ಕೆ ಒಳಗಾಗಿದೆ. ಹೀಗೆ ಸಂಸ್ಕೃತ ಪ್ರಭಾವಕ್ಕೆ ಒಳಗಾದ ಕನ್ನಡ ಸಾಹಿತ್ಯ ರಚನೆ ಕ್ರಿ. ಶ. 600ರಿಂದ. ಆದರೆ ನಮಗೆ ಅಧಿಕೃತವಾಗಿ ದೊರೆತ ಕನ್ನಡದ ಮೊದಲ ಕಾವ್ಯಗಳು ಪಂಪನ 'ವಿಕ್ರಮಾರ್ಜುನ

ವಿಜಯ' 'ಆದಿಪುರಾಣ' ಕಾವ್ಯಗಳು. ಈ ಮಾರ್ಗ ಕಾವ್ಯಗಳ ಪ್ರಭಾವದಿಂದ ಬೆಳೆದು ಬಂದು ಸಂಸ್ಕೃತ ವಿದ್ವನ್ಮಣಿಗಳಾದ ಕನ್ನಡಕವಿಕುಲವು ಕೀರ್ತಿಪ್ರಿಯರಾಜಾಶ್ರಯ ದಲ್ಲಿದ್ದು ಪಾಂಡಿತ್ಯದಿಂದ ಬೀಗಿತು. ಜನಪದ ಕಾವ್ಯಗಳಾದ ಯಕ್ಷಗಾನ, ಬೆದಂಡೆ ವರ್ಣಕ ಕಾವ್ಯಗಳನ್ನು ವರ್ಣಕ ಕವಿಗಳನ್ನು ತುಚ್ಛವಾಗಿ ಕಂಡಿತು. ಹೀಗಾಗಿ ಈ ಸಾಹಿತ್ಯ ಬೆಳೆದು ಬರಲು ಅಡೆತಡೆಗಳುಂಟಾಗಿರಬೇಕು. ಪಂಡಿತರು ಇವುಗಳನ್ನು ಕೀಳಾಗಿ ಕಂಡದ್ದರಿಂದ ಅರಸೊತ್ತಿಗೆಯ ಆಶ್ರಯ ಇದಕ್ಕೆ ದೊರೆಯದಂತಾಗಿ ಬೀದಿ ಪಾಲಾಗಿ ಜನಪದದಲ್ಲಿ ಸುಪ್ತವಾಗಿ ಬೆಳೆದು ಬಂದಿತು. ಹೀಗೆ ಬೆಳೆಯುತ್ತಿದ್ದ ಸಾಹಿತ್ಯಕ್ಕೆ ರಾಜಾಸ್ಥಾನದ ಪಂಡಿತರು ಅಣಕವಾಡಿದರು, ನಿಂದೆಯನ್ನು ಮಾಡಿದರು.

ಸುಮಾರು 1070ರಲ್ಲಿದ್ದ ಶಾಂತಿನಾಥನು ಸುಕುಮಾರ ಚರಿತೆಯಲ್ಲಿ

ಬೀಣೆಯ ಕೊಳಲ ಬೆದಂಡೆಯ
ಗಾಣರ ಬಱಿವಿಡಿದು ಸುಱಿದು ಕುಂದಿಂ ಕಥಕ
ಶ್ರೇಣಿಯೊಡನೆಳಸಿ ಬಳಸುವ
ನಾಣಿಲಿಗಳನೀ ಬುಧಾಳಿಯೊಳ್ ಪುಗಿಸುವುದೇ

ಎಂದನು. ಇವನ ದೃಷ್ಟಿಯಲ್ಲಿ ಬೆದಂಡೆಯನ್ನು ಹಾಡುವವರು ನಾಚಿಕೆ ಇಲ್ಲದವರು. ಅವರನ್ನು ವಿದ್ವಾಂಸರೊಡನೆ ಸೇರಿಸುವುದು ಸಲ್ಲ. ಇದನ್ನು ನೋಡಿದರೆ ಅಂದಿನ ಪಂಡಿತರಿಗೆ ವರ್ಣಕ ಕವಿಗಳ ಬಗ್ಗೆ, ಕಾವ್ಯಗಳ ಬಗ್ಗೆ ಅತ್ಯಂತ ಕೀಳಾದ ಭಾವನೆ ಇದ್ದದ್ದು ಕಾಣಿಸುತ್ತದೆ.

ಆದರೆ 12ನೇ ಶತಮಾನದ ಮಹಾಕ್ರಾಂತಿಯು ದೇಸಿಯ ಅಗತ್ಯವನ್ನು ಸಾರಿತು. ಜನಸಾಮಾನ್ಯರ ಕಡೆಗೆ ಕಣ್ಣನ್ನು ಹೊರಳಿಸಿತು. ಅವರಿಗೆ ಅರ್ಥವಾಗುವಂತೆ ಸಂಸ್ಕೃತದಲ್ಲಿದ್ದ ವೇದ ವೇದಾಂತ, ತತ್ವ ವಿಚಾರದ ಸಾರವನ್ನು ಗದ್ಯವಲ್ಲದೆ ಪದ್ಯವಲ್ಲದೆ ಇರುವ, ಒಂದು ರೀತಿಯಲ್ಲಿ ಹಾಡಲು ಬರುವಂತಹ ಶೈಲಿಯನ್ನು ವಚನಗಳೆಂದು ಕರೆದು ಜನಸಾಮಾನ್ಯರ ಹೃದಯ ಮಿಡಿಯುವಂತೆ ಹಾಡಿತು. ಈ ಸಂದರ್ಭದಲ್ಲಿ ಜನ ಸಾಮಾನ್ಯರು ಎಚ್ಚೆತ್ತರು. ವರ್ಣಕ ಕವಿಗಳು ಕಣ್ಣು ಬಿಟ್ಟರು.

ಇಂತಹ ಸಮಯದಲ್ಲಿಯೂ ಸಹ ರಾಜಾಶ್ರಯದಲ್ಲಿದ್ದ ಪಂಡಿತರು ಇದ್ದೇ ಇದ್ದರು. ಅವರ ನಿಂದೆಯೂ ಇತ್ತು. ಹರಿಹರನು ಗಿರಿಜಾಕಲ್ಯಾಣವನ್ನು ರಾಜಾ-ಶ್ರಯದಲ್ಲಿ ಬರೆದಂತೆ ಕಾಣಿಸುತ್ತದೆ. ಇವನೂ ಸಹ ಪಂಡಿತ.

ಗೌರೀ ವರವರ್ಣಾಲಂ
ಕಾರಂ ರಸಪೂರಮತಿಗಭೀರಂ ಕಾವ್ಯಂ

ನೀರಸರಜಿವಂತೇಸಿದು
ತಾರೆಲೆಯೆ ಬೀದಿವಾಡೆ ನೆರವಿಯ ತುಮುಕೇ

ಎಂದ. ತನ್ನ ಗಂಭೀರವಾದ 'ವಸ್ತುಕ' ಕಾವ್ಯವನ್ನು ನೀರಸವೆಂದು ತಿಳಿಯಲು ಇದೇನು 'ತಾರೆಲೆಯೆ, ಬೀದಿವಾಡೆ, ನೆರವಿಯ ತುಮುಕೇ,' ಎಂದು ತನ್ನ ಕಾವ್ಯದ ಶ್ರೇಷ್ಠತೆಯನ್ನು ಹೇಳಿಕೊಂಡು ಜನಪದ ಕವಿಗಳ ನಿಂದೆಯನ್ನು ಮಾಡಿದ. ಮುಂದೆ ರಾಜಾಶ್ರಯದಿಂದ ಸಿಡಿದು ಬಂದಮೇಲೆ ಅವನೇ ವರ್ಣಕದಲ್ಲಿ ಕಾವ್ಯವನ್ನು ರಚಿಸಿದ್ದು ಆಶ್ಚರ್ಯಕರ. ಅಷ್ಟರಲ್ಲಿಯೇ ರಾಜಾಶ್ರಯದಲ್ಲಿದ್ದಾಗಿನ ಪಾಂಡಿತ್ಯ ಪ್ರೇಮವು ಸೋರಿ ಹೃದಯ ಪಕ್ವವಾದಂತೆ ಕಾಣಿಸುತ್ತದೆ. ಮುಕ್ಕಾಲು ಪಾಲು ಇವನಿಂದಲೇ 'ವರ್ಣಕ'ಗಳಲ್ಲಿ ಎಂದರೆ ದೇಸೀ ಛಂದಸ್ಸುಗಳಲ್ಲಿ ವಿಶೇಷವಾಗಿ ಸಾಹಿತ್ಯ ನಿರ್ಮಾಣವಾಗಲು ಆರಂಭವಾಯಿತು. ಇವನು ರಾಜಾಶ್ರಯದಿಂದ ಹೊರಬಂದು ವರ್ಣಕ ಕಾವ್ಯಗಳನ್ನು ರಗಳೆಯಲ್ಲಿ ರಚಿಸಿದರೂ, ಅಂದಿನ ಪಂಡಿತವರ್ಗ ಅವನನ್ನು ರಗಳೆಯ ಕವಿ ಎಂದು ಅಪಹಾಸ್ಯ ಮಾಡದೆ ಬಿಡಲಿಲ್ಲ. ಆದರೂ ಇವನನ್ನು ಅನುಸರಿಸಿ ರಾಘವಾಂಕನು ವರ್ಣಕ ಕಾವ್ಯಗಳಾದ, 'ಹರಿಶ್ಚಂದ್ರಕಾವ್ಯ' 'ಸಿದ್ಧರಾಮಪುರಾಣ' ದಂತಹ ಕೃತಿಗಳನ್ನು ರಚಿಸಿದನು. ಮುಂದೆ ವರ್ಣಕ ಕಾವ್ಯಗಳು ಬೆಳೆದು ಬರುತ್ತಲೇ ಇದ್ದರೂ ಸಹ 13ನೇ ಶತಮಾನದಲ್ಲಿ ಶಾರ್ಙ್ಗದೇವನು ಸಂಗೀತರತ್ನಾಕರದಲ್ಲಿ ವರ್ಣಕ ಕವಿಗಳು ಮಧ್ಯಮಕವಿಗಳೆಂದು ನಿಂದೆಮಾಡಿದನು.

ಸುಮಾರು 1400 ರಲ್ಲಿದ್ದ ಮಧುರ ಕವಿ ಧರ್ಮನಾಥ ಪುರಾಣವನ್ನು ವಸ್ತುಕದಲ್ಲಿ ರಚಿಸಿದ. ತನ್ನ ಕಾವ್ಯದ ಶ್ರೇಷ್ಠತೆಯನ್ನು ಹೇಳಿಕೊಳ್ಳಲು

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೆ ಬೀದಿವಜಿಯೆ ಬೀರನ ಕತೆಯೆ

ಎಂದು ನಾಡ ಜನಪದ ಕವಿಗಳನ್ನು ಟೀಕಿಸಿದ. ಆದರೆ ವರ್ಣಕ ಕಾವ್ಯ ತನ್ನ ಗೇಯ ಪ್ರಧಾನವಾದ ನಾದದಿಂದ ಕರ್ನಾಟಕವನ್ನೆಲ್ಲ ತುಂಬಿತು. ಆದರೂ ಪಂಡಿತ ಮಂಡಳಿಯ ಮಧ್ಯೆ ವರ್ಣಕ ಕವಿಗಳು ತಲೆಯೆತ್ತಬೇಕಾಗಿದ್ದರೆ, ನಯದಿಂದ, ಭಯದಿಂದ, ವಿನಯದಿಂದ ತಮ್ಮಲ್ಲಿಯೂ ಪಾಂಡಿತ್ಯವಿದೆಯೆಂದು ಹೇಳಿಕೊಂಡು ಮುಂದಕ್ಕೆ ಬರಬೇಕಾಗಿತ್ತು. ಭೀಮಕವಿ 'ಬಸವ ಪುರಾಣ'ವನ್ನು ವರ್ಣಕದಲ್ಲಿ ಬರೆದ. ಅವನು 'ವಸ್ತುಕದ ಮುಂದೆ ವಿಳಾಸಮೇ ಸಾಮಾನ್ಯ ವರ್ಣಕವೀ ಕವಿತೆಯೆಂದು ಓಸರಿಸದಿರಿ ಬರಿಯ ಕನ್ನಡಭಾಷೆ ಎಂದೆನಲಾಗದು' ಎಂದು ವಿನಯವನ್ನು ಮೆರೆದು ಮುಂದಕ್ಕೆ ಬರಬೇಕಾಯಿತು. ವಿರೂಪಾಕ್ಷ ಪಂಡಿತನು ಚನ್ನಬಸವ ಪುರಾಣದಲ್ಲಿ

'ಕರ್ನಾಟಕ ವ್ಯಾಕರಣ ಛಂದಸ್ಸಲಂಕಾರ ಶಬ್ದಂಗಳ ಅನುಗೊಳಿಸಿ ವರ್ಣಕಕ್ಕಿಲ್ಲ ಲಕ್ಷಣ ವೆಂಬ ಜನರ ನಾಣ್ಣುಡಿಯನಿಲ್ಲೆನಿಸಿ ಪೇಳ್ದಂ ವಿನೂತನ ಕಾವ್ಯಮಂ ಜಗತ್ಸೇವ್ಯಮಂ'—ಎಂದು ಹಟದಿಂದ ಮುಂಪಕ್ಕೆ ಬರಬೇಕಾಯಿತು.

ಹೀಗೆ ವಸ್ತುಕ ವರ್ಣಕಗಳಲ್ಲಿ ಪೈಪೋಟಿ ನಡೆದಾಗ, ಕೆಲವು ವರ್ಣಕ ಕವಿಗಳು ವಸ್ತುಕ ಕವಿಗಳನ್ನು, ಅವರ ಕಾವ್ಯಗಳನ್ನು ಲೆಕ್ಕಿಸದೆ ವರ್ಣಕದ ಆಧಿಕ್ಯವನ್ನೇ ಮೆರೆದರು. ವಸ್ತುಕಕವಿಗಳ, ಪಂಡಿತ ಮಂಡಳಿಯ ಮುಂದಿನ ಮಾಘಸ್ನಾನ, ವ್ಯೈಯಾಕರಣೆಗಳಿಗಾಗಿ ವೈಯಾರ, ನಿಘಂಟುವಿನ ಹಿಂದೆ ನಿಂತು ಬೀರುವ ಇಣುಕುನೋಟಗಳನ್ನು ಲೆಕ್ಕಿಸದೆ ವರ್ಣಕ ಕವಿಗಳು ಜನಮನದ ಮುಂದೆ ಲಾಸ್ಯವಾಡಿದರು. ಬಾಹುಬಲಿ ಪಂಡಿತನು

ಚಿಪ್ಪಿನೊಳಿಹ ಮುತ್ತು ವಸ್ತುಕ ವರ್ಣಕ
ಚಿಪ್ಪುಕಳೆದು ಸರಗೆಯ್ದು
ಸುಪ್ಪಾಣಿ ಮುತ್ತಿನ ಹಾರವೆಂದಿನಿಪೊಂ
ದೊಪ್ಪದೋರದೊಡವ ಕವಿಯೇ

ಎಂದು ಹೇಳಿದ್ದಾನೆ. ಇಲ್ಲಿ ಕವಿ ವಸ್ತುಕವನ್ನು ಚಿಪ್ಪಿನಲ್ಲಿರುವ ಮುತ್ತು ಎಂದಿದ್ದಾನೆ. ಎಂದರೆ ಮುತ್ತು ಸೊಗಸಾದದ್ದಾದರೂ ಅದು ತಾನೇ ತಾನಾಗಿ ಕಾಣುವಂತಿಲ್ಲ. ಅದು ಚಿಪ್ಪಿನಲ್ಲಿದೆ. ಅದನ್ನು ಬಿಡಿಸುವ ದಾವತಿಯೊಂದಿದೆ. ವಸ್ತುಕ ನಾರಿಕೇಳಪಾಕ. ಈ ಚಿಪ್ಪನ್ನು ತೆಗೆದ ತಿರುಳು ವರ್ಣಕ ಕಾವ್ಯ. ಅದು ಸುಂದರವಾಗಿ ಸರವನ್ನು ಕೋದದ್ದು. ಸ್ವರಗೈಯಲು ಸಹ ಅನುಕೂಲವಾದದ್ದು, ಸರಳವಾದದ್ದು; ಕ್ಲಿಷ್ಟವಾದದ್ದಲ್ಲ, ಜಟಿಲವಾದದ್ದಲ್ಲ. ಈ ಅರ್ಥದಲ್ಲಿಯೇ ರತ್ನಾಕರವರ್ಣಿ ಎಲ್ಲ ಅಲಂಕಾರಾದಿ ಲಕ್ಷಣಗಳು ವಸ್ತುಕಕ್ಕೆ ಬೇಕು, ವರ್ಣಕದಲ್ಲಿ ಆ ಪಾಂಡಿತ್ಯದ ಕೋಟಲೆ ಇಲ್ಲ, ಹಾಗೆ ಪಾಂಡಿತ್ಯದಿಂದ ಹೆಣಗಿದರೆ ಪುಸ್ತಕದ ಬದನೆಕಾಯಿ ಆಗುತ್ತೆ ಎಂದು ಹೇಳಿರುವುದು. ಅದು ಅವನ ದಿಟ್ಟವಾದ ನಿಲವು.

ಹೀಗೆ 10ನೇ ಶತಮಾನದಿಂದ 11, 12ನೇ ಶತಮಾನದವರೆಗೆ ವರ್ಣಕವು ಜಾನಪದದಲ್ಲಿ ಅಡಗಿ ಅಲ್ಲಲ್ಲಿ ವಸ್ತುಕ ಕಾವ್ಯಗಳಲ್ಲಿ ತೋರಿ 12ನೇ ಶತಮಾನದಲ್ಲಿ ತಲೆಯೆತ್ತಿ ಸುಮಾರು 13, 14ನೇ ಶತಮಾನದವರೆವಿಗೂ ಒನಪು ವೈಯಾರಗಳನ್ನು ಬೀರಿ 16 ನೇ ಶತಮಾನದ ಹೊತ್ತಿಗೆ ವಿಜೃಂಭಿಸಿ ತನ್ನ ವರ್ಣ ವಿನ್ಯಾಸವನ್ನು 19ನೇ ಶತಮಾನದವರೆಗೆ ಹರಡಿ 20ನೇ ಶತಮಾನದ ನವೋದಯ ಕವಿಗಳೊಡನೆ ಸೇರಿಹೋಯಿತು.

ಗ್ರಂಥಋಣ

1. ಕನ್ನಡ ಕೈಪಿಡಿ. ಸಂ. 1 ಅಲಂಕಾರ ವಿಭಾಗ : ಡಾ॥ ಎ. ಆರ್. ಕೃಷ್ಣಶಾಸ್ತ್ರಿ
2. ವಾಙ್ಮಯ ತಪಸ್ಸು : ಕಡೆಂಗೋಡ್ಲು ಶಂಕರಭಟ್ಟ
3. ಕನ್ನಡದಲ್ಲಿ ಕಾವ್ಯತತ್ವ : ಡಾ॥ ಕೆ. ಕೃಷ್ಣಮೂರ್ತಿ
4. ಕವಿರಾಜಮಾರ್ಗ : ಸಂಪಾದಕರು ಎಂ. ವಿ. ಸೀತಾರಾಮಯ್ಯ
5. ತವನಿಧಿ : ಡಾ॥ ರಂ. ಶ್ರೀ. ಮುಗಳಿ
6. ಕನ್ನಡ ಸಾಹಿತ್ಯ ಚರಿತ್ರೆ : ಡಾ॥ ರಂ. ಶ್ರೀ. ಮುಗಳಿ
7. ಕರ್ಣಾಟಕ ಜನಜೀವನ : ಬೆಟಗೇರಿ ಕೃಷ್ಣಶರ್ಮ
8. ಯಕ್ಷಗಾನ ಬಯಲಾಟ : ಡಾ॥ ಶಿವರಾಮ ಕಾರಂತ
9. ಯಕ್ಷಗಾನ ಸಾಹಿತ್ಯ : ಡಾ॥ ಕೆ. ಎಂ. ಕೃಷ್ಣರಾವ್
10. ಕರ್ನಾಟಕ ಸಂಗೀತ ಸುಧಾ : ರಾಮರತ್ನಂ ಮತ್ತು ವಿ. ಎಸ್. ಸಂಪತ್ಕುಮಾರಾಚಾರ್

ಕಾಮಫಲ – ಟೊಮೇಟೊ

ಬಿ. ಜಿ. ಎಲ್. ಸ್ವಾಮಿ

ಕಳೆದ ಶತಮಾನದ ಸಂಧ್ಯೆ. ಭಾರತ ಸ್ವಾತಂತ್ರ್ಯದ ಕನಸು ಕೂಡ ಯಾರಿಗೂ ಕಾಣಿಸಿಕೊಂಡಿರಲಿಲ್ಲ. ಸೂರ್ಯಾಸ್ತಮವನ್ನೇ ಕಾಣದ ಬ್ರಿಟಿಷರ ಆಳ್ವಿಕೆ ಭಾರತದಲ್ಲಿ ನೆಲೆಗೊಂಡಿತ್ತು. ಅವರ ಯುದ್ಧಗಳೂ ರಾಜಕೀಯ ತಂತ್ರಗಳೂ, ತಸ್ಕರಣಾ ಸಂವಿಧಾನಗಳೂ ಮುಗಿದು ಶಾಂತಿಯುಗ ಕಾಲಿಟ್ಟಿತ್ತು. ಸರ್ಕಾರದ ಉದ್ಯೋಗವೇ ಆಗಲಿ, ಖಾಸಗೀ ವ್ಯಾಪಾರವೇ ಆಗಲಿ, ಬಿಳಿಯರದೇ ಮೇಲುಗೈ. ಸೆಕೆ ಭಾರತದಲ್ಲಿ ತಂಪು ಇಂಗ್ಲೆಂಡಿನ ಚೂರುಗಳನ್ನು ತಂದು ಅಲ್ಲಲ್ಲಿ ನೆಡಬೇಕೆಂದು ವಿಶ್ವ ಪ್ರಯತ್ನ ಮಾಡಿದರು. The Downs of England ಎಂದರೆ ಆ ದೇಶದಲ್ಲಿ ಅಲೆ ಅಲೆಯಾಗಿ ಎದ್ದು ಬಿದ್ದಿರುವ ಹುಲ್ಲುಗಾವಲು ಪ್ರದೇಶ. ಉದಕಮಂಡಲದ (ನೀಲಗಿರಿ) ಪ್ರಸ್ತ ಭೂಮಿಯಲ್ಲಿ ಇಂಗ್ಲೆಂಡ್ ಡೌನಿನ ಭೂದೃಶ್ಯವನ್ನೂ ಹವಾಗುಣವನ್ನೂ ಕಂಡು ಕೊಂಡು, ತಮ್ಮ ದೇಶದ ವಾತಾವರಣವನ್ನು ಕಟ್ಟಲು ಪ್ರಾರಂಭಿಸಿದ್ದರು. ಇಂಗ್ಲೆಂಡಿನಲ್ಲಿರುವ ಚೇರಿಂಗ್‌ಕ್ರಾಸ್, ಕೇಟಿ ಮೊದಲಾದ ಹೆಸರುಗಳಿಂದಲೇ ಉದಕಮಂಡಲದ ಕೆಲವು ಹರವುಗಳನ್ನು ಪೂರ್ವವಾಸನಾಬಲದಿಂದ ಕರೆದರು. ಇಂಗ್ಲೆಂಡಿನಲ್ಲಿ ಬೆಳೆಯುತ್ತಿದ್ದ ಹೂಗಿಡಮರಗಳನ್ನೂ ಕಾಯಿಪಲ್ಯ ಹಣ್ಣುಹಂಪಲುಗಳನ್ನೂ ಇಲ್ಲಿಗೆ ಬರಮಾಡಿಕೊಂಡು ಬೆಳೆಸಲು ಪ್ರಯತ್ನಪಟ್ಟರು. ಕೆಲಸದಿಂದ ನಿವೃತ್ತಿಯಾದ ಮೇಲೆ ಉದಕಮಂಡಲವನ್ನು ಮುದ್ದಿನಿಂದ ಊಟಿಯೆಂದು ಕರೆದು ಅದನ್ನು ವಾಸಸ್ಥಾನವಾಗಿಸಿಕೊಂಡರು.

ಟೊಮೇಟೊ ಹಣ್ಣನ್ನು ದೈನಂದಿನ ಆಹಾರದೊಡನೆ ಬಳಸುವ ಸಂಪ್ರದಾಯ ಇಂಗ್ಲೆಂಡಿನಲ್ಲಿ ಪ್ರಾರಂಭವಾದದ್ದು 19ನೆ ಶತಮಾನದಲ್ಲಿ. ಹಿಂಡುಹಿಂಡಾಗಿ ಭಾರತಕ್ಕೆ ಬರುತ್ತಿದ್ದ ಆಂಗ್ಲೇಯರಿಗೆ ಈ ಪದಾರ್ಥವಿಲ್ಲದಿದ್ದರೆ "ಹೋಂ ಸಿಕ್‌ನೆಸ್" ಉಂಟಾಗುವುದಿಲ್ಲವೇ? ಟೊಮೇಟೊ ಬೀಜಗಳನ್ನು ತಂದು ಊಟಿಯಲ್ಲಿ ಬೆಳೆಸಿದರು. ವ್ಯಾಪಾರ ದೃಷ್ಟಿಯಿಂದ ನಮ್ಮವರೂ ಈ ತರಕಾರಿಯನ್ನು ಬೆಳೆದರಾದರೂ ಅದು ಬಿಳಿಯರ ನಾಲಗೆಯನ್ನು ಮಾತ್ರ ಹಿಡಿಯಿತು. ಈ ಶತಮಾನದ ಆರಂಭಕಾಲದಲ್ಲಿ ನಮ್ಮ ನಾಲಗೆಯ ಮೇಲೂ ಕೊಂಚ ಕೊಂಚವಾಗಿ ಸುಳಿದಾಡತೊಡಗಿತು. ಆದರೂ ರುಚಿಯ ಪಕ್ವವನ್ನು ಸಂಪೂರ್ಣವಾಗಿ ಹೀರಲಿಲ್ಲ. ಹೀರುವುದಕ್ಕೆ ಇಷ್ಟಪಡಲೂ ಇಲ್ಲ.

ನಮ್ಮ ಸಂಪ್ರದಾಯದಲ್ಲಿ

'ಹೊರಗಿನದು' ಎಂಬುದು ಕಾರಣ. ಹಣ್ಣನ್ನು ಹಿಸುಕಿದರೆ ಒಳಗಿನದು ಅಸಹ್ಯ ರೀತಿಯಲ್ಲಿ, ಅಸಹ್ಯ ರೂಪದಲ್ಲಿ ಫುಚಕ್ಕೆಂದು ಹೊರ ಬರುತ್ತದೆಯಾದ್ದರಿಂದ

ನಮ್ಮ ಕನ್ನಡ ರಸಿಕರು ಟೊಮೇಟೊವನ್ನು "ಅವಗೂದೆ ಹಣ್ಣು" ಎಂಬ ಅಸಹ್ಯದ ಹೆಸರಿನಿಂದಲೇ ಕರೆದರು. ಆದರೂ ಹಣ್ಣಿನ ಅದೃಷ್ಟ ಚೆನ್ನಾಗಿತ್ತು. ಅನಕ್ಷರಸ್ಥರ ಬಾಯಲ್ಲಿ ಕೂಡ ಟೊಮೇಟೊ ಎಂಬ ಹೆಸರೇ ಸ್ಥಾಯಿಯಾಗಿದೆ.

50 ವರ್ಷಗಳ ಹಿಂದೆ ಸಂಪ್ರದಾಯಸ್ಥ ಹಿಂದೂ ಸಮಾಜದಲ್ಲಿ ಟೊಮೇಟೊ ನಿಷೇಧವಾಗಿತ್ತು. ಈಗ ಹೀಗಲ್ಲ. ಜಾತಿ ಭೇದವಿಲ್ಲದೆ, ಮೇಲು ಕೀಳು ಭೇದವಿಲ್ಲದೆ, ಬಡ ಧನಿಕ ಭೇದವಿಲ್ಲದೆ ನಮ್ಮ ಅಡುಗೆ ಮನೆಯನ್ನು ಹೊಗುತ್ತಿದೆ. ಅಲ್ಲಿಂದ ಒಂದಲ್ಲ ಒಂದು ವಿಧದಲ್ಲಿ ನಮ್ಮ ಹೊಟ್ಟೆಯನ್ನು ಸೇರುತ್ತಿದೆ. ಪಶ್ಚಿಮ ದೇಶಗಳಲ್ಲಿ ಟೊಮೇಟೊ ಕಾಯಿಗೆ ಉಪಯೋಗವಿಲ್ಲ ; ಹಣ್ಣನ್ನು ಮಾತ್ರ ತಿನ್ನುತ್ತಾರೆ. ಅದನ್ನೂ ಸಾಮಾನ್ಯವಾಗಿ ಬೇಯಿಸಗೊಡರು. ಹಸಿಯಾಗಿ "ಗ್ರೀನ್ ಸೆಲಾಡ್" ನೊಂದಿಗೋ, ಸ್ಯಾಂಡಿಚ್ಚಿನೊಂದಿಗೋ ಸೇರಿಸಿ ತಿನ್ನುತ್ತಾರೆ. ಹಣ್ಣಿನೊಡನೆ ಉಪಯೋಗಿಸುವ ಸಾಂಬಾರವೂ ಮಿತಿಯುಳ್ಳದ್ದು. "ಬ್ಲಾಂಡ್" ಎಂಬ ಗುಂಪಿಗೆ ಸೇರಿದ್ದು,—ಉಪ್ಪು ಮತ್ತು ಮೆಣಸುಕಾಳಿನ ಪುಡಿ. ನಮ್ಮ ತರಕಾರಿಯನ್ನಾಗಿ ಟೊಮೇಟೊವನ್ನು ಪರಿವರ್ತಿಸಿಕೊಳ್ಳುವ ಸಂದರ್ಭದಲ್ಲಿ ನಾವು ಅದಕ್ಕೆ ಮಾಡದ ಕೋಲವಿಲ್ಲ. ಎತ್ತಿನಸದ ಅವತಾರವಿಲ್ಲ. ಉಪ್ಪು ಖಾರ ಹುಳಿಗಳನ್ನು ಸುರಿದೆವು ; ಕೊತ ಕೊತ ಕುದಿಸಿದೆವು, ಹುರಿದೆವು, ಚಟ್ನಿ ಮಾಡಿದೆವು, ಸಾಂಬಾರ್ ಮಾಡಿದೆವು, ಸಾರು ಮಾಡಿದೆವು, ತೊವ್ವೆ ಮಾಡಿದೆವು ; ಕಾಯನ್ನು ಉಪಯೋಗಿಸಿಕೊಂಡು ಕೋಸುಂಬರಿ, ಪಳಿದ್ಯ, ಮೊಸರುಬಜ್ಜಿಗಳನ್ನೂ ಮಾಡಿದೆವು. (ಟೊಮೇಟೊ ಪಾಯಸವನ್ನು ಮಾತ್ರ ಇನ್ನೂ ಯೋಚಿಸಿಲ್ಲ). ನಮ್ಮ "ನಾಟು" ತರಕಾರಿಗಳನ್ನು ಉಪಯೋಗಿಸುವ ರೀತಿಯಲ್ಲೇ ಟೊಮೇಟೊವನ್ನೂ ಉಪಯೋಗಿಸಿದೆವು. ಪಾಶ್ಚಾತ್ಯರು ಮಾಡುವ ಟೊಮೇಟೊ ಸೂಪ್ ತಯಾರಿಕೆಯ ಕ್ರಮವನ್ನು ಅವರಿಗೇ ಬಿಟ್ಟುಬಿಟ್ಟು ನಮ್ಮ ಸಂಪ್ರದಾಯದ ಸಾರಿನ ವಿಧಾನವನ್ನು ಅನುಸರಿಸಿ ಆ ನೀರನ್ನೇ ಅದೇ ಹೆಸರಿನಿಂದಲೇ ಕರೆದು ಕುಡಿದು ತೇಗುಬಿಟ್ಟೆವು. ಅವರಿಗೆ ಒಂದು ತರಕಾರಿಯಾಗಿದ್ದದ್ದು ನಮಗೆ ತರಕಾರಿಗಳಲ್ಲೊಂದಾಯಿತು.

ಪಾಶ್ಚಾತ್ಯ ವೈದ್ಯವನ್ನೂ ಆಹಾರಸತ್ವವಿಜ್ಞಾನವನ್ನೂ ಕಲಿತುಬಂದ ನಮ್ಮವರಿಂದ ಟೊಮೇಟೊವಿನ ಸಾಮಾಜಿಕ ಪ್ರತಿಷ್ಠೆ ಹೆಚ್ಚಿತು. ಟೊಮೇಟೊನಲ್ಲಿ ವಿಟಮಿನ್‌ಗಳು ಅಧಿಕ ಪ್ರಮಾಣದಲ್ಲಿವೆ (ನಿಜ) ; ಹೆಚ್ಚು ಹೆಚ್ಚಾಗಿ ಉಪಯೋಗಿಸಿ; ಮಕ್ಕಳಿಗೂ ಮುದುಕರಿಗೂ, ಕಾಯಿಲೆಯಿಂದ ಚೇತರಿಸಿಕೊಳ್ಳುತ್ತಿರುವವರಿಗೂ ಅತ್ಯುತ್ತಮವಾದ ಆಹಾರ (ಇದೂ ನಿಜವೇ) ಎಂದು ಒತ್ತೊತ್ತಿ ಹೇಳಿದರು. ಜನ ಹೆಚ್ಚು ಹೆಚ್ಚಾಗಿ ಕಿವಿಗೊಟ್ಟರು. ಸಂಪ್ರದಾಯಸ್ಥರು ಕೂಡ ಈಗ ಉಸಿರೆತ್ತದೆ "ಔಷದಾರ್ಥವಾಗಿ" ಟೊಮೇಟೊ ತಿನ್ನುತ್ತಾರೆ. ಅಳುಕಿದ್ದವರು ತಿಂದಾದ ಮೇಲೆ

ಯಾವುದೋ ಪ್ರಾಯಶ್ಚಿತ್ತ ಮಂತ್ರವನ್ನು ಜಪಿಸಿಕೊಳ್ಳುತ್ತಾರೆ. ಅಂತೂ ಟೊಮೇಟೊ ರಸ ನಮ್ಮ ರಕ್ತನಾಳಗಳಲ್ಲೂ ಹರಿಯ ಹತ್ತಿದೆ.

ತೌರಿನಲ್ಲಿ

ಟೊಮೇಟೊ ಸ್ಪೀಷೀಸುಗಳು ಸ್ವಾಭಾವಿಕವಾಗಿ ಬೆಳೆಯುವ ಹರವನ್ನು ಗಮನಿಸಿದಾಗ ದಕ್ಷಿಣ ಅಮೆರಿಕವೇ ಇದರ ತೌರು ಎಂದು ಭಾಸವಾಗುವುದು ಸಹಜ. ಆದರೆ ಬೇರೆ ತೆರನಾದ ಆಧಾರಗಳು ಮೆಕ್ಸಿಕೊವನ್ನು ಸೂಚಿಸುವಂತೆ ಕಾಣುತ್ತದೆ. ದಕ್ಷಿಣ ಅಮೆರಿಕದಲ್ಲಿ ಇಂದಿನ ಟೊಮೇಟೊ ಸಾಗುವಳಿ ಅಲ್ಲಿರುವ ಅನ್ಯದೇಶೀಯರ ಪ್ರಯೋಜನಕ್ಕಾಗಿ ನಡೆಯುತ್ತಿದೆ. ಆದರೆ ಮೆಕ್ಸಿಕೊನಲ್ಲಿ ಅಲ್ಲಿಯ ನಾಡು ಜನಾಂಗದ ಉಪಯೋಗಕ್ಕಾಗಿಯೇ ಕೃಷಿ ನಡೆಯುತ್ತಿದೆ. ಇಲ್ಲಿಯ ಟೊಮೇಟೊಗಳಲ್ಲಿ ರೂಪ ಗಾತ್ರ ವರ್ಣಗಳ ವೈವಿಧ್ಯತೆಯೂ ಗಮನಾರ್ಹವಾದದ್ದೇ. ಟೊಮೇಟೊ ಎಂಬ ಪದವೇ ಮೆಕ್ಸಿಕೊ ದೇಶದ ಭಾಷೆಯಾದ ನಹುಅಟ್ಲ್ ಪದ, – ಟೊಮೇಟ್ಲ್ (Tomatl). ಈ ಪದದ ರೂಪಾಂತರಗಳೇ ದಕ್ಷಿಣ ಅಮೆರಿಕದಲ್ಲೂ ಯೂರೋಪಿನಲ್ಲೂ ಪ್ರಚಾರಗೊಂಡಿವೆ. ಈ ಆಧಾರಗಳಿಂದ ಮೆಕ್ಸಿಕೊನಲ್ಲಿ ಟೊಮೇಟೊವಿನ ದೀರ್ಘಕಾಲದ ಚರಿತ್ರೆಯಿತ್ತೆಂದು ಊಹಿಸಬಹುದು.

ಇನ್ನೂ ಒಂದು ಸಂಗತಿಯನ್ನು ಗಮನಿಸಬೇಕು. ಮೊಟ್ಟ ಮೊದಲು ಟೊಮೇಟೊ ಯೂರೋಪಿಗೆ ಹೋದದ್ದು ಮೆಕ್ಸಿಕೊನಿಂದ. ಕ್ರಿ. ಶ. 1554ನೆ ವರ್ಷದಲ್ಲೇ ಇಟಲಿಯಲ್ಲಿ ಈ ಗಿಡದ ಚಿತ್ರ ಪ್ರಕಟವಾಯಿತು. ಇದಕ್ಕೆ ಕೆಲವು ವರ್ಷಗಳ ಹಿಂದೆ ಗಿಡ ಆ ಭೂಮಿಯಲ್ಲಿ ಬೇರುಬಿಟ್ಟಿದ್ದಿರಬೇಕು. 1533ನೆ ಇಸವಿಯವರೆಗೂ ಪೆರು ಆಗಲಿ ಈಕ್ವೆಡರ್ ಆಗಲಿ ಯುರೋಪಿಯನರ ಸ್ವಾಧೀನಕ್ಕೆ ಬಂದಿರಲಿಲ್ಲ. 1519ರಲ್ಲೇ ಮೆಕ್ಸಿಕೊವನ್ನು ಕಾರ್ಟೆಸ್ ಗೆದ್ದಿದ್ದ. ಚರಿತ್ರೆ ಹೀಗಿರುವಲ್ಲಿ ದಕ್ಷಿಣ ಅಮೆರಿಕ ಪ್ರದೇಶದಿಂದ ಟೊಮೇಟೊ ಯುರೋಪಿಗೆ ಸಾಗಿರುವುದಕ್ಕಿಂತಲೂ ಮೆಕ್ಸಿಕೊನಿಂದ ರವಾನೆಯಾದದ್ದಕ್ಕೆ ಹೆಚ್ಚು ಅಸ್ಪದವಿತ್ತು.

ಟೊಮೇಟೊವನ್ನು ಮೊದಮೊದಲು ಕೃಷಿಗೆ ಒಳಪಡಿಸಿದ ಪ್ರದೇಶವೂ ಮೆಕ್ಸಿಕೊನಲ್ಲೇ ಇದ್ದಿರಬೇಕು. ವನ್ಯಜಾತಿಯ ಟೊಮೇಟೊ ಮೆಕ್ಸಿಕೊಗೆ ದಕ್ಷಿಣ ಅಮೆರಿಕದಿಂದ ಹೇಗೆ ಬಂದಿತೆಂಬುದೂ, ಅದು ಮೆಕ್ಸಿಕೊನಲ್ಲಿ ಯಾವ ಸಂದರ್ಭಗಳಿಂದ ಸಾಗುವಳಿಗೆ ಒಳಪಟ್ಟಿತೆಂದೂ ಹೇಳುವುದು ಕಷ್ಟ. ಆದರೆ ಊಹೆಯೊಂದನ್ನು ಮುಂದಿಡಬಹುದು. ಬಹುಶಃ ಚೆರಿ ಟೊಮೇಟೊ ಎಂಬ ವನ್ಯಜಾತಿ ದಕ್ಷಿಣ ಅಮೆರಿಕದಲ್ಲಿ ಬೆಳೆಯುತ್ತಿದ್ದಿತಾದರೂ ಕೃಷಿಗೆ ಒಳಪಟ್ಟಿರಲಿಲ್ಲ. ಈ ಜಾತಿ ಹೇಗೋ ಉತ್ತರ ದಿಕ್ಕಿಗೆ ಹರಡಿ ಮೆಕ್ಸಿಕೊವನ್ನು ಸೇರಿದ್ದಿರಬೇಕು. ಹಕ್ಕಿಗಳು ಹಣ್ಣನ್ನು

ಉಂಡು ಉತ್ತರಾಭಿಮುಖವಾಗಿ ಪ್ರಯಾಣ ಮಾಡುವಾಗ ಹಣ್ಣಿನ ಬೀಜಗಳೂ ಹರಡಿರಬಹುದು; ಮಾನವನ ವಲಸೆಗಳಿಂದಲೂ ಹರಡಿರಬಹುದು ; ಕಳೆಯಾಗಿಯೂ ಹರಡಿರಬಹುದು. ಇದಾದ ಹೊಸತರಲ್ಲೇ ಮೆಕ್ಸಿಕೊನಲ್ಲಿ ಟೊಮೇಟೊ ಕೃಷಿ ಆರಂಭವಾಗಿರಬೇಕು. ಇದರ ಫಲವಾಗಿ ಹಣ್ಣಿನ ಗಾತ್ರ ಹಿರಿಯದಾಯಿತು; ಹುಳಿ ಹೋಗಿ ಮೃದುವಾದ ಸಿಹಿ ದಕ್ಕಿತು. ಒಳಜಾತಿಯ ಆಯ್ಕೆಯ ಫಲವಾಗಿಯೂ ಕೃಷಿ ವಿಧಾನಗಳ ಮೂಲಕವಾಗಿಯೂ ರುಚಿ ವೈವಿಧ್ಯದ ಟೊಮೇಟೊಗಳು ಹುಟ್ಟಿ ಕೊಂಡವು.

ಯುರೋಪಿನಲ್ಲಿ ಸ್ವಾಗತನಯ

ದಕ್ಷಿಣ ಅಮೆರಿಕ ಖಂಡದ ಹೊರಗಡೆ ಮೊಟ್ಟ ಮೊದಲು ಟೊಮೇಟೊ ಬೆಳೆದದ್ದು ಜರ್ಮನಿಯಲ್ಲಿ (1553). ಇದೇ ಸುಮಾರಿಗೆ ಇಟಲಿಯಲ್ಲೂ ಬೇರು ಬಿಟ್ಟಿತ್ತು. 1597ರ ಹೊತ್ತಿಗೆ ಜೆರಾರ್ಡ್ ಎಂಬುವನ ಸಾಹಸದಿಂದ ಇಂಗ್ಲೆಂಡಿನಲ್ಲಿ ಬೆಳೆಯಿತು. ಯುರೋಪು ರಾಷ್ಟ್ರಗಳಲ್ಲೂ ಹೀಗೆ ಬಹುಬೇಗ ಹರಡಿಕೊಂಡಿತು. ಆ ಕಾಲದ ಸ್ಪೆಯ್ನ್ ದೇಶದಲ್ಲಿ ಟೊಮೇಟೊಗೆ ದಾಖಲೆಯಿಲ್ಲದಿರುವುದು ಆಶ್ಚರ್ಯದ ಸಂಗತಿ. ದಕ್ಷಿಣ ಅಮೆರಿಕದಿಂದ ಆಮದಾದ ಗಿಡಗಳಿಗೆಲ್ಲ ಮೊಟ್ಟಮೊದಲನೆ ತೊಟ್ಟಿಲಾಗಿದ್ದ ಈ ದೇಶದಲ್ಲಿ ಟೊಮೇಟೊ ಮಾತ್ರ ಏಕೆ ಬೇರು ಬಿಡಲಿಲ್ಲವೋ?

ಇಟಾಲಿಯನರು ತುರ್ಕಿಯಿಂದ ಟೊಮೇಟೊ ಬೀಜಗಳನ್ನು ಪಡೆದರೆಂದು ಆಂಡರ್‌ಸನ್ ಅಭಿಪ್ರಾಯ. ಇದು ನಿಜವಾದರೆ ತುರ್ಕಿಯವರು ಅದನ್ನು ಎಲ್ಲಿಂದ ಸಂಪಾದಿಸಿಕೊಂಡರು ? ಇಲ್ಲೊಂದು ಅಭಿಪ್ರಾಯ ಭೇದವೂ ಉಂಟು. 1942ರಲ್ಲಿ ವರ್‌ನಾನ್ ಕ್ವಿನ್ ಎಂಬಾಕೆ ಇನ್ನೊಂದು ಊಹೆಯನ್ನು ಮುಂದಿಟ್ಟಳು : ಟೊಮೇಟೊ ವಿನ ಬೆಳೆ ಮೊದಲು ಆರಂಭವಾದದ್ದು ಸ್ಪೆಯ್ನಿನಲ್ಲೇ. ಆದರೆ ಜನದ ಸ್ವಾಗತ ವಿಲ್ಲದ್ದರಿಂದ ಅಲ್ಲಿ ನೆಲೆಯಾಗಲಿಲ್ಲ. ಆ ದೇಶದಲ್ಲಿದ್ದ ಮೂರ್ ಜನಾಂಗದವನೊಬ್ಬ ಬೀಜಗಳನ್ನು ಮೊರಾಕೊಗೆ ಸಾಗಿಸಿಕೊಂಡು ಹೋದ. ಕೆಲವು ಕಾಲದ ಮೇಲೆ ಇಟಲಿಯ ನಾವಿಕನೊಬ್ಬ ಈ ಗಿಡವನ್ನು ಟ್ಯಾಂಗಿಯರ್ ಊರಿನಲ್ಲಿ ಗುರುತಿಸಿ, ಬೀಜ ಗಳನ್ನು ಸಂಗ್ರಹಿಸಿಕೊಂಡು ಸ್ವದೇಶಕ್ಕೆ ಹಿಂತಿರುಗಿದ. ಮೂರ್‌ರ ದೇಶದಿಂದ ಹೀಗೆ ಆಮದಾದ ಹಣ್ಣನ್ನು ಇಟಾಲಿಯನರು ಪೊಮೊ ದೈ ಮೋರಿ (ಮೂರ್‌ರ ಹಣ್ಣು) ಎಂದರು. ಅಲ್ಲಿಂದ ಹಣ್ಣು ಫ್ರಾನ್ಸಿನಲ್ಲಿ ಸಾಗುವಳಿಯಾದಾಗ ಜನ ಮೂರ್ ನುಡಿ ಯನ್ನು ಪೊಮೆದ ಮೋರ್ ಎಂದು ಅಪಭ್ರಂಶ ಮಾಡಿಕೊಂಡರು. ಫ್ರೆಂಚ್ ಭಾಷೆ ಯಲ್ಲಿ ಇದು "ಕಾಮಫಲ" (love apple) ಎಂದು ಅರ್ಥ ಕೊಡುತ್ತದೆ.

17ನೆ ಶತಮಾನದ ಯುರೋಪಿನ ಬರಹಗಳಲ್ಲಿ ಮೇಲೆ ಸೂಚಿಸಿರುವ ಎರಡು ಹೆಸರುಗಳನ್ನೂ ಟೊಮೇಟೊವಿಗೆ ಸಂಬೋಧಿಸಲಾಗಿದೆ. 1666ರಲ್ಲಿ "ಕಾಮ

ಪ್ರಚೋದನೆಯ ಗುಣ ಟೊಮೇಟೊಗೆ ಇರುವುದನ್ನು ಅದರ ಹೆಸರೇ ಸೂಚಿಸುತ್ತದೆ; ಹಣ್ಣಿನ ಬಣ್ಣವೂ ರೂಪವೂ ಅತ್ಯಾಕರ್ಷಕವಾಗಿರುವುದರಿಂದಲೂ ಪೊಮೆ ದ' ಮೋರ್ (ಇಂಗ್ಲಿಷಿನ amorous ಪದದೊಡನೆ ಹೋಲಿಸಿ) ಎಂಬ ಹೆಸರು ಅನ್ವರ್ಥವಾಗಿದೆ" ಎಂದು ಒಬ್ಬಾತ ಬರೆದಿಟ್ಟಿದ್ದಾನೆ. ಒಂದು ಶತಮಾನವಾದಮೇಲೆ ಇನ್ನೊಬ್ಬ ಬರಹಗಾರ "ಟೊಮೇಟೊ ಕಾಮಪ್ರಚೋದನಕಾರಿಯೆಂದು ಜನ ನಂಬಿರುವ ರಾದರೂ, ಅನುಭವದಿಂದ ಈ ಅಭಿಪ್ರಾಯಕ್ಕೆ ಸಮ್ಮತಿ ದೊರೆತಿಲ್ಲ" ಎಂದು ಬರೆದ. ಆದರೂ ಜನ ಈ ಎರಡನೆ ಅಭಿಪ್ರಾಯಕ್ಕೆ ಕಿವಿಗೊಡಲಿಲ್ಲ.

ಹಣ್ಣಿನಲ್ಲಿ ವಿಷವಿದೆ ಎಂಬ ಇನ್ನೊಂದು ಅಪಖ್ಯಾತಿಯಿಂದಲೂ ಅದರ ಆಹಾರ ಯೋಗ್ಯತೆ ಸ್ಥಾಪನೆಗೊಳ್ಳುವುದು ತಡವಾಯಿತು. ಇದಕ್ಕೆ ಆಗಿನ ವೈದ್ಯರೂ ಕಾರಣ ರಾದರು. ಡೊಡೊನಿಯಸ್ ಬರೆದ ವೈದ್ಯಮೂಲಿಕಾ ಗ್ರಂಥದಲ್ಲಿ "ದೇಹಕ್ಕೆ ಪುಷ್ಟಿ ಯನ್ನು ಕೊಡುವುದಿಲ್ಲ, ರುಚಿಯೂ ಇಲ್ಲ" ಎಂದು ಬರೆದಿಟ್ಟ (1586). "ಕಣ್ಣಿ ರೋಗಗಳನ್ನೂ ಕಜ್ಜಿಯನ್ನೂ ವಾಸಿಮಾಡುವ ಗುಣವಿದೆ" ಎಂದೊಂದು ಅನುಬಂಧ ವಾಕ್ಯವನ್ನೂ ಸೇರಿಸಿದ. ಮರು ಶತಮಾನದಲ್ಲೂ ಜನದ ಮನೋಧರ್ಮ ವ್ಯತ್ಯಾಸ ವಾಗಲಿಲ್ಲ. "ವಾಸನೆಯಲ್ಲಾಗಲಿ ಆಹಾರಸತ್ವದಲ್ಲಾಗಲಿ ಟೊಮೇಟೊವಿಗೆ ಯೋಗ್ಯತೆಯಿಲ್ಲದೆ ಹೋದರೂ ಗಿಡದ ಸ್ವರೂಪ ನೋಟಕ್ಕೆ ಚಂದ; ಹಣ್ಣನ್ನು ತಿಂದರೆ ಮಾತ್ರ ವಾಂತಿ ಬರುತ್ತದೆ" ಎಂಬ ಅಭಿಪ್ರಾಯವೇ ಪ್ರಬಲವಾಗಿತ್ತು. "ನೋಟದ ಚಂದ"ಕ್ಕಾಗಿ ಮಾತ್ರ ಖಾಸಗಿ ತೋಟಗಳಲ್ಲಿ ಬೆಳೆಯುತ್ತಿತ್ತು.

ಉತ್ತರ ಅಮೆರಿಕಾದಲ್ಲಿ

ಯೂರೋಪಿನಲ್ಲಿ ಟೊಮೇಟೊ ವಿಷಯದಲ್ಲಿದ್ದ ಅಪನಂಬಿಕೆಗಳೂ ಮೂಢ ನಂಬಿಕೆಗಳೂ ಮಾಯವಾಗಿ ಅದು ಆಹಾರದಲ್ಲಿ ಸೇರುವ ಯೋಗ್ಯತೆ ಪಡೆದುಕೊಳ್ಳು ವುದಕ್ಕೆ 18ನೆ ಶತಮಾನ ಕಾಲಿಡಬೇಕಾಯಿತು. ಕಳೆದೆರಡು ಶತಮಾನಗಳಲ್ಲಿ ಸಂಭವಿಸಿದ್ದ ಕ್ಷಾಮಗಳು ಟೊಮೇಟೊವನ್ನು ಆಹಾರಯೋಗ್ಯವೆಂದು ಸ್ವೀಕಾರ ಮಾಡಿಕೊಳ್ಳು ವುದಕ್ಕೆ ಕಾರಣವಾದವು ಎಂದು ಕೆಲವರ ಅಭಿಪ್ರಾಯ. 17ನೆ ಶತಮಾನದಲ್ಲಿ ಇಂಗ್ಲಿಷರು ಗಂಟು ಮೂಟೆ ಸಮೇತ ಅಮೆರಿಕಾಗೆ ಹೋಗಿ ನೆಲಸಿದರಷ್ಟೆ. ಈ "ಮೇ ಫ್ಲವರ್" ಪಿತೃಗಳ ಹಿಂದೆಯೇ ಟೊಮೇಟೊವೂ ವಲಸೆ ಹೋಯಿತು. ಎಂದರೆ, ದಕ್ಷಿಣ ಅಮೆರಿಕದಿಂದ ಯೂರೋಪಿಗೆ ಹೋದ ಟೊಮೇಟೊ ಅಲ್ಲಿಂದ ಉತ್ತರ ಅಮೆರಿಕಾಗೆ ಒಂದು ವಿಧದಲ್ಲಿ ವಾಪಸಾಯಿತು. 18ನೆ ಶತಮಾನದಲ್ಲಿ ಥಾಮಸ್ ಜೆಫರ್‌ಸನ್ ವರ್ಜಿನಿಯದಲ್ಲಿ ಟೊಮೇಟೊವನ್ನು ಕೃಷಿ ಮಾಡಿದ್ದಕ್ಕೂ, ನ್ಯೂ ಆರ್ಲಿಯನ್ಸ್‌ನಲ್ಲಿ ಟೊಮೇಟೊ "ಕೆಚಪ್" ತಯಾರಾಗುತ್ತಿದ್ದುದಕ್ಕೂ ದಾಖಲೆಗಳಿವೆ. 19ನೆ ಶತ ಮಾನದ ಆರಂಭಕಾಲದಲ್ಲಿ ಕೂಡ ಹಣ್ಣನ್ನು ನೇರವಾಗಿ ತಿನ್ನುವ ಬಳಕೆ ಅಮೆರಿಕ

ವಲ್ಲೂ ರೂಢಿಗೊಳ್ಳಲಿಲ್ಲ. ಜಾನ್‌ಸನ್ ಎಂಬುವನು “ಕಾಮಫಲ”ವನ್ನು ತಿಂದು ಸಾಧಾರಣನಾಗಿಯೇ ಇದ್ದುದನ್ನು ಕಂಡು ಜನ ಆಶ್ಚರ್ಯಪಟ್ಟರು. ತಾವೂ ತಿನ್ನಲು ಮುಂದೆ ಬಂದರು. 1900ರಲ್ಲಿ ಕೂಡ ಟೊಮೇಟೊ ವಿಷರಹಿತವಾದದ್ದೆಂದೂ, ಕಾಮೋದ್ದೀಪನ ಶಕ್ತಿಬಾಹಿರವೆಂದೂ ಪ್ರಚಾರ ನಡೆಯುತ್ತಲೇ ಇತ್ತು. ನೀಗ್ರೊ ಶಿಕ್ಷಣ ತಜ್ಞನಾದ ಕಾರ್‌ವರ್ ಎಂಬಾತ ಟೊಮೇಟೊ ಪ್ರಚಾರವನ್ನೂ ಕೈಗೊಂಡ. ಸಭೆಗಳನ್ನು ಕೂಡಿಸಿ “ನೋಡಿ, ನಾನೇ ತಿನ್ನುತ್ತೇನೆ” ಎಂದು ಸಭಿಕರಲ್ಲಿ ನಂಬಿಕೆ ಮೂಡಿಸುವುದಕ್ಕಾಗಿ ಒಂದೆರಡು ಹಣ್ಣುಗಳನ್ನು ತಿಂದು ತೋರಿಸುತ್ತಿದ್ದ!

ಇವತ್ತಿನ ಉತ್ತರ ಅಮೆರಿಕದಲ್ಲಿ ಟೊಮೇಟೊ ಒಂದಲ್ಲ ಒಂದು ಬಗೆಯಲ್ಲಿ ದೈನಂದಿನ ಆಹಾರದೊಂದಿಗೆ ಸೇರಿಕೊಂಡು ಬಿಟ್ಟಿದೆ,— ಬ್ರೇಕ್‌ಫಾಸ್ಟಿಗೆ ಹಣ್ಣಿನ ರಸ, ಕಟ್‌ಲೆಟ್ಟಿಗೆ “ಕೆಚಪ್”, ಊಟದೊಂದಿಗೆ ಟೊಮೇಟೊ ಸೂಪ್, ಇಲ್ಲವೆ ಹಣ್ಣಿನ ಹೋಳುಗಳು. ಟೊಮೇಟೊ ಗಿಡವನ್ನು ಮಗು ಕೂಡ ಗುರುತು ಹಿಡಿಯು ವಂಥ ನೆಲೆ ಏರ್ಪಟ್ಟಿದೆ. ಮನೆ ತೋಟಗಳಲ್ಲಿ ಬೆಳೆಸುತ್ತಾರೆ, ನೆಲದ ಅನುಕೂಲ ವಿಲ್ಲದವರು ಕರಂಡಕಗಳಲ್ಲಿ ಬೆಳೆಸುತ್ತಾರೆ. ಸ್ವಾಭಾವಿಕ ವಾತಾವರಣದಲ್ಲಿ ಸಾಗುವಳಿ ಮಾಡುತ್ತಾರೆ. ಚಳಿಗಾಲಕ್ಕಾಗಿಯೇ ಸೃಜವಾದ ಕಾವುಮನೆಗಳಲ್ಲಿ ಆರೈಕೆ ಮಾಡು ತ್ತಾರೆ. ವರ್ಷ ಪೂರ, ದಿನತಪ್ಪದೆ, ಟೊಮೇಟೊ ಮಾರುಕಟ್ಟೆಯಲ್ಲಿರುತ್ತದೆ.

ಭಾರತದಲ್ಲಿ ನಾಮಕರಣ

ಟೊಮೇಟೊ ಭಾರತೀಯರ ಕೈಯಲ್ಲಿ ಬೆಳೆಗೆ ಒಗ್ಗಿ ಬಳಕೆಗೆ ಬಂದು ನೂರು ವರ್ಷ ಕೂಡ ಆಗಿಲ್ಲವಾದರೂ ಎರಡು ದಾರಿಗಳ ಮೂಲಕ ಹೆಸರು ಪಡೆದಿದೆ. ಮೊದಲನೆಯದು ಅಪಭ್ರಂಶದಾರಿ: ಮೂಲ ಟೊಮೇಟೊ ರೂಪವನ್ನೇ ಉಳಿಸಿ ಕೊಳ್ಳುವ ಪ್ರಯತ್ನ (ಕನ್ನಡ) ಅಥವಾ ಅದರ ರೂಪಾಂತರಗಳು,— ತಿಮೋತಿ. ತಮಾಟೆ, ಟಮಾತಿ (ಹಿಂದಿ, ಬಂಗಾಳಿ), ತಮಾಟೆ, ಟಮಾಟೆ, ಟಮಾತೆ (ಮರಾಠಿ ಗುಜರಾತಿ), ತಮಾಟೆ (ಮಲೆಯಾಳ), ತಮಾಟೀ (ಸಿಂಹಳ). ಎರಡನೆಯದು ನಮಗೆ ಪರಿಚಿತವಾಗಿರುವ ವಸ್ತುವಿನೊಡನೆ ಹೋಲಿಸಿ ಅನುಗುಣವಾದ ಪೂರ್ವ ಪ್ರತ್ಯಯವನ್ನು ಹೊಂದಿಸುವ ದಾರಿ: ಚಪ್ಪರ-ಬದನೆ (ಕನ್ನಡ), ಗುರ್-ಬೇಗನ್ (ಹಿಂದಿ, ಬಂಗಾಳಿ), ಬಿಲಾತಿ (ವಿಲಾಯತಿ) ಬೇಗನ್ (ಅಸ್ಸಾಮಿ, ಪಂಜಾಬಿ, ಪುಷ್ತು), ವಾಲ್-ವಾಂಗೀ, ವೇಲ್-ವಾಂಗೀ (ಮರಾಠಿ, ಗುಜರಾತಿ).

ತಮಿಳಿನಲ್ಲಿ ಮಾತ್ರ ತಕ್ಕಾಳಿ, ಶೀಮೆತಕ್ಕಾಳಿ, ಎರುಮೈತಕ್ಕಾಳಿ ಎಂಬ ಪದ ಗಳು ಬಳಕೆಗೆ ಬಂದಿವೆ. ತೆಲುಗು ಸೀಮೆಯ ಕೆಲವೆಡೆಗಳಲ್ಲೂ ಟಕ್ಕಲಿ ಪಂಡು ಎನ್ನು ತ್ತಾರೆ; ಮಲೆಯಾಳದಲ್ಲಿ ತಕ್ಕಾಳಿ, ಪೇತಕ್ಕಾಳಿ ಎನ್ನುತ್ತಾರೆ. ಈ ಪದಗಳಿಗೆ

'ತಕ್ಕಾಳಿ'ಯೇ ಮಾತೃಕೆಯಾಗಿದ್ದ ಪಕ್ಷದಲ್ಲಿ ಶೀಮೆ, ಎರುಮೈ, ಪೇ ಎಂಬ ಪೂರ್ವ ಪ್ರತ್ಯಯುಗಳು ಸೇರಿವೆಯೆಂದು ಭಾಸವಾಗುತ್ತದೆ. ಆದರೆ 'ತಕ್ಕಾಳಿ' ಪದಕ್ಕೆ ಬೇರೆ ಮೂಲವೊಂದಿರಬೇಕೆಂದೂ ತೋರುತ್ತದೆ. ತಮಿಳಿನಲ್ಲಿ ಬದನೆ ಗಿಡ ವಟುದಲೈ, ಕತ್ತರಿ ಎಂಬ ಪದಗಳಿಂದ ಪರಿಚಿತವಾಗಿದೆಯೇ ಹೊರತು ಕಾಳಿ ಎಂಬ ಅಂತ್ಯ ಪ್ರತ್ಯಯದಿಂದ ಉಂಟಾದ ಪದವೊಂದೂ ಅದನ್ನು ಸೂಚಿಸುವುದಿಲ್ಲ. ಆದರೆ ಬದನೆ ಜಾತಿಯ ಇತರ ಗಿಡಗಳಿಗೆ ಮಂತಕಾಳಿ, ಪಶುಂಕಾಳಿ, ಶಿರುಂಕಾಳಿ ಎಂಬ ನಾಡು ನುಡಿಯ ಪ್ರಯೋಗಗಳಿವೆ. ಈ ಜಾತಿಗಳ ಸಾದೃಶ್ಯದಿಂದ ತಕ್ಕಾಳಿ ಪದ ಬಳಕೆಗೆ ಬಂದಿರಬಹುದಾದರೂ ಪೂರ್ವ ಪ್ರತ್ಯಯದ ಹುಟ್ಟನ್ನಾಗಲೀ ಅರ್ಥವನ್ನಾಗಲೀ ನಿರ್ಣಯಿಸಲಾಗಿಲ್ಲ. ಬಹುಶಃ ಟೊಮೇಟೊ + ಕಾಳಿ = ಟಕ್ಕಾಳಿಯಾಗಿ ತಕ್ಕಾಳಿ ರೂಪವನ್ನು ಪಡೆದಿರಬಹುದು.

ಉಪರಾಷ್ಟ್ರೀಯತೆ ಮತ್ತು ಕನ್ನಡ ಸಾಹಿತ್ಯ*

ಜಿ. ಎಸ್. ಶಿವರುದ್ರಪ್ಪ

'ರಾಷ್ಟ್ರ' ಎಂಬ ಪದ ಅತ್ಯಂತ ಪ್ರಾಚೀನವಾದುದಾದರೂ, 'ರಾಷ್ಟ್ರೀಯತೆ'ಯ ಕಲ್ಪನೆ ಮಾತ್ರ ಆಧುನಿಕವಾದುದು. 'ರಾಷ್ಟ್ರೀಯತೆ' ಎಂಬ ಪದಕ್ಕೆ ಈ ದಿನ ನಾವು ಯಾವ ಅರ್ಥವನ್ನು ಹಚ್ಚಿ ಮಾತನಾಡುತ್ತೇವೆಯೋ, ಆ ಅರ್ಥ ಆ ಪದಕ್ಕೆ ಬಹುಶಃ ಹಿಂದೆ ಇದ್ದಿರಲಿಲ್ಲವೆಂದೇ ತೋರುತ್ತದೆ. ಯಾಕೆಂದರೆ 'ರಾಷ್ಟ್ರೀಯತೆ' ಎಂಬ ಮಾತಿಗೆ, ರಾಜಕೀಯವಾಗಿ ಇಂದು ಎಂದಿಲ್ಲದ ಮಹತ್ವ ಬಂದಿದೆ. ರಾಜಕೀಯವಾಗಿ ನೋಡುವುದಾದರೆ, ಸ್ವಾತಂತ್ರ್ಯಪೂರ್ವ ಭಾರತದ ಇತಿಹಾಸದಲ್ಲಿ ಈ ದೇಶದ ಜನಕ್ಕೆ ಪರಿಚಿತವಾದದ್ದು 'ರಾಜಭಕ್ತಿ'ಯೇ ಹೊರತು 'ರಾಷ್ಟ್ರೀಯತೆ' ಅಲ್ಲ. ಅನೇಕ ರಾಜ-ಮಹಾರಾಜರುಗಳಿಂದ ಆಳಲ್ಪಡುತ್ತಿದ್ದ ಈ ದೇಶದ ಅನೇಕ ರಾಜ್ಯಗಳ ಜನ, ಅಲ್ಲಲ್ಲಿನ ಪ್ರಭುಗಳ ಬಗ್ಗೆ ಇಟ್ಟುಕೊಂಡಿದ್ದ ನಿಷ್ಠೆ, ತೋರುತ್ತಿದ್ದ ಗೌರವ 'ರಾಜಭಕ್ತಿ' ಎಂದು ಅನ್ನಿಸಿಕೊಂಡಿತ್ತೇ ಹೊರತು, 'ರಾಷ್ಟ್ರೀಯತೆ' ಎಂದು ಅನ್ನಿಸಿಕೊಳ್ಳಲು ಸಾಧ್ಯವಿರಲಿಲ್ಲ. ಹೀಗಾಗಿ ರಾಜಭಕ್ತಿ ಆಯಾ ರಾಜ್ಯದ ಜನಮನವನ್ನು ನಿಯಂತ್ರಿಸುವ ಶಕ್ತಿಯಾಗಿತ್ತು. ಯಾವಾಗ ಈ ರಾಜರುಗಳ ಮೂಲಕ ತಮ್ಮನ್ನಾಳುತ್ತಿದ್ದ ಪರಕೀಯ ಪ್ರಭುತ್ವವನ್ನು ಕಿತ್ತೊಗೆಯುವ, ಸ್ವಾತಂತ್ರ್ಯ ಸಂಪಾದನೆಯ ಹೋರಾಟ ಮೊದಲಾಯಿತೋ, ಅದು ರಾಷ್ಟ್ರೀಯ ಚಳುವಳಿ ಎಂದು ಕರೆಯಿಸಿಕೊಂಡಿತು. ಈ ಚಳುವಳಿಯ ಪರಿಣಾಮವಾಗಿ ಜನರಲ್ಲಿ ತಾವು ಒಂದು ಸಮಗ್ರ ರಾಷ್ಟ್ರದವರು, ಈ ರಾಷ್ಟ್ರಕ್ಕಾಗಿ ಹೋರಾಡುವುದು ತಮ್ಮ ಕರ್ತವ್ಯ, ಎಂಬ ಭಾವನೆಗಳು ಜಾಗ್ರತವಾಗಿ, ಸ್ವಾತಂತ್ರ್ಯ ಸಂಪಾದನೆಯೊಂದಿಗೆ, ಅದುವರೆಗೂ ಪರಿಚಿತವಾದ 'ರಾಜಭಕ್ತಿ', 'ರಾಷ್ಟ್ರೀಯತೆ' ಯಾಗಿ ರೂಪಾಂತರ ಹೊಂದಿತು. ಇಷ್ಟರ ಮಟ್ಟಿಗೆ ರಾಜಕೀಯವಾಗಿ ಭಾರತವು ಹಿಂದೆಂದೂ ಏಕರಾಷ್ಟ್ರವಾಗಿರಲಿಲ್ಲವಾದ ಕಾರಣ, ಈ ದೇಶದ ಜನ, ತಾವು ಸಮಗ್ರ ಭಾರತದವರು ಎಂಬ 'ರಾಷ್ಟ್ರೀಯತೆ'ಯ ಭಾವನೆಯನ್ನು, ರಾಜಕೀಯವಾಗಿ ಅನುಭವಿಸಿದ್ದು ಇದೇ ಮೊದಲು.

---

* ತಾ॥ 23-12-73 ರಂದು 'ಕರ್ಮವೀರ ಸುವರ್ಣ ಮಹೋತ್ಸವ'ದ ಅಂಗವಾಗಿ ಹುಬ್ಬಳ್ಳಿಯಲ್ಲಿ ಏರ್ಪಟ್ಟ 'ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯ' ಎಂಬ ವಿಚಾರವನ್ನು ಕುರಿತ ವಿಚಾರ ಸಂಕಿರಣದಲ್ಲಿ ಓದಿದ ಲೇಖನ

ಹೀಗೆಂದ ಮಾತ್ರಕ್ಕೆ ಈ ದೇಶದ ಜನ ತಾವು ಸಮಗ್ರ ಭರತಖಂಡದವರು ಎಂಬ ಭಾವನೆಯಲ್ಲಿ ಬದುಕಿದ್ದೇ ಇಲ್ಲವೆಂದು ಅರ್ಥವಲ್ಲ. ಹಿಂದೆ ಈ ದೇಶದ ರಾಜಕೀಯ ಜೀವನ 'ಛಪ್ಪನ್ನ' ಮುಖವಾಗಿದ್ದರೂ, ಸಾಂಸ್ಕೃತಿಕವಾಗಿ ಈ ದೇಶ ಅಖಂಡವಾಗಿ ಇತ್ತು ಎಂಬುದನ್ನು ಮರೆಯುವಂತಿಲ್ಲ. 'ಆಸೇತು ಹಿಮಾಚಲ' ಎಂಬ ಮಾತು, "ಗಂಗೇಚ ಯಮುನೇಚ ಗೋದಾವರೀಚ" ಎಂಬ ಪಠನ, ತೀರ್ಥಯಾತ್ರೆಯ ಕಲ್ಪನೆ ಇತ್ಯಾದಿಗಳು, ಈ ದೇಶದ ಜನ ತಮ್ಮದೇ ಆದ ಪ್ರಾಂತೀಯ, ಮತೀಯ, ಮತ್ತು ವಿವಿಧ ಭಾಷೆಗಳಿಗೆ ಸಂಬಂಧಿಸಿದ ಪ್ರತ್ಯೇಕತೆಗಳನ್ನು ಹೊಂದಿದ್ದರೂ, ತಾವು ಮೂಲತಹ ಭಾರತೀಯರು ಎಂಬ ಭಾವನೆಯಲ್ಲಿ ಬದುಕುತ್ತಿದ್ದರೆಂಬುದಕ್ಕೆ ದಾಖಲೆಗಳಾಗಿವೆ. ಆದ್ದರಿಂದ ಈಗ ನಾವು ಯಾವುದನ್ನು ರಾಜಕೀಯವಾಗಿ "ರಾಷ್ಟ್ರೀಯತೆ'' ಎಂದು ಕರೆಯುತ್ತಿದ್ದೇವೆಯೋ, ಅದು ಸಾಂಸ್ಕೃತಿಕವಾಗಿ "ಭಾರತೀಯತೆ"ಯೇ ಆಗಿತ್ತು ಎಂದು ಭಾವಿಸಬಹುದು. ಯಾಕೆಂದರೆ "ರಾಷ್ಟ್ರೀಯತೆ" ಎಂಬುದು "ರಾಷ್ಟ್ರಕ್ಕೆ ಸಂಬಂಧಿಸಿರುವಿಕೆ" ಎಂಬ ಅರ್ಥವನ್ನು ಕೊಡುವಂತೆ, "ಭಾರತೀಯತೆ" ಎಂಬುದು "ಭಾರತದೇಶಕ್ಕೆ ಸಂಬಂಧಿಸಿರುವಿಕೆ" ಎಂಬ ಅರ್ಥವನ್ನು ಕೊಡುತ್ತದೆ. ಅಲ್ಲದೆ ಸಾಂಸ್ಕೃತಿಕವಾಗಿ ಎಂದಿನಿಂದಲೋ 'ಏಕ' ವಾಗಿದ್ದ ಭಾರತ' ರಾಜಕೀಯವಾಗಿಯೂ ಇಂದು 'ಏಕ' ವಾಗಿರುವ ಕಾರಣ "ಭಾರತೀಯತೆ" ಎಂಬ ಕಲ್ಪನೆ, ಸಹಜವಾಗಿಯೇ "ರಾಷ್ಟ್ರೀಯತೆ" ಯಲ್ಲಿ ಅಂತರ್ಗತವಾಗುತ್ತದೆ.

ಆದರೆ ಸಾಹಿತ್ಯಕ್ಕೆ ಸಂಬಂಧಪಟ್ಟ ನೆಲೆಯಲ್ಲಿ ಮಾತನಾಡುವಾಗ, "ರಾಷ್ಟ್ರೀಯತೆ" ಮತ್ತು "ಭಾರತೀಯತೆ" ಈ ಎರಡೂ ಸಮಾನಾರ್ಥಕಗಳಲ್ಲವೇನೋ ಎಂಬ ಸಂದೇಹ ಬರುವ ಸಂದರ್ಭಗಳು ಪ್ರಾಪ್ತವಾಗಿವೆ. ಯಾಕೆಂದರೆ ''ಸಾಹಿತ್ಯದಲ್ಲಿ ರಾಷ್ಟ್ರೀಯತೆ" ಅಥವಾ ''ರಾಷ್ಟ್ರೀಯ ಸಾಹಿತ್ಯ" ಎಂದ ಕೂಡಲೆ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ದೇಶಭಕ್ತಿಯಿಂದ ಸ್ಫೂರ್ತಿಗೊಂಡ ರಚನೆಗಳನ್ನು ಬೆರಳಿಟ್ಟು ತೋರುವುದು ಅಭ್ಯಾಸವಾಗಿಬಿಟ್ಟಿದೆ. ಹೋರಾಟಕ್ಕೆ ಕರೆ ನೀಡುವ, ದೇಶಕ್ಕಾಗಿ ಬಲಿದಾನ ಮಾಡುವ, ದೇಶದ ಪರಂಪರೆಯ ಬಗ್ಗೆ, ಸಂಸ್ಕೃತಿಯ ಬಗ್ಗೆ ಉಜ್ವಲವಾಗಿ ಉಪನ್ಯಾಸಿಸುವ, ನಾಡುನುಡಿಗಳ ಪ್ರೇಮವನ್ನು ವೈಭವಿಸುವ, ರಾಷ್ಟ್ರಕ್ಕಾಗಿ ಹೋರಾಡಿ ಮಡಿದ ವೀರರನ್ನು ಕೊಂಡಾಡುವ, ಭಾವೈಕ್ಯತೆಯನ್ನು ಘೋಷಿಸುವ, ರಾಷ್ಟ್ರದ ಗಂಡಾಂತರ ಸಮಯಗಳಲ್ಲಿ ರಣೋತ್ಸಾಹಗಳನ್ನು ಪ್ರಚೋದಿಸುವ ಬರವಣಿಗೆಗಳನ್ನು "ರಾಷ್ಟ್ರೀಯ ಸಾಹಿತ್ಯ"ವೆಂದು ಎಲ್ಲರೂ ಸಾಮಾನ್ಯವಾಗಿ ಗುರುತಿಸುತ್ತಾ ಬಂದಿದ್ದಾರೆ.* ಆದರೆ ಸಾಹಿತ್ಯದಲ್ಲಿ ''ಭಾರತೀಯತೆ" ಎಂಬ

---

* ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆಯೆ
ಜಗ್ಗದೆಯೆ ಕುಗ್ಗದೆಯೆ ನುಗ್ಗಿ ನಡೆ ಮುಂದೆ - ಕುವೆಂಪು

ಮಾತಿನ ಅರ್ಥವೇ ಬೇರೆಯಾಗುವ ಕಾರಣ, ಸಾಹಿತ್ಯದಲ್ಲಿ "ರಾಷ್ಟ್ರೀಯತೆ" ಎಂಬ ಮಾತಿಗೆ ಬಂದಿರುವ ಅರ್ಥದೊಂದಿಗೆ ಹೊಂದಿಕೊಳ್ಳಲಾರದೆ ಅದು ಬೇರೆಯೇ ನಿಲ್ಲುವ ಸಂದರ್ಭ ಇದು.

ಸರಿಯಾಗಿ ವಿಚಾರ ಮಾಡಿದರೆ, "ಭಾರತೀಯತೆ" ಮತ್ತು "ರಾಷ್ಟ್ರೀಯತೆ" ಎಂಬ ಈ ಎರಡು ಪದಗಳಿಗೂ ಮೂಲತಹ ಅಂತಹ ವ್ಯತ್ಯಾಸವೇನೂ ಇಲ್ಲ ಎಂಬುದು ತಿಳಿಯುತ್ತದೆ. ಸಾಹಿತ್ತಿಕ ನೆಲೆಯಲ್ಲಿ "ರಾಷ್ಟ್ರೀಯತೆ" ಎಂದ ಕೂಡಲೆ, ದೇಶಭಕ್ತಿ ಮೂಲವಾದ, ಆದರ್ಶ–ಆವೇಶಗಳನ್ನು ಗುರುತಿಸುವ ಅಭ್ಯಾಸಕ್ಕೆ ಮುಖ್ಯ ಕಾರಣ, "ರಾಷ್ಟ್ರೀಯ" "ರಾಷ್ಟ್ರೀಯತೆ" ಎಂಬ ಮಾತುಗಳಿಗೆ ವಿಶಿಷ್ಟವಾದ ಅರ್ಥ ಹುಟ್ಟಿಕೊಂಡದ್ದು, ರಾಷ್ಟ್ರೀಯ ಚಳುವಳಿ ಎಂದು ಕರೆಯಿಸಿಕೊಂಡ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿಯೆ ಎಂಬುದನ್ನು ಮರೆಯಬಾರದು. ವಾಸ್ತವವಾಗಿ "ರಾಷ್ಟ್ರೀಯತೆ" ಎಂದಾಗ, ಅದು ಸಂದರ್ಭದ ಮಹಿಮೆಯಿಂದ, ದೇಶಭಕ್ತಿ ಮೂಲವಾದ ಆವೇಶ ಆದರ್ಶಗಳನ್ನು ಕುರಿತದ್ದೆಂದು ಭಾವಿತವಾದರೂ, ಅದು ಅಷ್ಟೇ ಅಲ್ಲ ಎಂಬುದನ್ನೂ ನಾವು ತಿಳಿಯಬೇಕು. "ರಾಷ್ಟ್ರೀಯತೆ" ಎಂದರೆ "ರಾಷ್ಟ್ರಕ್ಕೆ ಸಂಬಂಧಿಸಿರುವಿಕೆ" ಎಂಬ ವಿಶಾಲಾರ್ಥವನ್ನು ನಾವು ಗ್ರಹಿಸಬೇಕು. ನಮಗೆ ತಿಳಿದಂತೆ "ರಾಷ್ಟ್ರೀಯತೆ" ಎಂಬ ಮಾತು ಎರಡು ಅರ್ಥಗಳಲ್ಲಿ ಬಳಕೆಯಾಗ ತೊಡಗಿದೆ. ಒಂದು, ಸಂಕುಚಿತವಾದ ಅರ್ಥದಲ್ಲಿ, ರಾಷ್ಟ್ರವನ್ನು ಕುರಿತ ದೇಶಪ್ರೇಮ ಮೂಲವಾದ ಆರಾಧನೆಯ, ಆವೇಶದ, ಭಾವೈಕ್ಯತೆ ಇತ್ಯಾದಿ ಭಾವನೆಗಳ ಅಭಿವ್ಯಕ್ತಿಯನ್ನು ಕುರಿತದ್ದು. ಇನ್ನೊಂದು, ವಿಶಾಲಾರ್ಥದಲ್ಲಿ, ಸಮಗ್ರ ರಾಷ್ಟ್ರದ ಆಶೋತ್ತರಗಳು, ಸಾಂಸ್ಕೃತಿಕ ಮೌಲ್ಯಗಳು, ಇತ್ಯಾದಿಗಳನ್ನು ಕುರಿತದ್ದು. ರಾಮಾಯಣ, ಮಹಾಭಾರತಗಳನ್ನು ರಾಷ್ಟ್ರೀಯ ಮಹಾಕಾವ್ಯಗಳೆಂದು ಕರೆಯುವಲ್ಲಿ, ನಿಜವಾದ ಮಹಾಕಾವ್ಯ ರಾಷ್ಟ್ರೀಯ ಮಹತ್ವವನ್ನು ಒಳಗೊಳ್ಳುತ್ತದೆ ಎಂದು ಹೇಳುವಲ್ಲಿ, ಈ ಎರಡನೆಯ ವಿಶಾಲಾರ್ಥವೇ ಸೂಚಿತವಾಗಿದೆ.

ಸಾಹಿತ್ಯದಲ್ಲಿ "ರಾಷ್ಟ್ರೀಯತೆ" ಎಂಬ ಮಾತಿಗೆ ಕೇವಲ ದೇಶಾಭಿಮಾನ, ದೇಶಭಕ್ತಿಗಳನ್ನು ಕುರಿತ ಅಭಿವ್ಯಕ್ತಿ ಎಂಬ ಪರಿಮಿತಾರ್ಥ ಬಂದ ಕಾರಣದಿಂದ,

---

'ಚಂಡಿ ಚಾಮುಂಡಿ ಪೇಳ್ ಬೇಕಾದುದೇನು ?
ಗಂಡುಸಾದರೆ ನಿನ್ನ ಬಲಿಗೊಡುವೆಯೇನು? - ಬೇಂದ್ರೆ

'ನೆನೆನೆನೆ ಆ ದಿನವ, ಓ ಭಾರತಬಾಂಧವ
ನೆನೆನೆನೆ ಆ ದಿನವ' - ಅಡಿಗ

ಕಟ್ಟಿಮನಿಯವರ 'ಸ್ವಾತಂತ್ರ್ಯದೆಡೆಗೆ'; ಅ.ನ.ಕೃ. ಅವರ 'ಅಮರ ಆಗಸ್ಟ್'
ಮಿರ್ಜಿಯವರ 'ರಾಷ್ಟ್ರ ಪುರುಷ'—ಇಂಥ ಕಾದಂಬರಿಗಳು

ಅದು ಹೇಗೋ ಸಾಹಿತ್ಯದಲ್ಲಿ "ಭಾರತೀಯತೆ" ಎಂಬುದರೊಂದಿಗೆ ಹೊಂದಿಸಲಾಗದ ಅರ್ಥವನ್ನು ಕೊಡುವ ಪದವೆಂಬಂತೆ ಬಳಕೆಗೆ ಬಂದುಬಿಟ್ಟಿದೆ. ಆದರೆ "ರಾಷ್ಟ್ರೀಯತೆ" ಎಂಬ ಪದಕ್ಕಿರುವ ವಿಶಾಲಾರ್ಥವನ್ನು ಪ್ರಧಾನವಾಗಿರಿಸಿಕೊಂಡರೆ ಅಲ್ಲಿ ಅದು "ಭಾರತೀಯತೆ" ಎಂಬುದರೊಂದಿಗೆ ಮುಖ ತಿರುಗಿಸಿಕೊಂಡು ನಿಲ್ಲುವ ಸಂದರ್ಭವೇ ಬರುವುದಿಲ್ಲ. ಭಾರತದ ವಿವಿಧ ಭಾಷೆಗಳಲ್ಲಿನ ಸಾಹಿತ್ಯಾಭಿವ್ಯಕ್ತಿಗಳು, ತಮ್ಮ ತಮ್ಮ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ವೈಲಕ್ಷಣ್ಯಗಳನ್ನುಳಿಸಿಕೊಂಡೂ "ಭಾರತೀಯ ಸಾಹಿತ್ಯ"ವಾಗಿರುವುದರ ಜತೆಗೆ, ವಿಶಾಲವಾದ ಅರ್ಥದಲ್ಲಿ "ರಾಷ್ಟ್ರೀಯ ಸಾಹಿತ್ಯ"ವೂ ಆಗಿವೆ. ಈ ಅರ್ಥದಲ್ಲಿ "ರಾಷ್ಟ್ರೀಯತೆ" ಹಾಗೂ "ಭಾರತೀಯತೆ"ಗಳನ್ನು ಸಮಾನಾರ್ಥಕಗಳೆಂದು ಭಾವಿಸುವುದು ಒಳ್ಳೆಯದು.

ವಿಶಾಲವಾದ ಅರ್ಥದಲ್ಲಿ ನೋಡುವುದಾದರೆ ನಮ್ಮ ರಾಷ್ಟ್ರದ ಸಾಹಿತ್ಯವೆಲ್ಲವೂ "ರಾಷ್ಟ್ರೀಯ ಸಾಹಿತ್ಯ"ವೇ. ಭಾರತವೆಂಬ ಈ ರಾಷ್ಟ್ರ ಕಾಲದಿಂದ ಕಾಲಕ್ಕೆ ಅನೇಕ ಕವಿಗಳ ಮೂಲಕ ತನ್ನ ಅಭಿವ್ಯಕ್ತಿಯನ್ನು ರೂಪಿಸಿಕೊಂಡಿದೆ. ಆದರೆ ಈ ರಾಷ್ಟ್ರದ ಯಾವ ಒಂದು ಪ್ರಾದೇಶಿಕ ಸಾಹಿತ್ಯ, ಸತ್ವದಲ್ಲಿ ರಾಷ್ಟ್ರೀಯವಾಗಿದ್ದೂ, ತನ್ನದೇ ಆದ ಪ್ರತ್ಯೇಕ ದೃಷ್ಟಿ-ಧ್ಯೇಯ-ಧೋರಣೆಗಳನ್ನು ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಪಡಿಸಿಕೊಂಡಿದೆಯೋ ಅಂಥ ಸಾಹಿತ್ಯಾಭಿವ್ಯಕ್ತಿಯನ್ನು "ಉಪರಾಷ್ಟ್ರೀಯ ಸಾಹಿತ್ಯ"ವೆಂದೂ, ಅದರಲ್ಲಿ ಮೈದೋರಿರುವುದು "ಉಪರಾಷ್ಟ್ರೀಯತೆ" ಎಂದು ಕರೆಯಬಹುದು.[1]

"ಉಪರಾಷ್ಟ್ರೀಯತೆ" ಎಂಬ ಮಾತಿನ ಬಗ್ಗೆ ಇನ್ನಷ್ಟು ವಿವರಣೆ ಅಗತ್ಯವೆಂದು ಕಾಣುತ್ತದೆ. ಭಾರತವನ್ನು ಒಂದು ರಾಷ್ಟ್ರ ಎಂದು ಕರೆಯುತ್ತೇವೆ. ಆದರೆ ಇದರೊಳಗಿನ ಒಂದೊಂದು ರಾಜ್ಯವನ್ನೂ ರಾಷ್ಟ್ರ ಎಂದು ಕರೆಯುವುದಿಲ್ಲ. ಹಾಗೆ ನೋಡಿದರೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರ ಪ್ರದೇಶ, ಕರ್ನಾಟಕ, ಉತ್ತರ ಪ್ರದೇಶ ಇಂಥ ರಾಜ್ಯಗಳು ಇಂಗ್ಲೆಂಡ್, ಫ್ರಾನ್ಸ್, ಜಪಾನ್ ಮತ್ತಿತರ ದೇಶಗಳಷ್ಟೇ ದೊಡ್ಡವಾಗಿವೆ. ಆದರೆ ಇಂಗ್ಲೆಂಡ್, ಫ್ರಾನ್ಸ್, ಜಪಾನ್ ಇತ್ಯಾದಿಗಳನ್ನು ರಾಷ್ಟ್ರಗಳೆಂದು ಕರೆಯುತ್ತಾರೆ. ಯಾಕೆಂದರೆ ಅವುಗಳಿಗೆ ಪ್ರತ್ಯೇಕವಾದ ಒಂದು ಅಸ್ತಿತ್ವವಿದೆ. ಆದರೆ ಭರತಖಂಡದೊಳಗಿರುವ, ಅದೇ ಪ್ರಮಾಣದ ವಿವಿಧ ರಾಜ್ಯಗಳನ್ನು ನಾವು ಪ್ರತ್ಯೇಕ ರಾಷ್ಟ್ರಗಳೆಂದು ಕರೆಯುವುದಿಲ್ಲ. ಯಾಕೆಂದರೆ ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಅವು ಒಂದು ವ್ಯವಸ್ಥೆಯಲ್ಲಿ ಬದ್ಧವಾಗಿವೆ. ಆದರೆ

---

[1] ಈ ಬಗೆಯ 'ಉಪರಾಷ್ಟ್ರೀಯತೆ'ಯನ್ನು, ಭಾರತ ಹಾಗೂ ರಷ್ಯಾದಂಥ ಮಹಾರಾಷ್ಟ್ರಗಳಲ್ಲಿನ ವಿವಿಧ ದೇಶಭಾಷಾ ಸಾಹಿತ್ಯಾಭಿವ್ಯಕ್ತಿಯಲ್ಲಿ ಗುರುತಿಸಬಹುದು. ಜರ್ಮನಿ, ಫ್ರಾನ್ಸ್, ಜಪಾನ್ ಇಂಥ ದೇಶದ ಸಾಹಿತ್ಯಕ್ಕೆ ಈ ಮಾತು ಅನ್ವಯಿಸುವುದಿಲ್ಲ.

ಇವುಗಳಲ್ಲಿ ಅನೇಕವುಗಳಿಗೆ ತಮ್ಮದೇ ಆದ ಭಾಷೆ ಮತ್ತು ವಿಶಿಷ್ಟವಾದ ಸಾಂಸ್ಕೃತಿಕ ಹಿನ್ನೆಲೆಯಿಂದ ಪ್ರಾಪ್ತವಾಗುವ ಪ್ರತ್ಯೇಕತೆ ಇರುವ ಕಾರಣದಿಂದ, ಇವುಗಳನ್ನು "ಉಪರಾಷ್ಟ್ರ"ವೆಂದು ಯಾಕೆ ಕರೆಯಬಾರದು ? ಈ ಉಪರಾಷ್ಟ್ರೀಯತೆ, ಕನ್ನಡ ನಾಡಿನ ಮಟ್ಟಿಗೆ ಅದರ "ಕರ್ನಾಟಕತ್ವ"ದಲ್ಲಿದೆ. ಈ ಕರ್ನಾಟಕತ್ವ "ಭಾರತೀಯತ್ವ"ದ ಒಂದು ಭಾಗವೇ. ಈ ಕರ್ನಾಟಕತ್ವದಲ್ಲಿ ಸಂಭವಿಸುವ ಸಾಹಿತ್ಯದಲ್ಲಿ "ಉಪ-ರಾಷ್ಟ್ರೀಯತೆ" ಇದೆ ಎಂಬುದೇ ಇಲ್ಲಿ ಗಮನಿಸಬೇಕಾದ ಅಂಶ. "ಉಪ" ಎಂಬ ಶಬ್ದ ಅನೇಕರಿಗೆ ರುಚಿಸದಿರಬಹುದು. ಕೈ, ಕಾಲು, ಕಣ್ಣು ಇತ್ಯಾದಿಗಳು ದೇಹದ ಉಪಾಂಗಗಳೆಂದ ಮಾತ್ರಕ್ಕೆ ಅವು ದೇಹದ ಒಟ್ಟು ರಚನೆಯಿಂದ, ಕ್ರಿಯೆಯಿಂದ ಹೇಗೆ ಭಿನ್ನವಲ್ಲವೋ ಹಾಗೆಯೆ, ಈ "ಉಪರಾಷ್ಟ್ರೀಯತೆ" ಎಂಬ ಮಾತು "ರಾಷ್ಟ್ರೀಯತೆ"ಯಿಂದ ಬೇರೆ ಆಗುವುದಿಲ್ಲ.

ಹಾಗೆ ನೋಡಿದರೆ "ಉಪರಾಷ್ಟ್ರೀಯತೆ" ಎಂಬುದು, "ಪ್ರಾಂತೀಯತೆ" ಎಂಬುದಕ್ಕೆ ಇಟ್ಟ ಗಂಭೀರವಾದ ಹೆಸರು ! "ಪ್ರಾಂತೀಯತೆ" ಎಂಬುದು, "ರಾಷ್ಟ್ರೀಯತೆ" ಎಂಬುದರೊಂದಿಗೆ ವಿರುದ್ಧಾರ್ಥದಲ್ಲಿ ನಿಲ್ಲುವುದನ್ನು ನಿವಾರಿಸಲು, "ಪ್ರಾಂತೀಯತೆ"ಗೆ, "ಉಪರಾಷ್ಟ್ರೀಯತೆ" ಎಂಬ ವೇಷ ತೊಡಿಸಿ ಒಂದು ಬಗೆಯ ಸಂಧಾನವನ್ನು ಸಂಘಟಿಸುವ ಚಾತುರ್ಯ ಇಲ್ಲಿದೆ. ನಿಜವಾಗಿ ನೋಡಿದರೆ "ಪ್ರಾಂತೀಯತೆ" ಎಂಬುದು "ರಾಷ್ಟ್ರೀಯತೆ"ಗೆ ವಿರುದ್ಧವಾದ ಭಾವನೆಯಾಗಲಿ, ಮಾತಾಗಲಿ ಅಲ್ಲ. ಆದರೆ ಯಾಕೋ ಏನೋ "ಪ್ರಾಂತೀಯತೆ" ಎಂಬ ಮಾತು "ಸಂಕುಚಿತತೆ"ಯನ್ನೂ, "ರಾಷ್ಟ್ರೀಯತೆ" ಎಂಬುದು "ವಿಶಾಲತೆ"ಯನ್ನೂ ಸೂಚಿಸುವ ಪದಗಳಾಗಿ ಗೃಹೀತವಾಗಿರುವ ಕಾರಣ "ಪ್ರಾಂತೀಯತೆ"ಗೆ "ಉಪ-ರಾಷ್ಟ್ರೀಯತೆ" ಎಂದು ನಾಮಕರಣ ಮಾಡಿ, "ರಾಷ್ಟ್ರೀಯತೆ"ಗೆ ಪೂರಕವಾಗುವ ಅರ್ಥದಲ್ಲಿ ಬಳಸಲು ಪ್ರಯತ್ನ ನಡೆದಿದೆ ಇಲ್ಲಿ !

ಈ ದೃಷ್ಟಿಯಿಂದ, ಕನ್ನಡ ನಾಡಿನ ಸಾಹಿತ್ಯದ ಹಿನ್ನೆಲೆ ಭಾರತೀಯವಾಗಿದ್ದರೂ, ರಾಷ್ಟ್ರೀಯವಾಗಿದ್ದರೂ, ಕನ್ನಡದ್ದೇ ಆದ ಪ್ರತ್ಯೇಕವಾಗಿ ಗುರುತಿಸುವಂಥ ಪ್ರಾದೇಶಿಕ ಅಂಶಗಳನ್ನೂ ವಿಶಿಷ್ಟತೆಗಳನ್ನೂ ಹೊಂದಿದ್ದರೆ, ಅದರಲ್ಲಿ ವ್ಯಕ್ತವಾಗಿರುವುದು "ಉಪರಾಷ್ಟ್ರೀಯತೆ" ಎಂದು ಕರೆಯಬೇಕಾಗುತ್ತದೆ. ಈ ರೀತಿಯ ಒಂದು "ಉಪರಾಷ್ಟ್ರೀಯತೆ" ಇರುವುದರಿಂದಲೇ, ಕನ್ನಡ ಸಾಹಿತ್ಯ ಇತರ ಭಾರತೀಯ ಭಾಷಾ ಸಾಹಿತ್ಯಾಭಿವ್ಯಕ್ತಿಗಳಿಂದ ಭಿನ್ನವಾದ ದೃಷ್ಟಿ–ಧ್ಯೇಯ–ಧೋರಣೆಗಳನ್ನು ಎಷ್ಟರ ಮಟ್ಟಿಗೆ ಹೊಂದಿದೆ ಎಂಬುದನ್ನು ಗುರುತಿಸಲು ಸಾಧ್ಯವಿದೆ. ಯಾಕೆಂದರೆ ಕನ್ನಡ ನಾಡಿಗೆ ತನ್ನದೇ ಆದೊಂದು ಜೀವನಕ್ರಮ, ಒಂದು ದೃಷ್ಟಿಕೋನ, ಒಟ್ಟಿನಲ್ಲಿ ಒಂದು ಸಾಂಸ್ಕೃತಿಕ ಪರಂಪರೆ ಇದೆ.

ಹೀಗಿದ್ದಾಗಲೇ ಭಾರತೀಯ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯದ ಕೊಡುಗೆ ಏನಾದರೂ ಉಂಟೆ, ಅಥವಾ ರಾಷ್ಟ್ರೀಯತೆಯಿಂದ ಭಿನ್ನವಾದ "ಉಪರಾಷ್ಟ್ರೀಯತೆ" ಯೇನಾದರೂ ಉಂಟೆ ಎಂದು ವಿಚಾರ ಮಾಡಲು ಸಾಧ್ಯವಾಗುತ್ತದೆ. ವಾಸ್ತವವಾಗಿ ಭಾರತದಂತಹ ಬಹುಭಾಷಾ ಸಾಹಿತ್ಯಗಳಿರುವ ದೇಶದಲ್ಲಿ, ಒಂದೊಂದು ಭಾಷಾ ಸಾಹಿತ್ಯವೂ ತನ್ನದೇ ಆದ ಪ್ರಾದೇಶಿಕ ಸಾಂಸ್ಕೃತಿಕ ವೈಲಕ್ಷಣ್ಯಗಳನ್ನು ಪ್ರಕಟಿಸುವುದರ ಮೂಲಕವೇ ''ಉಪರಾಷ್ಟ್ರೀಯತೆ''ಯನ್ನು ಕಾಯ್ದುಕೊಂಡಿದೆ ಎನ್ನಬಹುದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಈ ಮಾತು ತೀರಾ ಸತ್ಯ. ಕನ್ನಡ ಸಾಹಿತ್ಯದ ವಿಶಿಷ್ಟತೆ ಇರುವುದು ಅದರ ''ಉಪರಾಷ್ಟ್ರೀಯತೆ"ಯಲ್ಲಿಯೇ ಎಂಬುದನ್ನು ಒತ್ತಿ ಹೇಳಬೇಕಾಗಿದೆ.

ಕನ್ನಡದಲ್ಲೇ ಏಕೆ, ಭಾರತೀಯವಾದ ಇತರ ದೇಶೀಯ ಸಾಹಿತ್ಯಗಳಿಗೆ ಅಂತಹ 'ಉಪರಾಷ್ಟ್ರೀಯತೆ'ಯೇನೂ ಇಲ್ಲ, ಇರುವುದೇನಿದ್ದರೂ ರಾಷ್ಟ್ರೀಯತೆಯೇ; ರಾಮಾಯಣ ಮಹಾಭಾರತ ಪುರಾಣೇತಿಹಾಸಗಳು ಎಲ್ಲ ದೇಶ ಭಾಷಾ ಸಾಹಿತ್ಯಾಭಿ-ವ್ಯಕ್ತಿಯ ಮೂಲದ್ರವ್ಯವಾಗಿರುವುದರಿಂದ, ಎಲ್ಲ ದೇಶೀಯ ಸಾಹಿತ್ಯಗಳೂ ಹೊಸ ತೇನನ್ನೂ ಹೇಳಲು ಸಾಧ್ಯವಾಗಿಲ್ಲ, ಅಥವಾ 'ಉಪರಾಷ್ಟ್ರೀಯತೆ'ಯನ್ನು ರೂಪಿಸಿ ಕೊಳ್ಳಲಾಗಿಲ್ಲ; ಆದುದರಿಂದ ಅಭಿವ್ಯಕ್ತವಾಗಿರುವುದೇನಿದ್ದರೂ 'ರಾಷ್ಟ್ರೀಯತೆ' ಎಂಬ ತಪ್ಪು ತಿಳುವಳಿಕೆ ಹಲವರಲ್ಲಿದೆ.* ಆದರೆ ಇಂಥ ರಾಷ್ಟ್ರೀಯ

---

* ರಾಮಾಯಣ ಮಹಾಭಾರತ ಪುರಾಣೇತಿಹಾಸಗಳು ಭಾರತದ ಬಹುಪಾಲು ದೇಶ ಭಾಷಾ ಸಾಹಿತ್ಯದ ಮೂಲವಸ್ತುಗಳಾಗಿರುವುದರಿಂದ, ಆ ಪುರಾಣೇತಿಹಾಸಗಳು ಮೂಲತಹ ವೈದಿಕ ಸಂಸ್ಕೃತಿಯ ಗಣಿಗಳಾಗಿರುವುದರಿಂದ ಎಲ್ಲ ದೇಶಭಾಷಾಭಿವ್ಯಕ್ತಿಗಳೂ ಒಂದಲ್ಲ ಒಂದು ರೀತಿಯಲ್ಲಿ ಅವುಗಳನ್ನು ಪುನರಾವರ್ತಿಸಿವೆಯೆ ಹೊರತು, ಹೊಸತೇನನ್ನೂ ಹೇಳಿಲ್ಲ; ಹೀಗಾಗಿ ರಾಮಾಯಣ ಮಹಾಭಾರತಗಳ ನಂತರ ಈ ರಾಷ್ಟ್ರದಲ್ಲಿ ಅಂಥ ಸೃಜನಾತ್ಮಕವಾದ ಕಾರ್ಯವೇನೂ ನಡೆದಿಲ್ಲ— ಎಂದು ಕೆಲವರ ಅಭಿಪ್ರಾಯ. ಆದರೆ ಇದು ದಾರಿ ತಪ್ಪಿಸುವ ಮಾತಾಗಿದೆ. ರಾಮಾಯಣ ಮಹಾಭಾರತಗಳು ಇಡೀ ಭಾರತದ ಎಲ್ಲ ಸಾಹಿತ್ಯಕ್ಕೆ ಮೂಲವಾಗಿವೆ ಎನ್ನುವುದು, ಅವುಗಳ ವ್ಯಾಪ-ಕತ್ವಕ್ಕೂ ಮತ್ತು ಸತ್ವಕ್ಕೂ ಸಾಕ್ಷಿಯಾಗಿವೆ. ಅವುಗಳನ್ನು ಮೀರಿಸುವ ಕೃತಿಗಳು ಭಾರತದಲ್ಲೇ ಏಕೆ, ಜಗತ್ತಿನಲ್ಲೇ ಇಲ್ಲ. ಆದರೆ ಈ ದೇಶದಲ್ಲಿ, ಆ ಕೃತಿಗಳ ನಂತರ ಅಂಥ ಸೃಜನಾತ್ಮಕ ವಾದದ್ದೇನೂ ನಡೆದೇ ಇಲ್ಲ ಎಂಬ ಮಾತು ನಿಜವಲ್ಲ; ಆ ಮಟ್ಟದಲ್ಲಿ ಸೃಜನಾತ್ಮಕತೆ ಅಭಿವ್ಯಕ್ತ ವಾಗಿಲ್ಲ ಎಂದು ಬೇಕಾದರೆ ಒಪ್ಪಬಹುದು. ಈ ವಸ್ತುಗಳನ್ನು ತೆಗೆದುಕೊಂಡೂ ಕೂಡಾ, ನಿಜ ವಾದ ಕವಿಗಳು 'ಪುನರ್ಭವ'ವನ್ನು ಆಯಾ ಭಾಷೆಯಲ್ಲಿ ನೀಡಿದ್ದಾರೆ. ಹಾಗೆಯೇ ವೈದಿಕ ಸಂಸ್ಕೃತಿಗೆ ಪ್ರತಿಭಟನೆಯಾಗಿ ಹುಟ್ಟಿಕೊಂಡ, ಬೌದ್ಧ, ಜೈನ ಸಾಹಿತ್ಯಾಭಿವ್ಯಕ್ತಿಗಳೂ ಈ ರಾಷ್ಟ್ರ ದಲ್ಲಿವೆ ಎಂಬುದನ್ನು ಮರೆಯಬಾರದು.

ಕನ್ನಡ ಸಾಹಿತ್ಯವನ್ನು ಐತಿಹಾಸಿಕವಾಗಿ ಪರಿಶೀಲಿಸಿದರೆ, ಗೊತ್ತಾಗುತ್ತದೆ, ಈ ಸಾಹಿತ್ಯದ ಆರಂಭವೇ ವೈದಿಕ ಸಂಸ್ಕೃತಿಯ ಬಗ್ಗೆ ಪ್ರತಿಭಟನೆ ತೋರಿದ ಜೈನಧರ್ಮದ ಕವಿಗಳಿಂದ ಎನ್ನು

ಮಹತ್ವವುಳ್ಳ ರಾಮಾಯಣ, ಮಹಾಭಾರತಾದಿ ವಸ್ತುಗಳನ್ನು ತೆಗೆದುಕೊಂಡೂ ಕೂಡ, ನೋಡುವ ದೃಷ್ಟಿ, ಹೇಳುವ ರೀತಿ, ಬೇರೆಯಾಗಿದೆ. ಕನ್ನಡ ಕವಿಗಳಾದ ಪಂಪ, ರನ್ನ, ಹರಿಹರ, ರಾಘವಾಂಕ ಇವರನ್ನು ನೋಡಿದರೆ ಈ ಮಾತು ಸ್ಪಷ್ಟ ವಾಗುತ್ತದೆ. ಪಂಪ ಭಾರತ ವ್ಯಾಸ ಭಾರತದ ಪಡಿನೆಳಲಲ್ಲ; ಅದರ ಮೂಲ ಸಾಮಗ್ರಿಯಿಂದ ಮೂಡಿದ ಬೇರೊಂದು ರೂಪ. ಅರಿಕೇಸರಿ–ಅರ್ಜುನರ ಅಭೇದ ಕಲ್ಪನೆಯು 'ಸಮಸ್ತಭಾರತ' ತಂತ್ರದಿಂದ ಪಂಪ ಭಾರತಕ್ಕೆ ಲಭಿಸಿರುವ ಸ್ವರೂಪ ನಿಜವಾಗಿಯೂ 'ಉಪರಾಷ್ಟ್ರೀಯತೆ'ಗೆ ಒಂದು ನಿದರ್ಶನ. ರನ್ನನ 'ಗದಾಯುದ್ಧ'ದ 'ಸಿಂಹಾವಲೋಕನ ಕ್ರಮ' ಅತ್ಯಾಧುನಿಕವಾಗಿದ್ದು, ರನ್ನನ ಕಾಲದ ವೀರಜೀವನದ ದಾಖಲೆಯಾಗಿ ಕನ್ನಡ ನಾಡಿನ ಕವಿಯ 'ಉಪರಾಷ್ಟ್ರೀಯತೆ'ಯನ್ನು ಪ್ರಕಟಿಸುತ್ತದೆ. ಹರಿಹರನ 'ಗಿರಿಜಾ ಕಲ್ಯಾಣ'ವಂತೂ, ಶಿವಪುರಾಣ ಹಾಗೂ 'ಕುಮಾರ ಸಂಭವ'ಗಳಿಂದ ಭಿನ್ನವಾದ ರೂಪಾಂತರವನ್ನು, ಕನ್ನಡ ನಾಡಿನ 'ಮಣ್ಣಿನ ವಾಸನೆ'ಯೊಂದಿಗೆ ತಾಳಿದೆ. ಇದಕ್ಕಿಂತ ಮಿಗಿಲಾಗಿ ವಚನಕಾರರ ಹಾಗೂ ಹರಿದಾಸರ ಅಭಿವ್ಯಕ್ತಿಗಳೂ, 'ಉಪ ರಾಷ್ಟ್ರೀಯ'ವೆಂದು ಮಾತ್ರ ಹೆಸರಿಸಬಹುದಾದವು. ಈ ಅರ್ಥದಲ್ಲಿ ಹಿಂದಿನ ಕನ್ನಡ ಸಾಹಿತ್ಯ ಸಾಕಷ್ಟು 'ಉಪರಾಷ್ಟ್ರೀಯ'ವಾಗಿದೆ ಎನ್ನಬಹುದು.

ನಿಜವಾಗಿಯೂ, ಈ 'ಉಪರಾಷ್ಟ್ರೀಯತೆ'ಯನ್ನು ಗುರುತಿಸುವುದು ಒಂದು ಸಾಹಿತ್ಯದ ಭಾಷೆಯಿಂದ ಮಾತ್ರವಲ್ಲ; ಪ್ರತಿಯೊಂದು ಭಾಷೆಯೂ, ಇನ್ನೊಂದು ಭಾಷೆಯಿಂದ ಬೇರೆ ಎಂಬಂತೆ ತೋರಿದರೂ, ಯಾವ ಒಂದು ಪ್ರದೇಶಕ್ಕೆ ತನ್ನದೇ ಆದೊಂದು ವಿಶಿಷ್ಟ ಸಾಂಸ್ಕೃತಿಕ ಜೀವನವಿದೆಯೋ ಮತ್ತು ಕವಿ ಯಾವುದೇ ವಸ್ತು ವನ್ನು ತೆಗೆದುಕೊಂಡರೂ, ಅದು ಆತನ ಪರಿಸರದ ವಿಶಿಷ್ಟ ಲಕ್ಷಣಗಳನ್ನು, ತನ್ನ ಕೃತಿ ಯಲ್ಲಿ ಮೂಡಿಸಿದೆಯೋ ಅಂಥವನ್ನು 'ಉಪರಾಷ್ಟ್ರೀಯತೆ' ಎನ್ನಬಹುದು. ಉದಾ ಹರಣೆಗೆ ರಾಮಾಯಣ ಮಹಾಭಾರತಗಳನ್ನು ವಸ್ತುವನ್ನಾಗಿ ತೆಗೆದುಕೊಂಡ ಎಷ್ಟೋ ಕವಿಗಳು, ವಾಲ್ಮೀಕಿ–ವ್ಯಾಸಾದಿಗಳ ಮೇಲಿನ ಗೌರವದಿಂದ, ಮೂಲವನ್ನು ಯಥಾ ವತ್ತಾಗಿ ಶ್ರದ್ಧೆಯಿಂದ ಅನುಸರಿಸಿ ತಮ್ಮ ತಮ್ಮ ಭಾಷೆಗಳಲ್ಲಿ ಅನುವಾದಿಸಿ ತಾವು

ವುದು. ಇದೇ ಮನೋಧರ್ಮ ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಮುಂದುವರಿಯಿತು. ರಾಮಾಯಣ ಮಹಾಭಾರತದಂಥ ವಸ್ತುಗಳನ್ನು ಜೈನಕವಿಗಳು ತೆಗೆದುಕೊಂಡರೂ, ಅವುಗಳನ್ನು ಅವರು ವೈದಿಕ ಪರಂಪರೆಯ ರೀತಿಯಲ್ಲಿ ಹೇಳಲಿಲ್ಲ; ವೀರಶೈವರಂತೂ ರಾಮಾಯಣ ಮಹಾ ಭಾರತಗಳನ್ನು ತಮ್ಮ ಕಾವ್ಯವಸ್ತುಗಳನ್ನಾಗಿ ತೆಗೆದುಕೊಳ್ಳಲೇ ಇಲ್ಲ; ನಿಜವಾದ ವೈದಿಕ ಸಾಹಿತ್ಯ ಆರಂಭವಾದದ್ದು ಹದಿನಾಲ್ಕನೆ ಶತಮಾನದ ವೇಳೆಗೆ, ಕುಮಾರವ್ಯಾಸನಿಂದ. ಅಲ್ಲದೆ ವೈದಿಕ ಸಂಸ್ಕೃತಿಯಿಂದ ಭಿನ್ನವಾದ ಸಾಂಸ್ಕೃತಿಕ ಪರಂಪರೆಗಳೂ ಈ ದೇಶದಲ್ಲಿವೆ. ಆದ್ದರಿಂದ ಈ ರಾಷ್ಟ್ರ ದುದ್ದಕ್ಕೂ ಅಭಿವ್ಯಕ್ತವಾಗಿರುವುದು ಕೇವಲ ವೈದಿಕ ಸಂಸ್ಕೃತಿಯೆ ಎಂದು ಭಾವಿಸುವುದೂ ತಪ್ಪಾಗುತ್ತದೆ.

ಕೃತಾರ್ಥರಾದೆವೆಂದು ಭಾವಿಸಿದ್ದುಂಟು. ಅಂಥವರ ಕೃತಿ ನಿಜವಾದ ಅರ್ಥದಲ್ಲಿ 'ಉಪರಾಷ್ಟ್ರೀಯ'ವಾಗುವುದಿಲ್ಲ. ಯಾಕೆಂದರೆ ಅವರು ಆ ಮೂಲ ಕಾವ್ಯಗಳು ತಮ್ಮ "ಉಪರಾಷ್ಟ್ರೀಯತೆ"ಯಲ್ಲಿ ಸಂಭವಿಸುವಂತೆ ಮಾಡುವ ಸ್ವೋಪಜ್ಞತೆಯನ್ನು ಪ್ರಕಟಿಸುವುದಿಲ್ಲ. ಹೀಗಾಗಿ ಅವರು ತಮ್ಮ "ಉಪರಾಷ್ಟ್ರೀಯತೆ"ಯನ್ನು ನಿರ್ಲಕ್ಷಿಸುತ್ತಾರೆ. ಕನ್ನಡದ "ತೊರವೆಯ ರಾಮಾಯಣ"ವನ್ನಾಗಲಿ, ಮತ್ತು ಮೂಲವನ್ನು ಯಥಾವತ್ತಾಗಿ ಹೇಳಲು ಬದ್ಧವಾದ ಇನ್ನಾವ ಕೃತಿಗಳನ್ನಾಗಲಿ ನೋಡಬಹುದು. ಅವುಗಳಲ್ಲಿ, ಅದನ್ನು ಬರೆದ ಕವಿಗಳಿಗೆ "ಸ್ವಂತದ್ದು"— ಎಂದರೆ "ಉಪರಾಷ್ಟ್ರೀಯತೆ"ವಾದದ್ದೇನನ್ನೂ ತರುವ ಉದ್ದೇಶವಿರುವುದಿಲ್ಲ. ಆದರೆ ವ್ಯಾಸ ಭಾರತದ ಕತೆಯನ್ನು ತೆಗೆದುಕೊಂಡ ಪಂಪ "ವಿಕ್ರಮಾರ್ಜುನ ವಿಜಯ"ವನ್ನು ಬರೆಯುವಲ್ಲಿ, ಅದನ್ನು ನಿಜವಾದ ಅರ್ಥದಲ್ಲಿ "ಉಪರಾಷ್ಟ್ರೀಯ ಕಾವ್ಯ"ವನ್ನಾಗಿ ಮಾಡಿದ್ದಾನೆ. ವ್ಯಾಸರ ಬಗೆಗೆ ಪಂಪನಿಗೆ ಗೌರವವಿದ್ದರೂ, ಮೂಲಭಾರತದ ಕಥಾಭಿತ್ತಿಯ ಮೇಲೆ, ತನ್ನ ಕಾಲದ ಐತಿಹಾಸಿಕ ಸಂಗತಿಗಳನ್ನು, ತನ್ನ ಸಮಕಾಲೀನ ಸಾಮಾಜಿಕ ಜೀವನವನ್ನು, ತಾನು ಕಂಡ ವ್ಯಕ್ತಿಗಳನ್ನು, ತನ್ನ ಕಾಲದ ಮೌಲ್ಯಗಳನ್ನು, ತನಗೂ ರಾಜನಾದ ಅರಿಕೇಸರಿಗೂ ಇದ್ದ ಸ್ನೇಹಾನುಬಂಧಗಳನ್ನೂ, ತಾನು ಸುತ್ತಾಡಿ ಮೆಚ್ಚಿದ ಬನವಾಸಿಯ ಪ್ರೀತಿಯನ್ನೂ, ತನ್ನ ಸ್ವಂತ ರುಚಿ ಹಾಗೂ ಅಭಿರುಚಿಗಳನ್ನೂ, ತನ್ನ ಯುದ್ಧಾನುಭವಗಳನ್ನೂ—ಒಟ್ಟಿನಲ್ಲಿ ಹತ್ತನೆಯ ಶತಮಾನದ ಕನ್ನಡ ನಾಡಿನ ಜೀವನವನ್ನೇ ಚಿತ್ರಿಸಿ, "ವಿಕ್ರಮಾರ್ಜುನ ವಿಜಯ"ವನ್ನು "ಉಪರಾಷ್ಟ್ರೀಯ ಕಾವ್ಯ"ವನ್ನಾಗಿ ಮಾಡಿದ್ದಾನೆ. ಈ "ಉಪರಾಷ್ಟ್ರೀಯತೆ" "ರಾಷ್ಟ್ರೀಯತೆ"ಯಿಂದ ಭಿನ್ನವೇ ಹೊರತು, "ಅರಾಷ್ಟ್ರೀಯ"ವಾಗುವುದಿಲ್ಲ. ಯಾಕೆಂದರೆ ಇಂಥ ಕವಿಗಳು ಆರಿಸಿಕೊಂಡಿದ್ದು "ರಾಷ್ಟ್ರೀಯ ಮಹತ್ವ"ವುಳ್ಳ ವಸ್ತುಗಳನ್ನೇ ಮತ್ತು ಇಂಥ ವಸ್ತುಗಳ ಪುನರ್‌ಭವಕೃತಿಗಳು "ಉಪರಾಷ್ಟ್ರೀಯ"ವಾದರೂ, ಈ "ಉಪರಾಷ್ಟ್ರೀಯತೆ" ಕೂಡಾ ನಮ್ಮ ರಾಷ್ಟ್ರೀಯತೆಯ ಒಂದು ಅಂಗವೇ. ಈ ಬಗೆಯ ವಸ್ತುಗಳನ್ನು ಬಿಟ್ಟು, ಪ್ರಾದೇಶಿಕ ಮಹತ್ವವುಳ್ಳ ವಸ್ತುಗಳನ್ನು ನಿರ್ವಹಿಸಿದ ಕವಿಕೃತಿಗಳಲ್ಲಿ ಈ "ಉಪರಾಷ್ಟ್ರೀಯತೆ" ಇನ್ನೂ ಪರಿಸ್ಫುಟವಾಗಿ ಕಾಣುತ್ತದೆ. ಆಂಡಯ್ಯನ "ಕಬ್ಬಿಗರ ಕಾವ", ನಂಜುಂಡನ "ಕುಮಾರರಾಮ ಸಾಂಗತ್ಯ" ಮತ್ತು ಕನ್ನಡ ನಾಡಿನ ಅನೇಕ ವೀರರನ್ನು ಕುರಿತು ರಚಿತವಾದ ಶಾಸನ ಹಾಗೂ ಲಾವಣಿಗಳು,— ನಿಜವಾದ ಅರ್ಥದಲ್ಲಿ "ಉಪರಾಷ್ಟ್ರೀಯತೆ"ಯ ಉತ್ತಮ ನಿದರ್ಶನಗಳಾಗಿವೆ. ಇನ್ನು ವಚನಕಾರರ ಹಾಗೂ ಹರಿದಾಸರ ಅಭಿವ್ಯಕ್ತಿಗಳಂತೂ, ರಾಷ್ಟ್ರೀಯ ಸಾಹಿತ್ಯದಲ್ಲಿ ಈ ಮೊದಲು ಕಾಣಬಾರದ ಅಭಿವ್ಯಕ್ತಿ ಪ್ರಕಾರಗಳಾದರೂ, ನಿಜವಾದ ಅರ್ಥದಲ್ಲಿ "ಉಪರಾಷ್ಟ್ರೀಯ"ವಾದರೂ, ಅವುಗಳ ಹಿನ್ನೆಲೆಗಿರುವುದು ಭಗವತ್ ಪರವಾದ ಭಕ್ತಿ-ಶ್ರದ್ಧೆಗಳು, ಸಮಾಜ ವಿಮರ್ಶೆಯ ಧೋರಣೆಗಳು, ರಾಷ್ಟ್ರೀಯ ಅಂಶಗಳೇ ಆಗಿವೆ. ಆದರೆ "ವಚನ ಸಾಹಿತ್ಯ"ವಂತೂ, ಭಕ್ತಿ ಇತ್ಯಾದಿಗಳಲ್ಲಿ

ರಾಷ್ಟ್ರೀಯವಾದರೂ, ಅದಕ್ಕೆ ಹಿನ್ನೆಲೆಯಾದ ಧಾರ್ಮಿಕ ಸಾಮಾಜಿಕ ಕ್ರಾಂತಿಯಿಂದ ಮತ್ತು ಅನನ್ಯವಾದ ಅಭಿವ್ಯಕ್ತಿಯಿಂದ ಮೂಲತಃ "ಉಪರಾಷ್ಟ್ರೀಯ"ವಾಗಿದ್ದು ಕೊಂಡು, ರಾಷ್ಟ್ರೀಯ ಸಾಹಿತ್ಯಕ್ಕೆ ಮತ್ತು ವಿಶ್ವಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯಾಗಿದೆ.

ನವೋದಯ ಸಾಹಿತ್ಯದ ಕಾಲಕ್ಕೆ, ಕನ್ನಡದಲ್ಲಿ "ಉಪರಾಷ್ಟ್ರೀಯತೆ"ಇನ್ನಷ್ಟು ಎದ್ದು ಕಾಣುವಂತಾಯಿತು. ಪಾಶ್ಚಾತ್ಯ ರೊಮ್ಯಾಂಟಿಕ್ ಕವಿಗಳಿಂದ ಪ್ರೇರಣೆ ಪಡೆದು ರೂಪುಗೊಂಡ ನವೋದಯ ಸಾಹಿತ್ಯ, ಪಾಶ್ಚಾತ್ಯ ಅನುಕರಣವೆಂಬಂತೆ ತೋರದೆ, ತನ್ನದೇ ಆದ ಪ್ರಾದೇಶಿಕ ಸೊಗಸುಗಳನ್ನು ಅನೇಕ ಕವಿಗಳ ವಿವಿಧ ಕಾವ್ಯಾಭಿವ್ಯಕ್ತಿಗಳಲ್ಲಿ ಪ್ರಕಟಪಡಿಸಿತು. ಕವಿತೆ, ಕತೆ, ನಾಟಕ, ಕಾದಂಬರಿ ಇತ್ಯಾದಿ ಪ್ರಕಾರಗಳಲ್ಲಿ ಈ ಸಾಹಿತ್ಯ ಕನ್ನಡದ್ದೇ, ಕನ್ನಡ ಜನತೆಯ ಜೀವನದಿಂದ ಸಂಭವಿಸಿದ್ದೇ ಎಂಬುದನ್ನು ಖಚಿತಪಡಿಸಿತು. ಈ ಸಾಹಿತ್ಯದ ಹಿನ್ನೆಲೆಗೆ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯೂ, ಕರ್ನಾಟಕ ಏಕೀಕರಣ ಚಳುವಳಿಗಳೂ ಇದ್ದ ಕಾರಣ, ದೇಶಭಕ್ತಿ ಮೂಲವಾದ, ಕನ್ನಡ ನಾಡು-ನುಡಿಗಳ ಅಭಿಮಾನವನ್ನು ಕುರಿತಾದ ಸಾಹಿತ್ಯಾಭಿ ವ್ಯಕ್ತಿಗಳೂ ಕಾಣಿಸಿಕೊಂಡವು. ರಾಷ್ಟ್ರೀಯ ಚಳುವಳಿಯ ಕಾರಣದಿಂದ, ರಾಷ್ಟ್ರ ವನ್ನು ಒಂದು ತಾಯಿ ಎಂದು ಭಾವಿಸುವ, ತಾನು ಅದರ ಮಗು ಎಂದುಕೊಳ್ಳುವ ರಾಷ್ಟ್ರಕ್ಕಾಗಿ ಸಮಸ್ತವನ್ನೂ ತ್ಯಾಗಮಾಡುವ, ಪರಕೀಯ ಪ್ರಭುತ್ವವನ್ನು ಕಿತ್ತೊಗೆ ಯಲು ಸತ್ವತಹ ತಾನು ಭಾರತೀಯನಾಗುವ, ಮತ್ತು ರಾಷ್ಟ್ರದ ಸಂಸ್ಕೃತಿಯನ್ನು, ವೀರಜೀವನವನ್ನು ಪ್ರಶಂಸಿಸುವ, ಆರಾಧನಾಮೂಲವಾದ, ಆದರ್ಶ ಆವೇಶಗಳು ಈ ಕಾಲದ ಸಾಹಿತ್ಯದ ಮುಖ್ಯ ವಸ್ತುಗಳಾದವು. ಹೀಗಾಗಿ ರಾಷ್ಟ್ರೀಯ ಸಾಹಿತ್ಯ ವೆಂದರೆ, ಕೇವಲ ದೇಶಭಕ್ತಿಮೂಲವಾದ ಆವೇಶ, ಆರಾಧನಾಭಾವನೆಯನ್ನು ಕುರಿತದ್ದು ಎಂಬ ಪರಿಮಿತಾರ್ಥವೆ ಪ್ರಧಾನವಾಗಲು, ಈ ಸಾಹಿತ್ಯಕ್ಕೆ ಹಿನ್ನೆಲೆಯಾಗಿ ಬಂದ ಸ್ವಾತಂತ್ರ್ಯ ಚಳುವಳಿಯೆ ಕಾರಣ. ಈ ಕಾಲದ ಸಾಹಿತ್ಯದ ಇತರ ಸಾಧನೆ ಗಳನ್ನು ಕಡೆಗಣಿಸಿ, ಇತ್ತೀಚಿನ ನವ್ಯರು, ನವೋದಯಕಾವ್ಯ ಭಾವಾತಿರೇಕದಿಂದ, ಅತಿಯಾದ ಆವೇಶದಿಂದ, ಆದರ್ಶಮಯತೆಯಿಂದ ನರಳುತ್ತದೆಂದು ಆಪಾದಿಸಿದರು. ಈ ಆಪಾದನೆಯ ಬಹುಪಾಲು ಅಂಶ, ನವೋದಯ ಸಾಹಿತ್ಯಕ್ಕೆ ಹಿನ್ನಲೆಯಾಗಿದ್ದ ರಾಷ್ಟ್ರೀಯ ಚಳುವಳಿ ಮತ್ತು ಅದಕ್ಕೆ ಅಂಟಿಕೊಂಡು ಬಂದ ಭಾವುಕತನದಲ್ಲಿದೆ. ಆದರೆ ಆ ಕಾಲಕ್ಕೆ ಅದು ಅನಿವಾರ್ಯವೂ ಆಗಿತ್ತೆಂಬುದನ್ನು ಮರೆಯಬಾರದು. ದುರದೃಷ್ಟವಶಾತ್ "ರಾಷ್ಟ್ರೀಯತೆ"ಎಂಬ ಮಾತಿಗೆ, ದೇಶಭಕ್ತಿ, ಸ್ವಾತಂತ್ರ್ಯಕ್ಕಾಗಿ ಹೋರಾಟ, ನಾಡು-ನುಡಿಗಳ ಮೇಲಿನ ಪ್ರೇಮ ಎಂಬ ಅರ್ಥಗಳಷ್ಟೇ ಗೂಡುಕಟ್ಟಿ ಕೊಂಡದ್ದು ವಿಷಾದಕರ.

ಮುಂದೆ ಬಂದ ನವ್ಯ ಸಾಹಿತ್ಯದವರು, ನವೋದಯ ಸಾಹಿತ್ಯದ ಅತಿಭಾವುಕ ತನ, ಆದರ್ಶಪರತೆ, ಇತ್ಯಾದಿಗಳ ಬಗೆಗೆ ಬಂಡೆದ್ದು, ನವೋದಯ ಕವಿಗಳು ಪೋಷಿಸಿ

ಕೊಂಡ ದೇಶಪ್ರೇಮಮೂಲವಾದ ರಾಷ್ಟ್ರೀಯತೆಯ ಧೋರಣೆಯನ್ನು ಸಂಪೂರ್ಣ ವರ್ಜಿಸಿದರು. ಭರತಮಾತೆ, ಕನ್ನಡಾಂಬೆ ಇತ್ಯಾದಿ ಮಾತುಗಳು ಇವರಿಗೆ ತಮಾಷೆಯ ಮಾತುಗಳಾದವು. ರಾಷ್ಟ್ರೀಯ ಗಂಡಾಂತರದ ಸಂದರ್ಭಗಳಲ್ಲಿ ಕೂಡ – ಚೀನಾ, ಪಾಕಿಸ್ಥಾನಗಳೊಂದಿಗೆ ಭಾರತವು ಯುದ್ಧದಲ್ಲಿ ತೊಡಗಿಕೊಂಡ ಸಂದರ್ಭಗಳಲ್ಲಿ ಕೂಡ – ನವ್ಯಸಾಹಿತ್ಯ ಯಾವ ಪ್ರತಿಕ್ರಿಯೆಯನ್ನೂ ತೋರಿಸದೆ, ತಟಸ್ಥವಾದ, ತೀರಾ ವೈಯಕ್ತಿಕ ನಿಲುವನ್ನು ತಾಳಿತು. ಈ ಸಮಯದಲ್ಲಿ ಅಲ್ಲೋಲ ಕಲ್ಲೋಲವಾದ ಭಾರತದ ಜನಮನದೊಂದಿಗೆ ಸ್ಪಂದಿಸಿದ ಕವಿಗಳು ಈ ಸಾಹಿತ್ಯದ ದೃಷ್ಟಿಯಿಂದ 'ಸರ್ಕಾರಿಕವಿ'ಗಳಾದರು. "ರಾಷ್ಟ್ರೀಯತೆ"ಎಂದರೆ, ನವೋದಯ ಸಾಹಿತ್ಯದಲ್ಲಿ ವ್ಯಕ್ತವಾದಂತೆ, ಕೇವಲ ದೇಶಭಕ್ತಿಮೂಲವಾದ ಅನಿಸಿಕೆಗಳ ಉದ್ಗಾರ ಮಾತ್ರವಲ್ಲವಾದರೂ, ತಾವು ಸಮಗ್ರ ಭಾರತದವರು ಇದರ ಸಾಂಸ್ಕೃತಿಕ ಪರಂಪರೆಯನ್ನು ಮೈಗೂಡಿಸಿಕೊಳ್ಳುವುದು ಸಾಹಿತಿಯ ಜವಾಬ್ದಾರಿಗಳಲ್ಲಿ ಬಹು ಮುಖ್ಯವಾದದ್ದು ಎಂಬ ಅರಿವಿಗೇ ಹೊರತಾಗಿ ನವ್ಯರು ಬದುಕುವ ಪ್ರಯತ್ನ ಮಾಡಿದರು. ಹೀಗಾಗಿ 'ಉಪರಾಷ್ಟ್ರೀಯ'ವಾದ, ಮತ್ತು 'ರಾಷ್ಟ್ರೀಯ'ವಾದ ಸಾಹಿತ್ತಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಂಡ ಈ ಲೇಖಕರು, ತಮ್ಮ ಪ್ರೇರಣೆ ಹಾಗೂ ಪುಷ್ಟಿಗಳಿಗಾಗಿ, ಅನ್ಯದೇಶೀಯವಾದ ಪರಂಪರೆಗಳ ಕಡೆಗೆ, ತಾತ್ವಿಕ ವಲಯಗಳ ಕಡೆಗೆ ತಮ್ಮ ಬೇರುಗಳನ್ನು ಚಾಚಿದರು. ಒಟ್ಟಿನಲ್ಲಿ ನವ್ಯ ಸಾಹಿತ್ಯ 'ಉಪರಾಷ್ಟ್ರೀಯ' ಹಾಗೂ 'ರಾಷ್ಟ್ರೀಯ'ವಾಗುವುದರ ಬದಲು, 'ಅಂತರ್ ರಾಷ್ಟ್ರೀಯ' (International)ವಾಗುವುದರಲ್ಲಿ ಹೆಚ್ಚು ಆಸಕ್ತಿ ವಹಿಸಿತು. ಹೀಗೆಂದರೆ ನವ್ಯ ಸಾಹಿತ್ಯದಲ್ಲಿ 'ರಾಷ್ಟ್ರೀಯತೆ' ಲವಲೇಶವೂ ಇಲ್ಲವೆಂದು ಈ ಮಾತಿನ ಅರ್ಥವಲ್ಲ. ಇದರಲ್ಲಿ 'ರಾಷ್ಟ್ರೀಯತೆ' ಇರುವುದಾದರೆ, ಅದು ಈ ರಾಷ್ಟ್ರ ಜೀವನದ ಸಮಕಾಲೀನ ಪರಿಸ್ಥಿತಿಗಳನ್ನು ಕುರಿತ ವಿಡಂಬನೆಯಲ್ಲಿದೆ. ಈ ವಿಡಂಬನೆಯ ಉದ್ದೇಶ ಮೂಲತಹ ರಾಷ್ಟ್ರಜೀವನದ ಶ್ರೇಯಸ್ಸಿನ ಬಗೆಗೆ ಈ ಸಾಹಿತಿಗಳು ವಹಿಸಿದ ಕಾಳಜಿಗಳ ಪರಿಣಾಮವೇ ಎಂದು ಊಹಿಸಬಹುದು. ನವೋದಯ ಸಾಹಿತಿಗಳ 'ರಾಷ್ಟ್ರೀಯತೆ' ಪ್ರಶಂಸಾಮೂಲವಾದ, ಹಾಗೂ ಆರಾಧನಾಪ್ರಧಾನವಾದ 'ರಾಷ್ಟ್ರೀಯತೆ'ಯಾಗಿದ್ದರೆ, ನವ್ಯಸಾಹಿತಿಗಳದು ವಿಮರ್ಶನಮೂಲವಾದ ಹಾಗೂ ವಿಡಂಬನ ಪ್ರಧಾನವಾದ 'ರಾಷ್ಟ್ರೀಯತೆ' ಯಾಗಿದೆ ಎನ್ನಬಹುದು. ಆದರೆ ಈ ಎರಡು ಸಾಹಿತ್ಯ ಪರಂಪರೆಗಳ "ರಾಷ್ಟ್ರೀಯತೆ"ಯಲ್ಲಿ ಇನ್ನೂ ಮುಖ್ಯವಾದ ಒಂದು ವ್ಯತ್ಯಾಸವಿದೆ. ಕನ್ನಡದ ನವೋದಯ ಸಾಹಿತಿಗಳು ಈ ರಾಷ್ಟ್ರದ ಹಾಗೂ ತಮ್ಮ 'ಉಪರಾಷ್ಟ್ರೀಯತೆ'ಯ ಚಾರಿತ್ರಿಕ ಪ್ರಜ್ಞೆ[2] (Historical Sense) ಯುಳ್ಳವರಾಗಿದ್ದರು ; ಮತ್ತು

---

[2] "...the historical sense involves a perception, not only of the pastness of the past, but of its presence ; the historical sense

ತಾವು ಬರೆಯುತ್ತಿರುವುದು ಭಾರತೀಯ ಪರಿಸರದಲ್ಲಿ ಅದರಲ್ಲೂ ಕನ್ನಡ ನಾಡಿನಲ್ಲಿ ಎಂಬುದನ್ನು ಖಚಿತಪಡಿಸುತ್ತಿದ್ದರು. ಆದರೆ ನವ್ಯಸಾಹಿತಿಗಳು ತಾವು ಬರೆಯುತ್ತಿರುವುದು ಭಾರತೀಯ ಪರಿಸರದಲ್ಲಿ ಅದೂ ಕನ್ನಡ ನಾಡಿನಲ್ಲಿ ಎಂಬುದನ್ನು, ಅಷ್ಟಾಗಿ ಖಚಿತಪಡಿಸುವುದಿಲ್ಲ. ಹೀಗಾಗಿ 'ಉಪರಾಷ್ಟ್ರೀಯತೆ'ಯನ್ನು ಪ್ರಕಟಪಡಿಸುವುದರಲ್ಲಿ ಈ ಸಾಹಿತ್ಯ ಯಶಸ್ವಿಯಾಗಿಲ್ಲ. ಹೀಗೆಂದರೆ ಅದು ಸಾಹಿತ್ಯವಾಗಿ ಯಶಸ್ವಿಯಾಗಿಲ್ಲ ಎಂದು ಅರ್ಥವಲ್ಲ. ಯಾವ ಸಾಹಿತಿಯೇ ಆಗಲಿ "ರಾಷ್ಟ್ರೀಯತೆ" ಅಥವಾ "ಉಪರಾಷ್ಟ್ರೀಯತೆ"ಯನ್ನು ಪ್ರಕಟಿಸಲೆಂದೇ ಸಾಹಿತ್ಯ ನಿರ್ಮಿತಿಗೆ ತೊಡಗುವುದಿಲ್ಲ; ತೀರಾ ವ್ಯಕ್ತಿವಿಶಿಷ್ಟವಾದ ಲೇಖಕನಿಗೆ ಈ ಎರಡೂ ಲಕ್ಷ್ಯದಲ್ಲಿರುವುದಿಲ್ಲ. ನವ್ಯ ಸಾಹಿತ್ಯ ಹಿಂದಿನ ಸಾಹಿತ್ಯ ಪರಂಪರೆಗಿಂತ ತೀರಾ ವ್ಯಕ್ತಿವಿಶಿಷ್ಟವಾದದ್ದರಿಂದ, ಬರೆಯುವ ಸಾಹಿತಿಗೆ ಕೇವಲ ಬದುಕು ಮುಖ್ಯವಾಗುತ್ತದೆಯೆ ಹೊರತು, ಇದು "ರಾಷ್ಟ್ರೀಯ" ಇದು "ಉಪರಾಷ್ಟ್ರೀಯ" ಎನ್ನುವುದು ಮುಖ್ಯವಾಗುವುದಿಲ್ಲ. ಆದರೆ ನವ್ಯ ಸಾಹಿತಿಗಳಿಗೆ ತಮ್ಮ ಉಪರಾಷ್ಟ್ರೀಯ ಸಾಹಿತ್ತಿಕ ಪರಂಪರೆಯ ಹಿನ್ನೆಲೆ ಇದ್ದಿದ್ದರೆ, ಈ ಸಾಹಿತ್ಯ ನಿಜವಾಗಿಯೂ, ನಾವೀನ್ಯತೆಯ ಜತೆಗೆ ಇನ್ನಷ್ಟು ಗಟ್ಟಿ ಮುಟ್ಟಾಗಬಹುದಾಗಿತ್ತಲ್ಲ ಎಂದು ನನ್ನಂಥವನಿಗೆ ಅನ್ನಿಸಿದರೆ ತಪ್ಪಲ್ಲ.

---

compels a man to write not merely with his own generation in his bones, but with a feeling that the whole of the literature of Europe from Homer and within it the whole of the literature of his own country has a simultaneous existence and composes a simultaneous order. This historical sense, which is a sense of the timeless as well as of the temporal together is what makes a writer traditional. And it is at the same time what makes a writer most acutely conscious of his place in time, of his own contemporaneity.

T. S. Eliot : Selected Prose. p. 23

ಜನಸಂಖ್ಯಾ ಬೆಳವಣಿಗೆ ಮತ್ತು ಸಾಮಾಜಿಕ ಸಮಸ್ಯೆಗಳು

ಎಚ್. ಚನ್ನಬಸವಯ್ಯ

ಒಂದಿನ ಕಾಲದಲ್ಲಿ ಜನಸಂಖ್ಯೆಯು ಹೆಚ್ಚಳ ಒಂದು ಸಮಸ್ಯೆಯಾಗಿರಲಿಲ್ಲ. ಜನನಗಳ ಸಂಖ್ಯೆ ಹೆಚ್ಚಾಗಿದ್ದರೂ, ಜನಸಂಖ್ಯೆ ತೀವ್ರವಾಗಿ ಬೆಳೆಯುತ್ತಿರಲಿಲ್ಲ. ಏಕೆಂದರೆ ಮರಣಗಳ ಸಂಖ್ಯೆಯು ಹೆಚ್ಚಾಗಿರುತ್ತಿತ್ತು. ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಮಂದಗತಿಯಲ್ಲಿತ್ತು. ಆಯಾ ದೇಶದ ಸಂಪನ್ಮೂಲಗಳು ಆಯಾ ದೇಶದ ಅಗತ್ಯಗಳನ್ನು ಪೂರೈಸುವಷ್ಟಿದ್ದುದರಿಂದ, ಜನಸಂಖ್ಯೆಯ ವಾರ್ಷಿಕ ಏರಿಕೆ ಒಂದು ಸಮಸ್ಯೆಯಾಗಿ ಪರಿಣಮಿಸುತ್ತಿರಲಿಲ್ಲ. ಆದರೆ 17ನೆ ಶತಮಾನದ ತರುವಾಯ, ಪಾಶ್ಚಿಮಾತ್ಯ ದೇಶಗಳಲ್ಲಿ ಜನಸಂಖ್ಯೆಯು ಬೆಳವಣಿಗೆ ತ್ವರಿತಗೊಳ್ಳಲು ಪ್ರಾರಂಭವಾಯಿತು. ಏಕೆಂದರೆ ಈ ಶತಮಾನದಲ್ಲಿ, ಕೃಷಿ, ಕೈಗಾರಿಕೆ ಮತ್ತು ಸಾಗಣೆಯಲ್ಲಿನ ತಾಂತ್ರಿಕ ಜ್ಞಾನ ಹೆಚ್ಚಿ, ಆಹಾರ ಹಾಗೂ ಇತರ ಜೀವನಾವಶ್ಯಕ ವಸ್ತುಗಳ ಉತ್ಪಾದನೆ ಅಧಿಕಗೊಂಡಿತು. ಆ ಪ್ರಯುಕ್ತ ಹೆಚ್ಚು ಜನರು ಸುಖಿ ಜೀವನ ನಡೆಸಲು ಸಾಧ್ಯವಾಯಿತು. ಅಧಿಕಗೊಂಡ ಜೀವನ ಸೌಲಭ್ಯಗಳು ಜನಸಂಖ್ಯೆಯ ಬೆಳವಣಿಗೆಗೆ ಪರೋಕ್ಷವಾಗಿ ದಾರಿ ಮಾಡಿಕೊಟ್ಟವು. ಉದಾಹರಣೆಗೆ 1650ರಲ್ಲಿ ಅಮೆರಿಕಾ ದೇಶದ ಜನಸಂಖ್ಯೆ ಕೇವಲ 10 ದಶಲಕ್ಷವಿತ್ತು. ಈ ಸಣ್ಣಗಾತ್ರದ ಜನಸಂಖ್ಯೆಯೂ ಕೂಡ ಆಹಾರಾಭಾವದಿಂದ ನರಳಬೇಕಾಗಿತ್ತು. ಏಕೆಂದರೆ ಅವರ ಕೃಷಿ ವಿಧಾನ ಸುಧಾರಿತವಾದುದಾಗಿರಲಿಲ್ಲ. ಆದರೆ ಅದೇ ಭೂಭಾಗ ಇಂದು 185 ದಶಲಕ್ಷ ಜನ ಸುಖಜೀವನ ನಡೆಸಲು ಸಹಕಾರಿಯಾಗಿದೆ. ಏಕೆಂದರೆ ತಾಂತ್ರಿಕ ಜ್ಞಾನವನ್ನು ಕೃಷಿ ಮತ್ತು ಕೈಗಾರಿಕೆಗೆ ಅಳವಡಿಸಿಕೊಂಡಿದ್ದರಿಂದ, ಭೂಮಿ ಮತ್ತು ಅನ್ಯ ಮೂಲಗಳಿಂದ ಅಧಿಕ ಸಂಪತ್ತು ಸೃಷ್ಟಿಯಾಗಲು ಪ್ರಾರಂಭವಾಯಿತು. ಕೃಷಿ ಭೂಮಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸುವ ಕಲೆಯನ್ನು ಅವರು ರೂಢಿಸಿಕೊಂಡಿದ್ದಾರೆ. ನೂರಕ್ಕೆ ಕೇವಲ ಎಂಟು ಜನ ಕೃಷಿಯಲ್ಲಿ ನಿರತರಾಗಿದ್ದರೂ, ತಮ್ಮ ದೇಶದ ಆಹಾರ ಬೇಡಿಕೆಯನ್ನು ಪೂರೈಸಿ, ಅನ್ಯ ದೇಶಗಳಿಗೆ ರಫ್ತು ಮಾಡುವಷ್ಟು ಆಹಾರೋತ್ಪಾದನೆ ಮಾಡಲು ಅವರು ಸಮರ್ಥರಾಗಿದ್ದಾರೆ. ಅಮೆರಿಕಾದಲ್ಲಿ ಆಹಾರದ ಕೊರತೆ ಇಲ್ಲದಿದ್ದುದರಿಂದ, 20ನೆಯ ಶತಮಾನದ ಆದಿ ಭಾಗದವರೆಗೆ ಜನಸಂಖ್ಯೆ ಸತತವಾಗಿ ಬೆಳೆಯಿತು. ಆದರೂ ಅದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಲಿಲ್ಲ. ಈಗ ಜನನ ನಿಯಂತ್ರಣ

ಕ್ರಮಗಳು ಬಳಕೆಯಲ್ಲಿರುವುದರಿಂದ ಈ ದೇಶದಲ್ಲಿ ಜನಸಂಖ್ಯೆ ತೀವ್ರವಾಗಿ ಬೆಳೆಯಲು ಅವಕಾಶವಿಲ್ಲ. 1790ರಲ್ಲಿ ಮೊದಲನೆಯ ಜನಗಣತಿ ನಡೆದಾಗ ಅವರ ಜನಸಂಖ್ಯೆ 4 ದಶಲಕ್ಷವಿತ್ತು. 1800 ರಲ್ಲಿ ಎರಡನೇ ಜನಗಣತಿ ನಡೆದಾಗ ಅಲ್ಲಿನ ಜನನ ಪ್ರಮಾಣ ಪ್ರತಿ ಸಾವಿರಕ್ಕೆ 55ರಷ್ಟಿತ್ತು. ಮರಣ ಪ್ರಮಾಣ 27 ರಷ್ಟಿತ್ತು. ಅಂದರೆ ವರ್ಷಕ್ಕೆ ಪ್ರತಿಸಾವಿರಕ್ಕೆ 28 ಜನರಂತೆ ಹೆಚ್ಚುತ್ತಿದ್ದರು. ಈ ಪ್ರಮಾಣ ಜನಸಂಖ್ಯೆ ತೀವ್ರವಾಗಿ ಬೆಳೆಯಲು ಕಾರಣವಾಯಿತು. ಆದರೆ ಈಗ ಜನನ ಹಾಗೂ ಮರಣ ಪ್ರಮಾಣ ತೀರಾ ಕಡಿಮೆಯಿದ್ದು, ವಾರ್ಷಿಕ ಹೆಚ್ಚಳ ಸಾವಿರಕ್ಕೆ ಸುಮಾರು 2 ಮಾತ್ರ. ಅಂದರೆ ಆ ದೇಶದ ಜನಸಂಖ್ಯಾಬೆಳವಣಿಗೆ ಸಂಪೂರ್ಣ ಹಿಡಿತದಲ್ಲಿದೆ ಎಂದಂತಾಯಿತು.

ಇದೇ ಅವಧಿಯಲ್ಲಿ, ಅಂದರೆ 1650ರಿಂದ 1900ರವರೆಗೆ ಐರೋಪ್ಯ ದೇಶಗಳಲ್ಲೂ ಜನಸಂಖ್ಯೆ ಅಗಾಧವಾಗಿ ಬೆಳೆಯಿತು. 1930ರ ತರುವಾಯ ಜನನ ನಿಯಂತ್ರಣ ವಿಧಾನಗಳು ಹೆಚ್ಚಾಗಿ ಬಳಕೆಯಲ್ಲಿ ಬಂದುದರಿಂದ ಕಳೆದ 4 ದಶಕಗಳಿಂದ ಆ ದೇಶಗಳ ಜನಸಂಖ್ಯೆ ತೀವ್ರವಾಗಿ ಹೆಚ್ಚುತ್ತಿಲ್ಲ. ಇಂಡಿಯಾ ದೇಶದ ಜನಸಂಖ್ಯೆ ಈ ಅವಧಿಯಲ್ಲಿ ಅಂದರೆ 1650ರಿಂದ 1800 ರವರೆಗೆ ಅಧಿಕಗೊಳ್ಳಲಿಲ್ಲ. 1800 ರಿಂದ 1900ರ ಅವಧಿಯಲ್ಲಿ ಜನಸಂಖ್ಯೆಯ ಬೆಳವಣಿಗೆ ಸ್ವಲ್ಪ ಚುರುಕುಗೊಂಡಿತು. ಅಲ್ಲಿಂದ ಮುಂದಿನ 30 ವರ್ಷಗಳಲ್ಲಿ ಜನಸಂಖ್ಯೆ ಶೇಕಡ 17ರಷ್ಟು ಹೆಚ್ಚಿತು. 1930-50ರ ಅವಧಿಯಲ್ಲಿ ಇನ್ನೂ ತೀವ್ರಗತಿಯಲ್ಲಿ ಬೆಳೆಯಿತು. ಈಗ ಜನನ ಪ್ರಮಾಣ 1000 ಕ್ಕೆ 40 ಕ್ಕಿಂತ ಕಡಿಮೆ ಇದ್ದರೂ, ಜನಸಂಖ್ಯೆ ಅಗಾಧವಾಗಿ ಬೆಳೆಯುತ್ತಿದೆ. ಏಕೆಂದರೆ ಮರಣಗಳ ಸಂಖ್ಯೆ ತೀವ್ರವಾಗಿ ಇಳಿಮುಖವಾಗುತ್ತಿದೆ. ಪರಿಣಾಮವಾಗಿ ವಾರ್ಷಿಕ ಏರಿಕೆ ಹೆಚ್ಚಾಗಿಯೇ ಉಳಿದಿದೆ. 1965 ರಲ್ಲಿ 475 ದಶಲಕ್ಷವಿದ್ದ ಜನಸಂಖ್ಯೆ 1971ರ ವೇಳೆಗೆ 547 ದಶಲಕ್ಷಕ್ಕೇರಿತು. ಇದೇ ಪ್ರಮಾಣದಲ್ಲಿ ಜನಸಂಖ್ಯೆ ಬೆಳೆಯಲು ಅವಕಾಶ ಕೊಟ್ಟರೆ, ಈ ದೇಶದ ಭವಿಷ್ಯ ಅತ್ಯಂತ ಕಳವಳಕಾರಿಯಾಗುವುದು.

1961ರ ಜನಗಣತಿಯ ಪ್ರಕಾರ 100ಕ್ಕೆ 23.5 ರಷ್ಟು ಪುರುಷರು, 7.5 ರಷ್ಟು ಸ್ತ್ರೀಯರೂ ಅಕ್ಷರಸ್ಥರು. ಶೇಕಡಾ 82ರಷ್ಟು ಜನ ಗ್ರಾಮಾಂತರ ವಾಸಿಗಳಾದ್ದರಿಂದ, ಮತ್ತು ಗ್ರಾಮಾಂತರ ಸ್ತ್ರೀಯರಲ್ಲಿ ವಿದ್ಯಾವಂತರ ಸಂಖ್ಯೆ ತೀರಾ ಕಡಿಮೆ ಇರುವುದರಿಂದ, ಜನನ ಪ್ರಮಾಣದಲ್ಲಿ ಶೀಘ್ರ ಇಳಿತಾಯ ನಿರೀಕ್ಷಿಸುವುದು ಕಷ್ಟ. ನಗರಗಳಿಗೆ ವಲಸೆ ಹೋಗುವ ಪ್ರವೃತ್ತಿ ಗ್ರಾಮಾಂತರ ವಾಸಿಗಳಲ್ಲಿ ಹೆಚ್ಚಾದರೆ, ಜನನ ಪ್ರಮಾಣದಲ್ಲಿ ಸ್ವಲ್ಪ ಇಳಿತ ಕಂಡುಬರಬಹುದು. ಆದರೆ ನಮ್ಮ ಜನರಲ್ಲಿ ಅಂಥ ಪ್ರವೃತ್ತಿಯು ಹೆಚ್ಚಾಗಿ ಬೆಳೆದಿಲ್ಲ. 1961ರ ಜನಗಣತಿಯ ಪ್ರಕಾರ ಇಂಡಿಯಾ ದೇಶದಲ್ಲಿ 10 ಲಕ್ಷ ಜನಸಂಖ್ಯೆಯುಳ್ಳ 7 ನಗರಗಳೂ, 1 ಲಕ್ಷ ಜನ ಸಂಖ್ಯೆಯುಳ್ಳ 107

ಪಟ್ಟಣಗಳೂ ಇದ್ದವು. ಈಗ ಇವುಗಳ ಸಂಖ್ಯೆಯಲ್ಲಿ ಹೆಚ್ಚೇನೂ ವ್ಯತ್ಯಾಸವಾಗಿಲ್ಲ. ಕೆಲವು ಕೈಗಾರಿಕಾ ಕೇಂದ್ರಗಳನ್ನು ಬಿಟ್ಟರೆ, ಉಳಿದ ನಗರಗಳೂ ಅಷ್ಟೇನೂ ಹೆಚ್ಚಾಗಿ ಬೆಳೆದಿಲ್ಲ, ಅಂದರೆ ಗ್ರಾಮಾಂತರ ವಾಸಿಗಳಲ್ಲಿ ನಗರಾಭಿಮುಖ ಪ್ರವೃತ್ತಿ ಹೆಚ್ಚಾಗಿ ಬೆಳೆದಿಲ್ಲವೆಂದು ಹೇಳಬಹುದು. ಹೀಗಾಗಿ ಜನನ ಸಂಖ್ಯೆಯಲ್ಲಿ ತೀವ್ರ ಇಳಿತ ನಿರೀಕ್ಷಿಸುವಂತಿಲ್ಲ.

ಇಂಡಿಯಾ ದೇಶದಲ್ಲಿ ಜನನ ಪ್ರಮಾಣ ಪ್ರತಿ ಸಾವಿರಕ್ಕೆ 35 ರಿಂದ 40 ರವರೆಗೆ ವ್ಯತ್ಯಾಸ ಹೊಂದುತ್ತಿರುತ್ತದೆ. ಈ ಹೆಚ್ಚಿನ ಪ್ರಮಾಣ ಮುಂದುವರಿಯುತ್ತಿರುವುದಕ್ಕೆ ಕೆಲವು ಕಾರಣಗಳಿವೆ.

ಮೊದಲನೆಯದಾಗಿ, ಬಹುಸಂಖ್ಯಾತ ಸ್ತ್ರೀ ಪುರುಷರು ಇಂದಿಗೂ ಚಿಕ್ಕ ವಯಸ್ಸಿನಲ್ಲಿ ವಿವಾಹವಾಗುತ್ತಿರುವುದು.

ಎರಡನೆಯದಾಗಿ, ಗ್ರಾಮಾಂತರ ಪ್ರದೇಶಗಳಲ್ಲಿ ಕುಟುಂಬ ಯೋಜನೆ ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದಿಲ್ಲದಿರುವುದು.

ಮೂರನೆಯದಾಗಿ, ಮರಣಗಳ ಸಂಖ್ಯೆ ತೀವ್ರವಾಗಿ ಇಳಿಮುಖವಾಗುತ್ತಿರುವುದು. 1901ರಲ್ಲಿ 1000ಕ್ಕೆ 42.6ರಷ್ಟಿದ್ದ ಮರಣಗಳು 1961ರ ವೇಳೆಗೆ 16ಕ್ಕೆ ಇಳಿದವು. ಜನಾರೋಗ್ಯ ಹಾಗೂ ವೈದ್ಯಕೀಯ ಸುಧಾರಣೆಯಿಂದ ಮಲೇರಿಯಾ, ಕ್ಷಯ, ಪ್ಲೇಗು, ಕಾಲರ ಮುಂತಾದ ಜಾಡ್ಯಗಳಿಂದ ಸಂಭವಿಸುತ್ತಿದ್ದ ಸಾವುಗಳು ಈಗ ತೀರಾ ಕಡಿಮೆಯಾಗಿವೆ. 1931 ರಲ್ಲಿ ಸರಾಸರಿ ಆಯುಃಪ್ರಮಾಣ 23 ವರ್ಷವಿದ್ದದ್ದು, ಈಗ ಸುಮಾರು 50 ವರ್ಷಕ್ಕೇರಿದೆ. ಈಗ ಜನಸಂಖ್ಯೆ ವರ್ಷಕ್ಕೆ ಶೇಕಡಾ 2.7 ರಂತೆ ಹೆಚ್ಚುತ್ತಿದೆ. ಇದೇ ಪ್ರಮಾಣದಲ್ಲಿ ಹೆಚ್ಚಲು ಅವಕಾಶ ಕೊಟ್ಟರೆ ಕ್ರಿ. ಶ. 2000 ವರ್ಷಕ್ಕೆ ಜನಸಂಖ್ಯೆ 100 ಕೋಟಿಯಾಗುತ್ತದೆ. ಆ ಪ್ರಯುಕ್ತ ಜನನ ನಿಯಂತ್ರಣದ ಅನುಷ್ಠಾನ ತೀರ ಅವಶ್ಯವಾಗಿದೆ.

ದೇಶದಲ್ಲಿ ಮಕ್ಕಳ ಮತ್ತು ಮುದುಕರ ಸಂಖ್ಯೆ ಹೆಚ್ಚಾದಾಗ, ಅವರನ್ನು ಪೋಷಿಸುವ ಹೊಣೆ ದುಡಿಮೆಯಲ್ಲಿರುವ ಕೆಲವೇ ಜನರ ಮೇಲೆ ಬೀಳುತ್ತದೆ. ನಮ್ಮ ದೇಶದಲ್ಲಿ ಸದ್ಯಕ್ಕೆ ಈ ಪರಿಸ್ಥಿತಿ ಇದ್ದು, ಅದು ಇನ್ನೂ ತೀವ್ರವಾಗುವ ಸಂಭವವಿದೆ. ಏಕೆಂದರೆ ನಮ್ಮ ದೇಶದಲ್ಲಿ ದುಡಿಮೆಯ ವಯೋಮಿತಿಯಲ್ಲಿರುವವರು (16 ವರ್ಷದಿಂದ 55 ವರ್ಷದವರೆಗೆ) ಶೇಕಡ 48 ಜನ ಮಾತ್ರ. ಉಳಿದ 52 ಜನರಲ್ಲಿ ಶೇಕಡ 40ರಷ್ಟು ಮಕ್ಕಳು, ಉಳಿದ 12 ರಷ್ಟು ಮುದುಕರು, ಇವರನ್ನು ಪೋಷಿಸುವ ಹೊಣೆ ಕೇವಲ 48 ಜನರ ಮೇಲಿದೆ. ಈ ಪ್ರಮಾಣ ಸಮಾಜಕ್ಕೆ ನಿಜವಾಗಿಯೂ ಹೆಚ್ಚಿನ ಹೊರೆ. ಜೊತೆಗೆ ಶೇಕಡ 48 ರಷ್ಟು ಜನ ಸಂತಾನ ಪ್ರಾಪ್ತಿಯ ವಯಸ್ಸಿನಲ್ಲಿರುವುದರಿಂದ, ಜನನ ಪ್ರಮಾಣದಲ್ಲಿ ತೀವ್ರ ಇಳಿತವನ್ನು ನಿರೀಕ್ಷಿಸುವುದು ತಪ್ಪೆನಿಸುತ್ತದೆ.

ಜನಸಂಖ್ಯೆ ಇನ್ನೂ ಹೆಚ್ಚಿದರೆ, ಬಡತನ ಇನ್ನೂ ವ್ಯಾಪಕವಾಗಬಹುದು. ನಿರುದ್ಯೋಗ – ಅದರಲ್ಲೂ ವಿದ್ಯಾವಂತ ತರುಣರ ನಿರುದ್ಯೋಗ, ಇನ್ನೂ ಹೆಚ್ಚ ಬಹುದು. ಮಕ್ಕಳ ಸಂಖ್ಯೆ ಹೆಚ್ಚಾದಾಗ, ಮಿತ ವರಮಾನದ ಕುಟುಂಬಗಳಿಗೆ, ಅವರ ಪೋಷಣೆ, ಶಿಕ್ಷಣ, ಮನರಂಜನೆ ವೆಚ್ಚ ನಿರ್ವಹಿಸಲು ಕಷ್ಟವಾದಾಗ, ಮಕ್ಕಳ ಮೇಲೆ ಕುಟುಂಬದ ಹಿಡಿತ ಕಡಿಮೆಯಾಗುತ್ತದೆ. ಇದರಿಂದ ಸ್ವೇಚ್ಛಾಚಾರ ಪ್ರವೃತ್ತಿ ಬೆಳೆದು, ಅಶಿಸ್ತು, ಬಾಲಾಪರಾಧ, ಅತ್ಯಾಚಾರ, ಹೊಣೆಗೇಡಿತನ, ಅಸಹಕಾರ ಮುಂತಾದ ಸಾಮಾಜಿಕ ಅನರ್ಥಗಳು ಹೆಚ್ಚಾಗುತ್ತವೆ.

ದೇಶದ ಆರ್ಥಿಕಾಭಿವೃದ್ಧಿಗೆ ಏರುತ್ತಿರುವ ಜನಸಂಖ್ಯೆ ಒಂದು ದೊಡ್ಡ ಅಡಚಣೆಯಾಗಿದೆ. ಜನರ ಜೀವನಮಟ್ಟ ಕಳೆದ 3 ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಸರ್ಕಾರ ನಿರೀಕ್ಷಿಸಿದಷ್ಟು ಸುಧಾರಿಸಲಿಲ್ಲ. ಅನ್ನ, ವಸ್ತ್ರ, ವಸತಿ, ವಿದ್ಯೆ ಹಾಗೂ ಆರೋಗ್ಯಗಳ ದೃಷ್ಟಿಯಿಂದ ನೋಡಿದಾಗ, ಬಹು ಸಂಖ್ಯಾತರ ಜೀವನಮಟ್ಟ ಕೆಳದರ್ಜೆಯಲ್ಲಿದೆ. ಸುಮಾರು 50 ಲಕ್ಷ ಜನ ಸತ್ವಭರಿತ ಆಹಾರದ ಕೊರತೆಯಿಂದ ನರುಳುತ್ತಿದ್ದಾರೆ. ಈಗ ನಮಗೆ ತಲಾ 20 ಗಜಕ್ಕಿಂತ ಕಡಿಮೆ ಬಟ್ಟೆ ದೊರೆಯುತ್ತದೆ. ವಸತಿ ಸೌಲಭ್ಯ ತೀರಾ ಅತೃಪ್ತಿಕರವಾಗಿದೆ. ಇನ್ನೂ ಶೇಕಡ 70 ರಷ್ಟು ಜನ ಅನಕ್ಷರಸ್ಥರಾಗಿದ್ದಾರೆ. ಹೆಚ್ಚುತ್ತಿರುವ ಮಕ್ಕಳ ಪ್ರಮಾಣಕ್ಕನುಗುಣವಾಗಿ, ಶಿಕ್ಷಣ ಸೌಲಭ್ಯವನ್ನೊದಗಿಸುವುದು ಸರ್ಕಾರಕ್ಕೆ ಕಷ್ಟವಾಗುತ್ತಿದೆ. ಪ್ರಜಾಪ್ರಭುತ್ವದ ಯಶಸ್ಸಿನ ದೃಷ್ಟಿಯಿಂದ ಶಿಕ್ಷಣ ಸೌಲಭ್ಯದ ವಿಸ್ತರಣೆ ಆಗಲೇಬೇಕಾಗಿದೆ. ಅದರಂತೆ ವೈದ್ಯಕೀಯ ಸೌಲಭ್ಯಗಳ ವಿಸ್ತರಣೆಯೂ ಆಗಬೇಕಾಗಿದೆ. ರಾಷ್ಟ್ರೀಯ ವರಮಾನದ ಹೆಚ್ಚಿನ ಪ್ರಮಾಣವನ್ನು ಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯಕ್ಕೆ ವಿನಿಯೋಗಿಸ ಬೇಕಾಗಿರುವುದರಿಂದ, ಇತರ ಜೀವನಾವಶ್ಯಕತೆಗಳನ್ನು ಪೂರೈಸಿಕೊಡಲು ಸರ್ಕಾರಕ್ಕೆ ಹಣದ ಅಡಚಣೆಯುಂಟಾಗುತ್ತದೆ. ಅನ್ಯ ದೇಶಗಳಿಂದ ಸಾಲ ಪಡೆಯುವುದು ಅನಿವಾರ್ಯವಾಗಿದೆ.

ಈ ದೇಶದ ಸಾಮಾನ್ಯ ಪ್ರಜೆಯ ಆದಾಯ ತೀರ ಕಡಿಮೆ. ಎರಡು ಯೋಜನೆಯ ಅವಧಿಯಲ್ಲಿ ರಾಷ್ಟ್ರೀಯ ವರಮಾನ ಶೇಕಡ 40ರಷ್ಟು ಹೆಚ್ಚಿದರೂ, ವ್ಯಕ್ತಿಯ ತಲಾ ವರಮಾನ ಸಾಕಷ್ಟು ಹೆಚ್ಚಲಿಲ್ಲ. ಏಕೆಂದರೆ ಹೆಚ್ಚಿದ ವರಮಾನ, 10 ವರ್ಷಗಳಲ್ಲಿ ಹೆಚ್ಚಾದ ಜನಸಂಖ್ಯೆಗೆ ಬಳಕೆಯಾಯ್ತು. ಆರ್ಥಿಕವಾಗಿ ದೇಶ ಸ್ವಲ್ಪ ಮಾತ್ರ ಮುನ್ನಡೆಯಿತು. ಈಗಿನ ಪ್ರಮಾಣದಲ್ಲಿ ಜನಸಂಖ್ಯೆ ಬೆಳೆಯಲು ಬಿಟ್ಟರೆ, ನಮ್ಮ ಯಾವ ಯೋಜನೆಯೂ ನಿರೀಕ್ಷಿಸಿದ ಫಲ ನೀಡಲಾರದು. ಆ ಪ್ರಯುಕ್ತ 'ಜನನ ನಿಯಂತ್ರಣ 'ಇನ್ನೂ ಕೆಲವು ದಶಕಗಳವರೆಗೆ ಒಂದು ರಾಷ್ಟ್ರೀಯ ನೀತಿಯಾಗಿ ಮುಂದುವರೆಯುವುದು ಅನಿವಾರ್ಯ. ಇಲ್ಲವಾದರೆ ಭವಿಷ್ಯ ನಿರಾಶಾದಾಯಕ

ವಾಗುತ್ತದೆ. "ಗರೀಬಿ ಹಠಾವೋ" ಘೋಷಣೆ ಕಾರ್ಯರೂಪಕ್ಕೆ ಇಳಿಯುವುದೇ ಇಲ್ಲ.

ಸದ್ಯಕ್ಕೆ ಅತ್ಯಂತ ಪ್ರಮುಖ ಸಮಸ್ಯೆಗಳೆಂದರೆ, ನಿರುದ್ಯೋಗ ಮತ್ತು ಆಹಾರದ ಕೊರತೆ. ಆಹಾರೋತ್ಪಾದನೆ ಕಳೆದ 26 ವರ್ಷಗಳಲ್ಲಿ 52 ದಶ ಲಕ್ಷ ಟನ್‌ಗಳಷ್ಟು ಹೆಚ್ಚಾದರೂ ಕೂಡ ಈ ಸಮಸ್ಯೆ ಬಗೆಹರಿಯಲಿಲ್ಲ. ಏಕೆಂದರೆ ಇದೇ ಅವಧಿಯಲ್ಲಿ ಜನಸಂಖ್ಯೆ 21 ಕೋಟಿಯಷ್ಟು ಹೆಚ್ಚಾಗಿ ಬೆಳೆಯಿತು. ಆದುದರಿಂದ ಈ ಸಮಸ್ಯೆ ಹಾಗೇ ಉಳಿಯಿತು. ಒಂದು ನಿರ್ದಿಷ್ಟ ಅವಧಿಯವರೆಗೆ, ಆಹಾರೋತ್ಪಾದನೆಯನ್ನು ಜನಸಂಖ್ಯೆಯ ಏರಿಕೆಗಿಂತ ಮಿಗಿಲಾಗಿ ಅಧಿಕಗೊಳಿಸ ಬಹುದು. ಆದರೆ ಆಹಾರೋತ್ಪಾದನೆ ಸಂತಾನೋತ್ಪತ್ತಿಯೊಡನೆ ಸದಾಕಾಲವೂ ಸ್ಪರ್ಧೆ ನಡೆಸಲಾರದೆಂಬುದು ವಾಸ್ತವ ಸಂಗತಿ. ಆದ್ದರಿಂದ ಜನಸಂಖ್ಯೆಯ ಬೆಳವಣಿಗೆ ಮೇಲೆ ಹತೋಟಿಯನ್ನಿಡುವುದು ಅನಿವಾರ್ಯವಾಗಿದೆ. ಜನನ ನಿಯಂತ್ರಣವಿಲ್ಲದೆ, ಬರಿಯ ಉತ್ಪಾದನೆಯನ್ನು ಹೆಚ್ಚಿಸುವುದರಿಂದ ಈ ಸಮಸ್ಯೆಯನ್ನು ಬಗೆ ಹರಿಸಬಹುದೆಂದು ಭಾವಿಸುವವರು ಇನ್ನೂ ಇದ್ದಾರೆ. ಸಂಪನ್ಮೂಲಗಳು ಹೇರಳ ವಾಗಿದ್ದರೆ, ಸತತ ಪ್ರಯತ್ನದಿಂದ ದೇಶದ ಉತ್ಪಾದನೆಯನ್ನೇನೋ ಹೆಚ್ಚಿಸಬಹುದು. ಆದರೆ ಹೆಚ್ಚುವರಿ ಉತ್ಪಾದನೆ ಹೆಚ್ಚಿದ ಜನಸಂಖ್ಯೆಗೆ ಸರಿದೂಗುವುದರಿಂದ ಜನರ ಜೀವನಮಟ್ಟ ಇದ್ದಲ್ಲಿಯೇ ಉಳಿಯುತ್ತದೆ. ಸ್ವಲ್ಪ ಹೆಚ್ಚಿದ್ದರೂ ಅದು ತಾತ್ಕಾಲಿಕ ವಾಗಿರುತ್ತದೆ. ಏಕೆಂದರೆ ದೇಶದ ಸಂಪನ್ಮೂಲಗಳು ಒಂದು ಗರಿಷ್ಟ ಮಿತಿ ಗೊಳಪಟ್ಟಿರುತ್ತವೆ. ಒಂದು ಅಥವಾ ಎರಡು ದಶಕಗಳಲ್ಲಿ ಅವುಗಳ ಪೂರ್ಣ ಬಳಕೆಯಾಗಬಹುದು. ಅಲ್ಲಿಯವರೆಗೆ ರಾಷ್ಟ್ರೀಯ ವರಮಾನವೂ ಹೆಚ್ಚುತ್ತಾ ಹೋಗಬಹುದು. ಆದರೆ ಸಂಪತ್ಸಾಧನೆಗಳ ಪೂರ್ಣ ಬಳಕೆಯಾದ ಮೇಲೆ ಆದಾಯ ಪೂರ್ವಯೋಜಿತ ರೀತಿಯಲ್ಲಿ ಹೆಚ್ಚಲಾರದು. ಅಲ್ಲಿಯವರೆಗೆ ಅನಿರ್ಬಾಧಿತವಾಗಿ ಬೆಳೆದ ಜನಸಂಖ್ಯೆ ಸ್ಫೋಟಗೊಳ್ಳುವ ಪರಿಸ್ಥಿತಿಯನ್ನು ತಲುಪಬಹುದು. ಆಗ ಜನಸಂಖ್ಯಾ ಸಮಸ್ಯೆ ಇನ್ನೂ ಉಲ್ಬಣವಾಗುತ್ತದೆ. ಅಂತರರಾಷ್ಟ್ರೀಯ ನೆರವಿಲ್ಲದೆ ಅದನ್ನು ಪರಿಹರಿಸುವುದು ಅಸಾಧ್ಯವಾಗುತ್ತದೆ. ಅನ್ಯ ದೇಶದ ಆರ್ಥಿಕ ನೆರವನ್ನು ಪಡೆಯುವುದು ತಪ್ಪಿಲ್ಲದಿದ್ದರೂ, ಬಹುಕಾಲ ಅದನ್ನೇ ನಂಬಿಕೊಂಡಿರುವುದು ಶ್ರೇಯಸ್ಕರವಲ್ಲ. ದೀರ್ಘಾವಧಿ ಆರ್ಥಿಕ ನೆರವಿನ ಸಾಧಕ ಬಾಧಕಗಳನ್ನು ತೀವ್ರವಾಗಿ ಪರಿಗಣಿಸಬೇಕಾಗುತ್ತದೆ. ಇಂಥಹ ಭಾರಿ ಪ್ರಮಾಣದ ಸಾಲದ ಅಸಲು, ಬಡ್ಡಿಗಾಗಿ ರಾಷ್ಟ್ರೀಯ ವರಮಾನದ ಒಂದು ನಿರ್ದಿಷ್ಟ ಪ್ರಮಾಣ ಪ್ರತಿವರ್ಷವೂ ಸಂದಾಯವಾಗಬೇಕಾಗುತ್ತದೆ. ಇದರಿಂದ ಕೈಗಾರಿಕೆ ಹಾಗೂ ಇತರೆ ಉದ್ದಿಮೆಗಳಲ್ಲಿ ತೊಡಗಿಸಲು ಬಂಡವಾಳದ ಕೊರತೆ ಬೀಳುತ್ತದೆ. ಆರ್ಥಿಕ ಬಿಕ್ಕಟ್ಟು ತಲೆದೋರಿದಾಗ ಆಂತರಿಕ ಭದ್ರತೆಗೆ ಧಕ್ಕೆಯುಂಟಾತ್ತದೆ. ಅತಿಯಾದ ಪರಾವಲಂಬನೆಯಿಂದ

ರಾಷ್ಟ್ರದ ಸ್ವಾತಂತ್ರ್ಯಕ್ಕೆ ಗಂಡಾಂತರ ಉಂಟಾಗುತ್ತದೆ. ಇದು ಜನಸಂಖ್ಯೆಯು ಅತಿ ಹೆಚ್ಚಳದಿಂದ, ಅಂತಿಮವಾಗಿ ಸಂಭವಿಸಬಹುದಾದಂತಹ ಅನರ್ಥ. ಈ ಅನರ್ಥ ಸಂಭವಿಸದಿದ್ದರೂ, ಕಡು ಬಡತನ, ನಿರುದ್ಯೋಗ, ತತ್ಪರಿಣಾಮವಾದ ಅತೃಪ್ತಿ ಸಮಾಜದಲ್ಲಿ ಅಶಾಂತಿಗೆ ದಾರಿ ಮಾಡಿ ಕೊಡುತ್ತವೆ.

(ಆಕಾಶವಾಣಿಯ ಕೃಪೆಯಿಂದ)

ಕ್ಷಯರೋಗ ಮತ್ತು ಗರ್ಭಿಣಿಯರು

ವೈ. ರಾಜಶೇಖರ್

ಕ್ಷಯರೋಗವು ಒಬ್ಬರಿಂದ ಒಬ್ಬರಿಗೆ ಹರಡುವ ಅಂಟುಜಾಡ್ಯವೇ ಹೊರತು ವಂಶಪಾರಂಪರ್ಯವಾಗಿ ಬರುವ ರೋಗವಲ್ಲ. ಆದ್ದರಿಂದ ಈ ಖಾಯಿಲೆಯು ಯಾರಿಗಾದರೂ ಯಾವಾಗ ಬೇಕಾದರೂ ಬರಬಹುದು. ನಮ್ಮ ಭಾರತ ದೇಶದಲ್ಲಿ ಸುಮಾರು 70–80 ಲಕ್ಷ ಜನರು ಕ್ಷಯರೋಗದಿಂದ ನರಳುತ್ತಿದ್ದಾರೆ. ಪ್ರತಿ ವರ್ಷವೂ ಸುಮಾರು 5 ಲಕ್ಷ ಜನರು ಸಾಯುತ್ತಿದ್ದಾರೆ.

ಇತ್ತೀಚಿನ ಸಂಶೋಧನೆಗಳಿಂದ ಕ್ಷಯರೋಗದ ವಿಚಾರವಾಗಿ ಕೆಲವು ವಿಷಯಗಳು ತಿಳಿದು ಬಂದಿವೆ. ಅವು ಯಾವುವೆಂದರೆ, ಕ್ಷಯರೋಗವು ಕ್ಷಯಾಣು ಗಳಿಂದ ಕೆಮ್ಮು ಉಗುಳುಗಳ ಮೂಲಕದಿಂದಲೂ ಅಥವ ಆಹಾರಪದಾರ್ಥಗಳ ಮೂಲಕವೂ ಮತ್ತು ಚರ್ಮದ ಸಂಪರ್ಕದಿಂದಲೂ ಒಬ್ಬರಿಂದೊಬ್ಬರಿಗೆ ಹರಡು ತ್ತದೆ. ಕ್ಷಯರೋಗವು ನಗರಗಳಲ್ಲೇ ಅಲ್ಲದೆ ಹಳ್ಳಿಗಳಲ್ಲಿಯೂ ಸಹ ಒಂದೇ ಪ್ರಮಾಣದಲ್ಲಿ ಹರಡಿರುತ್ತದೆ. ಹೆಂಗಸರಿಗಿಂತಲೂ ಗಂಡಸರೇ ಈ ರೋಗದಿಂದ ಹೆಚ್ಚಾಗಿ ನರಳುತ್ತಾರೆ. ಆದರೆ ಹೆಚ್ಚಾಗಿ 13ರಿಂದ 40 ವರ್ಷಗಳ ವರೆಗಿನ ಹೆಂಗಸರು ಈ ಖಾಯಿಲೆಗೆ ತುತ್ತಾಗಿರುತ್ತಾರೆ. ಕ್ಷಯರೋಗವು ಬಡವ-ಬಲ್ಲಿದ ಹೆಣ್ಣು-ಗಂಡು ಅಬಾಲವೃದ್ಧರಾದಿಯಾಗಿ ಎಲ್ಲರಲ್ಲಿಯೂ ಹರಡಿರುತ್ತದೆ. ಆದರೆ ಎಲ್ಲಿ ಬಡತನ ಹೆಚ್ಚಾಗಿದೆಯೋ, ಎಲ್ಲಿ ನೈರ್ಮಲ್ಯವಿರುವುದಿಲ್ಲವೋ ಅಲ್ಲಿ ಪ್ರಬಲವಾಗಿ ಹರಡಿರುತ್ತದೆ. ಇತ್ತೀಚೆಗೆ ದೊರಕುತ್ತಿರುವ ಪ್ರಭಾವಶಾಲಿ ಕ್ಷಯರೋಗ ನಿರೋಧಕ ಔಷಧಿಗಳ ಸೇವನೆಯಿಂದ ಈ ರೋಗವನ್ನು ಗುಣಪಡಿಸಿಕೊಳ್ಳಬಹುದು. ಅಲ್ಲದೆ ಈ ರೋಗವು ಇತರರಿಗೆ ಹರಡದಂತೆ ತಡೆಗಟ್ಟಿ ರೋಗವನ್ನೇ ನಿರ್ಮೂಲ ಮಾಡಬಹುದು.

ಇತ್ತೀಚಿನ ಸಂಶೋಧನೆಯು ಪಟ್ಟಣಗಳಲ್ಲಿರುವ 20 ವರುಷಕ್ಕೆ ಮೇಲ್ಪಟ್ಟ ಯುವಕ ಯುವತಿಯರಲ್ಲಿ ಸುಮಾರು ಶೇಕಡಾ 90-95 ಜನರಲ್ಲಿ ಈ ರೋಗದ ಸೋಂಕು ಇರುವ ವಿಷಯುವನ್ನು ಮನದಟ್ಟು ಮಾಡಿಕೊಟ್ಟಿದೆ. ಕ್ಷಯರೋಗವು ಇಷ್ಟು ವ್ಯಾಪಕವಾಗಿ ಹರಡಿರುವುದಲ್ಲದೆ, ಅದು ಯುವಜನಾಂಗವನ್ನು ಅವರ ಸಂತಾನಯೋಗ್ಯ ಪ್ರಾಯದಲ್ಲೇ (ಅಂದರೆ youthful reproductive period)

ಅತಿಯಾಗಿ ನರಳುವಂತೆ ಮಾಡುತ್ತದೆ. ಹೆಂಗಸರಲ್ಲಿಯೂ ಸಹ ಹಿಂದೆ ತಿಳಿಸಿದಂತೆ, 13 – 40 ವರ್ಷ ವಯಸ್ಸಿನಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಈ ವಯಸ್ಸಿನಲ್ಲೇ ಹೆಂಗಸರು ಮಕ್ಕಳನ್ನು ಹೆರುವ ಕಾಲ.

ಕ್ಷಯರೋಗವು ಹರಡುವ ರೀತಿಯನ್ನು ನೋಡಿದರೆ ಈ ರೋಗವು ಚಿಕ್ಕ ವಯಸ್ಸಿನಲ್ಲಿ ಗಂಡು ಹೆಣ್ಣೆಂಬ ಭೇದಭಾವವಿಲ್ಲದೆ ಒಂದೇ ಸಮನಾಗಿ ಹರಡುತ್ತದೆ. ಆದರೆ 13 ವರ್ಷ ವಯಸ್ಸಿನ ನಂತರ ಕ್ಷಯರೋಗವು ಹೆಂಗಸರಿಗೆ ಬಲು ಬೇಗ ಬರುವುದೇ ಅಲ್ಲದೆ, ಅತಿ ಜಾಸ್ತಿಯಾಗಿ 40 ವರ್ಷಗಳವರೆವಿಗೂ ಹರಡುವ ಸಂಭವವೇ ಹೆಚ್ಚಾಗಿ ಕಂಡುಬರುತ್ತದೆ. ಏಕೆಂದರೆ ಹೆಂಗಸರಲ್ಲಿ 13–14 ವರ್ಷಗಳ ನಂತರ ವಯೋಧರ್ಮಕ್ಕೆ ಅನುಗುಣವಾಗಿ ಶರೀರದಲ್ಲಿ ಅನೇಕ ಲೈಂಗಿಕ ಬದಲಾವಣೆಗಳೂ, ನಾಳಗಳಿಲ್ಲದ ಗ್ರಂಥಿಗಳ ರಸೋತ್ಪಾದನೆಗಳು ಕಾರಣವಾಗಿರುತ್ತದೆ. ಬಹುಶಃ ಈ ರಸೋತ್ಪಾದನೆಗಳು ಕ್ಷಯರೋಗ ತಗುಲಲು ಸಹಾಯಮಾಡಬಹುದು. ಅಲ್ಲದೆ ಸಾಮಾನ್ಯವಾಗಿ ಈ ವಯಸ್ಸಿನಲ್ಲಿ ಹೆಂಗಸರು ಮದುವೆಯಾಗಿ, ಮಕ್ಕಳನ್ನು ಹೆರುತ್ತಾರೆ. ಪ್ರತಿಯೊಂದು ಹೆರಿಗೆಯೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಶರೀರದ ಶಕ್ತಿಯನ್ನು ಕುಂದಿಸುವುದೇ ಅಲ್ಲದೆ ಮಕ್ಕಳ ಪೋಷಣೆ, ಸಂಸಾರದ ಭಾರ ಮುಂತಾದವುಗಳೂ ಸಹ ಶರೀರದ ಶಕ್ತಿಯನ್ನು ಮತ್ತೂ ಕುಂದಿಸಿ ಕ್ಷಯರೋಗಕ್ಕೆ ತುತ್ತಾಗುವಂತೆ ಮಾಡುತ್ತವೆ. ಕ್ಷಯರೋಗ ತಗುಲಿದ ನಂತರ ಸ್ತ್ರೀಯರು ಗರ್ಭಿಣಿಯರಾಗುವ ಸಂಭವ ಕಡಿಮೆಯಾಗುತ್ತದೆ. ಏಕೆಂದರೆ ಕ್ಷಯರೋಗವು ಶ್ವಾಸಕೋಶವೊಂದೇ ಅಲ್ಲದೆ, ಶರೀರದ ಎಲ್ಲ ಅವಯವಗಳಿಗೂ ತಗಲುವ ಸಂಭವವಿರುತ್ತದೆ. ಹಾಗೆಯೇ ಜನನೇಂದ್ರಿಯಗಳೂ ಸಹ ಈ ರೋಗದಿಂದ ಪೀಡಿತವಾಗಿರುತ್ತವೆ. ಕೆಲವು ಸ್ತ್ರೀಯರಲ್ಲಿ ಬಂಜೆತನಕ್ಕೆ ಗರ್ಭಕೋಶ ಇಲ್ಲವೇ ಅಂಡನಾಳಗಳ (Fellopian tubes) ಕ್ಷಯವೇ ಅತಿ ಮುಖ್ಯ ಕಾರಣ. ಆದರೆ ಇತ್ತೀಚಿನ ಪರಿಣಾಮಕಾರಿಯಾದ ಔಷಧಿಯ ಸೇವನೆಯಿಂದ ಈ ಖಾಯಿಲೆಯು ವಾಸಿಯಾಗುವುದಲ್ಲದೆ ಅನೇಕರು ಗರ್ಭಧರಿಸುವರು ಮತ್ತು ಆರೋಗ್ಯವಂತ ಮಕ್ಕಳನ್ನೂ ಹೆರುವರು.

40 ವರ್ಷಗಳ ನಂತರ ಹೆಂಗಸರಲ್ಲಿ ಕ್ಷಯರೋಗದ ಸೋಂಕು ಕಡಿಮೆಯಾಗುತ್ತಾ ಹೋಗುತ್ತದೆ. ಇದು ಗಂಡಸರಲ್ಲಿ ಕಂಡುಬರುವುದಕ್ಕೆ ವ್ಯತಿರಿಕ್ತವಾಗಿರುತ್ತದೆ. ಇದಕ್ಕೆ ಬಹುಶಃ ನಾಳಗಳಿಲ್ಲದ ಗ್ರಂಥಿಗಳ ರಸೋತ್ಪಾದನೆಯಲ್ಲಿ ವ್ಯತ್ಯಾಸವಾಗಿ, ಮುಟ್ಟು ನಿಲ್ಲುವಿಕೆ, ಗರ್ಭಧರಿಸದೇ ಇರುವಿಕೆ ಮುಂತಾದವುಗಳು ಕ್ಷಯರೋಗವನ್ನು ತಡೆಗಟ್ಟಲು ಸಹಾಯ ಮಾಡಬಹುದು. ಅಲ್ಲದೆ ಮಕ್ಕಳನ್ನು ಹೆರುವ ಸಂಭವ ಕಡಿಮೆಯಾಗುವುದರಿಂದ ಹೆರಿಗೆಯಿಂದಾಗುವ ತೊಂದರೆಗಳಿಲ್ಲದಿರುವಿಕೆ ಮತ್ತು

ಪ್ರಾಯಶಃ ಸಂಸಾರದ ಹೊಣೆಯೂ ಅಷ್ಟಾಗಿ ಹೆಚ್ಚಾಗಿಲ್ಲದಿರುವಿಕೆ ಇವುಗಳು ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮವನ್ನು ಬೀರಿ, ಕ್ಷಯರೋಗ ತಗುಲದಂತೆ ಸಹಾಯ ಮಾಡಬಹುದು.

ಗರ್ಭವತಿಯರಾದವರಿಗೆ ಶ್ವಾಸಕೋಶಕ್ಷಯ ಕಂಡುಬಂದರೆ, ಆಗ ಅವರು ಕೆಲವು ಮುಂಜಾಗರೂಕತೆ ಕ್ರಮಗಳನ್ನು ವಹಿಸಬೇಕು. ಕ್ಷಯರೋಗಪೀಡಿತರಾದ ಮಹಿಳೆಯರು ಗರ್ಭವತಿಯರಾದಾಗ ಮೊದಲ 8 ವಾರಗಳಲ್ಲಿ ಗರ್ಭಪಾತಮಾಡಿಸಿ ಕೊಂಡರೆ ಒಳ್ಳೆಯದು. ಏಕೆಂದರೆ ಆಗ ರಕ್ತಸ್ರಾವ ಮುಂತಾದುವುಗಳಿಂದ ಶರೀರದ ಮೇಲೆ ಹೆಚ್ಚಿಗೆ ದುಷ್ಪರಿಣಾಮಗಳು ಆಗುವುದು ಅಸಂಭವ. ಆದರೆ 10 ವಾರಗಳ ನಂತರ ಗರ್ಭಪಾತಮಾಡಿಸಿಕೊಳ್ಳುವುದು ಬಹಳ ಅಪಾಯಕಾರಿ. ಈ ಸಮಯದಲ್ಲಿ, ಗರ್ಭಿಣಿ ಸ್ತ್ರೀಯರು ಹಸಿವಿಲ್ಲದೇ ಇರುವಿಕೆ, ಬೆಳಗಿನ ಹೊತ್ತು ವಾಕರಿಕೆ ಇಲ್ಲವೆ ವಾಂತಿ ಇವುಗಳಿಂದ ಆರೋಗ್ಯದ ಮಟ್ಟ ಕೀಳಾಗಿರುವಾಗ, ಗರ್ಭಪಾತ ಮಾಡಿಸಿಕೊಂಡರೆ, ಅತಿ ರಕ್ತಸ್ರಾವ, ನಿಶ್ಶಕ್ತಿ, ನಂಜು ಮುಂತಾದವುಗಳಿಗೆ ಆಸ್ಪದ ಕೊಟ್ಟಂತಾಗಿ, ಕ್ಷಯವು ಉಲ್ಬಣವಾಗುವುದಕ್ಕೆ ಕಾರಣವಾಗುತ್ತದೆ. 10–12 ವಾರಗಳ ನಂತರ ಗರ್ಭವನ್ನು ಬೆಳೆಯಲು ಬಿಡುವುದು ಒಳ್ಳೆಯದು. ಏಕೆಂದರೆ ಕೆಲವು ನಾಳಗಳಿಲ್ಲದ ಗ್ರಂಥಿಗಳ (Ovary, Adrenal coretx, Pituitary) ರಸೋತ್ಪಾದನೆಗಳು ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮವನ್ನು ಬೀರುತ್ತವೆ. ಅಲ್ಲದೆ ಗರ್ಭವು ದಿನೇ ದಿನೇ ಬೆಳೆಯುತ್ತಿರುವುದರಿಂದ ಶ್ವಾಸಕೋಶದ ಕ್ಷಯವು ಬೇಗ ವಾಸಿ ಯಾಗಲು ಸಹಾಯವಾಗುತ್ತದೆ. ಶ್ವಾಸಕೋಶದ ಕ್ಷಯವು ಎಷ್ಟೇ ಉಲ್ಬಣ ವಾಗಿದ್ದರೂ ಮತ್ತು ಅವುಗಳಲ್ಲಿ ಅನೇಕ ರೂಪಗಳಿದ್ದರೂ ಸಹ, ವಾಸಿಯಾಗುವ ಸಂಭವವೇ ಹೆಚ್ಚು. ಏಕೆಂದರೆ ಹೊಟ್ಟೆಗೆ ಗಾಳಿ ತುಂಬಿ ವಪೆಯು ಮೇಲ್ಭಾಗಕ್ಕೆ ಹೋಗುವಂತೆ ಮಾಡುವ ಒಂದು ಬಗೆಯ ಚಿಕಿತ್ಸಾಕ್ರಮವಿದೆ. ಇದಕ್ಕೆ ಇಂಗ್ಲೀಷಿನಲ್ಲಿ Pneumoperitoneum ಎಂದು ಕರೆಯುತ್ತಾರೆ. ಬೆಳೆಯುತ್ತಿರುವ ಗರ್ಭಕೋಶವೂ ಸಹ ವಪೆಗಳನ್ನು ಮೇಲಕ್ಕೆ ದಿನೇ ದಿನೇ ಹೋಗುವಂತೆ ಮಾಡಿ, ಶ್ವಾಸಕೋಶಗಳನ್ನು ಒತ್ತುವಂತೆ ಮಾಡಿ, ಖಾಯಿಲೆಗೆ ಒಂದು ರೀತಿ ವಿಶ್ರಾಂತಿ ಕೊಟ್ಟು, ತೂತುಗಳಿದ್ದರೆ ಅವುಗಳು ಮುಚ್ಚಿಕೊಳ್ಳುವಂತೆ ಸಹಾಯಮಾಡಿ, ಕ್ಷಯರೋಗವು ವಾಸಿಯಾಗುವಂತೆ ಮಾಡುತ್ತದೆ. ಆದರೆ ಎಲ್ಲ ಕ್ಷಯರೋಗಿ ಮಹಿಳೆಯರನ್ನೂ ಗರ್ಭ ಧರಿಸುವಂತೆ ಪ್ರೋತ್ಸಾಹಿಸಬೇಕೆಂದಲ್ಲ. ಏಕೆಂದರೆ ಹೆರಿಗೆಯಾದನಂತರ ಅನೇಕ ತರಹ ತೊಂದರೆಗಳು ಕಾಣಿಸಿಕೊಳ್ಳುವ ಸಂಭವವೇ ಜಾಸ್ತಿ. ಹೆರಿಗೆಯಾದ ತಕ್ಷಣ, ಗರ್ಭಕೋಶವು ಕುಗ್ಗುವುದರಿಂದ, ಹೊಟ್ಟೆಯಲ್ಲಿನ ಒತ್ತಡ ಕಡಿಮೆಯಾಗಿ, ವಪೆಗಳು ಕೆಳಗೆ ಬರುವುದರಿಂದ, ಶ್ವಾಸಕೋಶವು ಹಿಗ್ಗಿ ಅದರಲ್ಲಿ ಮುಚ್ಚಿಕೊಂಡಿದ್ದ ತೂತುಗಳು ಪುನಃ ಕಾಣಿಸಿಕೊಳ್ಳುವ ಸಂಭವ ಜಾಸ್ತಿ. ಅಲ್ಲದೆ ಹೆಚ್ಚು ರಕ್ತಸ್ರಾವವಾಗುವುದರಿಂದ ನಿಶ್ಶಕ್ತಿ, ಆಲಸ್ಯ, ಮುಂತಾದುವುಗಳೇ ಅಲ್ಲವೆ, ನಂಜು ತಗುಲಿದರೆ ಕ್ಷಯರೋಗವು

ಉಲ್ಬಣವಾಗುತ್ತದೆ. ಮಗುವಿನ ಪೋಷಣೆಯ ದೆಸೆಯಿಂದ ರೋಗಿಗೆ ವಿಶ್ರಾಂತಿಗಿಂತ ಶ್ರಮವೇ ಜಾಸ್ತಿಯಾಗಿ ರೋಗವು ಜಾಸ್ತಿಯಾಗಲು ಅನುಕೂಲವಾಗುತ್ತದೆ. ಮಗುವಿಗೆ ಎದೆಹಾಲು ಕೊಡುವುದರಿಂದ ರೋಗಿಯ ಶಕ್ತಿಯು ಮತ್ತಷ್ಟು ಕುಂದುತ್ತದೆ. ಮಗುವಿಗೂ ಸಹ ತಾಯಿಯಿಂದ ಕ್ಷಯರೋಗವು ಹರಡುವ ಸಂಭವವೂ ಇರುತ್ತದೆ. ಏಕೆಂದರೆ ಮಗುವಿಗೆ ಎದೆಹಾಲನ್ನು ಕೊಡುವ ಸಂದರ್ಭದಲ್ಲಿ ರೋಗಿಯಾದ ತಾಯಿಯು ಕೆಮ್ಮಿದರೆ, ಕ್ಷಯಾಣುಗಳು ಮಗುವಿನ ಶ್ವಾಸಕೋಶಗಳಿಗೆ ಹರಡುವ ಸಂಭವ ಜಾಸ್ತಿ. ಕ್ಷಯಾಣುಗಳು ಹಾಲಿನ ಮೂಲಕ ಮಗುವಿನ ಶರೀರವನ್ನು ಹೊಗುವ ಸಂಭವವಿಲ್ಲದಿಲ್ಲ. ಆದುದರಿಂದ ಶಿಶುಗಳಿಗೆ ಕ್ಷಯರೋಗ ಪೀಡಿತರಾದ ತಾಯಂದಿರು ತಮ್ಮ ಎದೆಹಾಲನ್ನು ಕೊಡಬಾರದು. ತಾಯಿಗೆ ಮಗುವಿನ ಪೋಷಣೆಯ ಜವಾಬ್ದಾರಿಯನ್ನು ತಪ್ಪಿಸಿ, ಪೂರ್ಣವಿರಾಮವನ್ನು ಕೊಡಬೇಕು. ಒಳ್ಳೆಯ ಆಹಾರ ಕೊಡಬೇಕು. ಈ ಕ್ರಮಗಳಿಂದ ತಾಯಿಯ ಆರೋಗ್ಯ ಕೆಡಲು ಅವಕಾಶವಿರುವುದಿಲ್ಲ.

ಅನೇಕ ಜನರಲ್ಲಿ, ಗರ್ಭಿಣಿಸ್ತ್ರೀಯರು ಕ್ಷಯರೋಗದ ವಿರುದ್ಧ ಉಪಯೋಗಿಸುವ ಔಷಧಿಗಳನ್ನು ತೆಗೆದುಕೊಂಡರೆ ಗರ್ಭದಲ್ಲಿರುವ ಮಗುವಿಗೆ ತೊಂದರೆಯಾಗುತ್ತೆಂಬ ಭೀತಿ ಇದೆ. ಇದು ಸರಿಯಲ್ಲ. ಗರ್ಭಿಣಿ ಸ್ತ್ರೀಯರು ಔಷಧಿಗಳನ್ನು ದಿನವೂ ಹೆರಿಗೆಯಾಗುವವರೆಗೇ ಅಲ್ಲದೆ, ಹೆರಿಗೆಯಾದನಂತರವೂ ಕ್ಷಯರೋಗ ವಾಸಿಯಾಗುವವರೆವಿಗೂ ಸೇವಿಸಬೇಕು. ಈ ರೀತಿ ಮಾಡಿದರೆ ಮಾತ್ರ ಕ್ಷಯರೋಗವು ವಾಸಿಯಾಗುವುದೇ ಅಲ್ಲದೆ, ಮರುಕಳಿಸುವ ಸಂಭವ ಬಹಳ ಕಡಿಮೆಯಾಗುತ್ತದೆ. ಈ ಔಷಧಿಗಳಾವುವೆಂದರೆ, Streptomycin, Isonicotinic acid hydrozide, Para Amino Salicylic acid, Thiacetazone, Terramycin, Viomyn, Pyrazinamide, Ethionamide, Cycloserene, ಮುಂತಾದವುಗಳು. ಈ ಔಷಧಿಗಳನ್ನು ವೈದ್ಯರ ಸಲಹೆಯಂತೆ, ಪ್ರತಿದಿನವೂ ಸರಿಯಾದ ಪ್ರಮಾಣದಲ್ಲಿ ಸೇವಿಸಬೇಕು. ಔಷಧಿಗಳನ್ನು ಬಿಟ್ಟು ಬಿಟ್ಟು ಸೇವಿಸಿದ್ದೇ ಆದರೆ, ಅನೇಕ ತೊಂದರೆಗಳು ಉತ್ಪನ್ನವಾಗುತ್ತವೆ ಮತ್ತು ಖಾಯಿಲೆಯು ವಾಸಿಯಾಗುವ ಸಂಭವ ಕಡಿಮೆ.

ಹೆರಿಗೆಯಾದ ನಂತರ ಕ್ಷಯರೋಗಿ ಹೆಂಗಸರು 3–4 ಕ್ಕಿಂತ ಹೆಚ್ಚು ಮಕ್ಕಳಿದ್ದರೆ, ಗರ್ಭನಿರೋಧಕ ಕ್ರಮಗಳನ್ನು ಅನುಸರಿಸಬೇಕು. ಅದರಲ್ಲೂ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದು ಬಹಳ ಒಳ್ಳೆಯದು. ಏಕೆಂದರೆ ಪ್ರತಿಯೊಂದು ಹೆರಿಗೆಯೂ ಶರೀರದ ಶಕ್ತಿಯನ್ನು ಕುಂದಿಸುವುದೇ ಅಲ್ಲದೆ, ಮಕ್ಕಳ ಪೋಷಣೆಯ ಹೊಣೆಗಾರಿಕೆ ಹೆಚ್ಚಾಗಿ, ತಮ್ಮ ಆರೋಗ್ಯದ ಕಡೆ ಲಕ್ಷ್ಯ ಕಡಿಮೆಯಾಗಿ, ಕ್ಷಯರೋಗವು ಉಲ್ಬಣವಾಗಲು ಸಹಾಯವಾಗುತ್ತದೆ. 3 ಕ್ಕಿಂತ ಕಡಿಮೆ ಮಕ್ಕಳಿದ್ದರೆ,

ಕ್ಷಯರೋಗ ವಾಸಿಯಾದ 2–3 ವರ್ಷಗಳವರೆಗೆ ಗರ್ಭಸಿಲ್ಲದಂತೆ ನೋಡಿಕೊಳ್ಳಬೇಕು. ಅಂದರೆ ಗರ್ಭನಿರೋಧಕ ಸಾಧನಗಳ ಉಪಯೋಗ ಪಡೆದು ದಾಂಪತ್ಯ ಜೀವನ ನಡೆಸಬಹುದು. 2–3 ವರ್ಷಗಳ ನಂತರ ಮಕ್ಕಳಾದರೂ ರೋಗ ಮರುಕಳಿಸುವ ಸಂಭವ ಕಡಿಮೆ.

ಮಕ್ಕಳಿಗೆ ಕ್ಷಯರೋಗ ತಗಲದಂತೆ ಮುಂಜಾಗರೂಕತೆ ಕ್ರಮಗಳನ್ನು ಅನುಸರಿಸಬೇಕು. ಇವುಗಳಲ್ಲಿ ಬಿ. ಸಿ. ಜಿ. ಚುಚ್ಚುಮದ್ದು ಹಾಕಿಸುವುದು ಅತಿ ಮುಖ್ಯವಾದದ್ದು. ಆಗತಾನೇ ಹುಟ್ಟಿದ ಮಕ್ಕಳಿಗೆ ಬಿ. ಸಿ. ಜಿ. ಚುಚ್ಚುಮದ್ದು ಕೊಡುವ ಕಾರ್ಯಕ್ರಮವನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಒದಗಿಸಿದೆ. ಇದನ್ನು ಉಪಯೋಗಿಸಿಕೊಳ್ಳಬೇಕು. ಇಲ್ಲವೇ 10–15 ದಿನಗಳ ನಂತರವಾದರೂ ಬಿ.ಸಿ.ಜಿ. ಚುಚ್ಚುಮದ್ದನ್ನು ಹಾಕಿಸಬಹುದು. ಬಿ.ಸಿ.ಜಿ. ಚುಚ್ಚುಮದ್ದು ಸಿಗದಿದ್ದರೆ, INAH ಎಂಬ ಔಷಧವನ್ನು ದಿನವೂ 100 mgs., ಪ್ರಮಾಣದಲ್ಲಿ ದ್ರಾವಕರೂಪದಲ್ಲಿ 6 ತಿಂಗಳ ವರೆವಿಗೂ ಕೊಡಬಹುದು. ಈ ಮುಂಜಾಗರೂಕತೆ ಕ್ರಮಗಳಿಂದ ಮಕ್ಕಳಿಗೆ ತಾಯಂದಿರಿಂದ ಕ್ಷಯರೋಗವು ಹರಡುವ ಸಂಭವ ಕಡಿಮೆಯಾಗುತ್ತದೆ.

ಎಂ. ಎನ್. ಜೈಪ್ರಕಾಶ್

ಈ ಅಪರಿಚಿತ ದಾರಿಗಳು
ಪರಿಚಿತವಾಗುತ್ತವಾಗುತ್ತ ಬೀದಿ ಸವೆಯುತ್ತ ಸವೆಯುತ್ತ
ಕಟ್ಟಡಗಳು ಖಾಲಿ ನಿವೇಶನಗಳು ಬಳಕೆಯಾಗುತ್ತ ದಿನನಿತ್ಯ
ಥರಥರದ ಜನ ನೂರಾರು
ಹೊಸದಾಗಿ ಗೆಳೆಯರಾಗಿ
ಇನ್ನಿಲ್ಲದ ವಿಶ್ವಾಸದಲಿ ಗಾಢವಾಗಿ ಕೈಕುಲುಕಿ
ಸಲ್ಲದ ಆತ್ಮೀಯತೆ ನಟಿಸಿ ಭೋಳೆ ಮಾತಾಡಿ
ಹಳಬರಾಗಿ ಹಳಸುತ್ತಿರುವಂತೆ ಅಲ್ಲ–ಕಾಲ.

ಕಾಲ ಮಾತ್ರ ದಿನದಿನಕ್ಕೂ ಕ್ಷಣ ಕ್ಷಣಕ್ಕೂ
ನವೀಕರಣದ ಟಂಕಸಾಲೆಯಿಂದ ಚಲಾಯಿಸುವ
ನವ ನವೀನ ನಾಣ್ಯ. ಆದ್ದರಿಂದಲೇ
ಅದರ ವಿಶಾಲ ಒಡಲುದ್ದ ಬಿದ್ದೆದ್ದು
ಸರಿಬೆಸದಲ್ಲಿ ಸಾಗುತ್ತಿರುವ ನಾನು—

ನಡೆದ ಹೆಜ್ಜೆಗಳನ್ನೆಲ್ಲ ಎಣಿಸುತ್ತ, ಮೈಲಿಗೊಂದು
ಮೈಲಿಕಲ್ಲಿಡುತ್ತ ಬರುತ್ತಿದ್ದೇನೆ. ಪರಂತೂ
ಜನ ನನ್ನ ಮರೆತಾರೆಂಬ ಸಂಶಯದಲ್ಲಿ
ಊರೆಲ್ಲ ಹೆಸರಾಗಲು ಹೋ ಎಂದು ಹೆಣಗುತ್ತಿದ್ದೇನೆ.

(ii)

ಕ್ರಮಿಸುತ್ತಿದ್ದೇನೆ ಹಾದಿ ದಾಪುಗಾಲಲ್ಲಿ
ಕ್ರಮಿಸುತ್ತಿದ್ದಂತೆ ಈ ಸವೆದ ಬೀದಿಯ ಇಕ್ಕೆಲಗಳಲ್ಲಿ :
ಹೊಲಮನೆ ಮರಬಳ್ಳಿಗಳು
ಮಾವು ಮಲ್ಲಿಗೆ ಭತ್ತ ಗೋಧುವೆ

ನಡು ನಡುವೆ ಚಿಲಿಪಿಲಿಯ ಪಕ್ಷಿಸಂಕುಲ
ದಾಟಿ ದೂರದಲಿ ಚುಕ್ಕಿ
ಯಾದ ಬಲೆ ಬೀಸುವ ಬೆಸ್ತ
ಕೆಸರಲ್ಲಿ ಹೂಟೆ ಮಾಡುವ ರೈತ
ಅಂಗಳದಲ್ಲಿ ರಾಗಿ ಬೀಸುವ ಹೆಣ್ಣು
ಮತ್ತೆ ಹೆಸರಿಲ್ಲದ ಅನಾಮಧೇಯರು ನೂರುನೂರು

ಈ ಎಲ್ಲರೂ ಕಾಣುತ್ತಾರೆ;
ಕಣ್ಣು ಸೆಳೆಯುವುದಿಲ್ಲ. ಆದರೂ
ಪುಷ್ಪಿಸುತ್ತಾರೆ ಪರಾಗಸ್ಪರ್ಶಕ್ಕಾಗಿ ಹಾತೊರೆಯುತ್ತಾರೆ
ಹಾತೊರೆದು ಅಭಿಸಾರದಲ್ಲಿ ಮುಳುಗಿ ಹಗುರಾಗಿ ತೇಲುತ್ತಾರೆ
ಹೊಡೆತುಂಬಿ ಕೃತಾರ್ಥತೆಯಲ್ಲಿ ಸದ್ದಿಲ್ಲದೆ ನೆಲಕ್ಕೆ ಬಾಗುತ್ತಾರೆ
ಆಶ್ಚರ್ಯ! ಸದ್ದಿಲ್ಲದೆ ನೆಲಕ್ಕೆ ಬಾಗುತ್ತಾರೆ.

ನಾನೂ
ಇವರನ್ನೆಲ್ಲ ನೋಡುತ್ತ ನೋಡುತ್ತ ನೋಡುತ್ತಾ ಬಂದೆ
ಬರು ಬರುತ ಏಕೆ ತಪ್ಪಿ ಮೈಲಿಕಲ್ಲಿಡುವುದನು ಮರೆತೆ!

(iii)

ಆಗ ಮರೆತುದಕ್ಕೆ ದುಃಖವಾಯ್ತು. ಚಿಂತಿಲ್ಲ
ಸದ್ದಿಲ್ಲದೆ ಈಗ ಸದ್ದುಗದ್ದಲದಾಚೆ
ಸ್ವಸ್ಥ ಬದುಕುವುದನ್ನು ಅದರಿಂದ ಕಲಿತೆ.

ಶಿಶುಪಾಲವಧ ಕಾವ್ಯ

ಎನ್. ರಂಗನಾಥ ಶರ್ಮಾ

ಶಿಶುಪಾಲವಧ ಕಾವ್ಯವನ್ನು ಬರೆದವನು ಮಾಘಕವಿ. ಈ ಕಾವ್ಯವು ಕವಿಯ ನಾಮವನ್ನು ವಹಿಸಿಕೊಂಡು "ಮಾಘ ಕಾವ್ಯ"ವೆಂದು ಪ್ರಸಿದ್ಧವಾಗಿದೆ. ಮಾಘನ ಕಾಲ–ದೇಶಾದಿಗಳು ನಿಶ್ಚಿತವಾಗಿ ತಿಳಿಯದಿದ್ದರೂ, ಆತನು ತನ್ನ ಕಾವ್ಯದ ಸಮಾಪ್ತಿಯಲ್ಲಿ ಹೇಳಿಕೊಂಡ ಸಂಗತಿಗಳಿಂದ ಕೆಲವು ಅಂಶಗಳು ತಿಳಿದುಬರುತ್ತವೆ. ಮಾಘನು ಬ್ರಾಹ್ಮಣ, ತಂದೆಯ ಹೆಸರು ದತ್ತಕ. ದತ್ತಕನ ತಂದೆಯಾದ ಸುಪ್ರಭದೇವನು ಶ್ರೀವರ್ಮಲದೇವನೆಂಬ ರಾಜನ ಬಳಿ ಸರ್ವಾಧಿಕಾರಿಯಾಗಿದ್ದನು. ಈ ಕವಿಯ ಕಾಲವು ವಿಚಾರಾರ್ಹವಾಗಿದೆ. ಈತನ ಚರಿತ್ರೆಯು ಭೋಜ ಪ್ರಬಂಧ, ಪ್ರಬಂಧ ಚಿಂತಾಮಣಿ ಮತ್ತು ಪ್ರಭಾವಕ ಚರಿತೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ವರ್ಣಿತವಾಗಿದೆ. ಚಮತ್ಕಾರಕ್ಕಾಗಿ ರಚಿಸಿರಬಹುದಾದ ಈ ಕತೆಗಳಲ್ಲಿ ಐತಿಹಾಸಿಕ ಸತ್ಯಾಂಶವನ್ನು ಹುಡುಕುವುದು ಕಷ್ಟ, ಈ ಕಥೆಗಳು ಐತಿಹಾಸಿಕ ಸತ್ಯವೆಂದು ನಂಬುವುದಾದರೆ ಮಾಘಕವಿಯು ಕ್ರಿ.ಶ. 11ನೇ ಶತಮಾನದ ಉತ್ತರಾರ್ಧದಲ್ಲಿ-ಮಾಲವಾಧಿಪತಿಯಾಗಿದ್ದ ಭೋಜರಾಜನ ಸಮಕಾಲದಲ್ಲಿ ಇದ್ದನೆಂದು ಹೇಳಬೇಕಾಗುತ್ತದೆ. ಆದರೆ ಮಾಘಕವಿಯು ಕ್ರಿ. ಶ. 9ನೇ ಶತಕಕ್ಕಿಂತ ಈಚಿನವನಲ್ಲವೆಂದು, ಮುಂದೆ ಹೇಳುವ ಪ್ರಮಾಣಗಳಿಂದ ಸಿದ್ಧವಾಗುತ್ತದೆ.

ಆನಂದವರ್ಧನಾಚಾರ್ಯನು ತನ್ನ ಧ್ವನ್ಯಾಲೋಕದಲ್ಲಿ "ತ್ರಾಸಾಕುಲಃ ಪರಿಪತನ್" (5-26) "ರಮ್ಯಾ ಇತಿ ಪ್ರಾಪ್ತವತೀಃ ಪತಾಕಾಃ" (3-52) ಎಂಬೆರಡು ಪದ್ಯಗಳನ್ನು ಮಾಘಕಾವ್ಯದಿಂದ ಉದಾಹರಿಸಿದ್ದಾನೆ. ಆನಂದವರ್ಧನನ ಕಾಲ ಕ್ರಿ. ಶ. 9ನೇ ಶತಕ. ಅಷ್ಟೇ ಅಲ್ಲ; ವಾಮನನು ತನ್ನ ಕಾವ್ಯಾಲಂಕಾರ ಸೂತ್ರದಲ್ಲಿ "ಕುಥೇನ ನಾಗೇಂದ್ರಮಿವೇಂದ್ರವಾಹನಂ" (1-8) "ಗಿರೌಸ್ತಡಿತ್ವಾನಿವ ತಾವ–ದುಚ್ಚಕೈಃ" (1-12) "ಸ್ಥಿತಿಮತಾಂ ಸುತರಾಂ ಮನೀಷಿಣಾಂ" (1-25) ಎಂಬೀ ಶ್ಲೋಕ ಪಾದಗಳನ್ನು ಮಾಘಕಾವ್ಯದಿಂದ ಉದಾಹರಿಸಿದ್ದಾನೆ. ವಾಮನನು ಕ್ರಿ. ಶ. 8ನೇ ಶತಕದವನು. ಕ್ರಿ. ಶ. 850-877ರ ಅವಧಿಯಲ್ಲಿ ರಚಿತವಾಗಿರಬಹುದೆಂದು ಊಹಿಸಲಾದ ಕನ್ನಡದ "ಕವಿರಾಜಮಾರ್ಗ"ದಲ್ಲಿನ ಕೆಲವು ಲಕ್ಷ್ಯ ಪದ್ಯಗಳಲ್ಲಿ ಶಿಶುಪಾಲವಧ ಕಾವ್ಯದ ಕೆಲವು ಪದ್ಯಗಳ ಅರ್ಥಚ್ಛಾಯೆ ಕಂಡು ಬರುತ್ತದೆ. ಅಂತೂ ಮಾಘನು ಕ್ರಿ. ಶ. 8ನೇ ಶತಕಕ್ಕಿಂತ ಈಚಿನವನಲ್ಲವೆಂದು ಧೈರ್ಯವಾಗಿ ಹೇಳ

ಬಹುದು. ಮಾಘನು "ಅಸುತ್ ಸೂತ್ರ ಪದನ್ಯಾಸಾ" (2-112) ಎಂಬ ಶ್ಲೋಕ ದಲ್ಲಿ "ನ್ಯಾಸ"ವೆಂಬ ವ್ಯಾಕರಣ ಗ್ರಂಥವನ್ನು ಸ್ಮರಿಸಿದ್ದಾನೆ. ಆದ್ದರಿಂದ ಮಾಘನು "ನ್ಯಾಸ"ಕಾರನಾದ ಜಿನೇಂದ್ರಬುದ್ಧಿಗಿಂತ ಈಚಿನವನು. ಉಜ್ವಲದತ್ತನು ಉಣಾದಿ ಸೂತ್ರ ವ್ಯಾಖ್ಯಾನದಲ್ಲಿ (ಉಣಾದಿ II-109 ದ ವ್ಯಾಖ್ಯಾನ) "ಮಾಘೇ (ಶಿಶು X-19) ವ್ಯವಹಿತ ಪ್ರಯೋಗಃ ಪ್ರಮಾದಜಃ ಇತಿ ಭಾಗವೃತ್ತಿಃ" ಎಂದು ಹೇಳಿದ್ದಾನೆ. ಭಾಗವೃತ್ತಿಯು ಭರ್ತೃಹರಿಯ ಗ್ರಂಥ. ಭರ್ತೃಹರಿಯು ಕ್ರಿ. ಶ. ಸುಮಾರು 605ರಲ್ಲಿ ಮೃತನಾದನೆಂದು ಊಹಿಸಲಾಗಿದೆ. ಮಾಘನು ಭರ್ತೃಹರಿಗಿಂತ ಹಿಂದಿನವ ನೆಂದು ಹೇಳಬಹುದು.

ಗುರ್ಜರ (ಗುಜರಾತ್) ದೇಶವು ಮಾಘನ ಜನ್ಮಸ್ಥಳವೆಂದು ಲೋಕಪ್ರತೀತಿ ಯಿಂದಲೂ, ಭೋಜ ಪ್ರಬಂಧವೇ ಮೊದಲಾದ ಗ್ರಂಥಗಳಿಂದಲೂ ಊಹಿಸಲಾಗಿದೆ. ಮಾಘನು ಶಿಶುಪಾಲವಧವನ್ನುಳಿದು ಬೇರಾವ ಗ್ರಂಥವನ್ನೂ ಬರೆದಂತೆ ತಿಳಿದು ಬರುವುದಿಲ್ಲ. ವಲ್ಲಭದೇವನ ಸುಭಾಷಿತಾವಳಿಯಲ್ಲಿ "ನಾರೀನಿತಂಬಫಲಕೇ ಪ್ರತಿಬಧ್ಯ ಮಾನಾ, ಹಂಸೀವ ಹೇಮರಶನಾ ಮಧುರಂ ರರಾಸ। ತನ್ಮೋಚನಾರ್ಥಮಿವ ನೂಪುರರಾಜಹಂಸಾಃ, ಚಕ್ರಂದುರಾರ್ತಮುಖರಂ ಚರಣಾವಲಗ್ನಾಃ ॥" ಎಂಬ ಶ್ಲೋಕವೂ, "ಶೀಲಂ ಶೈಲತಟಾತ್ ಪತತ್ವಭಿಜನಃ ಸಂದಹ್ಯತಾಂ ವಹ್ನಿನಾ" ಎಂಬ ಭರ್ತೃಹರಿ ಶತಕದಲ್ಲಿ ಕಂಡುಬರುವ ಪದ್ಯವೂ ಮಾಘನ ಹೆಸರಿನಲ್ಲಿ ಉದ್ಧೃತವಾಗಿವೆ. ಇವು ಶಿಶುಪಾಲವಧದಲ್ಲಿಲ್ಲವಾದ್ದರಿಂದ ಈತನು ಇನ್ನಾವುದೋ ಗ್ರಂಥವನ್ನು ಬರೆದಿದ್ದನೆಂದೂ ಊಹಿಸಬಹುದು.

ಶಿಶುಪಾಲವಧ ಕಾವ್ಯಕ್ಕೆ ಇದುವರೆಗೆ ಎಂಟು ವ್ಯಾಖ್ಯಾನಗಳು ದೊರೆತಿವೆ. ಅವುಗಳ ಪೈಕಿ ಮಲ್ಲಿನಾಥನ "ಸರ್ವಂಕಷಾ", ವಲ್ಲಭದೇವನ "ಸಂದೇಹ ವಿಷೌಷಧಂ" ಎಂಬೀ ಎರಡು ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ.

ಶಿಶುಪಾಲವಧವು ಇಪ್ಪತ್ತು ಸರ್ಗಗಳಿಂದ ಕೂಡಿದ ಒಂದು ಮಹಾಕಾವ್ಯ. ಕಿರಾತಾರ್ಜುನೀಯದಂತೆ, ಇದರ ಕಥಾವಸ್ತು ಮಹಾಭಾರತದಿಂದ ಆರಿಸಿಕೊಂಡದ್ದು. "ಶ್ರೀ ಕೃಷ್ಣನು ಯುಧಿಷ್ಠಿರನ ಆಹ್ವಾನವನ್ನು ಮನ್ನಿಸಿ ರಾಜಸೂಯ ಯಾಗದಲ್ಲಿ ಭಾಗವಹಿಸಲು ಸೈನ್ಯ ಸಮೇತನಾಗಿ ಪ್ರಯಾಣ ಮಾಡುವದು; ಶ್ರೀ ಕೃಷ್ಣನಿಗೆ ದೊರೆತ ಅಗ್ರಪೂಜೆಯಿಂದ ಕುಪಿತನಾದ ಶಿಶುಪಾಲನು ಶ್ರೀಕೃಷ್ಣನನ್ನು ನಿಂದಿಸು ವದು, ಅನಂತರ ಯುದ್ಧದಲ್ಲಿ ಶ್ರೀಕೃಷ್ಣನು ಶಿಶುಪಾಲನನ್ನು ವಧಿಸುವದು" ಇದಿಷ್ಟು ಕಥೆಯ ಮುಖ್ಯ ಸಾರಾಂಶ. ಈ ಕಥಾ ಭಾಗವನ್ನು ವಿಸ್ತರಿಸಿ ಕವಿಯು ಇಪ್ಪತ್ತು ಸರ್ಗಗಳಿಂದ ಕೂಡಿದ ಮಹಾಕಾವ್ಯವೊಂದನ್ನು ರಚಿಸಿದ್ದಾನೆ. ಶಿಶುಪಾಲ ವಧವನ್ನು ಪೂರ್ಣವಾಗಿ ಪರಿಶೀಲಿಸಿದರೆ, ಕಿರಾತಾರ್ಜುನೀಯವನ್ನು ಸ್ಪರ್ಧಿಸುವ

ಸಲುವಾಗಿಯೇ ಮಾಘನು ಈ ಪ್ರಯತ್ನವನ್ನು ಮಾಡಿದನೆಂದು ಅನುಮಾನವಾಗುವುದು. ಕಿರಾತಾರ್ಜುನೀಯದಂತೆಯೇ ಶಿಶುಪಾಲವಧದ ಮೊದಲನೆಯ ಶ್ಲೋಕವು "ಶ್ರೀ"ಶಬ್ದದಿಂದ ಆರಂಭವಾಗುತ್ತದೆ, ಎರಡೂ ವಂಶಸ್ಥವೃತ್ತಗಳು. ಭಾರವಿಯು ಕಿರಾತಾರ್ಜುನೀಯದ ಪ್ರತಿಸರ್ಗದ ಕೊನೆಯ ಪದ್ಯದಲ್ಲಿ "ಲಕ್ಷ್ಮೀ" ಶಬ್ದವನ್ನು ಪ್ರಯೋಗಿಸಿದರೆ, ಮಾಘನು "ಶ್ರೀ"ಶಬ್ದವನ್ನು ಪ್ರಯೋಗಿಸಿದ್ದಾನೆ. ಕಿರಾತಾರ್ಜುನೀಯದಲ್ಲಿ, ಯುಧಿಷ್ಠಿರ, ದ್ರೌಪದೀ, ಭೀಮಸೇನರು ಮಂತ್ರಾಲೋಚನೆ ಮಾಡುತ್ತಾರೆ. ಶಿಶುಪಾಲವಧದಲ್ಲಿ ಶ್ರೀಕೃಷ್ಣ, ಬಲರಾಮ, ಉದ್ಧವರು ಮಂತ್ರಾಲೋಚನೆ ನಡೆಸುತ್ತಾರೆ. ರಾಜನೀತಿಯನ್ನು ಇಬ್ಬರೂ ವಿಶದವಾಗಿ ವರ್ಣಿಸಿದ್ದಾರೆ. ಯುದ್ಧ ವರ್ಣನೆಯಲ್ಲಿ ಇಬ್ಬರೂ ಶಬ್ದಾಲಂಕಾರಗಳನ್ನು ಪ್ರದರ್ಶಿಸಿದ್ದಾರೆ. ಅಂತೂ ಸ್ಪರ್ಧೆಯಲ್ಲಿ ಮಾಘನೇ ಜಯಶಾಲಿಯಾಗಿದ್ದಾನೆಂದು ಸಂದೇಹವಿಲ್ಲದೇ ಹೇಳಬಹುದು.

ಬಲ್ಲಾಳ ಪಂಡಿತನು ಬರೆದ ಭೋಜಪ್ರಬಂಧದಲ್ಲಿ ಬಂದಿರುವ ಕಥೆಯಿದು :

ಒಮ್ಮೆ ಭೋಜರಾಜನು ಸಿಂಹಾಸನಾರೂಢನಾಗಿರುವಾಗ ದ್ವಾರಪಾಲಕನು ಬಂದು,–"ಮಹಾರಾಜ ; ಗುರ್ಜರ ದೇಶದಿಂದ ಮಾಘನೆಂಬ ಪಂಡಿತವರೇಣ್ಯನು ದುರ್ಭಿಕ್ಷದಿಂದ ಬಳಲಿ ಈ ನಗರದ ಬಹಿರ್ದ್ವಾರದಲ್ಲಿ ಬಂದಿಳಿದಿರುವನು. ಮಹಾರಾಜರ ದರ್ಶನಕ್ಕಾಗಿ ಆತನ ಪತ್ನಿಯು ಅರಮನೆಯ ಬಾಗಿಲಲ್ಲಿ ಕಾದಿದ್ದಾಳೆ." ಎಂದು ವಿಜ್ಞಾಪಿಸಿದನು. ರಾಜನ ಅನುಮತಿಯ ಮೇರೆಗೆ ಮಾಘಪತ್ನಿಯು ಒಳಗೆ ಪ್ರವೇಶಿಸಿ ಮಾಘನು ಬರೆದುಕೊಟ್ಟ ಪತ್ರವನ್ನು ರಾಜನಿಗೆ ಅರ್ಪಿಸಿದಳು. ಅದರಲ್ಲಿ ಪ್ರಭಾತವನ್ನು ವರ್ಣಿಸುವ ಈ ಪದ್ಯವಿತ್ತು :

> ಕುಮುದವನಮಪಶ್ರೀ ಶ್ರೀಮದಂಭೋಜಷಂಡಂ
> ತ್ಯಜತಿ ಮುದಮುಲೂಕಃ ಪ್ರೀತಿಮಾಂಶ್ಚಕ್ರವಾಕಃ ।
> ಉದಯಮಹಿಮರಶ್ಮಿ ಯಾತಿ ಶೀತಾಂಶುರಸ್ತಂ
> ಹತ ವಿಧಿಲಸಿತಾನಾಂ ಹೀ ವಿಚಿತ್ರೋ ವಿಪಾಕಃ ॥

"ಕುಮುದಗಳ (ಕನ್ನೈದಿಲೆಗಳ) ಶೋಭೆಯು ಅಡಗಿದೆ. ಕಮಲಗಳು ಶೋಭೆಯಿಂದ ರಂಜಿಸುತ್ತಿವೆ, ಗೂಗೆಯ ಸಂತಸ ಅಡಗುತ್ತಿದೆ, ಚಕ್ರವಾಕದ ಸಂತಸ ದಾಂಗುಡಿಯಿಡುತ್ತಿದೆ, ಸೂರ್ಯನು ಉದಯಿಸುತ್ತಿರುವನು, ಚಂದ್ರನು ಮರೆಯಾಗುತ್ತಿದ್ದಾನೆ. ಹಾಳಾದ ವಿಧಿಯ ಚೇಷ್ಟೆಗಳ ಪರಿಣಾಮವು ಅಯ್ಯೋ ! ತುಂಬಾ ವಿಚಿತ್ರ!". ಭೋಜರಾಜನು ಸಂತುಷ್ಟನಾಗಿ ಮೂರು ಲಕ್ಷ ನಾಣ್ಯಗಳನ್ನು ಮಾಘಪತ್ನಿಗೆ ಬಹುಮಾನವಾಗಿ ಕೊಟ್ಟು– "ಅಮ್ಮಾ ; ಇದನ್ನು ಈಗ ನಿಮ್ಮ ಭೋಜನಕ್ಕಾಗಿ ಕೊಟ್ಟಿರುವೆನು. ಬೆಳಿಗ್ಗೆ ನಾನೇ ಬಂದು ಮಾಘಕವಿಯನ್ನು ಸಂದರ್ಶಿಸುವೆನು" ಎಂದು ಹೇಳಿದನು. ಮಾಘಪತ್ನಿಯು ಹಿಂತಿರುಗುವಾಗ ದಾರಿಯಲ್ಲಿ ಅನೇಕ ಜನ ಭಿಕ್ಷುಕರು ಮಾಘಕವಿಯ ಕೀರ್ತಿಯನ್ನು ಹೊಗಳುತ್ತಾ ಬರಲು, ಆಕೆಯು ರಾಜನು ಕೊಟ್ಟ ದ್ರವ್ಯವನ್ನೆಲ್ಲಾ

ಅವರಿಗೆ ದಾನಮಾಡಿಬಿಟ್ಟಳು. ಈ ವೃತ್ತಾಂತವನ್ನು ತನ್ನ ಪತಿಗೆ ತಿಳಿಸಲು ಆತನು ಪತ್ನಿಯ ಔದಾರ್ಯಕ್ಕೆ ಮೆಚ್ಚಿ ಸಂತುಷ್ಟನಾದನು. ಅಷ್ಟರಲ್ಲಿ ಇನ್ನು ಕೆಲವು ಜನ ಭಿಕ್ಷುಕರು ಭಿಕ್ಷೆಗಾಗಿ ಮಾಘನ ಬಳಿಗೆ ಬಂದರು. ಅವರಿಗೆ ದಾನ ಮಾಡಲು ಕೈಯಲ್ಲಿ ಏನೂ ಇಲ್ಲದುದರಿಂದ ಬಹು ವ್ಯಥೆಗೊಂಡು ಮಾಘನು ಪತ್ನಿಯನ್ನು ಕುರಿತು :

ನ ಭಿಕ್ಷಾ ದುರ್ಭಿಕ್ಷೇ ಪತತಿ, ದುರವಸ್ಥಾ ಕಥಮೃಣಂ,
ಲಭಂತೇ ಕರ್ಮಾಣಿ, ದ್ವಿಜಪರಿವೃಢಾನ್ ಕಾರಯತಿ ಕಃ ।
ಅದತ್ವೈವ ಗ್ರಾಸಂ ದ್ವಿಜಪತಿರಸಾವಸ್ತಮಯತೇ
ಕ್ವ ಯಾಮಃ ಕಿಂ ಕುರ್ಮೋ ಗೃಹಿಣಿ ! ಗಹನೋ ಜೀವನವಿಧಿಃ ॥

ಎಂದು ಹೇಳಿದನು.

"ಭಿಕ್ಷೆ ಬೇಡೋಣವೆಂದರೆ ಈ ದುರ್ಭಿಕ್ಷ ಕಾಲದಲ್ಲಿ ಯಾರೂ ಭಿಕ್ಷೆ ನೀಡರು, ಕಷ್ಟದಲ್ಲಿರುವ ನಮ್ಮಂಥವರಿಗೆ ಸಾಲವೂ ದೊರೆಯುವುದಿಲ್ಲ, ಕೆಲಸವನ್ನು ಮಾಡಿ ಯಾದರೂ ಹೊಟ್ಟೆತುಂಬಿಕೊಳ್ಳೋಣವೆಂದರೆ ನಮ್ಮಂತಹ ಬ್ರಾಹ್ಮಣರಿಂದ ಯಾರು ಕೆಲಸ ಮಾಡಿಸುತ್ತಾರೆ ? ಹೊಟ್ಟೆಗೆ ಏನನ್ನೂ ಕೊಡದೇ ಸೂರ್ಯನು ಅಸ್ತಮಿ ಸುತ್ತಿದ್ದಾನೆ. ಎಲ್ಲಿಗೆ ಹೋಗೋಣ ? ಗೃಹಿಣಿ ! ಜೀವನ ಯಾತ್ರೆಯು ಬಹಳ ಕಠಿಣವಾದುದು."

ಇದನ್ನು ಕೇಳಿ ಯಾಚಕರೆಲ್ಲಾ ಹೊರಟು ಹೋದರು, ಇದರಿಂದ ಖಿನ್ನನಾದ ಮಾಘನು—"ಅಯ್ಯೋ ಪ್ರಾಣವೇ ! ಈಗಲೇ ನೀನು ಹೊರಟು ಹೋಗಬಾರದೇ? ಯಾಚಕರು ನಿರಾಶರಾಗಿ ಹಿಂತಿರುಗುವಾಗ ನೀನೇಕಿರುವೆ ? ಹೇಗಿದ್ದರೂ ಒಂದಿ ಲ್ಲೊಂದು ದಿನ ಹೋಗಲೇ ಬೇಕು" ಎಂದು ಕೂಗಿಕೊಳ್ಳುತ್ತಿರಲು ಪ್ರಾಣಪಕ್ಷಿಯು ಹಾರಿಹೋಯಿತು. ಆಗ ಮಾಘನ ಪತ್ನಿಯು ದುಃಖಿಸುತ್ತಾ—

ಸೇವಂತೇ ಸ್ಮ ಗೃಹಂ ಯಸ್ಯ ದಾಸವದ್ಭೂಭುಜಃ ಪುರಾ ।
ಹಾದ್ಯ ಭಾರ್ಯಾಸಹಾಯೋಽಯಂ ಮ್ರಿಯತೇ ವೈ ಮಾಘಪಂಡಿತಃ ॥

ಎಂದು ಗೋಳಾಡಿದಳು.

"ಯಾರ ಮನೆಯಲ್ಲಿ ಹಿಂದೆ ರಾಜ ಮಹಾರಾಜರು ದಾಸರಂತೆ ಸೇವೆ ಮಾಡು ತ್ತಿದ್ದರೋ, ಅಂತಹ ಮಾಘ ಪಂಡಿತನಿಂದು-ನಿರ್ಗತಿಕನಾಗಿ-ಬಳಿಯಲ್ಲಿ ಹೆಂಡತಿ ಯೊಬ್ಬಳೇ ಇರುವಾಗ ಅಸುವನ್ನು ನೀಗಿದನು ! ಅಯ್ಯೋ!! "

ಮಾಘನ ಮರಣ ವಾರ್ತೆಯನ್ನು ಕೇಳಿದ ಭೋಜನು ಬರಿಗಾಲಿನಿಂದ ಬ್ರಾಹ್ಮಣ ರೊಡನೆ ಆ ಸ್ಥಳಕ್ಕೆ ಬಂದನು. ಮಾಘಪತ್ನಿಗೆ ಸಮಾಧಾನ ಹೇಳಿ ಕಳೇಬರವನ್ನು ನರ್ಮದಾ ತೀರಕ್ಕೆ ಸಾಗಿಸಿ ಅಗ್ನಿಸಂಸ್ಕಾರ ಮಾಡಿದನು. ಮಾಘಪತ್ನಿಯು ಪತಿಯ

ದೇಹದೊಂದಿಗೆ ಸಹಗಮನ ಮಾಡಿದಳು. ಭೋಜರಾಜನು ಮಗನಂತೆಯೇ ಅವರಿಬ್ಬರ ಉತ್ತರ ಕ್ರಿಯೆಗಳನ್ನು ನೇರವೇರಿಸಿದನು. ಮಾಘನ ಮರಣದಿಂದ ದುಃಖಿತನಾದ ಭೋಜನು ದಿನೇ ದಿನೇ ಕೃಶನಾಗುತ್ತಾ ಪ್ರತಿಪಚ್ಚಂದ್ರನಂತಾದನು.

ಪ್ರಬಂಧ ಚಿಂತಾಮಣಿಯಲ್ಲಿಯೂ ಹೆಚ್ಚು ಕಡಿಮೆ ಇದೇ ಕಥೆಯಿದೆ. ಹೆಚ್ಚಿನ ಅಂಶವೆಂದರೆ— " ಕುಮುದವನಮಪಶ್ರೀ..." ಎಂಬ ಪದ್ಯದಲ್ಲಿನ "ಶ್ರೀ" ಶಬ್ದವು ಸಮಯೋಚಿತವಾಗಿ – ಅಪೂರ್ವವಾದ ರೀತಿಯಲ್ಲಿ - ಪ್ರಯೋಗಿಸಲ್ಪಟ್ಟಿದೆಯೆಂದು ಭೋಜನು ತುಂಬಾ ಮೆಚ್ಚಿಕೊಂಡನೆಂದು ಉಲ್ಲೇಖಿತವಾಗಿದೆ.

ಸುಧಾಸಾಗರವೆಂಬ ಹೆಸರಿನಿಂದ ಶಿಶುಪಾಲವಧ ಕಾವ್ಯಕ್ಕೆ ವ್ಯಾಖ್ಯಾನವನ್ನು ಬರೆದ ಭೀಮಸೇನ ಪಂಡಿತನು "ಕಾವ್ಯಂ ಯಶಸೇಽರ್ಥಕೃತೇ" ಎಂಬ ಕಾರಿಕೆಯಲ್ಲಿ "ಅರ್ಥಕೃತೇ" ಎಂಬ ಅಂಶವನ್ನು ವಿವರಿಸುವಾಗ, ಮಾಘನೆಂಬ ವೈಶ್ಯನು ತನ್ನ ಹೆಸರಿನಲ್ಲಿ ಈ ಕಾವ್ಯವನ್ನು ಬರೆಯಿಸಿ ಕವಿಗೆ ಅಪಾರವಾದ ದ್ರವ್ಯವನ್ನು ಕೊಟ್ಟನೆಂದು ಹೇಳಿದ್ದಾನೆ. ಭೀಮಸೇನ ಪಂಡಿತನು 18ನೇ ಶತಮಾನದ ಅರ್ವಾಚೀನನಾದುದರಿಂದ ಆತನು ಕೇಳಿದ ಕಿಂವದಂತಿಯು ಎಷ್ಟರ ಮಟ್ಟಿಗೆ ಸತ್ಯವೋ ತಿಳಿಯದು.

ತಾರಾನಾಥ ತರ್ಕವಾಚಸ್ಪತಿಯು ಮಾಘ ಶಬ್ದವನ್ನು ನಿರ್ವಚನ ಮಾಡುವಾಗ :

> ತಾವದ್ಭಾ ಭಾರವೇರ್ಭಾತಿ ಯಾವನ್ಮಾಘಸ್ಯ ನೋದಯಃ ।
> ಉದಿತೇ ತು ಪುನರ್ಮಾಘೇ ಭಾರವೇರ್ಭಾ ರವೇರಿವ ॥

ಎಂದು ಹೇಳಿ—ಮಾಘನೆದುರು ಭಾರವಿಯು ಮಾಘ ಮಾಸದ ಸೂರ್ಯನಂತೆ ಮಬ್ಬು ಮಬ್ಬು ಎಂಬ ಅಭಿಪ್ರಾಯ ತಳೆದಿದ್ದಾನೆ.

ಕಥಾ ಸಾರಾಂಶ

1. ಪ್ರಥಮ ಸರ್ಗ

ನಾರದ ಮಹರ್ಷಿಗಳೊಂದು ದಿನ ಶ್ರೀಕೃಷ್ಣನ ಬಳಿಗೆ ದಯಮಾಡಿಸುತ್ತಾರೆ. ಶ್ರೀಕೃಷ್ಣನು ಅವರನ್ನು ವಿಧಿವತ್ತಾಗಿ ಸತ್ಕರಿಸಿ ಆಗಮನೋದ್ದೇಶವನ್ನು ಕೇಳಲು ನಾರದರು ಹೇಳುತ್ತಾರೆ: "ಶ್ರೀಕೃಷ್ಣ ನಿನಗೆ ತಿಳಿಯದುದು ಯಾವುದೂ ಇಲ್ಲ. ಆದರೂ ದೇವೇಂದ್ರನು ಹೇಳಿ ಕಳಿಸಿದ ಮಾತನ್ನು ಆತನ ಸಹಾಯಕನಾದ ನಿನಗೆ ತಿಳಿಸುವುದು ನನ್ನ ಕರ್ತವ್ಯವೆಂದು ಹೇಳಬಯಸುತ್ತೇನೆ. ಹಿಂದೊಮ್ಮೆ ಹಿರಣ್ಯ ಕಶಿಪುವೆಂಬ ದೈತ್ಯನು ಮಹಾ ಪರಾಕ್ರಮಿಯಾಗಿ ಲೋಕ ಭಯಂಕರನಾಗಿದ್ದನಷ್ಟೇ. ಆತನ ಭಯದಿಂದ ನಡುಗುತ್ತಿದ್ದ ಜಗತ್ತನ್ನು ಉದ್ಧರಿಸಲು ನೀನು ನರಸಿಂಹಾವತಾರ

ವನ್ನು ತಾಳಿ ಆ ದೈತ್ಯನನ್ನು ನಖಗಳಿಂದ ಸೀಳಿ ಹಾಕಿದೀಯೆ. ಅವನು ಪುನಃ ರಾವಣನಾಗಿ ಹುಟ್ಟಿ ದೇವ-ಮಾನವರನ್ನು ಪೀಡಿಸತೊಡಗಿದನು. ಆಗ ನೀನು ಶ್ರೀರಾಮನಾಗಿ ಜನ್ಮತಾಳಿ ಅವನನ್ನು ಸದೆಬಡಿದಿದ್ದೀಯ. ಹಠಮಾರಿಯಾದ ಆ ದೈತ್ಯನೇ ಪುನಃ ನಟನಂತೆ ಶಿಶುಪಾಲನೆಂಬ ಹೆಸರಿನಿಂದ ಅವತರಿಸಿದ್ದಾನೆ. ಆತನ ಉಪದ್ರವವನ್ನು ಹೇಳತೀರದು. ಲೋಕಕಂಟಕನಾದ ಆತನನ್ನು ಸಂಹರಿಸಿ, ತಲ್ಲಣಗೊಂಡ ಪ್ರಜೆಗಳನ್ನು ನೀನು ಅನುಗ್ರಹಿಸಬೇಕಾಗಿದೆ." ಶ್ರೀಕೃಷ್ಣನು ನಾರದರ ಮಾತಿನಂತೆ ಒಪ್ಪಿಕೊಳ್ಳಲು ಅವರು ಆಕಾಶಮಾರ್ಗವಾಗಿ ಪ್ರಯಾಣ ಮಾಡುತ್ತಾರೆ.

2. ಎರಡನೆಯ ಸರ್ಗ

ಅದೇ ಹೊತ್ತಿಗೆ ಯುಧಿಷ್ಠಿರನು ರಾಜಸೂಯ ಯಾಗವನ್ನು ಮಾಡಬೇಕೆಂದು ನಿಶ್ಚಯಿಸಿಕೊಂಡು, ಪರಿವಾರ ಸಮೇತನಾಗಿ ದಯಮಾಡಿಸಬೇಕೆಂದು ಶ್ರೀಕೃಷ್ಣನಿಗೆ ಆಹ್ವಾನ ಕಳಿಸಿದ್ದನು. ಆದ್ದರಿಂದ ರಾಜಸೂಯ ಯಾಗಕ್ಕೆ ಹೋಗಬೇಕೇ? ಅಥವಾ ಶಿಶುಪಾಲನ ಮೇಲೆ ದಂಡೆತ್ತಿ ಹೋಗಬೇಕೇ ? ಎಂಬ ವಿಷಯದಲ್ಲಿ ಶ್ರೀಕೃಷ್ಣನು ಉದ್ಧವ-ಬಲರಾಮರೊಡನೆ ಮಂತ್ರಾಲೋಚನೆ ಮಾಡುತ್ತಾನೆ. ಈಗ ರಾಜಸೂಯ ಯಾಗಕ್ಕೆ ಪ್ರಯಾಣ ಮಾಡುವುದು ಉಚಿತವಲ್ಲವೆಂದೂ, ಶಿಶುಪಾಲನ ಮೇಲೆ ದಂಡೆತ್ತಿ ಹೋಗುವುದೇ ಯುಕ್ತವೆಂದೂ-ನಾನಾ ಯುಕ್ತಿಗಳಿಂದಲೂ ದೃಷ್ಟಾಂತಗಳಿಂದಲೂ ಕೂಡಾ ಬಲರಾಮನು ಪ್ರತಿಪಾದಿಸುತ್ತಾನೆ. ನಂತರ ಉದ್ಧವನು, ಇದೀಗ ದಂಡಯಾತ್ರೆ ತರವಲ್ಲವೆಂದೂ, ಶ್ರೀಕೃಷ್ಣನನ್ನೇ ನಂಬಿಕೊಂಡಿರುವ ಯುಧಿಷ್ಠಿರನ ಯಾಗವೇ ನಿಂತು ಹೋಗಬಹುದೆಂದೂ ಕೂಡ ದೃಢವಾದ ಯುಕ್ತಿಗಳಿಂದ ಸಿದ್ಧಾಂತಮಾಡುತ್ತಾನೆ. ಉದ್ಧವನ ಮತವೇ ಸಾಧುವೆಂದು ಶ್ರೀಕೃಷ್ಣನು ಅಂಗೀಕರಿಸುತ್ತಾನೆ.

3. ತೃತೀಯ ಸರ್ಗ

ಶ್ರೀಕೃಷ್ಣನು ಸೇನಾಪರಿವಾರ ಸಮೇತನಾಗಿ ರಾಜಸೂಯ ಯಾಗಕ್ಕೆ ಪ್ರಯಾಣ ಮಾಡುವನು. ನಗರದ ನಾರಿಯರು ಅವನನ್ನು ಕುತೂಹಲದಿಂದ ನೋಡುವರು. ಕವಿಯು ಇಲ್ಲಿ ದ್ವಾರಕಾನಗರ ಮತ್ತು ಸಮುದ್ರವನ್ನು ಸುಂದರವಾಗಿ ವರ್ಣಿಸಿದ್ದಾನೆ.

4. ಚತುರ್ಥ ಸರ್ಗ

ದಾರಿಯಲ್ಲಿ ರೈವತಕ ಪರ್ವತವು ಕಾಣಿಸುವದು. ಕವಿಯು ಪರ್ವತವನ್ನು ವರ್ಣಿಸುವನು. ಆಮೇಲೆ ದಾರುಕನು ಶ್ರೀಕೃಷ್ಣನಿಗೆ ಆ ಪರ್ವತವನ್ನು ವರ್ಣಿಸಿ ಹೇಳುವನು.

5. ಪಂಚಮ ಸರ್ಗ

ರೈವತಕ ಪರ್ವತದ ಮನೋಹರತೆಯನ್ನು ಕೇಳಿ ಶ್ರೀಕೃಷ್ಣನಿಗೆ ಅಲ್ಲಿ ವಿಹರಿಸ ಬೇಕೆಂಬ ಇಚ್ಛೆಯಾಗುವುದು, ಸೇನಾಸಮೇತನಾಗಿ ರೈವತಕ ಗಿರಿಯಲ್ಲಿ ಒಂದು ರಾತ್ರಿ ತಂಗುವನು. ಸೇನೆಯು ಬೀಡು ಬಿಟ್ಟಿದ್ದನ್ನು ಕವಿಯು ಸುಂದರವಾಗಿ ವರ್ಣಿಸುತ್ತಾನೆ.

6. ಷಷ್ಠ ಸರ್ಗ

ಆ ಪರ್ವತದಲ್ಲಿ ವಿಹರಿಸಬೇಕೆಂದಿರುವ ಶ್ರೀಕೃಷ್ಣನ ಇಚ್ಛೆಯನ್ನರಿತು ಷಡೃತುಗಳು ಸೇವಾರ್ಥವಾಗಿ ತಮ್ಮ ತಮ್ಮ ಸೌಂದರ್ಯ ವೈಭವಗಳನ್ನು ಮೆರೆಸುತ್ತವೆ.

7. ಸಪ್ತಮ ಸರ್ಗ

ಶ್ರೀಕೃಷ್ಣನು ಯಾದವರೊಂದಿಗೆ ಋತು ಸೌಂದರ್ಯವನ್ನು ಸವಿಯುತ್ತ ರೈವತಕದಲ್ಲಿ ವಿಹರಿಸುತ್ತಾನೆ. ಯಾದವ ಸ್ತ್ರೀಯರು ತಮ್ಮ ಪ್ರಿಯರೊಂದಿಗೆ ಪುಷ್ಪಾವಚಯ ಮಾಡುತ್ತಾ, ಚಮತ್ಕಾರದ ಮಾತುಗಳನ್ನಾಡುತ್ತಾ ವಿನೋದದಿಂದಿರುತ್ತಾರೆ. ಅವರಿಗೆ ವನವಿಹಾರದಿಂದ ಶ್ರಮವಾಗಿ ಜಲಕ್ರೀಡೆಯಲ್ಲಿ ಮನಸ್ಸಾಗುವುದು.

8. ಅಷ್ಟ ಸರ್ಗ

ಶ್ರೀಕೃಷ್ಣನೂ ಯಾದವರೂ ತಮ್ಮ ತಮ್ಮ ಕಾಂತೆಯರೊಡಗೂಡಿ ಜಲಕ್ರೀಡೆಯಾಡುವರು. ಸೂರ್ಯಾಸ್ತಮಯವು ಪ್ರಾಪ್ತವಾಗುವದು.

9. ನವಮ ಸರ್ಗ

ಕವಿಯು ಸೂರ್ಯಾಸ್ತ, ಚಂದ್ರೋದಯಗಳನ್ನು ವರ್ಣಿಸಿ ನಂತರ ಶೃಂಗಾರಿಗಳ ಪ್ರಸಾಧನ ವಿಧಿಯನ್ನು ವರ್ಣಿಸುತ್ತಾನೆ.

10. ದಶಮ ಸರ್ಗ

ಯಾದವರು ಪಾನಗೋಷ್ಠಿಯಲ್ಲಿ ವಿನೋದದಿಂದಿದ್ದು ಭೋಗವಿಲಾಸಗಳಲ್ಲಿ ತೊಡಗುತ್ತಾರೆ.

11. ಏಕಾದಶ ಸರ್ಗ

ಪ್ರಭಾತ ವರ್ಣನೆ.

12. ದ್ವಾದಶ ಸರ್ಗ

ಶ್ರೀಕೃಷ್ಣನು ಪರಿವಾರ ಸಮೇತನಾಗಿ ರೈವತಕ ಪರ್ವತದಿಂದ ಪ್ರಯಾಣ ಮಾಡುವನು. ಯಮುನಾನದಿಯ ನೋಟ, ಅದರ ವರ್ಣನೆ.

13. ತ್ರಯೋದಶ ಸರ್ಗ

ಶ್ರೀಕೃಷ್ಣನು ರಾಜಧಾನಿಯ ಬಳಿಗೆ ಬಂದನೆಂದು ಕೇಳಿ ಯುಧಿಷ್ಠಿರನು ತಮ್ಮಂದಿರೊಂದಿಗೆ ಎದುರುಗೊಳ್ಳಲು ಹೋಗುತ್ತಾನೆ. ಅವನ ಆನಂದವನ್ನು ಹೇಳತೀರದು. ಧರ್ಮರಾಜನನ್ನು ಕಂಡ ಕೂಡಲೇ ಶ್ರೀಕೃಷ್ಣನು ರಥದಿಂದಿಳಿದು ಅವನಿಗೆ ನಮಸ್ಕರಿಸುವನು. ಧರ್ಮರಾಯನು ಸಂಭ್ರಮದಿಂದ ಅವನನ್ನು ಆಲಿಂಗಿಸುವನು.

ಅನಂತರ ಉಳಿದ ಅತಿಥಿಗಳೊಡನೆ ಯಥೋಚಿತವಾದ ಕುಶಲ ಸಂಭಾಷಣೆಗಳೂ ಸತ್ಕಾರಗಳೂ ನಡೆದ ಮೇಲೆ, ಶ್ರೀಕೃಷ್ಣನು ಅರ್ಜುನನ ಕೈಯನ್ನು ಹಿಡಿದುಕೊಂಡು ರಥವನ್ನೇರುವನು. ಧರ್ಮರಾಜನೇ ಸ್ವತಃ ಸಾರಥ್ಯವನ್ನು ವಹಿಸುವನು, ಎಲ್ಲರೂ ಇಂದ್ರಪ್ರಸ್ಥನಗರವನ್ನು ಪ್ರವೇಶಿಸುವರು. ಪೌರನಾರಿಯರು ನಾನಾ ಭಾವ-ವಿಕಾರಗಳಿಗೆ ಒಳಗಾಗುವರು. ಶ್ರೀಕೃಷ್ಣನು ಯುಧಿಷ್ಠಿರನ ಸಭಾಗೃಹವನ್ನು ಪ್ರವೇಶಿಸುವನು.

14. ಚತುರ್ದಶ ಸರ್ಗ

ಧರ್ಮರಾಜನು ರಾಜಸೂಯಯಾಗವನ್ನು ವಿಧಿವತ್ತಾಗಿ ನೆರವೇರಿಸುವನು; ಸದಸ್ಯರಲ್ಲಿ ಶ್ರೇಷ್ಠನಾದವನನ್ನು ಯಜಮಾನನು ಪೂಜಿಸುವುದು ಪದ್ಧತಿಯಾದುದರಿಂದ ಯಾರನ್ನು ಪೂಜಿಸಬೇಕೆಂದು ಧರ್ಮರಾಜನು ಭೀಷ್ಮರನ್ನು ಕೇಳುತ್ತಾನೆ. ಭೀಷ್ಮನು ಶ್ರೀಕೃಷ್ಣನೇ ಪೂಜಾರ್ಹನೆಂದು ಹೇಳಿ, ಶ್ರೀಕೃಷ್ಣನ ಮಹಿಮೆಯನ್ನು ವರ್ಣಿಸಿ ಸ್ತೋತ್ರ ಮಾಡುತ್ತಾನೆ.

15. ಪಂಚದಶ ಸರ್ಗ

ಶ್ರೀಕೃಷ್ಣನು ಪೂಜಾರ್ಹನೆಂಬ ಭೀಷ್ಮನ ಮಾತನ್ನು ಕೇಳಿ ಶಿಶುಪಾಲನಿಗೆ ಮಹಾ ಕ್ರೋಧವುಂಟಾಗುವುದು. ಆಗ ಭೀಷ್ಮನು ಶ್ರೀಕೃಷ್ಣನ ಮಹಿಮೆಯನ್ನು ಪುನಃ ಕೊಂಡಾಡುವನು. ಶಿಶುಪಾಲನಿಗೆ ಶ್ರೀಕೃಷ್ಣನ ಯೋಗ್ಯತೆಯು ಗೊತ್ತಿಲ್ಲವೆಂದೂ ಹೇಳುವನು. ಆಗ ಶಿಶುಪಾಲನಿಗೂ ಅವನ ಪಕ್ಷದ ರಾಜರಿಗೂ ಕೋಪವು ಮಿತಿ ಮೀರುತ್ತದೆ. ಶಿಶುಪಾಲನು "ಇನ್ನು ಯುದ್ಧವು ಅನಿವಾರ್ಯ" ಎಂದು ಘೋಷಿಸಿ ಸಭಾ ಭವನದಿಂದ ಹೊರಕ್ಕೆ ಹೋಗಿ ಸೈನ್ಯವನ್ನು ಸಿದ್ಧಪಡಿಸುತ್ತಾನೆ. ರಣರಂಗಕ್ಕೆ

ಹೊರಡಲು ಸಿದ್ಧರಾದ ಯೋಧರೂ ಅವರ ಪತ್ನಿಯರೂ ಕೂಡ ಮುಂದೆ ಒದಗ ಬಹುದಾದ ವಿಪತ್ತನ್ನು ಊಹಿಸಿ ತಮ್ಮ ವಿರಹ ದುಃಖವನ್ನು ವ್ಯಕ್ತಪಡಿಸುತ್ತಾರೆ.

16. ಷೋಡಶ ಸರ್ಗ

ಶಿಶುಪಾಲನ ದೂತನು ರಾಜಸಭೆಗೆ ಬಂದು ಶಿಶುಪಾಲನಿಗೆ ಶರಣಾಗತನಾಗ ಬೇಕೆಂದು ಶ್ರೀಕೃಷ್ಣನಿಗೆ ಹೇಳುತ್ತಾನೆ. ಮೇಲುನೋಟಕ್ಕೆ ಶ್ರೀಕೃಷ್ಣನ ಸ್ತುತಿಯೂ, ಗೂಢವಾಗಿ ನಿಂದೆಯೂ ಇರುವಂತೆ ಅವನು ಎರಡು ಅರ್ಥ ಕೊಡುವಂತಹ ಮಾತು ಗಳನ್ನಾಡುತ್ತಾನೆ. ಆ ಮಾತಿಗೆ ಅಸಮಾಧಾನಗೊಂಡ ಸಾತ್ಯಕಿಯು ದೂತನಿಗೆ ಪ್ರತಿಯಾಗಿ ತಕ್ಕ ಉತ್ತರವನ್ನು ಕೊಡುತ್ತಾನೆ. ಪುನಃ ದೂತನು ಶ್ರೀಕೃಷ್ಣನಿಗೆ ಬುದ್ಧಿವಾದವನ್ನು ಹೇಳುತ್ತಾ ಶಿಶುಪಾಲನ ಬಲ-ಪರಾಕ್ರಮಗಳನ್ನು ವರ್ಣಿಸುತ್ತಾನೆ.

17. ಸಪ್ತದಶ ಸರ್ಗ

ದೂತನ ಆ ಉದ್ಧಟ ವಚನಗಳನ್ನು ಕೇಳಿ ಸಭೆಯಲ್ಲಿದ್ದವರು ಪ್ರಕ್ಷುಬ್ಧ ರಾಗುತ್ತಾರೆ. ಶ್ರೀಕೃಷ್ಣನ ನಿಂದೆಯಿಂದ ರಾಜರು ಸಿಟ್ಟಿಗೇಳುವರು. ದೂತನು ಹೊರಟು ಹೋಗುವನು. ಶ್ರೀಕೃಷ್ಣನ ಸೇನೆಯು ಶಿಶುಪಾಲನೊಡನೆ ಯುದ್ಧಕ್ಕೆ ಹೊರಡುವುದು.

18. ಅಷ್ಟಾದಶ ಸರ್ಗ

ಎರಡು ಸೈನ್ಯಗಳೂ ರಣರಂಗದಲ್ಲಿ ಎದುರಾಗುವವು. ತುಮುಲಯುದ್ಧ ನಡೆಯುವುದು.

19. ಏಕೋನವಿಂಶ ಸರ್ಗ

ಚಿತ್ರ ಯುದ್ಧ ನಡೆಯುವುದು. ಈ ಸರ್ಗದಲ್ಲಿ ಕವಿಯು ಬಗೆ ಬಗೆಯ ಶಬ್ದಾಲಂಕಾರಗಳಿಂದ ಚಿತ್ರ ಯುದ್ಧವನ್ನು ವರ್ಣಿಸಿದ್ದಾನೆ.

20. ವಿಂಶ ಸರ್ಗ

ಶ್ರೀಕೃಷ್ಣನಿಗೂ ಶಿಶುಪಾಲನಿಗೂ ಘೋರವಾದ ಯುದ್ಧ ನಡೆಯುತ್ತದೆ. ಕೊನೆಯಲ್ಲಿ ಶ್ರೀಕೃಷ್ಣನು ಚಕ್ರಾಯುಧದಿಂದ ಶಿಶುಪಾಲನನ್ನು ಸಂಹರಿಸುತ್ತಾನೆ.

ಹೀಗೆ ಇಪ್ಪತ್ತು ಸರ್ಗಗಳಲ್ಲಿ ಒಟ್ಟು 1633 ಶ್ಲೋಕಗಳಿಂದ ಈ ಕಥೆಯು ವರ್ಣಿಸಲ್ಪಟ್ಟಿದೆ. ಹದಿನೆಂಟನೆಯ ಸರ್ಗದಲ್ಲಿ ಪ್ರಕ್ಷಿಪ್ತವೆನ್ನಲಾದ 34 ಪದ್ಯಗಳು

ಈ ಸಂಖ್ಯೆಯಲ್ಲಿ ಸೇರಿಲ್ಲ. ಮೊದಲನೇ ಎರಡು ಸರ್ಗಗಳಲ್ಲಿ ಕಥಾಭಾಗವು ಮನೋಹರವಾಗಿ ಚಿತ್ರಿತವಾಗಿದೆ. ಆದರೆ ಮುಂದಿನ ಸರ್ಗಗಳಲ್ಲಿ ಕಥೆಯು ಅದೇ ಗತಿಯಿಂದ ಮುಂದುವರಿಯುವದಿಲ್ಲ. ವಾಚಕರಿಗೆ ಇದೊಂದು ವಿಷಯದಲ್ಲಿ ಆಶಾಭಂಗವಾಗುವುದೆಂದೇ ಹೇಳಬೇಕು. ಕಥೆಯು ನಿರೀಕ್ಷೆಯಂತೆ ಮುಂದುವರಿಯದೇ ಅನಾವಶ್ಯಕವಾದ ವರ್ಣನೆಗಳಿಂದ ಮುಗ್ಗರಿಸುತ್ತದೆ. ರೈವತಕ ಗಿರಿಯ ವರ್ಣನೆ, ಸೂರ್ಯಾಸ್ತ, ವನವಿಹಾರ, ಜಲಕ್ರೀಡೆ, ಮೊದಲಾದ ಅಂಶಗಳು ಕಥಾ ಸಂದರ್ಭಕ್ಕೆ ಅವಶ್ಯಕಗಳೇನಲ್ಲ. ಆದರೂ ಕವಿಯು ಆ ಅಂಶಗಳನ್ನು ವರ್ಣಿಸಬೇಕೆಂಬ ಚಾಪಲ್ಯದಿಂದ ಬಲಾತ್ಕಾರವಾಗಿ ಅವುಗಳನ್ನು ಸೇರಿಸಿದ್ದಾನೆ. ಈ ಎಲ್ಲ ವರ್ಣನೆಗಳೂ ಅತ್ಯಂತ ಮನೋಹರವಾಗಿವೆಯೆಂಬುದರಲ್ಲಿ ಸಂದೇಹವೇನೂ ಇಲ್ಲ. ಆದರೆ ಸಂದರ್ಭೋಚಿತವಲ್ಲ. ಅವು ಮಹಾಕಾವ್ಯದ ಲಕ್ಷಣವನ್ನು ಪೂರ್ತಿ ಮಾಡುವುದಕ್ಕಾಗಿ ಬರೆದವು. ಶ್ರೀಕೃಷ್ಣನು ದ್ವಾರಕೆಯಿಂದ ಹೊರಡುತ್ತಿದ್ದ ಹಾಗೆಯೇ ಅತಿ ಸಮೀಪದಲ್ಲಿದ್ದ ರೈವತಕ ಗಿರಿಯಲ್ಲಿ ಬೀಡು ಬಿಡುವುದು ಯುಕ್ತವೆನಿಸಲಾರದು. ಮುಂದೆ ಶಿಶುಪಾಲನ ದೂತನು ಶ್ರೀಕೃಷ್ಣನನ್ನು ಕುರಿತು ನಿಂದಾಸ್ತುತಿಯುಕ್ತವಾದ ಶ್ಲೇಷೋಕ್ತಿಯನ್ನಾಡುವುದೂ ಸಮಂಜಸವೆನಿಸದು. ರಾಜದೂತನ ಮಾತು ನಿಷ್ಕೃಷ್ಟವಾದ ಒಂದು ಅರ್ಥವನ್ನು ಕೊಡಬೇಕಲ್ಲದೆ ಎರಡರ್ಥವನ್ನು ಕೊಡತಕ್ಕದಾಗಿರಬಾರದು. ಶ್ರೀಕೃಷ್ಣನನ್ನು ಸ್ತುತಿಸುವುದು ಅವನ ಕೆಲಸವಲ್ಲ. ತನ್ನ ಒಡೆಯನ ಸಂದೇಶವನ್ನು ತಿಳಿಸಿ ಹೊರಟುಹೋಗುವುದು ಅವನ ಕೆಲಸ. ಇಲ್ಲಿ ಕವಿಯು ಸಂದರ್ಭದ ಔಚಿತ್ಯದ ಕಡೆಗೆ ಹೆಚ್ಚು ಗಮನ ಕೊಟ್ಟಿಲ್ಲವೆಂದೇ ಹೇಳಬೇಕಾಗುತ್ತದೆ.

ಈ ಕಾವ್ಯದ ನಾಯಕ, ರಸ, ಮೊದಲಾದುವುಗಳನ್ನು ಕುರಿತು ಮಲ್ಲಿನಾಥನು :

> ನೇತಾಸ್ಮಿನ್ ಯದುನಂದನಃ ಸ ಭಗವಾನ್ ವೀರಃ ಪ್ರಧಾನೋ ರಸಃ
> ಶೃಂಗಾರಾದಿಭಿರಂಗವಾನ್ ವಿಜಯತೇ ಪೂರ್ಣಾ ಪುನರ್ವರ್ಣನಾ ।
> ಇಂದ್ರಪ್ರಸ್ಥಗಮಾದ್ಯುಪಾಯ ವಿಷಯಶ್ಚೈದ್ಯಾವಸಾದಃ ಫಲಂ
> ಧನ್ಯೋ ಮಾಘಕವಿರ್ವಯಂತು ಕೃತಿನಸ್ತತ್‌ಸೂಕ್ತಿ ಸಂಸೇವನಾತ್ ॥

ಎಂದು ಹೇಳಿದ್ದಾನೆ. "ಈ ಕಾವ್ಯದಲ್ಲಿ ಭಗವಾನ್ ಶ್ರೀಕೃಷ್ಣನು ನಾಯಕ, ವೀರರಸವು ಪ್ರಧಾನ, ಶೃಂಗಾರಾದಿಗಳು ಅದಕ್ಕೆ ಅಂಗಭೂತವಾಗಿವೆ. ನಗರಾರ್ಣವ ಶೈಲರ್ತು- ಮುಂತಾದವುಗಳ ವರ್ಣನೆಯು ಪೂರ್ಣವಾಗಿ ಬಂದಿದೆ. ಇಂದ್ರಪ್ರಸ್ಥ ಗಮನವೇ ಮೊದಲಾದ ಉಪಾಯಗಳಿಂದಾಗುವ ಶಿಶುಪಾಲ ಸಂಹಾರವೇ ಫಲ. ಕಾವ್ಯವನ್ನು ಬರೆದ ಮಾಘಕವಿ ಧನ್ಯ: ಈ ಸುಂದರಕಾವ್ಯವನ್ನೋದಿ ನಾವೂ ಕೂಡ ಧನ್ಯರಾದೆವು."

ಶ್ರೀಕೃಷ್ಣನು ನಾಯಕನಾದರೂ ಅವನು ನಮ್ಮ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವವನ್ನೇನೂ ಬೀರುವುದಿಲ್ಲ. ಕಾವ್ಯದಲ್ಲಿ ಅವನ ಮಾತುಗಳು ಕೆಲವೇ

ಕೆಲವು, ದ್ವಿತೀಯ ಸರ್ಗದಲ್ಲಿ ಬಲಭದ್ರ ಉದ್ಧವರ ರಾಜಕೀಯ ವಿಮರ್ಶೆಗೆ ಅವನ ಮಾತುಗಳು ಕೇವಲ ಸೂತ್ರಪ್ರಾಯವಾಗಿವೆ. "ಮಹೀಯಾಂಸಃ ಪ್ರಕೃತ್ಯಾ ಮಿತ-ಭಾಷಿಣಃ" ಎಂದು ಕವಿಯು ಅದಕ್ಕೆ ಸಮಾಧಾನ ಹೇಳುವನು. ಮುಂದೆ ಯುಧಿಷ್ಠಿರನ ರಾಜಸಭೆಯಲ್ಲಿ ಅವನಿಗೆ ಅಗ್ರಪೂಜೆಯು ಪ್ರಾಪ್ತವಾದರೂ ಅವನು ಈ ಕಾವ್ಯದಲ್ಲಿ ನಮಗೆ "ಮೂಲವಿಗ್ರಹ'' ದಂತೆ ಭಾಸವಾಗುತ್ತಾನೆ. ಶಿಶುಪಾಲನ ದೂತನಿಗೆ ಶ್ರೀಕೃಷ್ಣನ ಪರವಾಗಿ ಸಾತ್ಯಕಿಯು ಉತ್ತರ ಹೇಳುವನು. ರಣರಂಗವಂತೂ ಭಾಷಣಕ್ಕೆ ಸ್ಥಾನವೇ ಅಲ್ಲವಷ್ಟೆ. ಏನಿದ್ದರೂ ಮೊದಲನೆಯ ಸರ್ಗದಲ್ಲಿ ನಾರದ ರೊಡನೆ ಸಂಭಾಷಿಸಿರುವುದಷ್ಟೇ ಈ ಕಾವ್ಯದಲ್ಲಿ ಶ್ರೀಕೃಷ್ಣನ ಮಾತೆನ್ನಬಹುದು. ನಾರದ, ಭೀಷ್ಮ, ಮಾಘಕವಿ ಈ ಮೂವರ ಮಾತುಗಳಿಂದ ಶ್ರೀಕೃಷ್ಣನು ನಾಯಕಪದವಿಗೆ ಅರ್ಹನೆಂದು ನಾವು ಭಾವಿಸಬೇಕಾಗುತ್ತದೆ. ವಾಚಕರ ಮನಸ್ಸಿನ ಮೇಲೆ ಪ್ರತಿನಾಯಕನಾದ ಶಿಶುಪಾಲನ ವಚನಗಳೇ ಹೆಚ್ಚು ಪ್ರಭಾವವನ್ನು ಬೀರುತ್ತವೆ. ಅವನಿಗಿಂತಲೂ ಬಲಭದ್ರನು ನಮ್ಮ ಮನಸ್ಸಿನ ಮೇಲೆ ಗುರುತರವಾದ ಮುದ್ರೆಯನ್ನೊತ್ತುವನು. ಆದರೆ ಎರಡನೆಯ ಸರ್ಗದಲ್ಲಿ ಮಾತ್ರವೇ ದೇದೀಪ್ಯ ಮಾನವಾಗಿ ಕಾಣಿಸಿಕೊಂಡು ಮತ್ತೆ ಮಾಯವಾಗಿ ಬಿಡುತ್ತಾನೆ.

ಬಲರಾಮನು ಧೀರೋದ್ಧತ. ಕಿರಾತಾರ್ಜುನೀಯದಲ್ಲಿ ಭೀಮನಿದ್ದಂತೆ, ಅವನು ಯುದ್ಧಪ್ರಿಯ. ದುಡುಕು ಬಹಳ. ಅವನ ಮಾತುಗಳೋ ರೌದ್ರದ ರಸಘಟ್ಟಗಳು: ಅಷ್ಟೊಂದು ತೇಜಸ್ವಿಯಾಗಿದೆ ಅವನ ವಾಗ್ವಿಲಾಸ. ಅವನ ಮಾತುಗಳ ಆ ಓಜಸ್ವೀ ಪದ್ಯಗಳನ್ನು ಓದಿದಷ್ಟೂ ಕಡಿಮೆಯೇ! ಶಿಶುಪಾಲನ ಮೇಲೆ ನೇರವಾಗಿ ದಂಡಯಾತ್ರೆಯನ್ನು ಕೈಗೊಳ್ಳಬೇಕೆಂದು ಅವನ ಅಪೇಕ್ಷೆ. "ಧರ್ಮರಾಜನು ಯಾಗವನ್ನು ಮಾಡಿದರೆಷ್ಟು ? ಬಿಟ್ಟರೆಷ್ಟು ? ನಮ್ಮ ಹಿತವನ್ನು ನಾವು ನೋಡಿ ಕೊಳ್ಳೋಣ. ಧರ್ಮರಾಜನು ಯಜ್ಞ ಮಾಡುವುದು ತನ್ನ ಹಿತಕ್ಕಾಗಿಯೇ. ಈಗ ದಂಡಯಾತ್ರೆ ಬೇಡೆಂದು ಉದ್ಧವನು ಹೇಳಬಹುದು. ಅವನಿಗೆ ರಾಜನೀತಿ ಯೇನು ಗೊತ್ತು? ಕಂಠಪಾಠ ಮಾಡಿದ ಕೆಲವು ನೀತಿ ವಾಕ್ಯಗಳನ್ನು ಉದಾಹರಿಸಿದ ಮಾತ್ರಕ್ಕೆ ರಾಜನೀತಿ ನಿಪುಣನೆಂದಾಗುವುದಿಲ್ಲ. "ಗ್ರಂಥಾನಧೀತ್ಯ ವ್ಯಾಕರ್ತುಂ ಇತಿ ದುರ್ಮೇಧಸೋಽಪ್ಯಲಂ" ನೀತಿಶಾಸ್ತ್ರದ ಮೂಲಭೂತ ರಹಸ್ಯವಾದರೂ ಏನು? ತಮ್ಮ ಏಳಿಗೆ, ಪರರ ಹಾನಿಗಳನ್ನು ಗುರಿಯಾಗಿಟ್ಟುಕೊಂಡು ರಾಜನೀತಿಯನ್ನು ಪ್ರಯೋಗಿಸಬೇಕೆಂಬುದೇ ಅಲ್ಲವೇ? ಶಿಶುಪಾಲನು ಮೊದಲಿನಿಂದಲೂ ನಮಗೆ ಶತ್ರು ವಾಗಿರುವನು. ಉದ್ಧತನಾದ ಅವನು ಸಾಮೋಪಾಯಕ್ಕೆ ಎಂದೂ ಬಗ್ಗನು. ಕುದಿಯುವ ತುಪ್ಪಕ್ಕೆ ನೀರು ಚಿಮುಕಿಸಿದರೆ ಅದು ಮತ್ತೂ ಅಷ್ಟು ಪ್ರಜ್ವಲಿಸುವು ದಲ್ಲವೇ ? ವೈರಿಯನ್ನು ಉಪೇಕ್ಷಿಸುವುದೂ ಒಂದೇ; ಹುಲ್ಲಿನ ರಾಶಿಗೆ ಬೆಂಕಿಯಿಟ್ಟು ಅದಕ್ಕೆ ಮೈ ಆನಿಸುವುದೂ ಒಂದೇ. ಶಿಶುಪಾಲನಿಂದ ನಮಗೆ ಆದೆಷ್ಟು ಕಿರುಕುಳ

ಗಳಾಗಿಲ್ಲ ? ಆ ಅವಮಾನವನ್ನು ಸಹಿಸಿಕೊಳ್ಳುವುದಾದರೂ ಹೇಗೆ? ವೈರಿಯಿಂದಾದ ಅವಮಾನವನ್ನು ಸಹಿಸಿಕೊಂಡು ಸುಮ್ಮನಿರುವವನು ಕೈಲಾಗದ ಹೇಡಿ. ಅವನು ಹುಟ್ಟಿದುದು ತಾಯಿಗೆ ಕಷ್ಟ ಕೊಡುವುದಕ್ಕೆ ಮಾತ್ರ. ಅಂತಹವನು ಹುಟ್ಟದಿರುವುದೇ ಒಳ್ಳೆಯದು. ಬೀದಿಯಲ್ಲಿನ ಧೂಳು ಒಂದು ಕ್ಷುದ್ರ ವಸ್ತು. ಅದು ಕೂಡ ಕಾಲಿನಿಂದ ತುಳಿದರೆ, ನೆಗೆದು ತುಳಿದವನ ತಲೆಯನ್ನೇರುವುದು. ಇನ್ನು ಮನುಷ್ಯನೆನಿಸಿಕೊಂಡಿರುವವನು ಹೇಗಿರಬೇಕು? ಪೌರುಷವಿರುವವನೇ ಪುರುಷ. ಪೌರುಷವಂತನಿಗೆ ದೂರ, ಸಮೀಪವೆಂಬ ಭೇದವಿಲ್ಲ. ಹಲವಾರು ಕೋಟಿ ಮೈಲಿಗಳ ದೂರದಲ್ಲಿದ್ದರೂ ಸೂರ್ಯನು ತೇಜಸ್ವಿಯಾದ್ದರಿಂದ ಪಂಚಾಗ್ನಿಗಳಲ್ಲಿ ಒಬ್ಬನೆನಿಸಿರುವನು. ನಿಷ್ಠುರನಾದ ಮನುಷ್ಯನೇ ಸ್ವಾಮಿಯಾಗಲು ಅರ್ಹ. "ಕೇಸರೀ ನಿಷ್ಠುರಕ್ಷಿಪ್ತಮೃಗಯೂಥೋ ಮೃಗಾಧಿಪಃ" ನಿರ್ದಯವಾಗಿ ಮೃಗಗಳನ್ನು ಸದೆಬಡಿಯುವುದರಿಂದಲೇ ಸಿಂಹವು ಮೃಗಾಧಿಪವೆನಿಸಿದೆ. ಆದ್ದರಿಂದ ನಾವು ಸೈನ್ಯಸಮೇತರಾಗಿ ಹೋಗಿ ಚೈದ್ಯದೇಶವನ್ನು ಮುತ್ತಲೇಬೇಕು" ಎಂದು ಆರ್ಭಟಿಸುವನು. ಬಲರಾಮನು ತನ್ನ ಮಾತನ್ನು ಹೀಗೆ ಉಪಸಂಹರಿಸುತ್ತಾನೆ:

> ಪ್ರಾಪ್ಯತಾಂ ವಿದ್ಯುತಾಂ ಸಂಪತ್ ಸಂಪರ್ಕಾದರ್ಕರೋಚಿಷಾಮ್ ।
> ಶಸ್ತ್ರೈರ್ದ್ವಿಷಚ್ಛಿರಚ್ಛೇದಪ್ರೋಚ್ಛಲಚ್ಛೋಣಿತೋಕ್ಷಿತೈಃ ॥

"ಶತ್ರುಗಳ ರುಂಡಗಳನ್ನು ತುಂಡರಿಸಿದಾಗ ಉಕ್ಕುವ ರಕ್ತದಲ್ಲಿ ಅದ್ದಿದ ನಮ್ಮ ಕತ್ತಿಗಳನ್ನು ಮೇಲೆತ್ತಿ ಝಳಪಿಸಿದರೆ ಸೂರ್ಯ ಕಿರಣಗಳು ತಾಕಿ ಮಿಂಚಿನಂತೆ ಹೊಳೆಯುತ್ತಿರಬೇಕು"

ಎಂತಹ ಓಜಸ್ವಿಯಾದ ಶಬ್ದ ರಚನೆ! ಬಲಭದ್ರನ ಮಾತುಗಳನ್ನು ಕೇಳಿದರೆ, ಅವನೇನು ಮಂತ್ರಾಲೋಚನೆ ಹೇಳುತ್ತಿರುವನೋ? ಅಥವಾ ರಣರಂಗದಲ್ಲಿ ಕತ್ತಿಯನ್ನು ಹಿರಿದು ಶತ್ರುಗಳ ತಲೆಗಳನ್ನು ಚೆಂಡಾಡುತ್ತಿರುವನೋ ? ಎಂದು ಸಂದೇಹವಾಗುವುದು. ಬಲಭದ್ರನ ಈ ರೋಷಾವೇಶವನ್ನು ಮಾಘಕವಿಯು ಅಂದವಾಗಿ ಬಣ್ಣಿಸಿರುವನು :

> ಇತಿ ಸಂರಂಭಿಣೋ ವಾಣೀರ್ಬಲಸ್ಯಾಲೇಖ್ಯದೇವತಾಃ ।
> ಸಭಾಭಿತ್ತಿ ಪ್ರತಿಧ್ವಾನೈರ್ಭಯಾದನ್ವವದನ್ನಿವ ॥

"ಕ್ಷುಭಿತನಾದ ಬಲಭದ್ರನ ಈ ರೋಷೋಕ್ತಿಗಳು ಸುತ್ತಲೂ ಇದ್ದ ಗೋಡೆಗಳಿಂದ ಪ್ರತಿಧ್ವನಿಸಿದವು. ಆಗ, ಗೋಡೆಯ ಮೇಲೆ ಚಿತ್ರಿಸಿದ್ದ ನಾನಾ ದೇವತೆಗಳು ಬಲಭದ್ರನಿಗೆ ಹೆದರಿಕೊಂಡು, ಅವನು ಹೇಳಿದಂತೆಯೇ ಹೇಳುತ್ತಾ "ಹೌದು ಹೌದು" ಎಂದು ಕೂಗಿಕೊಳ್ಳುತ್ತಿರುವಂತೆ ತೋರಿತು !"

ಮುಂದೆ, ಹದಿನೈದನೆಯ ಸರ್ಗದಲ್ಲಿ ಪ್ರತಿನಾಯಕನಾದ ಶಿಶುಪಾಲನ ಕ್ರೋಧ ಭಾವಗಳನ್ನು ಪರೀಕ್ಷಿಸೋಣ. ವರ್ಣನೆಗೆ ಉಪಯೋಗಿಸಿರುವ ಉದ್ಗತಾವೃತ್ತವು ಕ್ರೋಧಭಾವಗಳ ಚಿತ್ರಣಕ್ಕೆ ಚೆನ್ನಾಗಿ ಒಪ್ಪುತ್ತದೆ.

ಅಥ ತತ್ರ ಪಾಂಡುತನಯೇನ ಸದಸಿ ವಿಹಿತಂ ಮಧುದ್ವಿಷಃ ।
ಮಾನಮಸಹತ ನ ಚೇದಿಪತಿಃ ಪರವೃದ್ಧಿಮತ್ಸರಿ ಮನೋ ಹಿ ಮಾನಿನಾಮ್ ॥

ಈ ವೃತ್ತದ ನಾಲ್ಕು ಪಾದಗಳಲ್ಲಿಯೂ ಕ್ರಮವಾಗಿ, ಮೂರು, ಆರು, ಒಂದು, ಮೂರನೇ ಅಕ್ಷರಗಳನ್ನು ಪ್ಲುತದಂತೆ ದೀರ್ಘವಾಗಿ ಎಳೆದು ಉಚ್ಚರಿಸಬೇಕು. **ಮಾ** ಎಂಬ ಅಕ್ಷರವನ್ನು ಎಳೆದು ಮೂರನೇ ಪಾದವನ್ನು ಮತ್ತೊಮ್ಮೆ ಹೇಳಿ ನೋಡಿ!

ಶಿಶುಪಾಲನ ಆಕ್ರೋಶವು ಮೊದಲು ಧರ್ಮರಾಜನನ್ನು ಬಯಲಿಗೆಳೆಯುವದು :

ತವ ಧರ್ಮರಾಜ ಇತಿ ನಾಮ ಕಥಮಿದಮುಪಪ್ಲು ಪಠ್ಯತೇ ।
ಭೌಮದಿನಮಭಿದಧತ್ಯಥವಾ ಭೃಶಮಪ್ರಶಸ್ತಮಪಿ ಮಂಗಲಂ ಜನಾಃ ॥

"ನಿನಗೆ ಧರ್ಮರಾಜನೆಂಬ ಹೆಸರು ಉಚಿತವಲ್ಲ. ಅದು ಅಸತ್ಯ. ಅಮಂಗಳಕರವಾದ ಕುಜವಾರವನ್ನು ಮಂಗಳವಾರವೆಂದು ಕರೆಯುವಂತೆ ಅಧರ್ಮರಾಜನಾದ ನಿನ್ನನ್ನು ಜನರು ಧರ್ಮರಾಜನೆಂದು ಕರೆಯುತ್ತಿರಬೇಕು".

ಅನಂತರ ಈ ಕ್ರೋಧವು ಭೀಷ್ಮರ ಕಡೆಗೆ ತಿರುಗುವುದು. ಏಕೆಂದರೆ, ಅಗ್ರಪೂಜೆಗೆ ಶ್ರೀಕೃಷ್ಣನೇ ಯೋಗ್ಯನೆಂದು ಸೂಚಿಸಿದವರೇ ಭೀಷ್ಮರು. "ಭೀಷ್ಮನಿಗೆ ವಯಸ್ಸಾದುದು ವ್ಯರ್ಥ. ಅವನು ವೃಥಾಫಲಿತ; ಹತಬುದ್ಧಿ. ಅದು ಹೋಗಲಿ, ಕೃಷ್ಣನಾದರೂ ಪೂಜೆ ಮಾಡಿಸಿಕೊಳ್ಳಲು ಹೇಗೆ ಒಪ್ಪಿದ? ತನ್ನ ಯೋಗ್ಯತೆ ತನಗೆ ತಿಳಿಯದೇ? "ಸ್ಫುಟಮಾಪದಾಂ ಪದಮನಾತ್ಮವೇದಿತಾ"—"ತನ್ನ ಸ್ವರೂಪವನ್ನು ತಾನು ಅರಿಯದಿರುವುದು ಆಪತ್ತಿಗೇ ಕಾರಣ". ಗುಣಹೀನನಿಗೆ ಪೂಜೆಯೋ? **ಬೋಳುತಲೆಗೆ ಬಾಚಣಿಗೆಯೋ?**

ಲಗಾಮಿಲ್ಲದ ಶಿಶುಪಾಲನ ಮಾತಿನಿಂದ ಭೀಷ್ಮರ ಕೋಪ ಮಿತಿ ಮೀರಿತು—"ಶ್ರೀಕೃಷ್ಣನ ಪೂಜೆಯನ್ನು ಯಾರು ಅನುಮೋದಿಸುವದಿಲ್ಲವೋ ಅಂತಹವರ ತಲೆಯ ಮೇಲೆ, ಇಗೋ! ನನ್ನ ಪಾದವನ್ನು ಇಟ್ಟಿರುವೆನು. ಸಾಮರ್ಥ್ಯವಿದ್ದರೆ ಧನುಸ್ಸಿನ ಹೆದೆಯೇರಿಸಲಿ!" ಎಂದು ಗರ್ಜಿಸುವರು. ಸರಿ; ಶಿಶುಪಾಲನ ಕೋಪಕ್ಕೆ ಪಾರವಿಲ್ಲದಾಯಿತು. ವಿವೇಕ ಮಾಯವಾಯಿತು. ತನ್ನ ಪಕ್ಷದ ರಾಜರನ್ನು ಕುರಿತು: "ಎಲೈ ನೃಪಾಲರೇ! ಏನು ನೋಡುವಿರಿ? ಈ ಐದು ಮಂದಿ ಜಾರ ಜಾತಕರನ್ನೂ (ಪಾಂಡವರನ್ನು) ಈ ಮುದಿ ಹೆಂಗಸನ್ನು (ಭೀಷ್ಮರನ್ನು) ಈ

ದಾಸನನ್ನೂ (ಶ್ರೀಕೃಷ್ಣ, ಕಂಸನ ಪಶುಪಾಲ) ಕೊಂದು ಹಾಕಿರಿ!" ಎಂದು ಅಬ್ಬರಿಸುವನು. "ಅಥವಾ ನೀವೆಲ್ಲರೂ ಸುಮ್ಮನಿರಿ, ಅಗ್ರಪೂಜೆಯನ್ನು ಮಾಡಿಸಿಕೊಳ್ಳಬೇಕೆಂದಿರುವ ಈ ಕೃಷ್ಣನ ಪರೀಕ್ಷೆಯಾಗಿ ಹೋಗಲಿ! ನನ್ನೊಬ್ಬನೊಡನೆ ಅವನು ಯುದ್ಧಮಾಡಲಿ ಸಾಕು. ವೃಥಾ ಮಾತುಗಳಿಂದೇನು ಫಲ?" ಎಂದು ಗರ್ಜಿಸುತ್ತಾ ಯುದ್ಧಸನ್ನದ್ಧನಾಗುವುದಕ್ಕಾಗಿ ಸಭೆಯಿಂದ ಹೊರಟು ಹೋಗುವನು.

ಈ ಕಾವ್ಯದಲ್ಲಿ "ವೀರಃ ಪ್ರಧಾನೋರಸಃ" ಎಂದು ಮಲ್ಲಿನಾಥನು ಹೇಳಿದ್ದಾನೆ. ಅದು ಪ್ರಧಾನವಾದರೂ ಶೃಂಗಾರ ರಸದ ವಿಷಯದಲ್ಲಿ ಕವಿಗೆ ಒಲವು ಹೆಚ್ಚೆಂದು ತೋರುತ್ತದೆ. ಏನಾದರೂ ಒಂದು ಸನ್ನಿವೇಶವನ್ನು ಕಲ್ಪಿಸಿಕೊಂಡು ಎಲ್ಲೆಂದರಲ್ಲಿ ಅವನು ಶೃಂಗಾರವನ್ನು ವರ್ಣಿಸದೇ ಬಿಡುವುದಿಲ್ಲ.

ಐದನೇ ಸರ್ಗದಲ್ಲಿ ಸೇನಾನಿವೇಶವನ್ನು ವರ್ಣಿಸುವಾಗ ಆನೆ ಕುದುರೆಗಳ ಸ್ವಭಾವಗಳನ್ನು ವಿಸ್ತಾರವಾಗಿ ವರ್ಣಿಸಿದ್ದಾನೆ. ಕವಿಗೆ ಗಜಶಾಸ್ತ್ರ, ಅಶ್ವಶಾಸ್ತ್ರಗಳಲ್ಲಿ ಒಳ್ಳೆಯ ಪಾಂಡಿತ್ಯವಿದ್ದಂತೆ ತೋರುತ್ತದೆ. ಈ ಕೆಳಗಿನ ಪದ್ಯದಲ್ಲಿ ಕವಿಯು ಒಂದು ಸಲಗದ ವರ್ತನೆಯನ್ನು ಹೇಗೆ ಚಿತ್ರಿಸಿದ್ದಾನೆ, ನೋಡಿ :

ಕ್ಷಿಪ್ತಂ ಪುರೋ ನ ಜಗೃಹೇ ಮುಹುರಿಕ್ಷುಕಾಂಡಂ
ನಾಪೇಕ್ಷತೇ ಸ್ಮ ನಿಕಟೋಪಗತಾಂ ಕರೇಣುಮ್ ।
ಸಸ್ಮಾರ ವಾರಣಪತಿಃ ಪರಿಮೀಲಿತಾಕ್ಷಂ
ಇಚ್ಛಾವಿಹಾರವನವಾಸಮಹೋತ್ಸವಾನಾಮ್ ॥

"ಆ ಸಲಗವು ಎದುರಿಗೆ ಹಾಕಿದ ಕಬ್ಬಿನ ಜಲ್ಲೆಯನ್ನೂ ಮುಟ್ಟಲಿಲ್ಲ. ಹತ್ತಿರ ಬಂದ ಹೆಣ್ಣಾನೆಯನ್ನೂ ಪ್ರೀತಿಸಲಿಲ್ಲ. ಅದು ಕಣ್ಣು ಮುಚ್ಚಿಕೊಂಡು ಹಿಂದೆ ತಾನು ಸ್ವೇಚ್ಛೆಯಾಗಿ ಮಾಡುತ್ತಿದ್ದ ವನ ವಿಹಾರದ ಸವಿನೆನಪನ್ನು ಮೆಲುಕು ಹಾಕುತ್ತಿತ್ತು".

ಸ್ವರ್ಗದಿಂದ ಇಳಿದು ಬರುತ್ತಿದ್ದ ನಾರದ ಮುನಿಗಳ ವರ್ಣನೆಯಿದು.

ಚಯಸ್ತ್ವಿಷಾಮಿತ್ಯವಧಾರಿತಂ ಪುರಾ
ತತಃ ಶರೀರೀತಿ ವಿಭಾವಿತಾಕೃತಿಮ್ ।
ವಿಭುರ್ವಿಭಕ್ತಾವಯವಂ ಪುಮಾನಿತಿ
ಕ್ರಮಾದಮುಂ ನಾರದ ಇತ್ಯಬೋಧಿ ಸಃ ॥

"ಶ್ರೀಕೃಷ್ಣನಿಗೆ ಮೊದಲು ಒಂದು ತೇಜಸ್ಸಿನ ರಾಶಿಯೇ ಕಾಣಿಸಿತು. ಅನಂತರ ಶರೀರಧಾರಿಯಾದ ಒಬ್ಬ ವ್ಯಕ್ತಿಯೆಂದು ತೋರಿತು. ಆಮೇಲೆ ಮುಖಾದ್ಯವಯವಗಳು ಕಾಣಿಸಿದ್ದರಿಂದ ಓರ್ವ ಪುರುಷನೆಂದು ತಿಳಿಯಿತು. ಇನ್ನೂ ಸಮೀಪಿಸಿದ ಮೇಲೆ ನಾರದರೆಂದು ಗೊತ್ತಾಯಿತು".

ನಾರದರು ಆಕಾಶದಲ್ಲಿ ಇಳಿದು ಬರುತ್ತಿರುವಾಗ ಅವರ ಕೈಯಲ್ಲಿದ್ದ "ಮಹತೀ" ಎಂಬ ವೀಣೆಯು ಆರೋಹಣಾವರೋಹಣ ಕ್ರಮದಿಂದ ತಾನಾಗಿ ನುಡಿಯುತ್ತಿದ್ದಿತಂತೆ, ಅದನ್ನು ಕುತೂಹಲದಿಂದ ನಾರದರು ನೋಡುತ್ತಿದ್ದರಂತೆ.

ರಾವಣನ ಔದ್ಧತ್ಯ-ದರ್ಪಗಳು ಮಾಘಕಾವ್ಯದಲ್ಲಿ ಪುನಃ ಓದಬೇಕೆನಿಸುವಷ್ಟು ಸುಂದರವಾಗಿ ಚಿತ್ರಿಸಲ್ಪಟ್ಟಿದೆ :

ಪ್ರಭುಬುಭೂಷುರ್ಭುವನತ್ರಯಸ್ಯ ಯಃ
ಶಿರೋಽತಿರಾಗಾದ್ದಶಮಂ ಚಿಕರ್ತಿಷುಃ
ಅತರ್ಕಯದ್ವಿಘ್ನಮಿವೇಷ್ಟಸಾಹಸಃ
ಪ್ರಸಾದಮಿಚ್ಛಾಸದೃಶಂ ಪಿನಾಕಿನಃ ।। 1-49

"ರಾವಣನು, ತಾನು ಮೂರು ಲೋಕಕ್ಕೂ ಅಧಿಪತಿಯಾಗಬೇಕೆಂದು ಈಶ್ವರನನ್ನು ಕುರಿತು ತಪಸ್ಸು ಮಾಡಿದನು. ಈಶ್ವರನನ್ನು ಮೆಚ್ಚಿಸುವುದಕ್ಕಾಗಿ ತನ್ನ ಒಂಬತ್ತು ತಲೆಗಳನ್ನು ಕತ್ತರಿಸಿ ಅಗ್ನಿಯಲ್ಲಿ ಹೋಮ ಮಾಡಿದನು. ಅಷ್ಟರಲ್ಲಿ ಈಶ್ವರನು ಪ್ರಸನ್ನನಾದನು. ಮಹಾಸಾಹಸಿಯಾದ ರಾವಣನು, ತನ್ನ ಹತ್ತನೆಯ ತಲೆಯನ್ನು ಕತ್ತರಿಸಲು ಈಶ್ವರನ ಪ್ರಸಾದವು ವಿಘ್ನವಾಯಿತೆಂದೇ ಭಾವಿಸಿದನು"

ಸಮುತ್ಕ್ಷಿಪನ್ ಯಃ ಪೃಥಿವೀಭೃತಾಂ ವರಂ
ವರಪ್ರದಾನಸ್ಯ ಚಕಾರ ಶೂಲಿನಃ ।
ತ್ರಸತ್ತುಷಾರಾದ್ರಿಸುತಾ ಸಸಂಭ್ರಮ-
ಸ್ವಯಂ ಗ್ರಹಾಶ್ಲೇಷಸುಖೇನ ನಿಷ್ಕ್ರಯಮ್ ।। 1-50

"ರಾವಣನು ಒಮ್ಮೆ ದರ್ಪದಿಂದ ಕೈಲಾಸ ಪರ್ವತವನ್ನೇ ಎತ್ತತೊಡಗಿದನು. ಆಗ ಪರ್ವತವು ಚಲಿಸಿದುದರಿಂದ ಪಾರ್ವತಿಯು ಗಾಬರಿಗೊಂಡು ಬಳಿಯಲ್ಲಿದ್ದ ಪರಮೇಶ್ವರನನ್ನು ಅಪ್ಪಿಕೊಂಡಳು. ಹೀಗೆ ಪಾರ್ವತಿಯು "ಸ್ವಯಂಗ್ರಹಾಶ್ಲೇಷ" ವನ್ನು ಒದಗಿಸಿಕೊಟ್ಟು, ಪರಮೇಶ್ವರನು ತನಗೆ ಕೊಟ್ಟಿದ್ದ ವರದ ಋಣವನ್ನು ತೀರಿಸಿಬಿಟ್ಟನು".

ವಿದಗ್ಧಲೀಲೋಚಿತದಂತಪತ್ರಿಕಾ
ವಿಧಿತ್ಸಯಾ ನೂನಮನೇನ ಮಾನಿನಾ ।
ನ ಜಾತು ವೈನಾಯಕಮೇಕಮುದ್ಧೃತಂ
ವಿಷಾಣಮದ್ಯಾಪಿ ಪುನಃ ಪ್ರರೋಹತಿ ।। 1-60

"ರಾವಣನು ತನ್ನ ಕಾಂತೆಯರಿಗೆ ದಂತದ ಬಾಚಣಿಗೆಗಳನ್ನು ಮಾಡಿಸುವುದಕ್ಕಾಗಿ ವಿನಾಯಕನ ಒಂದು ದಂತವನ್ನು ಕಿತ್ತು ತಂದನು. ಆ ಒಂದು ದಂತವು ವಿನಾಯಕನಿಗೆ ಪುನಃ ಹುಟ್ಟಲೇ ಇಲ್ಲ." (ಗಣೇಶನು ಏಕದಂತನಷ್ಟೇ!)

ಕವಿಗೆ ಉತ್ಪ್ರೇಕ್ಷೆಯಲ್ಲಿ ಹೆಚ್ಚು ಪ್ರೀತಿಯೆಂದು ತೋರುತ್ತದೆ. ಆದರೆ ಅದು ಒಂದು ಮಿತಿಯನ್ನು ಮೀರಿ ಹೋಗಿಲ್ಲ. ಮಾಘನ ಉತ್ಪ್ರೇಕ್ಷೆಯಲ್ಲಿ ಕಂಡು ಬರುವ ಕಲ್ಪನಾಚಾತುರ್ಯ ಮೋಹಕವಾಗಿದೆ. ಇದೊಂದು ದ್ವಾರಕಾನಗರದ ಪ್ರಾಕಾರವನ್ನು ವರ್ಣಿಸುವ ಪದ್ಯ :

ಯಚ್ಛಾಲಮುತ್ತುಂಗತಯಾ ವಿಜೇತುಂ ದೂರಾದುದಸ್ಥೀಯತ ಸಾಗರಸ್ಯ ।
ಮಹೋರ್ಮಿಭಿರ್ವ್ಯಾಹತವಾಂಛಿತಾರ್ಥೈರ್ವ್ರೀಡಾದಿವಾಭ್ಯಾಸಗತೈರ್ವಿಲಿಲ್ಯೇ ॥ 3-40

"ದ್ವಾರಕೆಯ ಪ್ರಾಕಾರವು ಬಹಳ ಉನ್ನತವಾಗಿದ್ದಿತು. ಅದರ ಔನ್ನತ್ಯವನ್ನು ಗೆಲ್ಲಬೇಕೆಂದು ಸಮುದ್ರದ ಬೃಹದಾಕಾರದ ಅಲೆಗಳು ದೂರದಿಂದಲೇ ಮೈಯುಬ್ಬಿಸಿ ಕೊಂಡು ಹೊರಡುತ್ತಿದ್ದವು. ಪ್ರಾಕಾರವು ಹತ್ತಿರವಾದಾಗ ಅದರ ಔನ್ನತ್ಯವನ್ನು ನೋಡಿ ನಾಚಿಕೆಯಿಂದಲೋ ಎಂಬಂತೆ ತಮ್ಮಷ್ಟಕ್ಕೆ ತಾವೇ ಅಡಗಿ ಬಿಡುತ್ತಿದ್ದವು."

ಸಮುದ್ರ ತೀರದಲ್ಲಿ ನಿಂತು, ಅಲೆಗಳು ರಭಸದಿಂದ ತೀರದ ಕಡೆಗೆ ನುಗ್ಗುವು ದನ್ನೂ ತೀರಕ್ಕೆ ಬಂದ ಕೂಡಲೇ ಅವು ಅಲ್ಲಿಯೇ ಮಾಯವಾಗುವದನ್ನು ನಾವೇ ಕಣ್ಣಿನಿಂದ ನೋಡಿದರೆ ಈ ವರ್ಣನೆಯ ಸ್ವಾರಸ್ಯವು ಗೊತ್ತಾಗುವುದು.

ಇದೊಂದು ರೈವತಕಗಿರಿಯ ವರ್ಣನೆಯ ಪದ್ಯ :

ಅಪಶಂಕಮಂಕ ಪರಿವರ್ತನೋಚಿತಾಶ್ಚಲಿತಾಃ ಪುರಃ ಪತಿಮುಪೈತುಮಾತ್ಮಜಾಃ ।
ಅನುರೋದಿತೀವ ಕರುಣೇನ ಪತ್ರಿಣಾಂ ವಿರುತೇನ ವತ್ಸಲತಯೈಷ ನಿಮ್ನಗಾಃ ॥

ರೈವತಕಗಿರಿಯ ಹೆಣ್ಣು ಮಕ್ಕಳಂತಿದ್ದ ನದಿಗಳು ತಮ್ಮ ಪತಿಯಾದ ಸಮುದ್ರ ದತ್ತ ಹೊರಟಿರುವುದನ್ನು ನೋಡಿ ಆ ಗಿರಿಯು ದುಃಖದಿಂದ ಹಕ್ಕಿಗಳ ಧ್ವನಿಯ ನೆಪದಿಂದ ಅಳುತ್ತಿರುವಂತಿದ್ದಿತು."

ಇದೊಂದು ಕುದುರೆಯ ವರ್ಣನೆಯ ಪದ್ಯ :

ಹೇಮ್ನಃ ಸ್ಥಲೀಷು ಪರಿತಃ ಪರಿವೃತ್ಯ ವಾಜೀ
ಧುನ್ವನ್ ವಪುಃ ಪ್ರವಿತತಾಯತ ಕೇಶಪಂಕ್ತಿಃ ।
ಜ್ವಾಲಾಕಣಾರುಣರುಚಾ ನಿಕರೇಣ ರೇಣೋಃ
ಶೇಷೇಣ ತೇಜಸ ಇವೋಲ್ಲಸತಾ ರರಾಜ ॥ 5-55

"ರೈವತಕಗಿರಿಯ ಸುವರ್ಣ ಭೂಮಿಯಲ್ಲಿ ಸಂಚರಿಸಿದ ಅಶ್ವವು ಕೇಸರ (ಆಯಾಲ) ಗಳನ್ನು ಹರಡಿಕೊಂಡು ದೇಹವನ್ನೊಮ್ಮೆ ಕೊಡವಿತು. ದೇಹದಿಂದ ಸಿಡಿದ ಧೂಳಿಯು ಅಶ್ವದ ಶರೀರದಲ್ಲಿ ಹಿಡಿಸಲಾರದ ದರ್ಪದ ಅವಶೇಷವೋ ಎಂಬಂತೆ ತೋರಿತು."

ಸಾಯಂಕಾಲದ ವರ್ಣನೆಯಿದು :

ಅಪರಾಹ್ಣ ಶೀತಲತರೇಣ ಶನೈಃ
ಅನಿಲೇನ ಲೋಲಿತ ಲತಾಂಗುಲಯೇ ।
ನಿಲಯಾಯ ಶಾಖಿನ ಇವಾಹ್ವಯತೇ
ದದುರಾಕುಲಾಃ ಖಗಕುಲಾನಿ ಗಿರಃ ॥ 9-4

"ಸಾಯಂಕಾಲದ ಶೀತಲ ಮಾರುತದಿಂದ ವೃಕ್ಷಗಳಿಗೆ ಸುತ್ತಿಕೊಂಡಿದ್ದ ಲತೆಗಳೆಂಬ ಅಂಗುಲಿಗಳು ಚಲಿಸುತ್ತಿದ್ದವು. ಆಗ ಆ ವೃಕ್ಷಗಳು ಪಕ್ಷಿಗಳನ್ನು ಕುರಿತು – "ಗೂಡುಗಳಿಗೆ ಹೊರಟು ಬನ್ನಿ!" ಎಂದು ಕೈಮಾಡಿ ಕರೆಯುತ್ತಿರುವಂತೆ ತೋರುತ್ತಿತ್ತು. ಇಂಪಾಗಿ ಕೂಗುತ್ತಿದ್ದ ಪಕ್ಷಿಗಳು—"ಇಕೋ ಬಂದೆವು" ಎಂದು ಮಾರ್ದನಿಗೊಡುತ್ತಿವೆಯೋ ಎಂಬಂತಿತ್ತು."

ರೈವತಕ ಗಿರಿಯಲ್ಲಿ ರಾತ್ರಿಯ ವರ್ಣನೆ :

ಉತ್‌ಕ್ಷಿಪ್ತಮುಚ್ಛ್ರಿತ ಸಿತಾಂಶುಕರಾವಲಂಬೈಃ
ಉತ್ತಂಭಿತೋಡುಭಿರತೀವತರಾಂ ಶಿರೋಭಿಃ ।
ಶ್ರದ್ಧೇಯ ನಿರ್ಝರ ಜಲವ್ಯಪದೇಶಮಸ್ಯ
ವಿಷ್ವಕ್ ತಟೀಷು ಪತತಿ ಸ್ಫುಟಮಂತರೀಕ್ಷಮ್ ॥ 4-25

"ಈ ರೈವತಕವು ಚಂದ್ರಕರಗಳ (ಕರ = ಕೈ, ಕಿರಣ) ಸಹಾಯದಿಂದ ನಕ್ಷತ್ರ ಸಹಿತವಾದ ಆಕಾಶವನ್ನು ಹೊತ್ತುಕೊಂಡಿರುವಂತೆ ತೋರುವುದು. ಗಿರಿತಟಗಳಲ್ಲಿ ಸುರಿಯುತ್ತಿರುವ ನಿರ್ಝರಗಳನ್ನು ನೋಡಿದರೆ ಸುತ್ತಲೂ ಆಕಾಶವು ಕರಗಿ ಬೀಳುತ್ತಿರುವುದೋ ಎಂಬಂತೆ ತೋರುವುದು."

ಚಂದ್ರೋದಯ ವರ್ಣನೆ :

ವಿಶದಪ್ರಭಾಪರಿಗತಂ ವಿಬಭೌ
ಉದಯಾಚಲ ವ್ಯವಹಿತೇಂದುವಪುಃ ।
ಮುಖಮಪ್ರಕಾಶದಶನಂ ಶನಕೈಃ
ಸವಿಲಾಸಹಾಸಮಿವ ಶಕ್ರದಿಶಃ ॥ 9-26

"ಚಂದ್ರನ ಶುಭ್ರಕಾಂತಿಯು ಪೂರ್ವದಿಶೆಯಲ್ಲಿ ಹರಡಿತ್ತು. ಚಂದ್ರನು ಇನ್ನೂ ಪೂರ್ತಿ ಉದಿಸಿರಲಿಲ್ಲ. ಆಗ ಪೂರ್ವದಿಶಾಂಗನೆಯು ವಿಲಾಸದಿಂದ ಮುಗುಳುನಗೆ ನಗುವಳೋ ? ಎಂಬಂತೆ ತೋರಿತು."

ಉದಮಜ್ಜಿ ಕೈಟಭಜಿತಃ ಶಯನಾತ್
ಅಪನಿದ್ರಪಾಂಡುರಸರೋಜರುಚಾ ।
ಪ್ರಥಮಪ್ರಬುದ್ಧನಗರಾಜಸುತಾ
ವದನೇಂದುನೇವ ತುಹಿನದ್ಯುತಿನಾ ॥ 9-20

" ಅರಳಿದ ಬಿಳಿಯ ಕಮಲದಂತಿರುವ ಚಂದ್ರನು ಉದಯಿಸಿದನು. ಶ್ರೀಮನ್ನಾರಾಯಣನ ಹಾಸಿಗೆಯಿಂದ ಎಚ್ಚೆತ್ತು ಮೇಲಕ್ಕೆತ್ತಿದ ಲಕ್ಷ್ಮೀದೇವಿಯ ಮುಖವೋ ಎಂಬಂತೆ ಚಂದ್ರನು ವಿರಾಜಿಸಿದನು !"

ಇದೊಂದು ಯುದ್ಧರಂಗವರ್ಣನೆಯ ಪದ್ಯ :

ಅಂತಕಸ್ಯ ಪೃಥೌ ತತ್ರ ಶಯನೀಯ ಇವಾಹವೇ ।
ದಶನವ್ಯಸನಾದೀಯುರ್ಮತ್ಕುಣತ್ವಂ ಮತಂಗಜಾಃ ॥ 19-71

"ಸಮರಾಂಗಣವು ಯಮನ ಹಾಸಿಗೆಯೋ ಎಂಬಂತೆ ಭಯಂಕರಾಕಾರವಾಗಿತ್ತು. ಕೋರೆಹಲ್ಲು ಮುರಿದುಹೋದ ಆನೆಗಳು ಆ ಹಾಸಿಗೆಯಲ್ಲಿರುವ ತಿಗಣೆಗಳಂತೆ ಕಾಣುತ್ತಿದ್ದವು."

ರಣರಂಗವು ರಕ್ತದಿಂದ ತುಂಬಿಹೋದದ್ದರಿಂದ ಅಶ್ವರಥಾದಿಗಳೆಲ್ಲವೂ ಮುಳುಗಿ ಹೋಗಿದ್ದವೆಂದೂ, ಉನ್ನತಾಕಾರದ ಆನೆಗಳು ಮಾತ್ರ ಅಲ್ಲಲ್ಲಿ ಕಾಣಿಸಿ ಕೊಳ್ಳುತ್ತಿದ್ದವೆಂದೂ ಕೂಡ ಇಲ್ಲಿ ಧ್ವನಿತಾರ್ಥ.

ಕವಿಯು ಉತ್ಪ್ರೇಕ್ಷಾಪ್ರಿಯನಾದರೂ ಇತರ ಅಲಂಕಾರಗಳನ್ನೂ ಸಹ ಯಥೋಚಿತವಾಗಿ ಬಳಸಿದ್ದಾನೆ. ಇದೊಂದು ಚಂದ್ರೋದಯ ವರ್ಣನೆಯ ಪದ್ಯ :

ರಜನೀಮವಾಪ್ಯ ರುಚಮಾಪ ಶಶೀ
ಸಪದಿ ವ್ಯಭೂಷಯದಸಾವಪಿ ತಾಮ್ ।
ಅವಿಲಂಬಿತಕ್ರಮಮಹೋ ಮಹತಾಂ
ಇತರೇತರೋಪಕೃತಿಮಚ್ಚರಿತಮ್ ॥ 9–33

"ಚಂದ್ರನಿಗೆ ರಜನಿಯಿಂದ ಅತಿಶಯವಾದ ಶೋಭೆಯುಂಟಾಯಿತು. ರಜನಿಗೂ ಚಂದ್ರನಿಂದ ಇನ್ನಿಲ್ಲದ ಸೊಬಗುಂಟಾಯಿತು. ಆಶ್ಚರ್ಯ ! ಉಪಕಾರದ ಬೆನ್ನಿಗೆ ಪ್ರತ್ಯುಪಕಾರವೇ ಮಹಾತ್ಮರ ವರ್ತನೆ."

ಇದೊಂದು ಪ್ರಭಾತವರ್ಣನೆಯ ಪದ್ಯ :

ಕ್ಷಣಶಯಿತವಿಬುದ್ಧಾಃ ಕಲ್ಪಯಂತಃ ಪ್ರಯೋಗಾನ್
ಉದಧಿಮಹತಿ ರಾಜ್ಯೇ ಕಾವ್ಯವದ್ದುರ್ವಿಗಾಹ್ಯೇ ।
ಗಹನಮಪರರಾತ್ರಪ್ರಾಪ್ತಬುದ್ಧಿಪ್ರಸಾದಾಃ
ಕವಯ ಇವ ಮಹೀಪಾಶ್ಚಿಂತಯಂತ್ಯರ್ಥಜಾತಮ್ ॥ 11–6

"ಕವಿಗಳು ಬ್ರಾಹ್ಮಮುಹೂರ್ತದಲ್ಲೆದ್ದು, ಆಗ ಬುದ್ಧಿಯು ಪ್ರಸನ್ನವಾಗಿರುವದರಿಂದ ಕಷ್ಟಕರವಾದ ತಮ್ಮ ಕಾವ್ಯರಚನೆಯಲ್ಲಿ ಶಬ್ದಾರ್ಥಗಳನ್ನು ಪರಿಶೀಲಿಸುತ್ತಾರೆ.

ಹಾಗೆಯೇ, ರಾಜರೂ ಕೂಡ–ಬೆಳಗಿನ ಜಾವದಲ್ಲೆದ್ದು ಸಮುದ್ರಗಂಭೀರವಾದ ರಾಜಕೀಯ ವಿಷಯಗಳನ್ನು ಪರ್ಯಾಲೋಚಿಸುತ್ತಾರೆ."

ಇದೊಂದು ಸೂರ್ಯೋದಯ ವರ್ಣನೆಯ ಪದ್ಯ :

ವಿತತಪೃಥುವರತ್ರಾತುಲ್ಯರೂಪೈರ್ಮಯೂಖೈಃ
ಕಲಶ ಇವ ಗರೀಯಾನ್ ದಿಗ್ಭಿರಾಕೃಷ್ಯಮಾಣಃ ।
ಕೃತಚಪಲ ವಿಹಂಗಾಲಾಪ ಕೋಲಾಹಲಾಭಿಃ
ಜಲನಿಧಿ ಜಲಮಧ್ಯಾದೇಷ ಉತ್ತಾರ್ಯತೇಽರ್ಕಃ ॥ 11-44

"ತರುಣಿಯರು ಕಲಕಲಶಬ್ದವನ್ನು ಮಾಡುತ್ತಾ, ಸೇದುವ ಭಾವಿಯಿಂದ ಬಿಂದಿಗೆಯನ್ನು ಹೇಗೆ ಮೇಲಕ್ಕೆ ಸೇದಿಕೊಳ್ಳುವರೋ, ಹಾಗೆ ದಿಗಂಗನೆಯರು ಕಿರಣಗಳೆಂಬ ಹಗ್ಗಗಳಿಂದ ಪಕ್ಷಿಗಳ ಕೂಗೆಂಬ ಕಲಕಲಧ್ವನಿಯೊಡನೆ ಸಮುದ್ರದಿಂದ ಸುವರ್ಣಕಲಶದಂತಿರುವ ಸೂರ್ಯನನ್ನು ಮೇಲಕ್ಕೆ ಸೇದುತ್ತಿದ್ದಾರೆ."

ಇದೊಂದು ಜಲಕೇಳಿ ವರ್ಣನೆಯ ಪದ್ಯ :

ದಿವ್ಯಾನಾಮಪಿ ಕೃತವಿಸ್ಮಯಾಂ ಪುರಸ್ತಾತ್
ಅಂಭಸ್ತಃ ಸ್ಫುರದರವಿಂದಚಾರುಹಸ್ತಾಮ್ ।
ಉದ್ವೀಕ್ಷ್ಯ ಶ್ರಿಯಮಿವ ಕಾಂಚಿದುತ್ತರಂತೀಮ್
ಅಸ್ಮಾರ್ಷೀಜ್ಜಲನಿಧಿಮಂಥನಸ್ಯ ಶೌರಿಃ ॥

"ಶ್ರೀಕೃಷ್ಣನ ಕಾಂತೆಯರಲ್ಲಿ ಒಬ್ಬ ದಿವ್ಯಸುಂದರಿಯು ನೀರಿನಲ್ಲಿ ಮುಳುಗಿ, ಕೈಯಲೊಂದು ಕಮಲವನ್ನು ಹಿಡಿದುಕೊಂಡು ಮೇಲಕ್ಕೆದ್ದಳು. ಲಕ್ಷ್ಮೀದೇವಿಯಂತಿದ್ದ ಅವಳನ್ನು ನೋಡಿ ಶ್ರೀಕೃಷ್ಣನಿಗೆ ಸಮುದ್ರಮಥನದ ವೃತ್ತಾಂತವು ಸ್ಮರಣೆಗೆ ಬಂದಿತು."

ವಾಸಾಂಸಿ ನ್ಯವಸತ ಯಾನಿ ಯೋಷಿತಸ್ತಾಃ
ಶುಭ್ರಾಭ್ರದ್ಯುತಿಭಿರಹಾಸಿತೈರ್ಮುದೇವ ।
ಅತ್ಯಾಕ್ಷುಃ ಸ್ನಪನಗಲಜ್ಜಲಾನಿ ಯಾನಿ
ಸ್ಥೂಲಾಶ್ರುಸ್ರುತಿಭಿರರೋದಿ ತೈಃ ಶುಚೇವ ॥ 8-66

"ಯಾದವ ಸ್ತ್ರೀಯರು ಶುಭ್ರವಾದ ಬಿಳಿಯ ಸೀರೆಗಳನ್ನುಟ್ಟಿದ್ದರು. ಅವು ಆ ಸುಂದರಿಯರ ಸ್ಪರ್ಶಸುಖದಿಂದ ನಗುತ್ತಿರುವಂತೆ ತೋರುತ್ತಿತ್ತು. ಸ್ನಾನವಾದ ಮೇಲೆ ಒದ್ದೆಯಾದ ಆ ಬಟ್ಟೆಗಳನ್ನು ತೆಗೆದು ಹಾಕಿದರು. ಆಗ, ನೀರು ಸುರಿಯುತ್ತಿದ್ದ ಆ ಬಟ್ಟೆಗಳು ದುಃಖದಿಂದ ಅಳುತ್ತಿವೆಯೋ ಎಂಬಂತೆ ತೋರಿತು.

ಮದ್ಯಪಾನ ವರ್ಣನೆಯ ಈ ಪದ್ಯ ಚಮತ್ಕಾರವಾಗಿದೆ :

ಕ್ರಾಂತ ಕಾಂತ ವದನ ಪ್ರತಿಬಿಂಬೇ
ಭಗ್ನ ಬಾಲ ಸಹಕಾರ ಸುಗಂಧೌ ।
ಸ್ವಾದುನಿ ಪ್ರಣದಿತಾಲಿನಿ ಶೀತೇ
ನಿರ್ವವಾರ ಮಧುನೀಂದ್ರಿಯವರ್ಗಃ ॥ 10-3

ಪ್ರಮದೆಯೋರ್ವಳು ಮದ್ಯಪಾನ ಮಾಡುತ್ತಿರುವಾಗ ಅವಳ ಪಂಚೇಂದ್ರಿಯ ಗಳೂ ತೃಪ್ತಿಹೊಂದಿದುವಂತೆ! ಅದು ಹೇಗೆ?—ಚಷಕದಲ್ಲಿ ಮದ್ಯವನ್ನು ತುಂಬಿ ಕೊಂಡು ಕುಡಿಯುತ್ತಿರುವಾಗ ಅವಳ ಹಿಂದುಗಡೆ ಪ್ರಿಯತಮನು ನಿಂತಿದ್ದನು. ಅವನ ಪ್ರತಿಬಿಂಬವು ಮದ್ಯದಲ್ಲಿ ಕಾಣಿಸುತ್ತಿದ್ದುದರಿಂದ ಕಣ್ಣುಗಳು ಆನಂದಿಸಿದವು. ಚೂತಕುಸುಮಗಳಿಂದ ಮದ್ಯವು ಸುಗಂಧಿಯಾದ್ದರಿಂದ ಘ್ರಾಣೇಂದ್ರಿಯಕ್ಕೆ ತೃಪ್ತಿ ಯಾಯಿತು. ಮದ್ಯವು ಮಧುರವಾದ್ದರಿಂದ ನಾಲಿಗೆಯೂ, ಅದರ ಸುವಾಸನೆಗೆ ಮುತ್ತಿದ ದುಂಬಿಗಳು ಝೈಗೈಯ್ಯುತ್ತಿದ್ದುದರಿಂದ ಕಿವಿಗಳೂ, ತಣ್ಣಗಿದ್ದುದರಿಂದ ತ್ವಗಿಂದ್ರಿಯವೂ ಕೂಡ ತೃಪ್ತಿಹೊಂದಿದವು. ಹೀಗೆ ಏಕಕಾಲದಲ್ಲಿ ಮದ್ಯ ವೊಂದರಿಂದಲೇ—ಪಂಚೇಂದ್ರಿಯಗಳೂ ತೃಪ್ತವಾದುದೇ ಇಲ್ಲಿನ ಚಮತ್ಕಾರ.

ಕುದುರೆಯ ಸ್ವಭಾವವರ್ಣನೆಯ ಈ ಸ್ವಭಾವೋಕ್ತಿಯನ್ನು ನೋಡಿ :

ಪರಿಶಿಥಿಲಿತ ಕರ್ಣಗ್ರೀವಮಾಮೀಲಿತಾಕ್ಷಃ
ಕ್ಷಣಮಯಮನುಭೂಯ ಸ್ವಪ್ನಮೂರ್ಧ್ವಜ್ಞುರೇವ ।
ರಿರಸಯಿಷತಿ ಭೂಯಃ ಶಷ್ಪಮಗ್ರೇ ವಿತೀರ್ಣಂ
ಪಟುತರಚಪಲೌಷ್ಠಃ ಪ್ರಸ್ಫುರತ್ಪ್ರೋಥಮಶ್ವಃ ॥ 10-11

ಕುದುರೆಯೊಂದು ತನ್ನ ಕತ್ತು ಹಾಗೂ ಕಿವಿಗಳನ್ನು ಸಡಿಲುಬಿಟ್ಟು, ನಿಂತುಕೊಂಡೇ ಸ್ವಲ್ಪ ನಿದ್ರೆಮಾಡಿ ಎಚ್ಚೆತ್ತಿದೆ. ಅದು ಚುರುಕಾದ ತನ್ನ ತುಟಿಗಳನ್ನು ಅಲ್ಲಾಡಿಸುತ್ತಾ, ಮೂಗಿನ ಹೊಳ್ಳೆಯನ್ನು ಕುಣಿಸುತ್ತಾ, ಎದುರಿಗಿರುವ ಎಳೆ ಹುಲ್ಲನ್ನು ತಿನ್ನಲಪೇಕ್ಷಿಸುತ್ತಿದೆ.''

ಶ್ರೀಕೃಷ್ಣನು ನಾರದರಿಗೆ ಗೌರವ ತೋರಿಸುವ ಮಾತುಗಳು ಯಾವಾಗಲೂ ಸ್ಮರಣೀಯವಾದುವು :

ಹರತ್ಯಘಂ ಸಂಪ್ರತಿ ಹೇತುರೇಷ್ಯತಃ
ಶುಭಸ್ಯ ಪೂರ್ವಾಚರಿತೈಃ ಕೃತಂ ಶುಭೈಃ ।
ಶರೀರಭಾಜಾಂ ಭವದೀಯದರ್ಶನಂ
ವ್ಯನಕ್ತಿ ಕಾಲತ್ರಿತಯೇಽಪಿ ಯೋಗ್ಯತಾಮ್ ॥

''ಹೇ ನಾರದಮಹರ್ಷಿಗಳೇ! ನಿಮ್ಮ ದರ್ಶನವು ವರ್ತಮಾನಕಾಲದಲ್ಲಿ ಜನರ ಪಾಪವನ್ನು ಪರಿಹರಿಸುತ್ತದೆ. ಭವಿಷ್ಯತ್ತಿನಲ್ಲಿ ಶ್ರೇಯಸ್ಸನ್ನುಂಟುಮಾಡುತ್ತದೆ.

ಪೂರ್ವದಲ್ಲಿ ಮಾಡಿದ ಪುಣ್ಯದಿಂದ ಈಗ ಲಭಿಸಿದೆ. ಹೀಗೆ ತಮ್ಮ ದರ್ಶನವು ತ್ರಿಕಾಲದಲ್ಲಿಯೂ ಜನರ ಯೋಗ್ಯತೆಯನ್ನು ಹೊರಗೆಡಹುತ್ತದೆ."

ಮಾಘನು ಅತ್ಯಂತಕ್ಲಿಷ್ಟ ಭಾಷೆಯಲ್ಲಿಯೂ ಬರೆಯಬಲ್ಲನು. ಅತ್ಯಂತ ಸರಳಭಾಷೆಯನ್ನೂ ಬಳಸಬಲ್ಲನು. ಶಬ್ದಗಳಿಗಾಗಿ ಅವನು ತಡವರಿಸುವುದೇ ಇಲ್ಲ. ಶಬ್ದಭಂಡಾರವೇ ಅವನ ವಶದಲ್ಲಿದೆ. ಅವನ ಪದ್ಯಗಳು ಪ್ರವಾಹದಂತೆ ಓಡುತ್ತಿರುತ್ತವೆ. ಅವನ ಪದ ಲಾಲಿತ್ಯಕ್ಕೆ ಒಂದೆರಡು ಉದಾಹರಣೆಗಳು :

ಇದು ವಸಂತ ವರ್ಣನೆ :

ಮಧುರಯಾ ಮಧುಬೋಧಿತಮಾಧವೀಮಧುಸಮೃದ್ಧಿಸಮೇಧಿತಮೇಧಯಾ ।
ಮಧುಕರಾಂಗನಯಾ ಮುಹುರುನ್ಮದಧ್ವನಿಭೃತಾ ನಿಭೃತಾಕ್ಷರಮುಜ್ಜಗೇ ॥

ಇದೊಂದು ವರ್ಷತುವರ್ಣನೆ :

ಪ್ರವಸತಃ ಸುತರಾಮುದಕಂಪಯದ್ವಿದಲಕಂದಲಕಂಪನಲಾಲಿತಃ ।
ನಮಯತಿ ಸ್ಮ ವನಾನಿ ಮನಸ್ವಿನೀಜನಮನೋನಮನೋ ಘನಮಾರುತಃ ॥ 6-30

ಉಪಮಾ ಕಾಲಿದಾಸಸ್ಯ ಭಾರವೇರರ್ಥಗೌರವಮ್ ।
ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋಗುಣಾಃ॥

ಎಂಬ ಉಕ್ತಿಯಲ್ಲಿ ಅರ್ಥಗೌರವ ಮತ್ತು ಪದಲಾಲಿತ್ಯಗಳು ಮಾಘ ಕಾವ್ಯದಲ್ಲಿವೆ ಎಂಬುದಕ್ಕೆ ಸಂದೇಹವೇ ಇಲ್ಲ. ಉಪಮೆಗೂ ಮಾಘನು ಎತ್ತಿದ ಕೈ ಎಂಬುದು ಮಾತ್ರ ಎಷ್ಟರಮಟ್ಟಿಗೆ ಅನ್ವರ್ಥವಾಗುವುದೆಂಬುದನ್ನು ಸಹೃದಯರು ವಿಚಾರಿಸಬೇಕಾಗಿದೆ.

ಶಬ್ದಭಾಂಡಾಗಾರವೇ ಮಾಘಕವಿಯ ಹಸ್ತಗತವಾಗಿದೆಯೆಂದು ಹೇಳಿತಷ್ಟೇ. ರೈವತಕ ಪರ್ವತ ವರ್ಣನೆ, ಷಡೃತು ವರ್ಣನೆ, ಮತ್ತು ಹತ್ತೊಂಬತ್ತನೆಯ ಸರ್ಗದಲ್ಲಿನ ದ್ವಂದ್ವಯುದ್ಧ ವರ್ಣನೆಗಳನ್ನು ಕುತೂಹಲಿಗಳು ಅವಶ್ಯವಾಗಿ ಓದಿನೋಡಬೇಕು. ಶಬ್ದಶಕ್ತಿಮೂಲವಾದ ಧ್ವನಿಯನ್ನು ವ್ಯಂಜಿಸುವುದರಲ್ಲಿ ಮಾಘನು ಸಿದ್ಧಹಸ್ತ. ಶಬ್ದಾಲಂಕಾರದಲ್ಲಿ ಇವನನ್ನು ಮೀರಿಸುವ ಕವಿಯನ್ನು ನಾವು ಅರಿಯೆವು. ಶಬ್ದರಚನೆಯಲ್ಲಿ ಎಂತಹ ಚಮತ್ಕಾರವನ್ನು ತೋರಿಸಿದ್ದಾನೆಂದರೆ ಇವನೊಬ್ಬ ಐಂದ್ರಜಾಲಕನೆಂದು ಹೇಳಬೇಕಾಗುವದು. 19ನೆಯ ಸರ್ಗದಲ್ಲಿ ಶಬ್ದಾಲಂಕಾರದ ಪರಾಕಾಷ್ಠತೆಯನ್ನು ನೋಡಬಹುದು. ಸರ್ವತೋಭದ್ರ, ಮುರಜ, ಗೋಮೂತ್ರಿಕ, ಚಕ್ರಬಂಧ ಮೊದಲಾದ ಕಷ್ಟಸಾಧ್ಯವಾದ ಬಂಧ ಶ್ಲೋಕಗಳು ವಾಚಕರನ್ನು ಚಕಿತಗೊಳಿಸುವುವು. ಇದರಲ್ಲಿ, ಒಂದು ಏಕಾಕ್ಷರ ಪದ್ಯವನ್ನೂ, ಹತ್ತು ದ್ವ್ಯಕ್ಷರ ಪದ್ಯಗಳನ್ನೂ ಕಾಣಬಹುದು. ಏಕಾಕ್ಷರಪಾದ, ಅತಾಲವ್ಯ, ಪ್ರತಿಲೋಮಾನು

ಲೋಮಪಾದ, ಮೊದಲಾದ ವಿಚಿತ್ರಗಳು ಇನ್ನೆಷ್ಟೋ! ಯಮಕ ಭೇದಗಳಂತೂ ಲೆಕ್ಕವಿಲ್ಲದಷ್ಟು. ಉದಾಹರಣೆಗೆ ಕೆಲವು ಪದ್ಯಗಳನ್ನು ನೋಡಬಹುದು :

ಯಮಕಗಳು :

> ಯಾ ನ ಯಯೌ ಪ್ರಿಯಮನ್ಯವಧೂಭ್ಯಃ ಸಾರತರಾಗಮನಾಯತಮಾನಮ್ ।
> ತೇನ ಸಹೇಹ ಬಿಭರ್ತಿ ರಹಃಸ್ತ್ರೀ ಸಾರತರಾಗಮನಾಯತಮಾನಮ್ ॥ 4-45

> ನವಪಲಾಶಪಲಾಶವನಂ ಪುರಃ ಸ್ಫುಟಪರಾಗಪರಾಗತ ಪಂಕಜಮ್ ।
> ಮೃದುಲತಾಂತಲತಾಂತಮಲೋಕಯತ್ ಸ ಸುರಭಿಂ ಸುರಭಿಂ
> ಸುಮನೋಭರೈಃ ॥ 6-2

ದ್ವ್ಯಕ್ಷರ :

> ನೀಲೇನಾಲಾನನಲಿನನಿಲೀನೋಲ್ಲಲನಾಲಿನಾ ।
> ಲಲನಾ ಲಾಲನೇನಾಲಂ ಲೀಲಾಲೋಲೇನ ಲಾಲಿನಾ ॥ 19-84

ಏಕಾಕ್ಷರ :

> ದಾದದೋ ದುದ್ದದುದ್ದಾದೀ ದಾದಾದೋ ದುದದೀದದೋಃ ।
> ದುದ್ದಾದಂ ದದದೇ ದುದ್ದೇ ದದಾದ ದದದೋಽದದಃ ॥ 19-114

ಗತಪತ್ಯಾಗತ : ಪೂರ್ವಾರ್ಧವನ್ನು ಕೊನೆಯಿಂದ ಹಿಮ್ಮುಖವಾಗಿ ಓದಿದರೆ ಉತ್ತರಾರ್ಧವಾಗುವುದು.

> ತಂ ಶ್ರಿಯಾ ಘನಯಾನಸ್ತರುಜಾ ಸಾರತಯಾ ತಯಾ ।
> ಯಾತಯಾ ತರಸಾ ಚಾರುಸ್ತನಯಾನಘಯಾ ಶ್ರಿತಮ್ ॥

ಅರ್ಧಪ್ರತಿಲೋಮ :

(ಪ್ರಥಮಪಾದವನ್ನು ತಿರುಗಿಸಿ ಪ್ರತಿಲೋಮವಾಗಿ ಓದಿದರೆ ದ್ವಿತೀಯಪಾದವೂ, ತೃತೀಯಪಾದವನ್ನು ತಿರುಗಿಸಿ ಓದಿದರೆ ಚತುರ್ಥಪಾದವೂ ಆಗುತ್ತದೆ.)

> ವಾರಣಾಗಗಭೀರಾ ಸಾ ಸಾರಾಭೀಗಗಣಾರವಾ ।
> ಕಾರಿತಾರಿವಧಾ ಸೇನಾ ನಾಸೇಧಾವರಿತಾರಿಕಾ ॥

ಮಾಘ ಕಾವ್ಯವನ್ನೋದಿ ತಲೆದೂಗಿದ ಕವಿಗಳೂ ವಿದ್ವಾಂಸರೂ ಮಾಘನನ್ನು ಬಾಯಿತುಂಬಾ ಹೊಗಳಿದ್ದಾರೆ. ತಾರಾನಾಥ ತರ್ಕವಾಚಸ್ಪತಿಯೂ ಈ ಶ್ಲೋಕವನ್ನು ಉದಾಹರಿಸಿದ್ದಾನೆ :

> ತಾವದ್ಭಾ ಭಾರವೇರ್ಭಾತಿ ಯಾವನ್ಮಾಘಸ್ಯ ನೋದಯಃ ।
> ಉದಿತೇ ತು ಪುನರ್ಮಾಘೇ ಭಾರವೇರ್ಭಾ ರವೇರಿವ ॥

"ಮಾಘನು ಉದಯಿಸುವವರೆಗೆ ಭಾರವಿಯ ಕೀರ್ತಿಯು ಎಲ್ಲೆಲ್ಲಿಯೂ ಹರಡಿದ್ದಿತು. ಮಾಘನು ಉದಿಸಲು ಭಾರವಿಯ ಕೀರ್ತಿಯು ಮಾಘಮಾಸದಲ್ಲಿನ ಸೂರ್ಯಪ್ರಭೆಯಂತೆ ಮಲಿನವಾಯಿತು."

ಮುರಾರಿಪದಚಿಂತಾ ಚೇತ್ತದಾ ಮಾಘೇ ಮತಿಂ ಕುರು ।
ಮುರಾರಿಪದಚಿಂತಾ ಚೇತ್ತದಾ ಮಾ(s)ಘೇ ಮತಿಂ ಕುರು ॥

'ಅನರ್ಘರಾಘವ'ವನ್ನು ಬರೆದ ಮುರಾರಿಯ ಶಬ್ದವೈಭವವನ್ನು ತಿಳಿಯಲಪೇಕ್ಷೆಯಿದ್ದರೆ, ಆಗ ಮಾಘವನ್ನು ಓದಿರಬೇಕು. ಮುರಾರಿಯಾದ ವಿಷ್ಣುವಿನ ಪದವನ್ನು ಪಡೆಯಬೇಕೆಂದಿದ್ದರೆ ಆಗ 'ಮಾಘಸ್ನಾನ'ದಲ್ಲಿ ಮನಸ್ಸಿಡಬೇಕು. ಅಥವಾ "ಮಾ ಅಘೇ" ಎಂದು ಪದ ವಿಭಾಗ ಮಾಡಿ, ಪಾಪಕರ್ಮದಲ್ಲಿ ಮನಸ್ಸಿಡಬಾರದು ಎಂತಲೂ ಅರ್ಥ.

ವಲ್ಲಭದೇವನ ಸುಭಾಷಿತಾವಳಿಯಲ್ಲಿ ಧನಪಾಲನ ಹೆಸರಿನಿಂದ ಈ ಪದ್ಯ ಉದ್ಧೃತವಾಗಿದೆ:

ಮಾಘೇನ ವಿಘ್ನಿತೋತ್ಸಾಹಾ ನೋತ್ಸಹಂತೇ ಪದಕ್ರಮೇ ।
ಸ್ಮರಂತೋ ಭಾರವೇರೇವ ಕವಯಃ ಕಪಯೋ ಯಥಾ ॥

"ಮಾಘನಿಂದ ಉತ್ಸಾಹ ಭಂಗಗೊಂಡ ಕವಿಗಳು ಭಾರವಿ ಮಹಾಕವಿಗಾದ ಗತಿಯನ್ನು ಸ್ಮರಿಸಿಕೊಂಡು ಪದರಚನೆಗೆ ತೊಡಗುವುದೇ ಇಲ್ಲ. ಅವರು, ಮಾಘಮಾಸದ ಚಳಿಯಿಂದ ನಡುಗುತ್ತಾ, ಸೂರ್ಯರಶ್ಮಿಯನ್ನೇ ನೆನೆಯುತ್ತಾ ಅಡಿಯನ್ನು ಮುಂದಿಡಲೂ ಕೂಡ ಉತ್ಸಾಹವಿಲ್ಲದ ಕಪಿಗಳಂತಾಗಿದ್ದಾರೆ."

ಕಡೆಯದಾಗಿ ಒಂದು ಮಾತು. ಮಾಘನು ಭಾರವಿಯ ಮೇಲಿನ ಸ್ಪರ್ಧೆಯಿಂದ ಈ ಕಾವ್ಯವನ್ನು ಬರೆದಿರಬಹುದು. ಆ ಪ್ರಯತ್ನದಲ್ಲಿ ಜಯಶಾಲಿಯೂ ಆಗಿರಬಹುದು. ಆದರೆ, ಮಾಘನು ವೀರವೈಷ್ಣವನೆಂದೂ, ಶೈವನಾದ ಭಾರವಿಯನ್ನು ಸ್ಪರ್ಧಿಸುವ ಉದ್ದೇಶದಿಂದಲೇ ಈ ಕಾವ್ಯವನ್ನು ಬರೆದಿದ್ದಾನೆಂದೂ ಹೇಳುವ ಶ್ರೀ ಶಾರದಾರಂಜನರಾಯ್ ಅವರ ತರ್ಕವನ್ನು ಮಾತ್ರ ನಾವು ಒಪ್ಪಲಾರೆವು. ಮಾಘನು ವೀರವೈಷ್ಣವನೆಂದರೆ ಶೈವರನ್ನು ದ್ವೇಷಿಸುವವನು ಅಥವಾ ಶಿವನಲ್ಲಿ ಭಕ್ತಿಯಿಲ್ಲದವನು, ಶಿವನಿಗಿಂತಲೂ ವಿಷ್ಣುವೇ ಸರ್ವೋತ್ತಮನೆಂದು ನಂಬಿದವನು ಎಂದು ಹೇಳುವುದು ಸಾಹಸದ ಮಾತು. ಯಾಕೆಂದರೆ ಮಾಘನು ಭೀಷ್ಮನ ಬಾಯಿಯಿಂದ ಶ್ರೀಕೃಷ್ಣನನ್ನು ಈ ರೀತಿ ಸ್ತೋತ್ರ ಮಾಡಿಸಿದ್ದಾನೆ:

ಪದ್ಮಭೂರಿತಿ ಸೃಜನ್ ಜಗದ್ರಜಃಸತ್ತ್ವಮಚ್ಯುತ ಇತಿ ಸ್ಥಿತಿಂ ನಯನ್ ।
ಸಂಹರನ್ ಹರ ಇತಿ ಶ್ರಿತಸ್ತಮಸ್ತ್ರೈಧಮೇಷ ಭಜತಿ ತ್ರಿಭಿರ್ಗುಣೈಃ ॥ 14-61

"ಈ ಶ್ರೀಕೃಷ್ಣನು ರಜೋಗುಣವಿಶಿಷ್ಟನಾಗಿ ಬ್ರಹ್ಮನೆನಿಸಿಕೊಂಡು ಜಗತ್ತನ್ನು ಸೃಜಿಸುವನು. ಸತ್ವಗುಣ ವಿಶಿಷ್ಟನಾಗಿ ವಿಷ್ಣುವೆನಿಸಿಕೊಂಡು ಪಾಲಿಸುವನು. ತಮೋಗುಣವಿಶಿಷ್ಟನಾಗಿ ಹರನೆನಿಸಿಕೊಂಡು ಸಂರಿಹಸುವನು. ಹೀಗೆ ಈ ಗುಣತ್ರಯಗಳಿಂದ ಮೂರು ಪ್ರಕಾರವಾಗಿ ತೋರುವನು." ಈ ರೀತಿಯ ತ್ರಿಮೂರ್ತಿಗಳ ಅದ್ವೈತವನ್ನು ವೀರವೈಷ್ಣವರು ಒಪ್ಪುವುದಿಲ್ಲ.

ಶಿಶುಪಾಲನು ಶ್ರೀ ಕೃಷ್ಣನನ್ನು ನಿಂದಿಸುವಾಗ ನಿಂದೆ ಮತ್ತು ಸ್ತುತಿಗಳು ತೋರುವಂತೆ ಎರಡು ಅರ್ಥಗಳನ್ನಿಟ್ಟು ಕವಿಯು ಪದ್ಯಗಳನ್ನು ರಚಿಸಿದ್ದಾನೆ. ಅವುಗಳ ಪೈಕಿ ಈ ಎರಡು ಪದ್ಯಗಳು ಪರಮಾತ್ಮನು ನಿರ್ಗುಣನೆಂದು ಸ್ಪಷ್ಟಪಡಿಸುತ್ತವೆ.

ಸಕಲೈರ್ವಪುಃ ಸಕಲದೋಷ ಸಮುದಿತಮಿದಂ ಗುಣೈಸ್ತ್ವವ ।
ತ್ಯಕ್ತಮುಪಗುಣ! ಗುಣತ್ರಿತಯ ತ್ಯಜನ್ನಪ್ರಯಾಸಮುಪಯಾಸಿ ಕಿಂ ಮುಧಾ?॥ 15-32

'ಹೇ ನಿರ್ಗುಣ! ಸರ್ವದೋಷಗಳಿಂದಲೂ ಯುಕ್ತವಾದ ನಿನ್ನಲ್ಲಿ ಶೌರ್ಯಾದಿ ಗುಣಗಳು ಇಲ್ಲವೇ ಇಲ್ಲ. ಹೀಗಿರಲು ತ್ರಿಗುಣಗಳನ್ನು ತ್ಯಜಿಸಬೇಕೆಂಬ ನಿನ್ನ ಪ್ರಯಾಸವು ವ್ಯರ್ಥವೇ ಸರಿ'—ಇದು ನಿಂದೆ.

ಸ್ವಭಾವದಿಂದಲೇ ನಿರ್ಗುಣನಾದ ಪರಮಾತ್ಮನಿಗೆ ತ್ರಿಗುಣಗಳ ಸಂಬಂಧವೆಲ್ಲಿ? ಎಂದು ಸ್ತುತಿ.

ತ್ವಯಿ ಪೂಜನಂ ಜಗತಿ ಜಾಲ್ಮ! ಕೃತಮಿದಮುಪಾಕೃತೇ ಗುಣೈಃ ।
ಹಾಸಕರಮಘಟತ ನಿತರಾಂ ಶಿರಸೀವ ಕಂಕತಮುಪೇತಮೂರ್ಧಜೇ ॥ 15-33

'ಎಲೈ ಅವಿವೇಕಿ! ಗುಣಹೀನನಾದ ನಿನಗೆ ಪೂಜೆ ಮಾಡುವುದು ಬೋಳುತಲೆಗೆ ಬಾಚಣಿಗೆಯನ್ನಿಟ್ಟಂತೆ ಹಾಸ್ಯಾಸ್ಪದವೇ ಸರಿ' ಎಂಬುದು ನಿಂದೆ.

ನಿರ್ಗುಣನೂ ಆದ್ದರಿಂದಲೇ, ವಾಙ್ಮಾನಸಾತೀತನೂ ಆದ ಪರಮಾತ್ಮನನ್ನು ಆರಾಧಿಸುವುದು ಸರ್ವಥಾ ದುಷ್ಕರವೇ ಸರಿಯೆಂದು ಸ್ತೋತ್ರ.

ಈ ಸ್ತುತಿಗಳಲ್ಲಿ ಅದ್ವೈತಭಾವವು ಸ್ಪಷ್ಟವಾಗಿದೆಯೆಂಬುದು ಪಕ್ಷಪಾತ ರಹಿತವಾದ ವಿಮರ್ಶೆಗೆ ನಿಲುಕದಿರದು.

ಮಾಘನು ಈ ಕಾವ್ಯದಲ್ಲಿ ಸುಮಾರು 36 ಬಗೆಯ ವೃತ್ತಗಳನ್ನು ಬಳಸಿದ್ದಾನೆ. ಕಾವ್ಯಪದ್ಧತಿಯಲ್ಲಿ ಹೆಚ್ಚು ಬಳಕೆಯಲ್ಲಿಲ್ಲದ ಕುರರೀವೃತ್ತ, ಜಲೋದ್ಧತಗತಿ, ಅತಿಶಾಯಿನೀ, ಉದ್ಗತಾ, ಮಹಾಮಾಲಿನೀ, ಮತ್ತಮಯೂರ, ಪಂಚಕಾವಲೀ ಮೊದಲಾದ ವೃತ್ತಗಳಲ್ಲಿ ಪದಗಳ ತಡೆಯಿಲ್ಲದ ಓಟವು ಕವಿಯ ಪ್ರೌಢತೆಯನ್ನು ತೋರಿಸುವುದು.

ಯುದ್ಧ ವರ್ಣನೆಯಲ್ಲಿನ ಈ ಪದ್ಯವನ್ನು ನೋಡಿ:

ವಿಹಿತಾದ್ಭುತಲೋಕಸೃಷ್ಟಿ ಮಾಯೇ
ಜಯಮಿಚ್ಛನ್ ಕಿಲ ಮಾಯಯಾ ಮುರಾರೌ ।
ಭುವನಕ್ಷಯಕಾಲಯೋಗನಿದ್ರೇ
ನೃಪತಿಃ ಸ್ವಾಪನಮಸ್ತ್ರಮಾಜಹಾರ ॥ 20-33

'ಈ ಅದ್ಭುತವಾದ ಲೋಕಸೃಷ್ಟಿಯೆಂಬ ಮಾಯೆಯನ್ನು ರಚಿಸಿದವನೂ, ಪ್ರಳಯ ಕಾಲದಲ್ಲಿ ಯೋಗನಿದ್ರಾಸಕ್ತನಾಗುವವನೂ, ಆದ ಶ್ರೀಕೃಷ್ಣನ ಮೇಲೆ ಚೈದ್ಯ ರಾಜನಾದ ಶಿಶುಪಾಲನು ಸಂಮೋಹನಾಸ್ತ್ರವನ್ನು ಪ್ರಯೋಗಿಸಿದನು.'

ಅನಾದಿಮಾಯಾಧಾರನೂ, ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವ ನಾಟಕ ಸೂತ್ರಧಾರನೂ, ಮಹಾ ಐಂದ್ರಜಾಲಕನೂ ಆದ ಭಗವಂತನ ಮೇಲೆ ಸಂಮೋಹನಾಸ್ತ್ರವು ಏನು ಮಾಡೀತು? ಎಂದು ಇದರ ತಾತ್ಪರ್ಯ.

ಈ ಮಹಾಪಂಡಿತನ ಕಾವ್ಯದಲ್ಲೂ ಒಂದೆರಡು ವ್ಯಾಕರಣ ದೋಷಗಳನ್ನು ನಾವು ಕಾಣಬಹುದು. ಉದಾಹರಣೆಗೆ: 'ಸರಜಸಾರುಣಕೇಶರ ಚಾರುಭಿಃ' (6-46) ಎಂಬಲ್ಲಿ 'ಸರಜಸ'ವೆಂಬೀ ಬಹುವ್ರೀಹಿ ಸಮಾಸದಲ್ಲಿ ಸಮಾಸಾಂತ ನಿಪಾತ ಮಾಡಿರುವುದು ಭಾಷ್ಯಸಮ್ಮತವಲ್ಲ. 'ಅಧಿತ್ವತ್' (7-41) ಎಂಬಲ್ಲಿ ತ್ವಾದೇಶವು ಬರಲಾರದು. 'ಬಬೃಂಹಿರೇ' (17-31) ಎಂಬಲ್ಲಿ ಆತ್ಮನೇಪದಿಯು ಚಿಂತ್ಯವೇ ಸರಿ. 'ಅಮೃತಂ ವವಲ್ಗಿರೇ' (14-29) ಎಂಬಲ್ಲಿ ವಲ್ಗಧಾತುವಿಗೆ ಭೋಜನಾರ್ಥಕತ್ವ ವನ್ನು ಉಪಪಾದಿಸುವುದು ಕ್ಲೇಶಸಾಧ್ಯವಾದುದು.

ಕವಿಯು ಕಾವ್ಯಸಮಾಪ್ತಿಯಲ್ಲಿ ತನ್ನ ವಿನಯ ಗುಣವನ್ನು ತೋರಿಸಿ ಕೊಂಡಿದ್ದಾನೆ. ಈ ಕಾವ್ಯವು 'ಲಕ್ಷ್ಮೀಪತೇಶ್ಚರಿತಕೀರ್ತನಮಾತ್ರಚಾರು'ವಂತೆ. ತಾನು ಉತ್ತಮ ಕವಿಯೆಂದು ಕೀರ್ತಿ ಗಳಿಸಬೇಕೆಂಬ ದುರಾಶೆಯಿಂದ ಈ ಕಾವ್ಯವನ್ನು ಬರೆದನಂತೆ: 'ಸುಕವಿಕೀರ್ತಿದುರಾಶಯಾದಃ ಕಾವ್ಯಂ ವ್ಯಧತ್ತ ಶಿಶುಪಾಲ- ವಧಾಭಿಧಾನಮ್' ಎಂದು ಹೇಳುತ್ತಾನೆ.

ಹೇ ಕವಿಯೆ! ನೀನು ಕಟ್ಟಿದ ಈ ಭವ್ಯವಾದ ಸೌಧಕ್ಕೆ ನಿನ್ನ ಸೌಜನ್ಯವೇ ಸುವರ್ಣಕಲಶ. ಕವಿಪ್ರಪಂಚದಲ್ಲಿ ನಿನ್ನ ಹೆಸರು ಸುವರ್ಣಲಿಖಿತವಾಗಿರುವುದು. ಕಾವ್ಯನಭೋಮಂಡಲದಲ್ಲಿ ನಿನ್ನ ಕಾವ್ಯವೊಂದು ಧ್ರುವತಾರೆ!

ಅಮೂಲ್ಯ ಲೋಹ ಬೆರಿಲಿಯಮ್

ಎಸ್. ವೆಂಕಟೇಶಮೂರ್ತಿ

ಬೆಲೆ ಬಾಳುವ ಮುತ್ತು ರತ್ನಗಳಲ್ಲಿ ಪಚ್ಚೆ ಕಲ್ಲುಗಳಲ್ಲಿ ಬೆರೈಲ್ ಎಂಬ ಅದುರಿನ ರೂಪದಲ್ಲಿ ಕಂಡುಬರುವ ಅಮೂಲ್ಯ ಲೋಹ ಬೆರಿಲಿಯಂ. ಹಿಂದಿನ ಕಾಲದಲ್ಲಿ ನಮ್ಮ ರಾಜ ಮಹಾರಾಜರುಗಳು ಬೆರೈಲ್ ಅದುರಿಗೆ ಮೆರಗು ಕೊಟ್ಟು ಇತರ ಅಮೂಲ್ಯ ಲೋಹಗಳಲ್ಲಿ ಅಲಂಕಾರಕ್ಕಾಗಿ ಕೂಡಿಸಿ ರಚಿಸಿದ ಕಿರೀಟಗಳನ್ನೂ ಉಂಗುರಗಳನ್ನೂ ತೊಡುತ್ತಿದ್ದರು. ಅದರಿಂದ ಅವರ ಕಾಂತಿ ಪ್ರತಿಷ್ಠೆಗಳು ಹೆಚ್ಚುತ್ತಿದ್ದವು. ಇಷ್ಟು ಬೆಲೆ ಬಾಳುವ ಬೆರೈಲು ಕೇವಲ ಬೆರಿಲಿಯಂ ಸಿಲಿಕೇಟ್ ಮತ್ತು ಅಲ್ಯುಮಿನಿಯಂ ಸಿಲಿಕೇಟ್‌ಗಳ ಮಿಶ್ರಣವಲ್ಲದೆ ಬೇರೇನಲ್ಲ.

ಈ ಬೆರೈಲ್ ತನ್ನ ಮೌಲ್ಯದಿಂದಾಗಿ ಇತಿಹಾಸವನ್ನೇ ನಿರ್ಮಿಸಿದೆ. ಅತ್ಯಾಕರ್ಷಕವಾಗಿದ್ದ ಈ ಕಲ್ಲುಗಳಿಗಾಗಿ ಅನೇಕ ಯುದ್ಧಗಳು ನಡೆದಿರುವುದಾಗಿ ಚರಿತ್ರೆಯ ಪುಟಗಳಿಂದ ತಿಳಿದು ಬರುತ್ತದೆ. ಸಾವಿರಾರು ಮಂದಿಯನ್ನು ಬಲಿ ತೆಗೆದುಕೊಂಡಿದೆ ಈ ಬೆರೈಲ್. ಇಷ್ಟೆಲ್ಲಾ ಸಂಗತಿಗಳಿಗೆ ಕಾರಣವಾಗಿರುವ ಬೆರೈಲ್ ಆಶಾದಾಯಕ ಭವಿಷ್ಯವನ್ನು ಹೊಂದಿದೆ.

ಕ್ರಿಸ್ತಶಕ ಸಾವಿರದ ಏಳುನೂರ ತೊಂಬತ್ತೆಂಟರಲ್ಲಿ ಫ್ರೆಂಚ್ ರಸಾಯನ ತಜ್ಞ ವ್ಯಾಕ್ವೆಲಿನ್ ಎಂಬಾತ ಬೆರೈಲ್ ಅದುರಿನಲ್ಲಿ ಹುದುಗಿಕೊಂಡಿದ್ದ ಬೆರಿಲಿಯಂ ಲೋಹವನ್ನು ಬೆಳಕಿಗೆ ತಂದ. ಹೊಸ ಧಾತುವಿನ ಲವಣವು ಸಿಹಿಯಾದ ಸವಿಯನ್ನು ಹೊಂದಿತ್ತಲ್ಲದೆ ಅಲ್ಯುಮಿನಿಯಂ ಲವಣಗಳ ಗುಣಲಕ್ಷಣಗಳನ್ನೇ ಪಡೆದಿತ್ತು. ಈ ಹೊಸ ಲೋಹವನ್ನು 'ಗ್ಲೂಸಿನಾ' ಎಂದು ಕರೆಯಬೇಕೆಂದು ವ್ಯಾಕ್ವೆಲಿನ್ ಸಲಹೆ ನೀಡಿದನು. ಗ್ಲೂಸಿನಾ ಎಂದರೆ ಗ್ರೀಕ್ ಭಾಷೆಯಲ್ಲಿ 'ಸಿಹಿ' ಎಂದರ್ಥ. 1828ರ ಆಗಸ್ಟಿನಲ್ಲಿ ವೋಹ್ಲರ್ ಮತ್ತು ಬಸ್ಸಿ ಎಂಬ ವಿಜ್ಞಾನಿಗಳು ಮೊಟ್ಟ ಮೊದಲ ಬಾರಿಗೆ ಕೈಗೆ ಸಿಗುವಷ್ಟು ಪ್ರಮಾಣದಲ್ಲಿ ಈ ಲೋಹವನ್ನು ತಯಾರಿಸಿದರು. ಅವರು ಅದನ್ನು "ಬೆರಿಲಿಯಂ" ಎಂದು ಕರೆದರು. ಕಾಲಕ್ರಮೇಣ ಗ್ಲೂಸಿನಾ ಎಂಬ ಹೆಸರು ಮರೆಯಾಗಿ "ಬೆರಿಲಿಯಂ" ಎಂಬ ನಾಮಧೇಯವೇ ಖಾಯಂ ಆಯಿತು. ಸನ್ 1899 ರಲ್ಲಿ ಲೆಬ್ಯೂ ಎಂಬಾತ ಅದನ್ನು ಪರಿಶುದ್ಧ ರೂಪದಲ್ಲಿ ತಯಾರಿಸಿದ. ಸನ್ 1932 ರಲ್ಲಿ ಗೋಲ್ಡ್‌ಸ್ಕಿಮಿತ್ ಎಂಬಾತ ವಾಣಿಜ್ಯ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದಲ್ಲಿ

ಬೆರಿಲಿಯಂ ಲೋಹವನ್ನು ತಯಾರಿಸಿದನು. ಆ ನಂತರವೇ ಅದರ ಗುಣಲಕ್ಷಣಗಳು ತಿಳಿದು ಬಂದು ಬಹುಮುಖ ಪ್ರಯೋಜನಗಳು ಬೆಳಕಿಗೆ ಬಂದವು.

ಬೆರಿಲಿಯಂನ ಗುಣಲಕ್ಷಣಗಳು ನಿಜಕ್ಕೂ ಪ್ರಶಂಸಾರ್ಹ. ಬೆಳ್ಳಿಯ ಹೊಳಪನ್ನು ಪಡೆದಿರುವ ಪೆಡಸು ಲೋಹವಾದ ಬೆರಿಲಿಯಂ ಕಠಿಣತೆಯನ್ನು ಹೊಂದಿದೆಯಲ್ಲದೆ ಗಾಜನ್ನು ಸೀಳುವ ಕಸುವನ್ನೂ ಪಡೆದಿದೆ. ಎಕ್ಸ್–ಕಿರಣಗಳು ಸುಲಲಿತವಾಗಿ ಈ ಲೋಹದ ಮೂಲಕ ಹಾದು ಹೋಗಬಲ್ಲವು. ಅಂದರೆ ಬೆರಿಲಿಯಂ ಲೋಹವು ಎಕ್ಸ್–ಕಿರಣಗಳಿಗೆ ಅತಿ ಪಾರದರ್ಶಕತೆಯನ್ನು ತೋರಿಸುವುದು. ಅದರ ಸಾಪೇಕ್ಷ ಸಾಂದ್ರತೆಯು 1083 ಇದ್ದರೆ ಕರಗುವ ಮತ್ತು ಕುದಿಯುವ ತಾಪಗಳು ಕ್ರಮವಾಗಿ 1278 ಡಿಗ್ರಿ ಮತ್ತು 1500 ಡಿಗ್ರಿ ಸೆಂಟಿಗ್ರೇಡ್‌ಗಳಷ್ಟಿರುವುವು.

ಶುಷ್ಕವಾತಾವರಣದಲ್ಲಿ ಹೆಚ್ಚಿನ ಸ್ಥಿರತೆಯನ್ನು ಪಡೆದಿರುವ ಈ ಲೋಹವು ತೇವಾಂಶವಿದ್ದಾಗ ಗಾಳಿಯಲ್ಲಿನ ಆಮ್ಲಜನಕದೊಂದಿಗೆ ಸಂಯೋಗ ಹೊಂದಿ ಉತ್ಕರ್ಷಣಗೊಳ್ಳುವುದು. ಸೋಡಿಯಂ ಅಥವಾ ಇತರ ಕ್ಷಾರಕ ಲೋಹಗಳಂತೆ ಬೆರಿಲಿಯಂ ನೀರನ್ನಾಗಲೀ ನೀರಾವಿಯನ್ನಾಗಲೀ ವಿಭಜಿಸುವುದಿಲ್ಲ. ಹೆಚ್ಚಿನ ತಾಪದಲ್ಲಿ ಮಾತ್ರ ಅದು ಇಂಗಾಲ, ಸಾರಜನಕ ಮೊದಲಾದ ಅಲೋಹಗಳೊಂದಿಗೆ ಪ್ರತಿಕ್ರಿಯೆ ತೋರಿಸುತ್ತದೆ. ಅಲ್ಲದೆ ಸಾರರಿಕ್ತ ಆಮ್ಲಗಳಲ್ಲಿ ಕರಗಿ ಜಲಜನಕವನ್ನು ಬಿಡುಗಡೆ ಮಾಡುತ್ತದೆ. ಕ್ಷಾರಕ ದ್ರಾವಣಗಳಲ್ಲೂ ಬೆರಿಲಿಯಂ ಲೋಹವು ಕರಗಿ ಲವಣಗಳನ್ನು ಕೊಡುತ್ತದೆ. ಅಂಥ ಲವಣಗಳಿಗೆ "ಬೆರೈಲೇಟ್"ಗಳೆಂದು ಹೆಸರು.

ಬೆರಿಲಿಯಂ ಲೋಹವು ಎಷ್ಟು ಅಮೂಲ್ಯವೋ ಅಷ್ಟೇ ಉಪಯುಕ್ತವೂ ಹೌದು. ಶಬ್ದಾತೀತ ವೇಗದಿಂದ ಚಲಿಸುವ ವಿಮಾನಗಳ ರಚನೆಯಲ್ಲಿ ಈ ಲೋಹವನ್ನು ಬಳಸಬಹುದಾಗಿದೆ. ಅಷ್ಟು ಅತ್ಯಧಿಕ ವೇಗದಲ್ಲಿ ಉತ್ಪತ್ತಿಯಾಗುವ ಹೆಚ್ಚಿನ ತಾಪವನ್ನು ತಡೆಯಬಲ್ಲಂಥ ಸಾಮರ್ಥ್ಯ ಈ ಲೋಹಕ್ಕಿದೆ. ಅಲ್ಲದೆ ಅತ್ಯಧಿಕ ತಾಪದಲ್ಲಿಯೂ ತನ್ನ ಗಡಸುತನವನ್ನು ಕಳೆದುಕೊಳ್ಳುವುದಿಲ್ಲ. ಈ ವಿಷಯದಲ್ಲಿ ಅದು ಟೈಟಾನಿಯಂಗಿಂತಲೂ ಸಮರ್ಥವೆನಿಸಿದೆ.

ಬೆರಿಲಿಯಂ ಲೋಹವು ವಿಜ್ಞಾನಿಗಳ ಕುತೂಹಲವನ್ನು ಕೆರಳಿಸಿರುವುದು. ಕೇವಲ ವಾಯುನೌಕಾ ಉದ್ಯಮದಲ್ಲಿಯೇ ಅಲ್ಲ. ವಿಮಾನ ಶಿಲ್ಪಿಗಳು ಇದರ ಬಗ್ಗೆ ಇನ್ನೂ ಯೋಚಿಸದೇ ಇರುವಾಗಲೇ ಬೆರಿಲಿಯಮನ್ನು ಎಕ್ಸ್-ಕಿರಣ ನಳಿಕೆಗಳಲ್ಲಿ ಗವಾಕ್ಷಿಗಳಿಗಾಗಿ ಉಪಯೋಗಿಸುತ್ತಿದ್ದರು. ಇದಕ್ಕೆ ಕಾರಣ ಅದರ ಎಕ್ಸ್-ಕಿರಣ ಪಾರದರ್ಶಕತನವೇ ಆಗಿದೆ.

ಬೆರಿಲಿಯಂ ಲೋಹವು ಬಹು ಬೇಗನೆ ಲೋಹತಜ್ಞರ ಗಮನವನ್ನು ಸೆಳೆಯಿತು. ಸ್ವಲ್ಪೇ ಸ್ವಲ್ಪ ಬೆರಿಲಿಯಂ ಲೋಹವನ್ನು ಇತರ ಲೋಹಗಳು ಹಾಗೂ

ಮಿಶ್ರ ಲೋಹಗಳೊಂದಿಗೆ ಬೆರಸಿದಾಗ ಅವುಗಳ ಗುಣಲಕ್ಷಣಗಳಲ್ಲಿ ಗಮನಾರ್ಹ ಬದಲಾವಣೆಗಳು ಕಂಡು ಬಂದವು. ಒಂದು ಕಾಲದಲ್ಲಿ ಮೋಟಾರು ಕಾರಿನ ಸ್ಪ್ರಿಂಗ್‌ಗಳನ್ನು ಕಾರ್ಬನ್‌ಸ್ಟೀಲ್‌ನಿಂದ ರಚಿಸುತ್ತಿದ್ದರು. ಅವು ದೀರ್ಘಬಾಳಿಕೆಗೆ ಅಷ್ಟು ಯೋಗ್ಯವಾಗಿರಲಿಲ್ಲ. ಕಾರ್ಬನ್‌ಸ್ಟೀಲ್‌ನೊಂದಿಗೆ ಸ್ವಲ್ಪ ಬೆರಿಲಿಯಂ ಲೋಹವನ್ನು ಬೆರೆಸಿದಾಗ ಅದರ ಆಯುಮಾ೯ನ ಗಮನಾರ್ಹವಾಗಿ ವೃದ್ಧಿ ಗೊಂಡಿತು.

ಬೆರಿಲಿಯಂ ಲೋಹವು ಮಗ್ನೀಷಿಯಂನೊಂದಿಗೆ ಸಂಯೋಗಗೊಳ್ಳುವುದಿಲ್ಲ. ಆದರೂ ಸಾವಿರದಲ್ಲಿ ಒಂದಂಶದಂತೆ ಬೆರಿಲಿಯಮನ್ನು ಮೆಗ್ನೀಷಿಯಂನೊಂದಿಗೆ ಬೆರಸಿದಾಗ ಅದು ನೀರು ಮತ್ತು ಗಾಳಿಯ ಸಂಪರ್ಕದಲ್ಲಿಯೂ ನಶಿಸಿ ಹೋಗದೆ ದೀರ್ಘಬಾಳಿಕೆಗೆ ಬರುವುದು. ಅಲ್ಲದೆ ಅಂಥ ಮಿಶ್ರಲೋಹಗಳು 700 ಡಿಗ್ರಿ ತಾಪದಲ್ಲಿಯೂ ಭಗ್ಗನೆ ಹತ್ತಿಕೊಳ್ಳುವುದಿಲ್ಲ.

ಬೆರಿಲಿಯಂ ಅನೇಕ ಲೋಹಗಳೊಂದಿಗೆ ಬೆರೆಯುವುದು. ಬೆರಿಲಿಯಂ-ತಾಮ್ರ ಮಿಶ್ರಲೋಹವು ಪ್ರಮುಖವಾದುದು. ಈ ಮಿಶ್ರಲೋಹಗಳಲ್ಲಿರುವ ಬೆರಿಲಿಯಂನ ಅಂಶ ಶೇಕಡಾ ಎರಡರಷ್ಟು ಮಾತ್ರ. ಅದರ ಪರಿಣಾಮ ನಿಜಕ್ಕೂ ಅದ್ಭುತ. ವಿದ್ಯುತ್ಕುಲಿಮೆಯಲ್ಲಿ ಬೆರಿಲಿಯಂ ಮತ್ತು ತಾಮ್ರದ ಆಕ್ಸೈಡ್ ಮಿಶ್ರಣವನ್ನು ಇಂಗಾಲದೊಂದಿಗೆ ವರ್ತಿಸುವುದರಿಂದ ಬೆರಿಲಿಯಂ–ತಾಮ್ರ ಮಿಶ್ರ ಲೋಹಗಳನ್ನು ಪಡೆಯಬಹುದು. ಅಂಥ ಮಿಶ್ರಲೋಹಗಳು ಅತಿ ಹೆಚ್ಚಿನ ಕರ್ಷಕ ಬಲ, ತುಕ್ಕು ನಿರೋಧಕತ್ವ, ಸವೆತ ನಿರೋಧಕತ್ವ, ಗಡಸುತನ, ಉತ್ತಮ ವಾಹಕತ್ವ ಇವೆ ಮೊದಲಾದ ಉತ್ತಮ ಗುಣಗಳನ್ನು ಪಡೆದಿವೆ. ಅಲ್ಲದೆ ಅವು ಅತಿ ಹೆಚ್ಚಿನ ಸ್ಥಿತಿಸ್ಥಾಪಕತ್ವವನ್ನೂ ಪ್ರದರ್ಶಿಸುತ್ತವೆ. ಕಿಡಿ ಹೊರಡಿಸುವುದಿಲ್ಲ. ಹಾಗೂ ಕಾಂತೀಯ ಲಕ್ಷಣವನ್ನು ಪಡೆದಿಲ್ಲ. ಈ ಎಲ್ಲಾ ವಿಶೇಷ ಗುಣಗಳಿಂದಾಗಿ ಬೆರಿಲಿಯಂ-ತಾಮ್ರ ಮಿಶ್ರಲೋಹಗಳನ್ನು ಮೋಟಾರುಗಳ ಅತ್ಯಂತ ಸಂದಿಗ್ಧ ಭಾಗ ಗಳೆನಿಸಿರುವ ಸ್ಪ್ರಿಂಗ್‌ಗಳು, ಸ್ಪ್ರಿಂಗ್ ಸಂಪರ್ಕಗಳು, ಗೇರ್‌ಗಳು ಹಾಗೂ ಬೇರಿಂಗ್‌ಗಳು ಇವೇ ಮೊದಲಾದ ಬಿಡಿ ಭಾಗಗಳ ತಯಾರಿಕೆಯಲ್ಲಿ ಉಪ ಯೋಗಿಸುತ್ತಾರೆ. ಈ ಮಿಶ್ರ ಲೋಹವು ಕಲ್ಲಿನೊಂದಿಗೆ ಘರ್ಷಿಸಿದಾಗ ಕಿಡಿಗಳು ಉಂಟಾಗದೇ ಇರುವುದರಿಂದ, ಅದನ್ನು ಮೊನಚಾದ ಆಯುಧಗಳು, ಸುತ್ತಿಗೆ ಮತ್ತು ಗರಗಸಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಗಣಿಗಳು, ಸ್ಫೋಟಕ ಕೈಗಾರಿಕೆಗಳಲ್ಲೂ ಬೆರಿಲಿಯಂ- ತಾಮ್ರ ಮಿಶ್ರ ಲೋಹಗಳು ಉಪಯೋಗಕ್ಕೆ ಬಂದಿವೆ.

ಉಕ್ಕಿನ ಮೇಲ್ಮೈಯನ್ನು ಕಠಿಣಗೊಳಿಸುವುದರಲ್ಲಿ ಬೆರಿಲಿಯಂ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಬೆರಿಲಿಯಂ ಲೋಹದ ನೆರವಿನಿಂದ ಉಕ್ಕನ್ನು

ಬಲಪಡಿಸುವ ಕ್ರಿಯೆಗೆ "ಬೆರಿಲೈಸೇಷನ್" (Beryllization) ಎಂದು ಹೆಸರು. ಈ ವಿಧಾನದಲ್ಲಿ ಬಲವರ್ಧನೆಗೆ ಸಿದ್ಧವಾಗಿರುವ ಉಕ್ಕನ್ನು ಬೆರಿಲಿಯಂ ಅಥವಾ ಅದರ ಸಂಯುಕ್ತದ ಪುಡಿಯನ್ನು ತುಂಬಿಸಿರುವ ಒಂದು ಪಾತ್ರೆಯಲ್ಲಿರಿಸಿ ಸುಮಾರು 1000 ಡಿಗ್ರಿ ಸೆಂಟಿಗ್ರೇಡ್ ತಾಪಕ್ಕೆ ಗುರಿಪಡಿಸುತ್ತಾರೆ. ಆಗ ಉಕ್ಕಿನ ಮೇಲ್ಪದರವು ಬೆರಿಲಿಯಂ ಅಣುಗಳನ್ನು ಹೀರಿಕೊಂಡು ಹೆಚ್ಚಿನ ಕಾಠಿಣ್ಯವನ್ನೂ, ಉತ್ಕರ್ಷಣ ನಿರೋಧಕತ್ವವನ್ನೂ ಪಡೆಯುತ್ತದೆ.

ಬೆರಿಲಿಯಂನ ಉಪಯೋಗಗಳು ಕೇವಲ ಲೋಹಶಾಸ್ತ್ರ ಉದ್ಯಮಗಳಿಗೇ ಸೀಮಿತವಲ್ಲ. ಇತ್ತೀಚೆಗೆ ಅದನ್ನು ಪರಮಾಣು ಶಕ್ತಿಗೆ ಸಂಬಂಧಿಸಿದ ಪ್ರಯೋಗಗಳಲ್ಲಿಯೂ ಉಪಯೋಗಿಸುತ್ತಿದ್ದಾರೆ. ಪರಮಾಣು ಬೀಜ ಕ್ರಿಯಾಕಾರಿಗಳಲ್ಲಿ (ನ್ಯೂಕ್ಲಿಯಾರ್‌ರಿಯಾಕ್ಟರ್ಸ್) ನ್ಯೂಟ್ರಾನುಗಳ ವೇಗ ತಗ್ಗಿಸುವ ಸೌಮ್ಯಕಾರಿಯಂತೆ ಬೆರಿಲಿಯಂ ಉಪಯೋಗಕ್ಕೆ ಬಂದಿದೆ. ರಾಕೆಟ್‌ಗಳು, ಕೃತಕ ಉಪಗ್ರಹಗಳು ಹಾಗೂ ಜೆಟ್ ವಿಮಾನಗಳಲ್ಲೂ ಬೆರಿಲಿಯಂ ಲೋಹದ ಭಾಗಗಳನ್ನು ಉಪಯೋಗಿಸಬಹುದು.

ತೀರ ಇತ್ತೀಚೆಗೆ ಇಂಗ್ಲೆಂಡಿನಲ್ಲಿ ರೆಯಾನ್‌ನಂತೆಯೇ ಕಾಣುವ ಹೊಸದಾದ ಕೃತಕ ನೂಲಿನ ತಯಾರಿಕೆಯಲ್ಲಿ ಬೆರಿಲಿಯಂ ತುಂಡುಗಳನ್ನು ಬಳಸುತ್ತಿದ್ದಾರೆ. ನಿಯಾನ್ ದೀಪಗಳಲ್ಲಿ ಬೆರಿಲಿಯಮನ್ನು ಉಪಯೋಗಿಸಬಹುದು.

ಬೆರಿಲಿಯಂನ ಪ್ರಮುಖ ಸಂಯುಕ್ತವಾದ ಬೆರಿಲಿಯಂ ಆಕ್ಸೈಡನ್ನು ಅಗ್ನಿ ನಿರೋಧಕ ಇಟ್ಟಿಗೆಗಳ ತಯಾರಿಕೆಯಲ್ಲಿ ಉಪಯೋಗಿಸಬಹುದು. ಅಲ್ಲದೆ ಬೆಳ್ಳಿಯ ಪಾತ್ರೆಗಳನ್ನು ಬೆರಿಲಿಯಂನಿಂದ ಲೇಪಿಸುವುದರಿಂದ ಅವುಗಳ ಮೆರಗನ್ನು ಹೆಚ್ಚಿಸಬಹುದು. ಕೃತಕ ಹಲ್ಲುಗಳು, ಕೃತಕ ರತ್ನಗಳು, ವಿಶೇಷ ಗಾಜುಗಳು ಇವೇ ಮೊದಲಾದ ಉಪಯುಕ್ತ ವಸ್ತುಗಳ ತಯಾರಿಕೆಗೆ ಬೆರಿಲಿಯಮನ್ನು ಉಪಯೋಗಿಸಬಹುದಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ವಿಜ್ಞಾನ ಮತ್ತು ತಾಂತ್ರಿಕ ಉದ್ಯಮಗಳಲ್ಲಿ ಬೆರಿಲಿಯಂ ಬಹಳ ಉಪಯುಕ್ತ ಲೋಹವೆನಿಸಿದೆ. ಆದರೆ ಅದರ ಹೇರಳತೆ ಎಷ್ಟೆಂದರೆ ಭೂಮಿಯ ಮೇಲ್ಪದರದಲ್ಲಿ ಕೇವಲ 10,000 ದಲ್ಲಿ ಒಂದಂಶದಷ್ಟು. ಅಂದರೆ ಅದು ಸೀಸ ಅಥವಾ ಕೋಬಾಲ್ಟ್‌ಗಿಂತ ಎರಡು ಪಾಲು ಹೆಚ್ಚು ಹೇರಳವಾಗಿದೆ.

ಬೆರಿಲಿಯಂ ಲೋಹದ ಪ್ರಮುಖ ಮೂಲವೆನಿಸಿದ ಬೆರೈಲು ನಮ್ಮ ದೇಶದಲ್ಲಿ ರಾಜಾಸ್ಥಾನ, ಬಿಹಾರ ಮತ್ತು ಮದ್ರಾಸು ಪ್ರಾಂತ್ಯಗಳಲ್ಲಿ ದೊರೆಯುತ್ತದೆ. ಇತರ

ಬೆರಿಲಿಯಂ ಅದುರುಗಳಾದ ಕ್ರೈಸೋ ಬೆರೈಲ್, ಬೆಟ್ರ್ರಾನಸೈಟ್, ಫೀನಸೈಟ್, ಬ್ರೋಮೆಲ್ಲೈಟ್ ಮುಂತಾದವು ಹೆಚ್ಚಾಗಿ ರಷ್ಯ, ಕೆನಡ, ಜರ್ಮನಿ, ಆಫ್ರಿಕಾ, ಬ್ರೆಜಿಲ್ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕಂಡು ಬಂದಿವೆ.

ಸಮಸ್ತ ಅದುರುಗಳಲ್ಲಿಯೂ ಬೆರಿಲಿಯಂ ತಯಾರಿಕೆಗೆ ಬೆರೈಲೇ ಅತ್ಯುಪಯುಕ್ತ. ಅದುರಿನಿಂದ ಲೋಹವನ್ನು ಹೊರತೆಗೆದು ಶುದ್ಧರೂಪದಲ್ಲಿ ಪಡೆಯುವುದು ಕಷ್ಟಕರವೇ. ಬೆರಿಲಿಯಂನ ತಯಾರಿಕೆಯಲ್ಲಿ ಪ್ರಥಮ ಹಂತವೆಂದರೆ ಬೆರಿಲಿಯಂ ಆಕ್ಸೈಡನ್ನು ಪರಿಶುದ್ಧವಾಗಿ ತಯಾರಿಸುವುದು. ಇದಕ್ಕೆ ರತ್ನಮರಕತಗಳನ್ನು ಉಪಯೋಗಿಸುವುದಿಲ್ಲ. ಏನಿದ್ದರೂ ಅಷ್ಟು ಅಮೂಲ್ಯವಲ್ಲದ ಸಾಧಾರಣದರ್ಜೆಯ ವರ್ಣರಹಿತ ಬೆರೈಲ್ ಅದುರನ್ನು ಉಪಯೋಗಿಸಿ ಬೆರಿಲಿಯಂ ಲೋಹವನ್ನು ತಯಾರಿಸುತ್ತಾರೆ ತಯಾರಿಕಾ ವಿಧಾನ ಕೆಳಕಂಡಂತಿದೆ.

"ಕೋಪಾಕ್ಸ್-ಜೆಲ್‌ಗ್ರೇನ್ ವಿಧಾನ"ವೆಂದು ಕರೆಯಲ್ಪಡುವ ಈ ನೂತನ ವಿಧಾನದಲ್ಲಿ ಬೆರೈಲ್ ಅದುರನ್ನು ಚೆನ್ನಾಗಿ ಕುಟ್ಟಿ ಪುಡಿ ಮಾಡಿ, ಅದರೊಂದಿಗೆ ಒಂದು ಗೊತ್ತಾದ ಪ್ರಮಾಣದಲ್ಲಿ ಸುಣ್ಣವನ್ನು ಸೇರಿಸುತ್ತಾರೆ. ಈ ಮಿಶ್ರಣವನ್ನು ಸುಮಾರು ಒಂದೆರಡು ಗಂಟೆಗಳ ಕಾಲ 1500 ಡಿಗ್ರಿ ತಾಪಕ್ಕೊಳಪಡಿಸಿ, ಸಾರಯುಕ್ತ ಸಲ್ಫ್ಯೂರಿಕ್ ಆಮ್ಲದ ವರ್ತನೆಗೆ ಈಡು ಮಾಡಿದಾಗ ಬೆರಿಲಿಯಂ ಸಲ್ಫೇಟ್ ಉತ್ಪತ್ತಿಯಾಗುತ್ತದೆ. ಇದನ್ನು ಕರಗದ ಅದುರಿನ ಭಾಗಗಳಿಂದ ಬೇರ್ಪಡಿಸುವ ಸಲುವಾಗಿ ಬಿಸಿಯಾದ ನೀರಿನೊಂದಿಗೆ ವರ್ತಿಸಬೇಕು. ಆಗ ಅಲ್ಯುಮಿನಿಯಂ ಮತ್ತು ಬೆರಿಲಿಯಂ ಸಲ್ಫೇಟ್‌ಗಳು ನೀರಿನಲ್ಲಿ ಕರಗುತ್ತವೆ. ಈ ದ್ರಾವಣವನ್ನು ಅಮೋನಿಯಂ ಸಲ್ಫೇಟ್‌ನೊಂದಿಗೆ ವರ್ತಿಸಿ ಬಾಷ್ಪೀಕರಣ ಕ್ರಿಯೆಯಿಂದ ಸಾರಗೊಳಿಸಿದಾಗ ಅಲ್ಯುಮಿನಿಯಂ ಸಲ್ಫೇಟು ಆಲಮ್ ಹರಳುಗಳಾಗಿ ಪೃಥಕ್ಕರಣಗೊಳ್ಳುತ್ತದೆ. ಇದನ್ನು ಶೋಧಿಸಿ, ಉಳಿದ ದ್ರಾವಣವನ್ನು ಆವಿಗೊಳಿಸುವುದರಿಂದ ಶುದ್ಧವಾದ ಬೆರಿಲಿಯಂ ಆಕ್ಸೈಡ್ ಕೆಳಗುಳಿಯುತ್ತದೆ.

ಈ ರೀತಿ ದೊರಕಿದ ಬೆರಿಲಿಯಂ ಆಕ್ಸೈಡನ್ನು ಪುಡಿಮಾಡಿದ ಕೋಕ್‌ನೊಂದಿಗೆ ಬೆರೆಸಿ ವಿದ್ಯುತ್ ಕುಲುಮೆಯಲ್ಲಿ ಸುಮಾರು 1500 ಡಿಗ್ರಿ ಸೆಂಟಿಗ್ರೇಡ್ ತಾಪಕ್ಕೊಳಪಡಿಸಿದಾಗ ಕರಗಿ ದ್ರವವಾದ ಬೆರಿಲಿಯಂ ಕುಲುಮೆಯ ಅಡಿಯಲ್ಲಿ ಉಳಿಯುತ್ತದೆ. ಕೋಕ್ (ಇಂಗಾಲದ ಭಿನ್ನರೂಪ) ಆಮ್ಲಜನಕದೊಂದಿಗೆ ಸಂಯೋಗಗೊಂಡು ಇಂಗಾಲದ ಮಾನಾಕ್ಸೈಡಾಗಿ ಹೋಗುತ್ತದೆ. ದ್ರವಿಸಿದ ಬೆರಿಲಿಯುಮನ್ನು ಅಚ್ಚುಗಳಲ್ಲಿ ಹಾಕಿ ಬೇಕಾದ ಆಕಾರಕ್ಕೆ ತರಬಹುದು. ಈ ರೀತಿ ತಯಾರಾದ ಬೆರಿಲಿಯಂ ಲೋಹವು ಸುಮಾರು ಶೇಕಡಾ 99 ರಷ್ಟು ಶುದ್ಧವಾಗಿರುತ್ತದೆ.

ಶೇಕಡಾ 99.9 ರಷ್ಟು ಪರಿಶುದ್ಧ ಬೆರಿಲಿಯಂ ಲೋಹವನ್ನು ಪಡೆಯಲು ಅಷ್ಟು ಶುದ್ಧವಲ್ಲದ ಬೆರಿಲಿಯಂ ಲೋಹವನ್ನು ಬೆರಿಲಿಯಂ ಆಕ್ಸೈಡ್ ಮೂಸೆ (ಕ್ರೂಸಿಬಲ್)ಗಳಲ್ಲಿ ನಿರ್ವಾತದಲ್ಲಿ ಭಟ್ಟಿ ಇಳಿಸುವುದರಿಂದ ಪಡೆಯಬಹುದು.

ಬೆರಿಲಿಯಂ ಕುರಿತಾದ ಅಂಕಿ ಅಂಶಗಳು ಆಶಾದಾಯಕ. 1932 ರಲ್ಲಿ ಇದರ ಉತ್ಪಾದನೆಯು ಕೇವಲ ಎರಡು ಟನ್‌ಗಳಷ್ಟಿದ್ದರೆ, 1937 ರಲ್ಲಿ 7 ಟನ್‌ಗಳಿಗೇರಿ, 1959 ರ ಹೊತ್ತಿಗೆ ಒಟ್ಟು ಉತ್ಪಾದನೆಯು 180 ಟನ್ನುಗಳನ್ನು ಮುಟ್ಟಿತು. ಇಂದು ಈ ಲೆಖ್ಖವು ದ್ವಿಗುಣಿಸಿದೆ.

ಕಾಲಿಗುಲಾ ಮತ್ತು ತುಘಲಕ್ : ಒಂದು ತೌಲನಿಕ ಸಮೀಕ್ಷೆ

ಕೆ. ವಿ. ಶ್ರೀನಿವಾಸ ಪ್ರಭು

'ಕಾಲಿಗುಲಾ' ಆಲ್ಬರ್ಟ್ ಕಾಮೂನ ಸುಪ್ರಸಿದ್ಧವಾದ ನಾಟಕ. ಪ್ರಬುದ್ಧ ವಿಚಾರವಂತನಾದ ಕಾಮೂ, ತನ್ನ ಸಮಕಾಲೀನರಾದ ಜೀನ್‌ಪಾಲ್ ಸಾರ್ತ್ರೆ, ಮಾರ್ಸೆಲ್ ಮುಂತಾದವರು ತಾತ್ತ್ವಿಕ ವಿಶ್ಲೇಷಣೆಗೆ ನಾಟಕ ಮಾಧ್ಯಮವನ್ನು ಬಳಸುತ್ತಿದ್ದುದನ್ನು ಕಂಡು, ತಾನೂ ಅದೇ ತಂತ್ರವನ್ನು ಅನುಸರಿಸಿದ. ಹೀಗೆ ಕಾಮೂ ತನ್ನ 'Myth of sisyphus' ಮೊದಲಾದ ಕೃತಿಗಳಲ್ಲಿ ನಿರೂಪಿಸಿದ ಅಬ್ಸರ್ಡ್ ತತ್ತ್ವದ ಹಿನ್ನೆಲೆಯಲ್ಲೇ ಅವನ ಕಾಲಿಗುಲಾ, ಔಟ್‌ಸೈಡರ್, ಕ್ರಾಸ್ ಪರ್ಪಸ್, ದಿ ಪ್ಲೇಗ್ ಮೊದಲಾದ ಎಲ್ಲ ನಾಟಕ–ಕಾದಂಬರಿಗಳೂ ರೂಪು ತಳೆಯುವುದರಿಂದ, ಆ ತತ್ತ್ವದ ಪರಿಚಯವಿಲ್ಲದೆ ಅವನ ಕೃತಿಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆ.

"There is but one truely serious philosophical problem-it is suicide"–ಇದು ಕಾಮೂ ತನ್ನ 'Myth of Sisyphus' ಕೃತಿಯನ್ನು ಆರಂಭಿಸಿರುವ ರೀತಿ. ನಮ್ಮನ್ನು ಯಾವಾಗಲೂ ಉತ್ಕಟವಾಗಿ ಮುತ್ತುವ ಜೀವನದ ಅರ್ಥವನ್ನು ಕುರಿತಾದ ಪ್ರಶ್ನೆಗೆ 'ಆತ್ಮಹತ್ಯೆ' ಒಂದು ರೀತಿಯ ಉತ್ತರವಾದುದರಿಂದಲೇ ಕಾಮೂ ಈ ಬಗೆಗೆ ಚಿಂತಿಸತೊಡಗಿದ್ದು. ಆತ್ಮಹತ್ಯೆಯನ್ನು ಕುರಿತಾದಂತಹ ಎಲ್ಲ ಸಾಂಪ್ರದಾಯಿಕ ವಿವರಣೆಗಳೂ ಒಂದುತೀವ್ರ ಕಾರಣದತ್ತ ಗಮನವನ್ನು ಹರಿಸುತ್ತವೆ. ಅದನ್ನು ಹೀಗೆ ಹೇಳಬಹುದು : 'ಒಂದು ಘಟ್ಟದವರೆಗೆ ಎಲ್ಲವನ್ನೂ ಸಹಿಸಿಕೊಂಡು ಬಂದ ಜೀವ, ಇದ್ದಕ್ಕಿದ್ದಂತೆ ಬದುಕಲಿಕ್ಕೆ ಯಾವುದೇ ತೀವ್ರವಾದ ಕಾರಣವೂ ಇಲ್ಲದಿರುವುದನ್ನು, ದಿನನಿತ್ಯದ ಎಲ್ಲ ಉದ್ವೇಗ-ತಹತಹಗಳ, ತಾಪ-ವೇದನೆಗಳ ಅರ್ಥಹೀನತೆಯನ್ನು-ನಿರರ್ಥಕತೆಯನ್ನು ಕಂಡುಕೊಳ್ಳುತ್ತದೆ'.

ಬದುಕಿನ ಈ ಒಂದು 'ನಿರಾಶಾದಾಯಕವಾದ ಕಾಂತಿ'ಯನ್ನೇ ಕಾಮೂ 'the Sentiment of the absurd' ಎಂದು ಕರೆಯುತ್ತಾನೆ.

ದಿನನಿತ್ಯದ ಜೀವನದ ನಿಸ್ಸಾರತೆ ಈ Sentiment ನ ಪ್ರಚೋದನೆಯ ಮುಖ್ಯ ಕಾರಣವಾಗಿರುತ್ತದೆ. ಕಾಮೂನ ಮಾತಿನಲ್ಲೇ ಹೇಳುವುದಾದರೆ, "Get up, take tram, four hours at the office or factory, lunch, take

tram, four hours of work, supper, sleep and Sunday, Monday, Tuesday, Wednesday, Thursday, Friday, Saturday, at the same rhythm this course is easily followed most of the time."

ಹೀಗೆ 'ಉರುಳುತ್ತಾ ಹೋಗುವ ಕಾಲಚಕ್ರವಡಿಯಲ್ಲಿ ಸಿಕ್ಕಿ ಪುಡಿಯಾಗಿ ಹೋಗುವುದೇ ಆದರೂ', ಮನುಷ್ಯ ಭವಿಷ್ಯದ ಹಲವು ಹತ್ತು ಕನಸು-ಕಲ್ಪನೆಗಳನ್ನು ಕಟ್ಟಿಕೊಳ್ಳುತ್ತಾನೆ; 'although, after all it is a question of dying.' ಕೊನೆಯಲ್ಲಿ ಕಾಲ ನಮ್ಮ ವಿಧೇಯ ಸೇವಕನಲ್ಲ, ನಮ್ಮ ಎದುರು ನಿಂತ ಕುಹಕಿಯಾದ ಶತ್ರು ಎಂದು ಮನಗಾಣುವ ಕಾಲ ಬರುತ್ತದೆ.

ಹೀಗೆ ನಿತ್ಯತೆಯನ್ನು ಕುರಿತ ನಮ್ಮ ಬಯಕೆ—ಒಂದು ಕಾಲ ಪರಿಮಾಣಕ್ಕೆ ನಮ್ಮ ಅಧೀನತೆ: ಇವುಗಳ ನಡುವಣ ದ್ವಂದ್ವ ಹಾಗೂ ಒಡಂಬಡಿಕೆಗಳನ್ನು ಕುರಿತ ನಮ್ಮ ತುಡಿತ–ಮೋಹ–ಪ್ರಕೃತಿಯ ವಿಲಕ್ಷಣ ಅತಾರ್ಕಿಕ ಮೌನ: ಇವುಗಳ ನಡುವಣ ದ್ವಂದ್ವದಲ್ಲಿ ಅಬ್ಸರ್ಡ್ ತತ್ತ್ವದ ಮೂಲ ಅಡಗಿದೆ.

ಹೀಗೆ ಮನುಷ್ಯನ ಎಲ್ಲ ಹಂಬಲಗಳಿಗೆ ಕಿವುಡಾಗಿ ನಿಂತು, 'ಅವನ ಸುತ್ತ ಸಾವು ಜಡ್ಡು ಜಾಪತ್ತುಗಳ ಜಾಲವನ್ನು ಹರಡಿ, ಇದೆಲ್ಲದರ ಪರಿಣಾಮದ ಬಗ್ಗೆ ಪ್ರಕೃತಿಯು ಘೋರ ನಿರ್ಲಕ್ಷ್ಯದಿಂದ ನಿಲ್ಲುವುದೆಂದಾದ ಮೇಲೆ', ನಮ್ಮ ಬದುಕಿಗೆ ಅರ್ಥವೇನು ಉಳಿಯಿತು—ಎಂಬ ಪ್ರಶ್ನೆಗೆ ಉತ್ತರವಾಗಿ ಕಾಮೂ ಸಿಸಿಫಸನ ಕಥೆಯನ್ನು ಹೇಳುತ್ತಾನೆ:

ಬದುಕನ್ನು–ಭೋಗಭಾಗ್ಯಗಳನ್ನು ಅಗಾಧವಾಗಿ ಪ್ರೀತಿಸಿದ ಸಿಸಿಫಸ್ ಎಂಬ ವ್ಯಕ್ತಿ ದೇವತೆಗಳನ್ನು ವಂಚಿಸಿಯೂ ಈ ಭಾಗ್ಯಗಳನ್ನು ಪಡೆಯಲೆತ್ನಿಸಿದ ತಪ್ಪಿಗಾಗಿ ದೇವತೆಗಳು ಆತನಿಗೆ ಈ ಒಂದು ಶಿಕ್ಷೆ ವಿಧಿಸುತ್ತಾರೆ: ಒಂದು ಗುಡ್ಡದ ಬುಡದಲ್ಲಿ ಇರುವ ದುಂಡನೆಯ ಭಾರಿ ಕಲ್ಲೊಂದನ್ನು ಗುಡ್ಡದ ತುದಿಯವರೆಗೆ ತಳ್ಳಿಕೊಂಡು ಹೋಗಬೇಕು. ಹಾಗೆ ಅವನು ಒಯ್ದು ಕೂಡಲೇ ಗುಂಡು ಪುನಃ ಜಾರಿ ಕೆಳಗೆ ಉರುಳಿ ಬೀಳುತ್ತಿತ್ತು. ಪುನಃ ಆತ ಅದನ್ನು ಮೇಲೆ ತಳ್ಳಿಕೊಂಡು ಹೋಗಬೇಕು, ಅದು ಮತ್ತೆ ಕೆಳಗೆ ಉರುಳಬೇಕು.

"ಮನುಷ್ಯನ ದೃಶ್ಯ ಪ್ರಪಂಚದ ಜೀವನ ಸಿಸಿಫಸನ ಜೀವನಕ್ಕಿಂತ ಭಿನ್ನವಾದುದಲ್ಲ; ಅದೂ ಇಷ್ಟೇ ಅರ್ಥಶೂನ್ಯವಾದುದು. ಹೀಗೆ ಜೀವನಕ್ಕೆ ಯಾವ ಅರ್ಥವೂ ಇಲ್ಲದಿದ್ದರೆ, ಅದು ಕೇವಲ ಅಸಂಗತ ಪ್ರಪಂಚದ ಮೂಕನಾಟಕವಾದರೆ ಮನುಷ್ಯ ಬದುಕಬೇಕೇಕೆ? ಈ ಪ್ರಶ್ನೆಗೆ ಸಿಸಿಫಸನ ಜೀವನವೇ ಉತ್ತರ. ಬದುಕಿಗೆ ಅರ್ಥವಿಲ್ಲ; ಆದ್ದರಿಂದಲೇ, ಅದು ನಿಷ್ಫಲವಾದದ್ದೆಂದು ತಿಳಿದಿರುವುದರಿಂದಲೇ ತೀವ್ರವಾಗಿ

ಬದುಕಬೇಕು. ಈಗ, ಇಲ್ಲಿ ವರ್ತಮಾನದ ಈ ಘಳಿಗೆಯಷ್ಟೇ ದಿಟ. ಈ ಕ್ಷಣದ ಇಂದ್ರಿಯಗ್ರಾಹ್ಯ ಬದುಕಷ್ಟೇ ನಮ್ಮ ಪಾಲಿನ ಫಲ"[1]

ಕಾಮೂ ಇಷ್ಟಕ್ಕೇ ನಿಲ್ಲದೆ 'ಇಡೀ ಪ್ರಕೃತಿಯ ನಿರ್ಘೃಣ ಔದಾಸೀನ್ಯದ ವಿರುದ್ಧವೇ ಪ್ರತಿಭಟಿಸಬೇಕು'ಎಂದೂ ಹೇಳುತ್ತಾನೆ.

ಸ್ಯುಟೋನಿಯಸ್‌ನ 'ಲೈವ್ಸ್ ಆಫ್ ದಿ ಸೀಸರ್ಸ್'ಕೃತಿಯಲ್ಲಿ ಬರುವ ಕಾಲಿಗುಲಾನ ಜೀವನ ಚರಿತ್ರೆ, ತನ್ನ ಕಾಲಿಗುಲಾ ನಾಟಕದ ಮೂಲ ಸಾಮಗ್ರಿ ಎಂದು ಕಾಮೂ ಹೇಳಿದ್ದಾನೆ. ಇವುಗಳ ನಡುವಣ ಒಂದು ಮೂಲಭೂತ ವ್ಯತ್ಯಾಸವೆಂದರೆ, ಸ್ಯುಟೋನಿಯಸನು ಕಾಲಿಗುಲಾನಿಗೆ ಬಾಲ್ಯದಿಂದಲೂ ಮೂರ್ಛೆರೋಗವಿದ್ದಿತೆಂದೂ ಸೆಸೋನಿಯಳು ಅವನಿಗೆ ಮತಿವಿಕಲ್ಪಗೊಳಿಸುವ ಔಷಧಿಯೊಂದನ್ನು ಕುಡಿಸಿದಳೆಂದೂ ಹೇಳಿ ಕಾಲಿಗುಲಾನ ಸ್ವಭಾವದ ಎಲ್ಲ ವೈಪರೀತ್ಯಗಳಿಗೆ ಸಮರ್ಥ ಕಾರಣವೊಂದನ್ನು ನೀಡಿದರೆ, ಕಾಮೂ ಈ ಅಂಶಗಳನ್ನು ಬಳಸಿಕೊಳ್ಳದೆ, ತನ್ನ ಅಬ್ಸರ್ಡ್ ತತ್ತ್ವಕ್ಕೆ ಹೊಂದುವ ರೀತಿಯಲ್ಲಿ, ಅತ್ಯಂತ ಅರ್ಥಪೂರ್ಣವಾಗಿ, ದ್ರುಶಿಲಾಳ ಸಾವು ಕಾಲಿಗುಲಾನಿಗೆ 'ಈ ಲೋಕದ ಜನರೆಲ್ಲ ಸುಖದಿಂದ ವಂಚಿತರು'ಎಂಬ ಸತ್ಯವನ್ನು ತೆರೆಯುವ ಘಟನೆಯಾಗಿ ಪರಿಣಮಿಸಿತು ಎಂದು ನಿರೂಪಿಸಿದ್ದಾನೆ.

ಇದು ಹೊರತು ನಾಟಕದ ಉಳಿದೆಲ್ಲ ವಸ್ತುವಿವರಗಳೂ ಇತಿಹಾಸದಲ್ಲಿಯೇ ಸಿದ್ಧವಾಗಿ ದೊರೆಯುತ್ತವೆ.

ರೋಮನ್ ಸಾಮ್ರಾಜ್ಯದ ಹನ್ನೆರಡು ಸೀಝರರಲ್ಲಿ ಕಾಲಿಗುಲಾ ಮೂರನೆಯವನು. ಅತಿ ಸಮರ್ಥ ಆಡಳಿತಗಾರನೆಂದು ಖ್ಯಾತನಾಗಿದ್ದ ಕಾಲಿಗುಲಾನಿಗೆ ಇದ್ದಕ್ಕಿದ್ದಂತೆ ತನ್ನ ತಂಗಿ ದ್ರುಶಿಲೆಯ ಮೇಲೆಯೇ ಮೋಹ ಹುಟ್ಟುತ್ತದೆ. ಆದರೆ ದ್ರುಶಿಲೆ ಅಕಸ್ಮಾತ್ತಾಗಿ ತೀರಿಹೋಗುತ್ತಾಳೆ.

ಕಾಲಿಗುಲಾ ನಾಟಕ ಆರಂಭವಾಗುವ ಹೊತ್ತಿಗಾಗಲೇ ದ್ರುಶಿಲೆಯ ಮರಣವಾಗಿ ಹೋಗಿದೆ. ದ್ರುಶಿಲೆಯ ಸಾವಿನೊಂದಿಗೇ ಕಾಲಿಗುಲಾನಿಗೆ 'ಮನುಷ್ಯರು ಸಾಯುತ್ತಾರೆ, ಅವರು ಸುಖಿಗಳೂ ಅಲ್ಲ'ಎಂಬ ವಿಲಕ್ಷಣ ಸತ್ಯದ ಸಾಕ್ಷಾತ್ಕಾರವಾಗುತ್ತದೆ. ಪ್ರಪಂಚಕ್ಕೆ ಏನೂ ಅರ್ಥವಿಲ್ಲ, ಆದರೆ ಯಾರೂ ಈ ಭಯಂಕರ ಸತ್ಯದ ಅರಿವನ್ನು ಹೊಂದಿದಂತೆ ಕಾಣುತ್ತಿಲ್ಲ. ನಿಸ್ಸಾರವಾದ ಈ ಬದುಕಿನಿಂದ ಕಾಲಿಗುಲಾ ದೂರ ಓಡ ಬಯಸುತ್ತಾನೆ, ಗೊಂದಲ ಮಯವಾದ ಜಗತ್ತು ಮತ್ತು ಅದರ ಕಾರ್ಯವಿಧಾನಗಳಿಂದ ತಪ್ಪಿಸಿಕೊಂಡು ಶಾಶ್ವತಸುಖವನ್ನು ಪಡೆಯ ಬಯಸುತ್ತಾನೆ. ಅಸಾಧ್ಯವಾದದ್ದನ್ನು ಪಡೆಯುವ ಬಯಕೆ ಒಮ್ಮಿಂದೊಮ್ಮೆಲೇ ಆತನಲ್ಲಿ ಮೂಡುತ್ತದೆ.

---

[1] 'ಅನ್ಯ' (out sider ನ ಅನುವಾದ) : ಡಿ. ಎ. ಶಂಕರ—ಹಿನ್ನುಡಿ

ಆತನಿಗೆ ಬರೇ ದೇವರಾಗುವುದು ಬೇಕಾಗಿಲ್ಲ; 'ಅಸಾಧ್ಯ ಎನ್ನುವ ದೊರೆ ಎಲ್ಲಿ ಆಳುತ್ತಿದ್ದಾನೋ ಅವನ ರಾಜ್ಯವನ್ನು ಕಸಿದು ಕೊಳ್ಳಬೇಕೆನಿಸಿದೆ' ಕಾಲಿಗುಲಾನಿಗೆ. ಆತ ಹೆಲಿಕಾನನಿಗೆ ಹೇಳುವ 'ನನಗೆ ಚಂದ್ರನನ್ನು ತಂದುಕೊಡು'ಎಂಬ ಮಾತನ್ನು ಗಮನಿಸಬೇಕು.

"ಕಾಲಿಗುಲಾನಲ್ಲಿ ಅನುಭವಕ್ಕೆ ಬಂದ ಈ ಸತ್ಯದ ಸಂಚಾರ ಭಯಾನಕ. ಸಂಹಾರವೇ ಅದರ ಲೀಲೆ. ವಿಪರೀತತೆಯೇ ಅದರ ಪ್ರಕೃತಿ. ಈ ವೈಪರೀತ್ಯ ಅವನ ದೃಷ್ಟಿಯಲ್ಲಿ ಅನಿವಾರ್ಯ."[2]

ಆಪ್ತರನೇಕರನ್ನು ಕೊಲ್ಲುತ್ತಾನೆ; ಪ್ರತಿಯೊಬ್ಬ ಪ್ರಜೆಯ ಆಸ್ತಿ ಅವನ ಮರಣಾನಂತರ ಸರ್ಕಾರಕ್ಕೆ ದಕ್ಕಬೇಕು ಎಂದು ಕಾನೂನು ಹೊರಡಿಸುತ್ತಾನೆ; ರಾಷ್ಟ್ರೀಯ ವೇಶ್ಯಾವಾಟಿಯನ್ನು ತೆರೆಯುತ್ತಾನೆ; ಈ ವೇಶ್ಯಾವಾಟಿಕೆಗಳಿಗೆ ಉದಾರಾಶ್ರಯ ನೀಡಿದ ಸರದಾರರಿಗೆ ಪದವಿಗಳನ್ನು ನೀಡುತ್ತಾನೆ; ಅನೇಕ ಹಿರಿಯ ಸರದಾರರ ಪತ್ನಿಯರು ಈ ಸೂಳೆಗೇರಿ ಸೇರುವಂತೆ ಪ್ರೇರೇಪಿಸುತ್ತಾನೆ; ಒಮ್ಮೆ ತೆಳ್ಳನೆಯ ತೆರೆಯಾಚೆಗೆ ನಿಂತು ನಗ್ನನೃತ್ಯ ನಡೆಸುತ್ತಾನೆ; ಸರ್ಕಾರೀ ಕಾವ್ಯಸ್ಪರ್ಧೆಯಲ್ಲಿ ಸೋತ ಕವಿಗಳಿಗೆ ಅವರ ಭಯಂಕರ ಕವಿತೆಗಳನ್ನು ನಾಲಿಗೆಯಿಂದ ನೆಕ್ಕಿ ಅಳಿಸಲು ವಿಧಿಸುತ್ತಾನೆ; ದೇಶದಲ್ಲಿ ಕೃತಕ ಕ್ಷಾಮವನ್ನು ಹಬ್ಬಿಸುತ್ತಾನೆ; ಶುಕ್ರ ದೇವತೆಯಂತೆ ವೇಷಧರಿಸಿ ಎಲ್ಲರಿಂದ ಪೂಜಿಸಿಕೊಳ್ಳುತ್ತಾನೆ......

ಹೀಗೆ ಈ ಲೋಕದ್ದಾಗಿರದ ಶಾಶ್ವತ ಸುಖವನ್ನು ಬಯಸಿದ ಕಾಲಿಗುಲಾ, ತನ್ನ ಈ ಬಯಕೆಯನ್ನು ಈಡೇರಿಸಿಕೊಳ್ಳಲಿಕ್ಕೆ ತಿರಸ್ಕಾರ-ಭಯಗಳಿಂದ ತಪ್ತನಾಗಿ ಕೊಲೆ ಹಾಗೂ ವಿನಾಶಕಾರೀ ಕೃತ್ಯಗಳಿಂದ ಹೊಸ ಸ್ವಾತಂತ್ರ್ಯವನ್ನು ಪಡೆಯಲು ಯತ್ನಿಸುತ್ತಾನೆ. ಪತ್ನಿ ಸೆಸೋನಿಯಾಳೊಂದಿಗೆ, "ಪ್ರೇಮದಿಂದ ನನ್ನ ಕೆಲಸ ಸಾಗದು, ಇದು ನನಗೆ ಆಗಲೇ ಗೊತ್ತು...ಇಂದು ನನಗೆ ತಿಳಿದು ಬಂದಿದೆ, ಏನೇನೂ ಉಳಿಯುವುದಿಲ್ಲ, ಯಾವುದೂ ಅವ್ಯಯ-ಅಕ್ಷಯವಲ್ಲ. ಈ ತಿಳುವಳಿಕೆಯೇ ನಿಜವಾದ ಸ್ವಾತಂತ್ರ್ಯ, ಈ ಸ್ವಾತಂತ್ರ್ಯವನ್ನು ನಾನು ಗಳಿಸಿದ್ದೇನೆ. ಅದ್ದರಿಂದ ನೀನು ಸಾಯಲೇ ಬೇಕು!" ಎಂದು ಹೇಳುತ್ತಲೇ ಅವಳ ಕುತ್ತಿಗೆಗೆ ಕೈಯಿಕ್ಕಿ ಅವಳ ಕೊಲೆ ಮಾಡುತ್ತಾನೆ. ಹೀಗೆ ಆತನ ಸ್ವಾತಂತ್ರ್ಯ ಹಿಂಸೆಯ ರೂಪವನ್ನೇ ಧರಿಸುತ್ತದೆ.

ಆದರೆ ಇದ್ದಕ್ಕಿದ್ದಂತೆ ಕಾಲಿಗುಲಾನಿಗೆ ಅನ್ನಿಸುತ್ತದೆ, 'ಕೊಲೆಯೂ ಒಂದು ಮಾರ್ಗವಲ್ಲ, ಇದು ಸಮಸ್ಯೆಗೆ ಪರಿಹಾರವಲ್ಲ.' ಎದುರಿನ ನಿಲುವುಗನ್ನಡಿಯಲ್ಲಿನ ತನ್ನ ಪ್ರತಿಬಿಂಬದ ಮುಖದ ಹತ್ತಿರಕ್ಕೆ ಕಣ್ಣನ್ನು ತಂದು ತೀರ ಉತ್ಕಂಠಿತನಾಗಿ

---

[2] ಸಂಕ್ರಮಣ : ಸಂಚಿಕೆ 42

ಹೇಳುತ್ತಾನೆ- "ಕಾಲಿಗುಲಾ, ನೀನು ದೋಷಿಯಿರುವೆಯೋ, ನೀನು ದೋಷಿ ಹೆಲಿಕಾನ ನನಗೆ ಚಂದ್ರನನ್ನು ತಂದು ಕೊಡಲೇ ಇಲ್ಲ. ಸವಾಲು ತೀರಾ ಸಾದಾ, ನನಗೆ ಚಂದ್ರ ಸಿಕ್ಕರೆ ಎಲ್ಲ ಚೆನ್ನಾಗುತ್ತಿತ್ತು. ನನಗೆ ಬೇಕಾದದ್ದು ಅಶಕ್ಯ! ಶಕ್ಯವಾಗಲೇ ಬೇಕಾದ ಅಶಕ್ಯ! ಆದರೆ ಕೈಚಾಚಿದಾಗೆಲ್ಲ ಸಿಗುವುದು ನೀನು, ಕಾಲಿಗುಲಾ, ನೀನು. ನಿನ್ನನ್ನು ಕಂಡರೆ ನನಗೆ ದ್ವೇಷ. ನಾನು ತಪ್ಪುದಾರಿ ಆರಿಸಿಕೊಂಡೆ. ಕುರುಡು ಮೂಲೆಗೆ ಎಳೆಯುವ ದಾರಿ ಆರಿಸಿಕೊಂಡೆ! ನನ್ನ ಸ್ವಾತಂತ್ರ್ಯ ಸರಿಯಾದ ಥರದ್ದಲ್ಲ. ಈಗೇನು ? ಈ ಕತ್ತಲೆ, ಚಂದ್ರನಿಲ್ಲದ ಭಯಾನಕ ಕಗ್ಗತ್ತಲೆ! ಈಗ ನಾವು ನಿರಂತರದ ಅಪರಾಧಿಗಳು, ನಿರಂತರದ ಪಾಪಿಗಳು !"

ಹೀಗೆನ್ನುತ್ತಲೇ ಪಕ್ಕದಲ್ಲಿದ್ದ ಸ್ಟೂಲೊಂದನ್ನು ಎತ್ತಿ ಕನ್ನಡಿಗೆ ಬೀಸಿ ಒಗೆಯುತ್ತಾ "ಇತಿಹಾಸಕ್ಕೆ ಕಾಲಿಗುಲಾ, ಇತಿಹಾಸಕ್ಕೆ ಸೇರಿಹೋಗು!" ಎಂದು ಕೂಗುತ್ತಾನೆ. ಕನ್ನಡಿ ಒಡೆಯುತ್ತದೆ. ಅದೇ ಕ್ಷಣಕ್ಕೆ ಶಸ್ತ್ರಸಜ್ಜಿತರಾದ ಪಿತೂರಿಗಾರರು ಒಳನುಗ್ಗಿ ಕಾಲಿಗುಲಾನನ್ನು ಹೊಡೆಯುತ್ತಾರೆ. ಕೊನೆಯ ಉಸಿರು ಎಳೆಯುತ್ತಾ ಆತ ನಗುತ್ತಾನೆ, ಮತ್ತೆ ಕೂಗುತ್ತಾನೆ, 'ಇಲ್ಲ, ನಾನು ಸತ್ತಿಲ್ಲ ನಾನು ಜೀವಂತನಿದ್ದೇನೆ!'

ಕಾಲಿಗುಲಾ ನಾಟಕದ ಪರಿಚಯವನ್ನು ಮಾಡಿ ಕೊಡುತ್ತಾ ಒಂದೆಡೆ ಗೌರೀಶ ಕಾಯ್ಕಿಣಿಯವರು, "ತುಘಲಕ ಕಾಲಿಗುಲಾದ ಭಾವಾನುವಾದವೋ ಛಾಯಾನುವಾದವೋ ಅನುಕೃತಿಯೋ ಪ್ರತಿಕೃತಿಯೋ-ಈ ಪ್ರಶ್ನೆ ಇಲ್ಲಿ ಅಪ್ರಸ್ತುತ. ಅದೊಂದು ಪ್ರತ್ಯೇಕ ತೌಲನಿಕ ಪರಿಶೀಲನೆಯೇ ಆಗಬೇಕು"–[3] ಎಂದಿದ್ದಾರೆ. ಆದರೆ, ಕಾಲಿಗುಲನಷ್ಟೇ ವಿಲಕ್ಷಣ ವ್ಯಕ್ತಿತ್ವದ ತುಘಲಕ್ ದೊರೆಯ ಕತೆ ನಮ್ಮ ಇತಿಹಾಸದಲ್ಲಿಯೇ ಸುಪ್ರಸಿದ್ಧವಾಗಿದ್ದು, ಅದು ತುಘಲಕ್ ನಾಟಕವಾಗಿ ಮೈತಳೆಯಲಿಕ್ಕೆ ಕಾಲಿಗುಲಾ ಒಂದು ಪ್ರಬಲ ಪ್ರಚೋದನೆಯನ್ನಷ್ಟೇ ನೀಡಿರಲಿಕ್ಕೆ ಸಾಕು - ಎಂಬ ಈ ಒಂದು ಸಾಧ್ಯತೆಯ ಕಡೆಗೆ ನಾನು ಗಮನ ಸೆಳೆಯ ಬಯಸುತ್ತೇನೆ.

ಕಾಲಿಗುಲಾ ಮತ್ತು ಕಾರ್ನಾಡರ ತುಘಲಕ್ ಈ ಎರಡೂ ನಾಟಕಗಳನ್ನು ಕಣ್ಣೆದುರಿಗೆ ಇರಿಸಿಕೊಂಡು ನೋಡಿದಾಗ ಕಣ್ಣಿಗೆ ಹೊಡೆದು ತೋರುವ ಸಂಗತಿ ಎಂದರೆ, ಇಲ್ಲಿನ ಪಾತ್ರಸಾಮ್ಯ. ತುಘಲಕ್ ಮತ್ತು ಕಾಲಿಗುಲಾ ಇವರಿಬ್ಬರೂ ಎರಡು ಭಿನ್ನ ರಾಷ್ಟ್ರಗಳ ಇತಿಹಾಸದಲ್ಲಿ ಆಗಿ ಹೋದಂತಹ, ಐಲು ದೊರೆಗಳೆಂದೇ ಖ್ಯಾತರಾಗಿ ಜನಮನೋಭೂಮಿಕೆಯಲ್ಲಿ ಬೇರು ಬಿಟ್ಟಿರುವ ವ್ಯಕ್ತಿಗಳು. ಆದರೆ ಈ ನಾಟಕಗಳಲ್ಲಿ ಇವರಿಬ್ಬರೂ ಮೂಲಭೂತವಾಗಿಯೇ ಭಿನ್ನ ಮನೋಧರ್ಮ ಉಳ್ಳವರಾಗಿರುವರೆಂಬುದನ್ನು ಗಮನಿಸಬೇಕು.

---

[3] ಸಂಕ್ರಮಣ - 42

ತುಘಲಕ್ ಎಲ್ಲಕ್ಕಿಂತ ಮುಖ್ಯವಾಗಿ ಕನಸುಗಾರ, ತನ್ನೆಲ್ಲ ಆದರ್ಶ ಕಲ್ಪನೆ ಕನಸುಗಳ ಆಧಾರದ ಮೇಲೆ "ಉಜ್ವಲ ಭವಿತವ್ಯವನ್ನು ಕಟ್ಟಹೊರಟವನು. ಆದರೆ ತುಘಲಕ್ ತನ್ನಾವುದೇ ಸುಧಾರಣೆಯ ಉದ್ದೇಶವನ್ನು ಜನತೆಗೆ ಮುಟ್ಟಿಸುವಲ್ಲೇ ನಿಷ್ಫಲನಾಗುವುದನ್ನೂ, ಅವನ ಮತ್ತು ಪ್ರಜೆಗಳ ನಡುವೆ ಸಂವಾದ ದುಸ್ಸಾಧ್ಯವಾಗುವುದನ್ನೂ ಗುರುತಿಸುತ್ತೇವೆ. ಹೀಗೆ, ಒಂದು ರೀತಿಯಲ್ಲಿ 'ತನ್ನ ಕಾಲದ ದೃಷ್ಟಿಯಿಂದ ತೀರಾ ಮುಂದಿದ್ದ,' ತನ್ನ ಸುತ್ತಲ ಪರಿಸರದ ಗಣನೆಯಿಲ್ಲದೆ ಆದರ್ಶರಾಜ್ಯ ನಿರ್ಮಿಸಹೊರಟ ಕನಸುಗಾರನೊಬ್ಬನ ದುರಂತ ಚಿತ್ರಣವಿದೆ ಈ ನಾಟಕದಲ್ಲಿ.

ಅದೇ 'ಕಾಲಿಗುಲಾ' ಕೃತಿಯಲ್ಲಿ, ತನ್ನ ತೇಜೋಭಂಗ ಮಾಡುವ ಪ್ರಕೃತಿಯ ವಿರುದ್ಧ ತಿರುಗಿ ಬೀಳುತ್ತಾ, ಮುಪ್ಪು–ಸಾವುಗಳು ತಂದೊಡ್ಡುವ ನೋವು ಸಂಕಟಗಳೆಲ್ಲಕ್ಕೆ ಪರಿಹಾರವನ್ನಲ್ಲದಿದ್ದರೂ ಒಂದು ಶಮನವನ್ನಾದರೂ ಕಾಣಬೇಕೆಂಬ ತುಡಿತದಿಂದ ಹೊರಟ ವ್ಯಕ್ತಿಯೊಬ್ಬನನ್ನು ಕಾಣುತ್ತೇವೆ. ಬದುಕಿನ ವಿರುದ್ಧ ಈ ಹೋರಾಟಕ್ಕಾಗಿ ಕಾಲಿಗುಲಾ ದೋಷಿಯಾಗುವುದಿಲ್ಲ, 'ಮಾನವೀಯ ಮೌಲ್ಯಗಳನ್ನು ತಿರಸ್ಕರಿಸಿದ ಕಾರಣ'ಕ್ಕಾಗಿ ಆತ ದೋಷಿಯಾಗುತ್ತಾನೆ. ಅದರ ಅರಿವು ಕೊನೆಗೆ ಆತನಿಗೂ ಬಂದಂತೆ ಕಾಣುತ್ತದೆ, 'ನಾನು ತಪ್ಪುದಾರಿ ಆರಿಸಿಕೊಂಡೆ, ಕುರುಡು ಮೂಲೆಗೆ ಎಳೆಯುವ ದಾರಿ ಆರಿಸಿಕೊಂಡೆ; ನನ್ನ ಸ್ವಾತಂತ್ರ್ಯ ಸರಿಯಾದ ಥರದ್ದಲ್ಲ' ಎಂಬ ಅವನ ಮಾತುಗಳನ್ನು ಗಮನಿಸಿದಾಗ, ನಾವು ಯಾವುದನ್ನು ಮೀರಿ ಹೋಗಲಾಗುವುದಿಲ್ಲವೋ ಆಗ ಅದರ ನಾಶದತ್ತ ಮನಸ್ಸು ತುಡಿಯುತ್ತದೆ. ಆದರೆ ನಮ್ಮೆಲ್ಲ ಅಪರಾಧಗಳ ಹಾಗೂ ಬಂಜೆಬದುಕಿನ ದಾಸರಾಗಿ ಬಹುಕಾಲ ಉಳಿಯುವುದು ಸಾಧ್ಯವಾಗುವುದಿಲ್ಲ. ಎಲ್ಲವನ್ನೂ ನಾಶಗೊಳಿಸಿದರೆ ತನ್ನ ಅಸ್ತಿತ್ವ ತಾನೇ ಎಲ್ಲಿರುತ್ತದೆ ಎಂಬ ಪ್ರಶ್ನೆ ಕಾಡಿದ ಸಮಯದಲ್ಲಿ, ನಾವು ಅನುಭವಿಸಿದ ಸೋಲು, ನಮ್ಮನ್ನು ನಾವು ಕೊಂದುಕೊಳ್ಳಲು ಪ್ರಚೋದಿಸುತ್ತದೆ. ಹೀಗೆಯೇ ನಾವು 'ಕಾಲಿಗುಲಾ'ನಲ್ಲಿ ಒಬ್ಬ 'ಉದಾತ್ತ ಆತ್ಮಹಂತಕ'ನ ವ್ಯಕ್ತಿತ್ವವನ್ನು ಗುರುತಿಸುವುದು.

ಆದರೆ, ತುಘಲಕ್ ತನ್ನೆಲ್ಲ ಕನಸುಗಳ ನಿಷ್ಫಲತೆಯೊಂದಿಗೆ ತಾನೂ ನಿಷ್ಕ್ರಿಯನಾಗಿ ಕೂಡುತ್ತಾನಾದರೂ, ಅವನ 'ಆತ್ಮಹತ್ಯೆ'ಗೆ ಇಂಥದೊಂದು ಬಲವತ್ತರವಾದ 'conviction' ಇಲ್ಲ ಎಂಬುದು ಕಾಲಿಗುಲಾ-ತುಘಲಕರನ್ನು ಮೂಲಭೂತವಾಗಿ ಪ್ರತ್ಯೇಕಿಸುವ ಸಂಗತಿ. ತುಘಲಕನ ಎಲ್ಲ ಕ್ರಿಯೆಗಳೂ ತಾರ್ಕಿಕ ಮಟ್ಟದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಕಂಡುಬರುವುದು ; ಹಾಗೂ ಕಾಲಿಗುಲಾ, ಯಾವುದೇ ತರ್ಕದ ಪಾತಳಿಯ ಮೇಲೆ ನಿಂತ ವಿಶ್ಲೇಷಣೆಗೆ ಎಟುಕದ ತನ್ನ ಕ್ರಿಯೆಗಳಿಂದಾಗಿಯೇ, ತನ್ನ ಆ ಪರಿಸರದಲ್ಲಿ, ಅಶಕ್ಯವನ್ನು ಸಾಧಿಸಲೆತ್ನಿಸುವ ವ್ಯಕ್ತಿತ್ವವನ್ನು ಮೈದುಂಬಿಸಿಕೊಂಡು ಬರುವುದು—ಈ ಸಂಗತಿ ಸಹಾ ಮೇಲಿನ ಮಾತಿಗೆ ಪುಷ್ಟಿಯನ್ನು ಒದಗಿಸುತ್ತದೆ.

ಈ ಮಾತುಗಳ ಹಿನ್ನೆಲೆಯಲ್ಲಿಯೇ ಕಾಲಿಗುಲಾ ತುಘಲಕ್‌ಕ್ಕಿಂತ ಶ್ರೇಷ್ಠವಾದ ಟ್ರ್ಯಾಜಿಡಿ ಎಂಬ ಮಾತನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಕಾಲಿಗುಲಾ—ತುಘಲಕ ರಿಬ್ಬರೂ ಕೊನೆಗೆ ಬಂದು ಮುಟ್ಟುವ ಸ್ಥಿತಿಯೇ ಇದನ್ನು ಸ್ಪಷ್ಟಪಡಿಸಿಕೊಡುತ್ತದೆ. ಕಾಲಿಗುಲಾ ಸಾವಿನ ಹೊರತು ಬೇರೆ ಸಾಧ್ಯತೆಯೇ ಇಲ್ಲದ ಸ್ಥಿತಿಯನ್ನು ಬಂದು ಮುಟ್ಟುತ್ತಾನೆ; ತಾರ್ಕಿಕ ವಿಶ್ಲೇಷಣೆಗೆ ಎಟುಕದ ಅವನ ಕ್ರಿಯೆಗಳೆಲ್ಲವೂ ಒಂದು ರೀತಿಯಲ್ಲಿ ತನ್ನ ಸಾವಿನತ್ತ ತನ್ನನ್ನು ದೂಡಿಕೊಳ್ಳುವುದರ ಪ್ರಯತ್ನವಾಗಿ ಪರಿಣಮಿಸಿ, ಕೊನೆಯಲ್ಲಿ ಕಾಲಿಗುಲಾನನ್ನು ಎತ್ತಲೂ ಅಲುಗಾಡದ ಸ್ಥಿತಿಯೊಂದರಲ್ಲಿ ಬಂಧಿಸಿಬಿಡುತ್ತವೆ. ಆದರೆ ತುಘಲಕ್ ಬಂದು ಮುಟ್ಟುವ ಸ್ಥಿತಿ ಇಂಥದಲ್ಲ. ಅವನಿಗೆ 'ಆತ್ಮಹತ್ಯೆ' ಅನಿವಾರ್ಯವಲ್ಲ. ಕೊನೆಯ ಪಕ್ಷ ತನ್ನೆಲ್ಲ ಆದರ್ಶ-ಕನಸುಗಳಿಗೆ ಬೆನ್ನುಹಾಕಿ ಓಡುತ್ತಾ ಎಲ್ಲದರಿಂದ ತಪ್ಪಿಸಿಕೊಳ್ಳಬಹುದಾದಂತಹ ಪರಿಸ್ಥಿತಿಯೊಂದು ತುಘಲಕನ ಪಾಲಿಗೆ ಇರುವುದನ್ನು ಗಮನಿಸಬೇಕು.

ಇನ್ನು ಕೆಲ ಕಾರಣಗಳಿಗಾಗಿ ತುಘಲಕ ಕಾಲಿಗುಲಾಕ್ಕಿಂತ ಹೆಚ್ಚು ಮಹತ್ವದ ಕೃತಿ ಎಂದು ನನಗೆ ಅನ್ನಿಸುತ್ತದೆ.

ಆಲ್ಬರ್ಟ್ ಕಾಮೂನ ಎಲ್ಲ ಕೃತಿಗಳಿಗೆ ಅವನದೇ ಆದ ಒಂದು ಸಿದ್ಧಾಂತದ ಹಿನ್ನೆಲೆ ಇದೆ; ಆ ಹಿನ್ನೆಲೆಯ ನಿಕಷದ ಮೇಲೆ ಉಜ್ಜುತ್ತ ಹೋದಾಗಲೇ ಕೃತಿಯ ಒಳಪದರಗಳು ಬಿಚ್ಚಿಕೊಳ್ಳುತ್ತಾ ಕ್ರಿಯಾಪ್ರವಾಹದೊಂದಿಗೆ ಸಮರಸರಾಗಿ ಹೋಗುವುದು, ನಾಟಕದ ಆಳಗಳಿಗೆ ಇಳಿಯುವುದು ಸಾಧ್ಯವಾಗುತ್ತದೆ.

ತುಘಲಕ್ ನಾಟಕ ಈ ಪರಿಸರದಿಂದ ಬೇರೆಯೇ ಆಗಿ ನಿಲ್ಲುವುದನ್ನು ಗಮನಿಸ ಬೇಕು. ಆದರೆ, ಕಾಲಿಗುಲಾ ನಾಟಕದ ಪ್ರಭಾವದಿಂದಾಗಿ ತುಘಲಕ್ ಕೃತಿಯ ಹಿನ್ನೆಲೆಯಲ್ಲಿ ಅಸಂಗತ ತತ್ವದ ಧ್ವನಿ ಇರುವುದನ್ನು ನಾನು ಅಲ್ಲಗಳೆಯುತ್ತಿಲ್ಲ. ಅಝೀಜನ ಪಾತ್ರದ ಮೂಲಕ ಈ ಧೋರಣೆಗಳನ್ನು ನಾಟಕಕಾರರು ಮಂಡಿಸುತ್ತಾರೆ.

ತುಘಲಕ ತನ್ನ ಅಸ್ತಿತ್ವವನ್ನು ಖಚಿತಪಡಿಸಿಕೊಳ್ಳಲು ಹೊರಟ ಮಹತ್ವಾ ಕಾಂಕ್ಷಿಯಾದರೆ. ಅಝೀಜನಿಗೆ ಈ ಮಹತ್ವಾಕಾಂಕ್ಷೆಯಿಲ್ಲ. ಆತ ಅಝೀಜನಂತೆ ಬದುಕಿಗೆ ಹೆದರಿ ಓಡುವುದೂ ಇಲ್ಲ; ಬರನಿಯಂತೆ ಬದುಕಿನೊಂದಿಗೆ ಹೊಂದಿಕೊಂಡು ಸಹಬಾಳ್ವೆ ನಡೆಸುವ ಮನೋಧರ್ಮದವನೂ ಅಲ್ಲ. ಹಿಂದಿನ ಕ್ಷಣಕ್ಕಾಗಿ ಮರುಗುವ 'ಕೆಟ್ಟಚಟ'ವೂ ಇಲ್ಲದ ಅಝೀಜ, ಈ ಕಾರಣಗಳಿಗಾಗಿಯೇ ಬದುಕನ್ನೇ ಒಂದು ತಮಾಷೆಯಂತೆ ಸ್ವೀಕರಿಸಲು ಶಕ್ಯನಾಗುತ್ತಾನೆ. ಮನುಷ್ಯ ಏನೆಂಬುದು ನಿರ್ಧರಿತ ವಾಗಿ ಹೋಗಿದೆ; ಮುಪ್ಪು, ಸಾವು-ಬದುಕಿನ ಈ ಅನಿವಾರ್ಯ ಸಂಕಟಗಳ ಮುಂದೆ ಯಾವುದೇ ಹೋರಾಟ ನಿಷ್ಫಲವಾಗುತ್ತದೆ; ಪ್ರಕೃತಿಯ ನಿಯತಿಯಲ್ಲಿ ಕೈ ಹಾಕ ಹೊರಟ ಮಾನುಷ ಪ್ರಯತ್ನ ತಾತ್ಕಾಲಿಕ; ಅಂಥ ವ್ಯಕ್ತಿ ಇತಿಹಾಸದ ಕತ್ತಲಲ್ಲಿ

ಮುಳುಗಿ ಹೋಗುತ್ತಾನೆ– ಇದೆಲ್ಲದರ ಅರಿವು ಅಝೀಜನಿಗಿದೆ. 'ಮನುಷ್ಯ ಜನ್ಮದ ಬೆಲೆ ಇಷ್ಟೇ – ಮರಣದ ರಹಸ್ಯ ಇದೇ – ಚರ್ಮ, ಹುಲ್ಲು!' – ಅಝೀಜನ ಈ ಮಾತುಗಳನ್ನು ಗಮನಿಸಬೇಕು. ಕೊನೆಗೆ ಇದನ್ನು ತುಘಲಕನಿಗೆ ಸ್ಪಷ್ಟಪಡಿಸಿ ಕೊಡುವವನೂ ಇವನೇ.

ಹೀಗೆ ತುಘಲಕ್ ನಾಟಕದ ಒಟ್ಟು ಸ್ವರೂಪವೇ ಈ ಅಬ್ಸರ್ಡ್ ತತ್ತ್ವವನ್ನು ಧ್ವನಿಸುತ್ತಿದೆಯಾದರೂ, ಕೃತಿಗೆ ಅದರ ಅನಿವಾರ್ಯತೆಯಿಲ್ಲ—ಎಂಬುದು ಕಾಲಿಗುಲಾ ಕೃತಿಯಿಂದ ತುಘಲಕ್ ಕೃತಿಯನ್ನು ಪ್ರತ್ಯೇಕಿಸುವ ಸಂಗತಿ. ಒಂದು ಶುದ್ಧ ಐತಿಹಾಸಿಕ ನಾಟಕವಾಗಿ ತುಘಲಕ್, ಸಾಮಾನ್ಯ ಪ್ರೇಕ್ಷಕನಿಗೆ ತೀವ್ರವಾಗಿ ಮುಟ್ಟುವುದರ ಜತೆ ಜತೆಯಲ್ಲಿಯೇ, ಶೋಧಿಸುತ್ತ ಹೋದಂತೆ ಅನೇಕ ಅರ್ಥದ ಪದರಗಳನ್ನು ತೆರೆಯುತ್ತಾ ಎತ್ತರಗಳಿಗೆ ಮುಟ್ಟುವ ಮಹತ್ವದ ಕೃತಿಯಾಗುತ್ತದೆ. ಹೀಗೆ ಎಲ್ಲ ವರ್ಗದ ಜನರ ಸಂವೇದನೆಗಳನ್ನು ತೀವ್ರವಾಗಿ ಕೆರಳಿಸುವ ಕಾರಣಕ್ಕಾಗಿ ತುಘಲಕ್ ಮಹತ್ವದ ಕೃತಿ ಎಂದು ನನಗೆ ಅನಿಸುತ್ತದೆ.

ನಾಟಕದ ಒಟ್ಟಾರೆ ಕಟ್ಟಡದ ದೃಷ್ಟಿಯಿಂದಲೂ ತುಘಲಕ್ ಕಾಲಿಗುಲಾಕ್ಕಿಂತ ಹೆಚ್ಚು ಪರಿಣಾಮ ಬೀರುವ ಕೃತಿ ಎನ್ನಿಸುತ್ತದೆ. ಹದಿಮೂರು ದೃಶ್ಯಗಳ ವಿಸ್ತಾರ ದಲ್ಲಿ ಹರಡಿಕೊಂಡಿರುವ ತುಘಲಕ್ ನಾಟಕವು, ಮಜಲು ಮಜಲಾಗಿ ತುಘಲಕನ ವ್ಯಕ್ತಿತ್ವವನ್ನು ಪ್ರಕಟಪಡಿಸುತ್ತಾ ಹೋಗುತ್ತದೆ. ಒಂದು ಸನ್ನಿವೇಶವನ್ನು ಪರಿಶೀಲಿಸುವುದರ ಮೂಲಕ ಈ ಮಾತುಗಳನ್ನು ಸ್ಪಷ್ಟಪಡಿಸಿಕೊಳ್ಳಬಹುದು : ಅದು, ಶಿಹಾಬುದ್ದೀನನ ಕೊಲೆಯ ಸನ್ನಿವೇಶ. ಇಲ್ಲಿ, ಕೇವಲ ಸಾಹಿತ್ಯಿಕ ಕೃತಿಯಾಗಿ ಮಾತ್ರವಲ್ಲ, ರಂಗಸಾಧ್ಯತೆಗಳ ದೃಷ್ಟಿಯಿಂದಲೂ ಸನ್ನಿವೇಶವನ್ನು ಪರಿಶೀಲಿಸಲಾಗಿದೆ.

ಅಮೀರರು ಪ್ರಾರ್ಥನೆಯ ಹೊತ್ತಿನಲ್ಲಿ ತನ್ನನ್ನು ಕೊಲ್ಲಲು ಹೂಡಿದ ಸಂಚು ತುಘಲಕನಿಗೆ ತಿಳಿದುಹೋಗಿದೆ. ಅಮೀರರೆಲ್ಲ ಬಂದು, ಪ್ರಾರ್ಥನೆಯ ಹೊತ್ತಿನ ವರೆಗೂ ದರಬಾರಿನಲ್ಲಿ ಚರ್ಚಿಸುತ್ತಾ ಕೂರುತ್ತಾರೆ. ಪ್ರಾರ್ಥನೆಯ ಹೊತ್ತು ಸಮೀಪಿಸಿದಾಗ, ಮುಹಮ್ಮದನೇ "ನಾವೆಲ್ಲ ಇಲ್ಲಿಯೇ ಪ್ರಾರ್ಥಿಸುತ್ತೇವೆ" ಎನ್ನು ತ್ತಾನೆ. ಪ್ರಾರ್ಥನೆಗೆ ಮೊದಲು ತನ್ನ ಕತ್ತಿಯನ್ನು ಬಿಚ್ಚಿ ಸಿಂಹಾಸನದ ಮೇಲೆ ಇಡುತ್ತಾನೆ. ಇದು, ಇದುವರೆಗೆ ಶಾಂತಿ-ಸೌಹಾರ್ದದಿಂದ ಜನತೆಗೆ ತನ್ನ ಸುಧಾರಣೆಯ ಉದ್ದೇಶವನ್ನು ಮುಟ್ಟಿಸಲು ಯತ್ನಿಸಿದ ಮುಹಮ್ಮದನ ರಾಜ್ಯವನ್ನು ಇನ್ನು ಮುಂದೆ ಆಳುವುದು ಹಿಂಸೆ, ಅಧಿಕಾರ—ಎಂಬುದನ್ನು ಅತ್ಯಂತ ಧ್ವನಿಪೂರ್ಣ ವಾಗಿ ಸೂಚಿಸುತ್ತದೆ. ಮುಂದೆ, ಪ್ರಾರ್ಥನೆ ಸಾಗುತ್ತಿರುವಾಗ ಶಿಹಾಬು ಮತ್ತು ಸಂಗಡಿಗರೆಲ್ಲ ಮುಹಮ್ಮದನ ಮೇಲೆ ಬೀಳಲು ಬರುತ್ತಾರೆ. ಅಷ್ಟರಲ್ಲೇ ಸಿಂಹಾಸನದ ಹಿಂದಿನ ತೆರೆ ಸರಿದು, ಹದಿನೈದು-ಇಪ್ಪತ್ತು ಹಿಂದೂ ಸೈನಿಕರು ಬಂದು

ಅವರನ್ನು ಬಂಧಿಸುತ್ತಾರೆ. ಇಷ್ಟೆಲ್ಲಾ ನಡೆಯುವಾಗಲೂ ಮುಹಮ್ಮದ ಅತ್ಯಂತ ನಿಶ್ಚಿಂತೆಯಿಂದ ಪ್ರಾರ್ಥನೆ ಮಾಡುತ್ತಲೇ ಇರುತ್ತಾನೆ. ಈ ಅವನ ಮೌನ, ಅವನ ನಿಶ್ಚಿಂತತೆ ಅವನ ರಚ್ಚಿನ ಇನ್ನೊಂದು ಮುಖವಾಗಿ ಕಾಣಿಸುತ್ತದೆ, ಶಿಹಾಬುದ್ದೀನನ ಸಂಚಿನ ನಿಷ್ಫಲತೆಯನ್ನು ಅವನ ಮುಖಕ್ಕೆ ರಾಚುವ ರೀತಿಯಲ್ಲಿ ಕಾಣುತ್ತದೆ.

ಮುಂದೆ ಮುಹಮ್ಮದ ಶಿಹಾಬುವನ್ನು ಇರಿಯುವ ಸನ್ನಿವೇಶ, ಕಾಲಿಗುಲಾ ಸೆಸೋನಿಯಾಳನ್ನು ಕೊಲ್ಲುವ ಸನ್ನಿವೇಶದಷ್ಟೇ ಭಯಂಕರವಾಗಿದೆ; ಒಂದೇ ಇರಿತಕ್ಕೆ ಶಿಹಾಬು ಗತಪ್ರಾಣನಾಗಿದ್ದರೂ ಪುನಃ ಪುನಃ ಅವನ ಮುಖದ ಮೇಲೆ ಕೈಕಾಲುಗಳ ಮೇಲೆ ಇರಿಯುವುದು, ತನ್ನ ವ್ಯಕ್ತಿತ್ವದ ಅಂಗಗಳಾಗಿದ್ದ ಹಿಂಸೆ-ಕ್ರೌರ್ಯಗಳನ್ನು ಮುಹಮ್ಮದ ಆನಂದಿಸುವ ಪ್ರವೃತ್ತಿಯತ್ತ ವಾಲುತ್ತಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ತುಘಲಕ್ ನಾಟಕದಲ್ಲಿ ಹಿಂಸೆಗೆ ಇಷ್ಟು ಒತ್ತುಬಿದ್ದಿರುವುದು ಕಾಲಿಗುಲಾ ನಾಟಕದ ಪ್ರಭಾವದಿಂದಲೇ ಇರಬಹುದು. ಕಾಲಿಗುಲಾದಲ್ಲಿಯಂತೂ ಮೊದಲಿನಿಂದ ಕೊನೆಯವರೆಗೆ ಹಿಂಸೆಯೇ ತಾಂಡವವಾಡುತ್ತಿದೆ, ಕಾಲಿಗುಲಾನ ಸ್ವಾತಂತ್ರ್ಯ ಹಿಂಸೆಯ ರೂಪವನ್ನೇ ಧರಿಸಿ ಬಂದಂತೆ ಕಾಣುತ್ತದೆ. ತುಘಲಕ್ ನಾಟಕದಲ್ಲಿ ಹಿಂಸೆಗೆ ಪ್ರಾಧಾನ್ಯವಿದೆಯಾದರೂ ಈ ಸನ್ನಿವೇಶವಿಲ್ಲ.

ನಾಟಕದ ಉಳಿದೆಲ್ಲ ಪಾತ್ರಗಳನ್ನೂ ನಾಟಕಕಾರರು ಒಂದು ಉದ್ದೇಶಕ್ಕೆ ದುಡಿಸಿಕೊಂಡಿರುವುದನ್ನು ಕಾಣುತ್ತೇವೆ. ತುಘಲಕನ ವ್ಯಕ್ತಿತ್ವದ ಅಂಗಗಳ ಪ್ರತೀಕವಾಗಿ ಉಳಿದ ಪಾತ್ರಗಳು ಗೋಚರವಾಗುತ್ತಾ, ಈ ವ್ಯಕ್ತಿಗಳು ಒಬ್ಬೊಬ್ಬರೇ ಕೊಲೆಯಾಗುತ್ತಾ ಬಂದಂತೆ ತುಘಲಕನ ವ್ಯಕ್ತಿತ್ವದ ಒಂದೊಂದು ಅಂಗವೇ ವಿಸರ್ಜನೆಯಾಯಿತೆಂಬುದನ್ನು ನಾಟಕೀಯವಾಗಿ ಧ್ವನಿಸುತ್ತವೆ. ಹೀಗೆ ಶೇಖ ಇಮಾಮುದ್ದೀನನ ಕೊಲೆ ತುಘಲಕನ ಧಾರ್ಮಿಕ ಪ್ರವೃತ್ತಿಯ ವಿಸರ್ಜನೆಯಾಗಿ, ನಜೀಬನ ಕೊಲೆ ಹಿಂಸೆ-ರಾಜಕಾರಣಗಳ ಪ್ರವೃತ್ತಿಯ ವಿಸರ್ಜನೆಯಾಗಿ, ಮಲತಾಯಿಯ ಕೊಲೆ ತುಘಲಕನ ಖಾಸಗೀ ಬದುಕಿನ ಎಲ್ಲ ಭಾವನೆಗಳ ವಿಸರ್ಜನೆಯಾಗಿ ಗೋಚರಿಸುತ್ತವೆ. ಇವೆಲ್ಲವನ್ನೂ ಕಳೆದುಕೊಂಡು ನಿಷ್ಕ್ರಿಯ ಸ್ಥಿತಿಯಲ್ಲಿರುವ ತುಘಲಕನನ್ನು ಉರುಳಿಸುವುದು ಅಝೀಜನಿಗೆ ಬಹು ಸುಲಭವಾಗುತ್ತದೆ.

ಅಂತೆಯೇ ಚದುರಂಗದಾಟವೂ ಕೃತಿಯ ಒಂದು ಗಮನಾರ್ಹ ಸಂಕೇತವಾಗಿ ಬಂದಿದೆ. "ಚದುರಂಗದ ಆಟದಲ್ಲಿ ನಿಷ್ಣಾತನಾಗಿದ್ದ ತುಘಲಕನ ಬದುಕೇ ಒಂದು ಚದುರಂಗದಾಟವಾಗಿ, ಅಲ್ಲಿ ಎಲ್ಲವನ್ನೂ ಲಘುವಾಗಿ, ಕ್ಷುಲ್ಲಕವಾಗಿ ಕಾಣುವ ಅಝೀಜ ಗೆಲ್ಲುತ್ತಾನೆ."

ತುಘಲಕ್ ನಾಟಕದಲ್ಲಿ ಸಮಕಾಲೀನ ಸಮಾಜದ ಚಿತ್ರವೊಂದು ಮೇಲ್ನೋಟಕ್ಕೆ ಕಾಣದಿದ್ದರೂ ಅಂತರ್ಗತವಾಗಿ ಇರುವುದು ಕಂಡುಬರುತ್ತದೆ. ನಮ್ಮ ಸಮಾಜವನ್ನು ಸುಧಾರಿಸಲು ಬದುಕನ್ನು ಕುರಿತ ಆದರ್ಶ-ಕನಸುಗಳಿದ್ದರೆ ಮಾತ್ರ ನಡೆಯದು, ಗಟ್ಟಿಯಾದ ವಾಸ್ತವ ಪ್ರಜ್ಞೆಯಿಂದ ಕೂಡಿದ ಮಹಾನುಭಾವರು ಬೇಕು–ಎಂಬ ಅಂಶ, ಹಿನ್ನೆಲೆಯಲ್ಲಿ, ತುಘಲಕನ ಸೋಲು–ಅರಿಖೀಜನ ಗೆಲುವಿನಲ್ಲಿ ಧ್ವನಿಸುತ್ತಿದೆ.

ಒಟ್ಟಿನಲ್ಲಿ, ತುಘಲಕ್ ನಾಟಕವು ಕಾಲಿಗುಲಾ ನಾಟಕದ ಛಾಯಾನುವಾದ ಅಥವಾ ಭಾವಾನುವಾದವಾಗಿರದೆ, ಅನುಕೃತಿ ಅಥವಾ ಪ್ರತಿಕೃತಿಯೂ ಆಗಿರದೆ; ಕೇವಲ ಪ್ರಬಲ ಪ್ರೇರಣೆಯೊಂದನ್ನು ಅಲ್ಲಿಂದ ಪಡೆದಿರಬಹುದು—

ಇದು ಸದ್ಯದ ನನ್ನ ತಿಳಿವಳಿಕೆಗೆ ಸಿಲುಕಿದ ತೀವ್ರವಾದ ಅನಿಸಿಕೆ.

ಪರಿತ್ಯಕ್ತ

ಜಯಸುದರ್ಶನ

ಅತ್ತರೆ, ನಕ್ಕರೆ, ಸಂಭ್ರಮಕ್ಕೆ ಮಾತಾಡಿದರೆ, ನನ್ನ
ಹಗಲಿರುಳು ಬಿಡುವಿರದೆ ತಾನು ಹೀಗೆ ಕಾಡಿದರೆ,
ಸ್ನೇಹಕ್ಕೆ ಇಬ್ಬರೂ ಕೂಡಿದರೆ, ನನ್ನ
ಹಾಡನ್ನು ಕೇಳಿ ತನ್ನ ಕಣ್ಣು ಹನಿಸಿದರೂ ಒಮ್ಮೊಮ್ಮೆ,
ಹೃದಯ ದೂರದ ಧ್ರುವವಾಗಿ ಬರಿಯ ಮೌನದಲ್ಲಿ
ತನ್ನ ನಿರರ್ಥಕ ಶಿಲ್ಪಗಳ ತುರಿಕಿಗೆ ಮೂಡಿಸಿ, ಮತ್ತೆ
ನಿಷ್ಕರುಣೆಯಲ್ಲಿ ಅವುಗಳ ಬಿರುಗಾಳಿಗೊಟವಿಕ್ಕಿದರೆ–
ತಾನಲ್ಲ ಕಾರಣ, ತನ್ನಿರವಿನ ವಿಚಿತ್ರವೆನ್ನುವ ಇವನ
ವಿಚಾರ ಹೀಗೆಂದು ಹೇಳಬರುವಂತಿಲ್ಲ,
ಇವನಿಗೂ ತನ್ನ ಕಡಲಾಳದಲ್ಲಿ ಪೃಷ್ಠ ಪೂರಿರುವ ಮಂಜಿನ
ಶಿಖರಗಳ ಅಳತೆ ಸಿಕ್ಕಂತಿಲ್ಲ–
'ಇದ್ದೇನೆಂದುಕೊಂಡಿದ್ದೇನೆ, ಹೀಗಾಗಿ ಬದುಕಿದ್ದೇನೆ ಅನಿಸುತ್ತೆ'
ಎನ್ನುತ್ತಾನೆ ಬಿಸಿಯಿರದ ಖುಷಿಯಲ್ಲಿ,
ಅಥವ ಇನ್ನೂ ಹೃದ್ಯವಾಗಿ ಅಥವ ತಣ್ಣನ್ನನ ಒಣ ತರ್ಕದಲ್ಲಿ–
'ಸತ್ತಿಲ್ಲವೆಂದುಕೊಂಡಿದ್ದೇನೆ, ಯಾಕೆಂದರೆ ಉಸಿರಾಡಿಸುತ್ತಿದ್ದೇನೆ'
ಎಂದು ಯಾವುದೋ ಮುಲಾಜಿಗೆ ಬದುಕಿ,
ದಿಗಿಲು ಹುಟ್ಟಿಸುತ್ತಾನೆ;
ತಾನು ಹೇಳಿದ್ದು ನಿಜವಿರಬಹುದೆ? ಎಂಬ ಶಂಕೆಯಲ್ಲಿ, ನಿಟ್ಟುಸಿರಿಡುವ
ಭೀತಿಯಲ್ಲಿ ಕಣ್ಣಲ್ಲಿ ಹೊರಲಾರದೆ ಬೆಳಕಿನ ಭಾರ ಹೊತ್ತು ನಡುಗುತ್ತಾನೆ.
ಇವನ ನೆನೆಯುತ್ತ ನನ್ನ ಬದುಕನ್ನು ಸೆಟೆದ ಬೆನ್ನ ಮೇಲೆ ಹೊತ್ತು
ತಿರುಗುತ್ತೇನೆ.

ಹೇಳಲಾಗದ್ದು ಮನಸ್ಸಿನ ನೂರು ದಾರಿಗಳ ಅಸ್ಪಷ್ಟಗಳು,
ದಾರಿಗಳೆ ಇರದ ಗುಹ್ಯಗಳು,
ಜೀವನದುದ್ದಕ್ಕು ಗೊತ್ತಿರದ ದಾಕ್ಷಿಣ್ಯಗಳಿಗೆ

ಸಹಿಸಿಕೊಳ್ಳುವ ಅಸಹ್ಯಗಳು,
ಅಂತರಂಗಕ್ಕೆ ಸಂಬಂಧ ತಪ್ಪಿ, ಬಾಹ್ಯ ಪಡೆಯುವ
ದುಸ್ಸಹ ಸಮಯುಗಳು,
ಜೀವ ಕೈ ಚಾಚಿದರೆ ಸಿಗದ ಬಿಳಿಪಟದ ಮೇಲೆ ಚಲಿಸುವ
ಚಿತ್ರದ ಹಾಗೆ ದಕ್ಕಿಯೂ ಸಿಕ್ಕದಂತಿರುವ ದಿನ-ರಾತ್ರಿಗಳ
ಪರಿತ್ಯಕ್ತ ಉಸಿರಾಟಗಳ ಮಿಕ್ಕುಳಿದ ಹುಡುಕಾಟಗಳ
ಗೂಢಗಳು,
ಮಣ್ಣಿಂದೆದ್ದ ಬದುಕಿನ ಮೇಲೆ ಸೇಡು ತೀರಿಸಿಕೊಳ್ಳಬಯಸುವ,
ಹಸಿದ ಹಸಿರಿನ ಮೇಲೆ ಬರಿದೆ ಹಾಯುವ
ಬಿಳಿ ಮೋಡಗಳ ಬಂಜೆ ತೀಟೆಗಳು.

ಹೇಳಿದ್ದು
ತೆಕ್ಕೆಗೆ ಸಿಗದ ಬಾಳಿನ ನಿರ್ಮಮದಲ್ಲಿ
ನಿರ್ಮಮವಾಗಿ ಸಾಗಿರುವ ಮಂಜಿನ ಪ್ರೇತದ ಬಾಳ ಕಥೆ,
ಜಗತ್ತಿನ ಬಿಸಿ ಮುಟ್ಟಿತೇ, ಕರಗಿ
ಮರೆಯಾದೇನೆನ್ನುವ ಅನಿವಾರ್ಯ ಭಯದ ವ್ಯಥೆ,
ಮಜಕ್ಕೆ ಬದುಕು ಬೇಕೆನ್ನಿಸಿದರೂ ತನಗೆ
ತಾನೆ ಬೇಡವೆನ್ನಿಸುವ ಅಸಹಾಯಕ ಶೋಕಗೀತೆ.
ಇದನ್ನು ಕೇಳಿದರು ನನ್ನ ಹೃದಯ ಬಡಿತ ತಪ್ಪಲಿಲ್ಲ,
ರಕ್ತನಾಳಗಳಲ್ಲಿ ರಕ್ತ ಹರಿಯುವುದು ನಿಲ್ಲಿಸಲಿಲ್ಲ,
ಉಸಿರು ಸಿಕ್ಕಿಹಾಕಿಕೊಂಡರೂ ಗಂಟಲಲ್ಲಿ, ಪೂರ್ತಿ ನಿಲ್ಲಲಿಲ್ಲ ;
ಹಠಾತ್ತು ದಿಗಂತಗಳು ಹತ್ತಿರ ಸರಿದು
ಕಣ್ಣು ಕವಿದದ್ದು ಕುಗ್ಗಿದ ಬದುಕಿನವಧಿ,
ಅದೂ ಸಾಕೆನ್ನಿಸದೆ ಬಯಸಿದ್ದು ಸಾವಿನ ಕವುದಿ.

ಮಂಜಿನ ಖಂಡದಲಿ ತೆರವಿರದೆ
ಬದಲಾಗುತ್ತಿರುವ ಕಣ್ಣರಿವ ಬೆಳ್ಳನ್ನ ತಮದ ನಿಸ್ಸಮಯ,
ಮೇಲೆ ನಿಷ್ಪಂದ ನೀಲಿಯ ಕವಿಸಮಯ
ಹೀಗೆ ದಿಟ್ಟಿಸಿ ಕುಳಿತ ನಮ್ಮ ಜೀವಿತಗಳ
ಹೊಂದಾಣಿಕೆಯೇನು ಗೆಳೆಯ ?
ನಿನ್ನ ನೀರ್ಗಲ್ಲ ಮೇಲೆ ನನ್ನ ತಾರೆಯ ಬೆಳಕು
ಕುಣಿದರೂ ಅದರ ಬೆನ್ನೇರಿ ಅವಸರ ಬರುವ ಬಿಸಿ ತಾಕದೇ ನಿನ್ನ ಚಳಿಯ?

ಹಿಮ ಹನಿಸಿ ತಬ್ಬಿಕೊಳ್ಳದೆ ನನ್ನ ಬೆಚ್ಚನ್ನ ಬಗೆಯು ?
ದೂರದಂಚುಗಳಲ್ಲಿ ಒಂದಾಗಿರುವಂತಿರುವ
ನಮ್ಮ ಬದುಕಿನ ಪರಿಧಿಗಳ ನಡುವೆ ಬಾಯ್ತೆರೆದ ಖಾಲಿತನದಲ್ಲಿ
ನಾವುಗಳು ಇನ್ನೆಷ್ಟು ಕಾಲ ಸಹಿಸಿಕೊಂಡಿರಬೇಕು ?
ಸುರಿವ ಮಂಜಿನಲ್ಲೂ ಹೆಪ್ಪುಗಟ್ಟದ ಅಂಧ ಗಾಳಿಯು
ಹಠದ ತುಂಬು ಗಂಟಲಿನ ಊಳಿಡುವ ಸುಯ್ಲು ?
ನಮ್ಮ ತಳಗೆ ಯಾವ ಉತ್ಸಾಹಕ್ಕೆ, ಉದ್ದೇಶಕ್ಕೆ, ಉತ್ಸರ್ಗಕ್ಕೆ
ನಿಲುಗಡೆ ಇರದೆ ತಿರುಗುತ್ತಿರುವುದೀ ನೆಲದ ಗೋಳ ?

ಬೇಗೂರು ಶಾಸನ–ಒಂದು ವಿವೇಚನೆ

ದೇವರ ಕೊಂಡಾರೆಡ್ಡಿ

ಶಾಸನಗಳನ್ನು ಸ್ಥೂಲವಾಗಿ ಕೆಲವು ಭಾಗಗಳನ್ನಾಗಿ ವಿಂಗಡಿಸಬಹುದು: ಪ್ರಶಸ್ತಿಗಳು, ದಾನ ಶಾಸನಗಳು, ವೀರಗಲ್ಲುಗಳೆಂದು. ಆದರೆ ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ದಾನ ಶಾಸನಗಳ ಚೌಕಟ್ಟಿನಲ್ಲಿಯೇ ಬರುತ್ತವೆ. ದಾನವನ್ನು ಕೊಡುವ ವ್ಯಕ್ತಿ ದೇವರ ಬಗ್ಗೆ ತನಗಿದ್ದ ಭಕ್ತಿಗಾಗಿ ದಾನ ಕೊಟ್ಟಿರಬಹುದು. ಅಥವಾ ಯಾರಾದರೂ ವ್ಯಕ್ತಿ ತನ್ನ ಶೌರ್ಯವನ್ನು ಪ್ರದರ್ಶಿಸಿದಾಗ ಮೆಚ್ಚಿಕೆಯಾಗಿ ಕೊಟ್ಟಿರಬಹುದು. ಇಂತಹ ಶಾಸನಗಳಲ್ಲಿ ದಾನ ಕೊಟ್ಟ ವ್ಯಕ್ತಿಯ ಹೊಗಳಿಕೆಯ ಜೊತೆಗೆ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳ ಹೊಗಳಿಕೆಗಳೆಲ್ಲಾ ಇರುತ್ತವೆ. ಇಂತಹ ಸಂದರ್ಭಗಳಲ್ಲಿ ಶಾಸನಗಳನ್ನು ಇಂತಹ ಗುಂಪಿಗೆ ಸೇರಿದ ಶಾಸನಗಳೆಂದು ಕರೆಯುವುದು ಕಷ್ಟ. ಆದರೂ ಶಾಸನಗಳ ವಿಷಯ ರೂಪದ ಸಹಾಯದಿಂದ ನಾವು ಇವುಗಳನ್ನು ಸ್ಥೂಲವಾಗಿ ವಿಂಗಡಿಸಬಹುದು.

ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ವೀರನ ಶೌರ್ಯದ ವರ್ಣನೆ ಇರುತ್ತದೆ. ಎಲ್ಲಾ ವೀರಗಲ್ಲುಗಳೂ ಲಿಪಿಯನ್ನು ಹೊಂದಿರುವುದಿಲ್ಲ. ಕೇವಲ ಚಿತ್ರವನ್ನು ಮಾತ್ರ ಹೊಂದಿರುತ್ತವೆ. (ಮಾಸ್ತಿ ಕಲ್ಲುಗಳು ಬಹಳಷ್ಟು ಇಂತಹವು) ಈ ವೀರಗಲ್ಲುಗಳನ್ನು ಅನೇಕ ಹಂತಗಳಾಗಿ ಕೆತ್ತಿರುತ್ತಾರೆ. ಇವುಗಳಲ್ಲಿ ಮೊದಲನೆಯ ಹಂತ ಯುದ್ಧ ಭೂಮಿ, ಎರಡನೆಯ ಹಂತದಲ್ಲಿ ವೀರ, ಸ್ವರ್ಗಾಭಿಮುಖವಾಗಿ ಹೋಗುತ್ತಿರುವುದು. ಅವನ ಪಕ್ಕದಲ್ಲಿ ದೇವಕನ್ನೆಯರಿರುತ್ತಾರೆ. ಮೂರನೆಯ ಹಂತದಲ್ಲಿ ವೀರ, ದೇವರ ಬಳಿ ಕುಳಿತಿರುವುದನ್ನು ಚಿತ್ರಿಸಿರುತ್ತಾರೆ. ಕೆಲವು ಶಾಸನಗಳು ನಾಲ್ಕು ಹಂತಗಳನ್ನು ಪಡೆದಿರುವುದೂ ಉಂಟು. ಅನೇಕ ವೇಳೆ ಇವು ಒಂದೇ ಚಿತ್ರವಾಗಿಯೂ ಇರುತ್ತವೆ. ಇಂತಹ ಚಿತ್ರಗಳಲ್ಲಿ ವೀರನೊಬ್ಬ ಕೈಯ್ಯಲ್ಲಿ ಆಯುಧವನ್ನು ಹಿಡಿದು ಯುದ್ಧ ಭಂಗಿಯಲ್ಲಿರುವ ಚಿತ್ರಮಾತ್ರ ಇರುತ್ತದೆ. ಕೆಲವು ವೀರಗಲ್ಲುಗಳ ಮೂಲೆಯಲ್ಲಿ ಆ ವೀರ ಪ್ರದರ್ಶಿಸಿದ ಸಾಹಸದ ಘಟನೆಗೆ ಸಂಬಂಧಿಸಿದ (ಹೆಂಗಸು, ಹಸು...) ಚಿತ್ರವಿರುತ್ತದೆ.

ಸಾಮಾನ್ಯವಾಗಿ ರಾಷ್ಟ್ರಕೂಟ, ಹೊಯ್ಸಳರ ಕಾಲದ ವೀರಗಲ್ಲುಗಳು ಕಲಾತ್ಮಕ ದೃಷ್ಟಿಯಿಂದ ಚೆನ್ನಾಗಿರುತ್ತವೆ. ಮಿಕ್ಕವು ಸಾಮಾನ್ಯವಾಗಿ ಒರಟು ಕಲ್ಲಿನ ಮೇಲಿನ

ಕೆತ್ತನೆಗಳಾಗಿರುತ್ತವೆ. ವೀರಗಲ್ಲುಗಳ ವಿಷಯದ ಬಗ್ಗೆ ಮಾತನಾಡುವಾಗ ಅತಕೂರಿನ ಶಾಸನ[1] ಬಹು ಅಪರೂಪದ್ದೆನಿಸುತ್ತದೆ. ತಾನು ಸಾಕಿದ ನಾಯಿಯೊಂದು ಕಾಡು ಹಂದಿಯೊಡನೆ ಕಾದಾಡಿ ಅದನ್ನು ಸಂಹರಿಸಿ ತಾನೂ ಸತ್ತಾಗ ಆ ನಾಯಿಯ ಮೇಲಣ ಪ್ರೇಮದಿಂದ ನೆಡಿಸಿದ ವೀರಗಲ್ಲು. (ಇದರಲ್ಲಿ ರಾಷ್ಟ್ರಕೂಟರ ಯುದ್ಧದ ವಿಷಯವೂ ಸೇರಿದೆ). ಬೇಗೂರು ಶಾಸನ ವಿಷಯಕ್ಕಿಂತ ಮುಖ್ಯವಾಗಿ ಅದರಲ್ಲಿಯ ಶಿಲ್ಪದ ದೃಷ್ಟಿಯಿಂದ ಪ್ರಾಮುಖ್ಯವನ್ನು ಪಡೆದಿದೆ. ಇದೊಂದು ಆಗಿನ ಕಾಲದ ಯುದ್ಧರಂಗದ ವಾಸ್ತವಿಕ ಚಿತ್ರವನ್ನು ತೋರಿಸುತ್ತದೆ. ಎರಡು ಹಂತಗಳನ್ನು ಪಡೆದಿರುವಂತೆ ಕಾಣಬರುವ ಇದರಲ್ಲಿ ಮೊದಲನೇ ಹಂತದಲ್ಲಿ ಎರೆಯಪ್ಪನಿಂದ ನಾಗತ್ತರ ಖಡ್ಗವನ್ನು ಸ್ವೀಕರಿಸುತ್ತಿರುವಂತಿದೆ. ಕೆಳಗಿನದರಲ್ಲಿ ಯುದ್ಧಭೂಮಿಯನ್ನು ಚಿತ್ರಿಸಿದ್ದಾನೆ. ಎರೆಯಪ್ಪನ ಸೇನಾನಿ ನಾಗತ್ತರ ಕುದುರೆ ಮೇಲೆ ಕುಳಿತು ಖಡ್ಗವನ್ನು ಹಿಡಿದಿದ್ದಾನೆ. ಅವನ ಎದುರಿಗೆ ಅಯ್ಯಪದೇವ ಆನೆಯ ಮೇಲೆ ಕುಳಿತಿದ್ದಾನೆ. ಆನೆ ಒಬ್ಬ ಯೋಧನನ್ನು ಎಸೆದಿದೆ. ಆತ ತಲೆಕೆಳಗಾಗಿ ಬೀಳುತ್ತಿದ್ದಾನೆ. ಇನ್ನೊಬ್ಬನನ್ನು ಎಸೆಯಲು ಸೊಂಡಿಲಿನಿಂದ ಎತ್ತಿದೆ. ಆನೆಯ ಕುಂಭಸ್ಥಳದಲ್ಲಿ ಅನೇಕ ಬಾಣಗಳು ನಾಟಿವೆ. ಯುದ್ಧರಂಗದಲ್ಲಿ ಆವೇಶದಿಂದ ಹೊಡೆದಾಡುತ್ತಿರುವ ವೀರರು, ಸತ್ತು ಕೆಳಗೆ ಬಿದ್ದಿರುವವರು, ಕತ್ತರಿಸಿ ಬಿದ್ದ ಸೈನಿಕರ ಕೈಕಾಲುಗಳು, ಹೆಣಗಳನ್ನು ತಿನ್ನಲು ಬಂದಿರುವ ಪಕ್ಷಿಗಳು (ಕಾಗೆ?), ಶಾಸನದ ಬಲಭಾಗದಲ್ಲಿ ಆಗಿನವರ ನಂಬಿಕೆಯಂತೆ ಹೆಣಗಳ ಮಾಂಸದ ಆಸೆಗೆ ಬಂದಿರುವ ಪಿಶಾಚಿಗಳು ಇದಲ್ಲದೆ ಅದೇ ಬಲಭಾಗದಲ್ಲಿರುವ ಇನ್ನೊಂದು ಚಿತ್ರ ಗಾಯಗೊಂಡ ಯೋಧರನ್ನು ಹೊತ್ತುಕೊಂಡು ಹೋಗುತ್ತಿರುವ ಚಿತ್ರದಂತಿದೆ. ಇದೇ ಅಲ್ಲದೆ ರಣವಾದ್ಯಗಳು, ಅನೇಕ ಬಗೆಯ ಆಯುಧಗಳನ್ನು ಕಾಣಬಹುದು. ಹೀಗೆ ಯುದ್ಧರಂಗದ ವಾಸ್ತವ ಚಿತ್ರವನ್ನು ನೀಡುವ ಇಂತಹ ಅಪರೂಪದ ಶಾಸನ ಬೇರೊಂದಿಲ್ಲವೆನ್ನಬಹುದು (ಅತಕೂರು ಮತ್ತು ಬೇಗೂರು ಶಾಸನಗಳೆರಡೂ ಬೆಂಗಳೂರು ವಸ್ತು ಸಂಗ್ರಹಾಲಯದಲ್ಲಿವೆ).

ಈ ಬೇಗೂರು ಶಾಸನ ಯುದ್ಧದ ಚಿತ್ರವನ್ನು ಪಡೆದ ಅಪರೂಪ ಶಾಸನವಾಗಿರುವುದರ ಜತೆಗೆ, ಒಳಗೊಂಡಿರುವ ವಿಷಯವೂ ಚರ್ಚೆಯಿಂದಲೇ ಕೂಡಿದೆ. ಇದು ಸಿಕ್ಕಿರುವ ಸ್ಥಳ ಬೆಂಗಳೂರು ದಕ್ಷಿಣ ತಾಲೂಕಿನ ಬೇಗೂರು ಗ್ರಾಮದಲ್ಲಿ. ರೈಸರು ಇದನ್ನು ಬೆಂಗಳೂರು ಜಿಲ್ಲೆಯ ಶಾಸನ ಸಂಪುಟದಲ್ಲಿ EC IX Bn 83 ಎಂದು ಗುರುತಿಸುತ್ತಾರೆ.

ಈ ಬೇಗೂರು ಶಾಸನದಲ್ಲಿ ಉಕ್ತರಾದ ವ್ಯಕ್ತಿಗಳು ಐದು ಜನ. ಎರೆಯಪ್ಪರಸ, ಬೀರಮಹೇಂದ್ರ, ಅಯ್ಯಪದೇವ, ನಾಗತ್ತರ, ಇರುಗರೇ

[1] EC III Mn 50

ಅವರು. ಇವರಲ್ಲಿ ಮೊದಲನೇ ವ್ಯಕ್ತಿ–ಎರೆಯಪ್ಪರಸ–ಗಂಗರ ದೊರೆ ಗಂಗವಾಡಿ 96000 ವನ್ನು ಏಕಚ್ಛತ್ರ ಛಾಯೆಯಲ್ಲಿ[2] ಆಳುತ್ತಿದ್ದ. ಇವನ ಇನ್ನೊಂದು ಹೆಸರು ನೀತಿಮಾರ್ಗ II.

ನಾಗತ್ತರ ಎರೆಯಪ್ಪನ ಸೇನಾನಿ. ಇವನು ಬೆಂಪೂರಿನ ಒಡೆಯನಾಗಿರುತ್ತಾನೆ. ರಾಚಮಲ್ಲ ಪೆರ್ಮಾಡಿಯ ಬಳಿ ಕಲಿಯುಗದ 'ಅಣುವ'[3] ನೆಂತಿದ್ದ. ರಾಚಮಲ್ಲನ ನಂತರ ಪಟ್ಟಕ್ಕೆ ಬಂದ ಎರೆಯಪ್ಪನ ಕಾಲದಲ್ಲಿಯೂ ನಾಗತ್ತರ ಸೇನಾನಿಯಾಗಿರುತ್ತಾನೆ. ಇವನು ಜೈನನಾಗಿದ್ದಿರಬಹುದೆಂಬ ಊಹೆಯನ್ನು ಮಾಡಲು ಆಧಾರಗಳಿವೆ. ಇವನ ಮಗಳು ರೊಣ್ಡಬ್ಬೆ[4] ಸನ್ಯಸನವನ್ನು ಸ್ವೀಕರಿಸಿ ದೇಹತ್ಯಾಗ ಮಾಡುತ್ತಾಳೆ. ಇನ್ನೊಬ್ಬ ಮಗಳು ಕೊಣ್ಡಬ್ಬೆ[5] 'ಕರ್ತವ್ಯವೆಳೆಗೊಂಡು' ಸಾಯುತ್ತಾಳೆ. ನಾಗತ್ತರನಿಗೆ ಗಂಡು ಸಂತಾನವಿದ್ದಂತೆ ತಿಳಿದು ಬರುವುದಿಲ್ಲ. ಒಂದು ಶಾಸನದಲ್ಲಿ 'ನಾಗತ್ತರನ ಮನೆ ಮಗದಿಂ......ಪೆಗೂರ'[6] ಸ್ವರ್ಗಕ್ಕೆ ಸಂದ ಎಂದಿದೆ. ಇಲ್ಲಿ ಬರುವ ಮನೆಮಗ ಎಂದರೆ ಬಹುಶಃ ಆ ಕಾಲದಲ್ಲಿ ಪ್ರಚಲಿತವಿದ್ದ ವೇಳೆವಾಳಿಯ ರೀತಿ ಇರಬಹುದು. ನೊಳಂಬ–ಗಂಗರ ಯುದ್ಧ ಪ್ರಾರಂಭವಾದಾಗ ತುಂಬೆಪಾದಿ ಯುದ್ಧರಂಗದಲ್ಲಿ ನಾಗತ್ತರ ಪ್ರಮುಖ ಪಾತ್ರ ವಹಿಸಿರಬೇಕು. ಯುದ್ಧದಲ್ಲಿ ಗಂಗರ ಸೈನ್ಯ ಹಿಮ್ಮೆಟ್ಟುವ ಸಮಯದಲ್ಲಿ ನಾಗತ್ತರ ಮುಂದೆ ನುಗ್ಗಿ ನೊಳಂಬರ ಆನೆಯಿಂದ ಕೊಲ್ಲಲ್ಪಡುತ್ತಾನೆ.

ಇರುಗ ಎಂಬುವನು ಬೇಗೂರು ಶಾಸನದ ಪ್ರಕಾರ ನಾಗತ್ತರನ ನಂತರ ಪಟ್ಟವನ್ನು ಪಡೆದ ವ್ಯಕ್ತಿ. ಈ ಇರುಗನೂ ಸಹ ರಾಚಮಲ್ಲನ ಕಾಲದಿಂದ ಗಂಗರ ಸೇವೆಯಲ್ಲಿದ್ದ. ಗಂಗವಾಡಿಗೆ ಸೇರಿದ್ದ ಇವ್ವ್ರ್ವಲಿಯೂರೊಡೆಯನಾಗಿದ್ದ. (ಇವ್ವ್ರ್ವಲಿಯೂರು ಈಗಿನ ಅಗರದ ಹೋಬಳಿಯ ಇಬ್ಬಲೂರು). ಅವನಿಗೆ ಸಿರಿಮಯ್ಯ[7] ಎಂಬ ಮಗನಿದ್ದಂತೆ ತಿಳಿದುಬರುತ್ತದೆ. ಕೋಲಾರದ ಒಂದು ಶಾಸನದಲ್ಲಿ ಒಬ್ಬ ಇರುಗಮಯ್ಯನ ಉಲ್ಲೇಖವಿದೆ.[8] ಈ ಶಾಸನದ ಕಾಲ ಸುಮಾರು 925. ಈ ಶಾಸನ ಅಯ್ಯಪದೇವನ ಮಗನಾದ ಬೀರನೊಳಂಬನ ಕಾಲದ್ದು. ಈ ಇರುಗಮಯ್ಯ ಪಟ್ಟಂಗೆರೆಯ ಒಡೆಯನಾದ ಕನ್ನಮಯ್ಯನ ಮಗ. ಬೇಗೂರು ಶಾಸನದ ಇರುಗ 'ಇವ್ವ್ರ್ವಲಿಯೂರೊಡೆಯ.' ಈತ ಸತ್ಯವಾಕ್ಯ ಪೆರ್ಮಾನಡಿ ಕಾಲದಿಂದ ಗಂಗರ

---

[2] EC IX Bn 83

[3] EC IX Bn 79 ಅಣುವ = ಹನುವ, ಕವಿರಾಜಮಾರ್ಗದಲ್ಲಿ ಪ್ರಯೋಗ.

[4] EC IX Bn 94

[5] EC IX Bn 88

[6] EC IX Bn 87

[7] EC IX Bn 79

[8] EC X Kl 57

ಸೇವೆಯಲ್ಲಿದ್ದ. ಕೋಲಾರ ಶಾಸನದ ಕಾಲಕ್ಕೆ (ಸುಮಾರು 925) ಬೇಗೂರು ಶಾಸನದ ಇರುಗ ಗತನಾಗಿದ್ದಿರಬಹುದು. ಎರೆಯಪ್ಪ ರಾಜನಾದಮೇಲೆ ಇವನೂ, ನಾಗತ್ತರನೂ ಅಕ್ಕಪಕ್ಕದಲ್ಲಿಯೇ ಇದ್ದರು. ತುಂಬೆಪಾದಿ ಯುದ್ಧದಲ್ಲಿ ಇವನೂ ಭಾಗವಹಿಸಿರಬೇಕು. ಇವನು ನಾಗತ್ತರನ ಮಗನಲ್ಲ; Bn 79 ನೇ ಶಾಸನದಲ್ಲಿ ನಾಗತ್ತರ ಮತ್ತು ಇರುಗನನ್ನು ಎಲ್ಲಿಯೂ ತಂದೆ ಮಕ್ಕಳೆಂದು ಹೇಳಿಲ್ಲ. ನಾಗತ್ತರನ ಕೈಕೆಳಗಿನ ಅಧಿಕಾರಿಯೆಂಬಂತೆ ಹೇಳಿದೆ. ನಾಗತ್ತರನ ನಂತರ ಇವನಿಗೆ 'ಬೆಂಪೂರು ಪನ್ನೆರಡು ಕಲ್ನಾಡಾಗಿ' ದೊರೆಯುತ್ತದೆ.

ಇನ್ನು ಉಳಿದವರು ಬೀರ ಮಹೇಂದ್ರ ಮತ್ತು ಅಯ್ಯಪದೇವ. ಬೇಗೂರು ಶಾಸನದಲ್ಲಿ ಇವರಿಗೆ ಯಾವ ಕುಲ ಗೋತ್ರಗಳನ್ನೂ ಹೇಳದೆ ಕೇವಲ ಹೆಸರಿಸಿರುತ್ತಾರೆ. ಶಾಸನದ ಪಾಠವನ್ನು ಗಮನಿಸಿದಾಗ ಮಹೇಂದ್ರ ಮತ್ತು ಅಯ್ಯಪದೇವ ಇವರಿಬ್ಬರೂ ಬೇರೆಬೇರೆ ಎನ್ನಬೇಕಾಗುತ್ತದೆ. ಹೇಗೆಂದರೆ ಎರೆಯಪ್ಪರಸ— 'ಬೀರಮಹೇಂದ್ರನೊಳ್ಕಾದಲೆಂದು ಅಯ್ಯಪದೇವಜ್ಗೆ ಸಾಮಂತ ಸಹಿತಂ ನಾಗತ್ತರನಂ ದಂಡುವೇಳ್ದೊಡೆ......' ಎಂದಿದೆ. ಅಂದರೆ ಮಹೇಂದ್ರನ ಸಂಗಡ ಕಾದಾಡ ಬೇಕೆಂದು ಅಯ್ಯದೇವಜ್ಗೆ ಸಾಮಂತಸಹಿತವಾಗಿ (ಬೆಂಬಲವಾಗಿ) ನಾಗತ್ತರನನ್ನು ಕಳುಹಿಸುತ್ತಾನೆ. ಶಾಸನದ ಈ ಭಾಗವನ್ನು ಅರ್ಥೈಸುವುದರಲ್ಲಿ ಭಿನ್ನಾಭಿಪ್ರಾಯ ಕಾಣಬರುತ್ತದೆ. ಕೆಲವರು ಮೇಲಿನಂತೆ ಅರ್ಥೈಸಿದರೆ, ಕೆಲವರು ಅಯ್ಯಪ ಮತ್ತು ಮಹೇಂದ್ರರಿಬ್ಬರೂ ಎರೆಯಪ್ಪನ ಶತ್ರುಗಳೆಂದು ಅರ್ಥಮಾಡುತ್ತಾರೆ.

ಎರೆಯಪ್ಪನ ಸಮಕಾಲೀನ ಈ ಮಹೇಂದ್ರನಾರು ಎಂದು ಬೇರೆ ಬೇರೆ ಕಡೆಯ ಶಾಸನಗಳನ್ನು ಅವಲೋಕಿಸುವಾಗ ನೊಳಂಬರ ವಂಶದಲ್ಲಿ ಈ ಮಹೇಂದ್ರ ಮತ್ತು ಅಯ್ಯಪ ಇಬ್ಬರ ಹೆಸರುಗಳೂ ಕಂಡುಬರುತ್ತವೆ. ನೊಳಂಬರ ಶಾಸನಗಳ ಪ್ರಕಾರ ಮಹೇಂದ್ರನೆಂಬುವನು ನೊಳಂಬ ಪೊಳಲ್ಚೋರನ[9] (ರಾತನ) ಮಗ. ರಾಚಮಲ್ಲನ ಮಗಳು, ನೀತಿಮಾರ್ಗನ ತಂಗಿ ಜಾಯಬ್ಬೆಯ ಮಗನೆಂದು ಉಕ್ತನಾಗಿದ್ದಾನೆ. ಇವನ ಮಗ ಅಯ್ಯಪದೇವ[10]. ಮೊದಮೊದಲು ಈ ನೊಳಂಬರು ಗಂಗರ ಅಧೀನ ದಲ್ಲಿದ್ದರು. ಸುಮಾರು 820 ರ ಶಾಸನದಲ್ಲಿ ಶ್ರೀಪೆರ್ಮಾನಡಿ ರಾಜ್ಯವಾಳುತ್ತಿದ್ದಾಗ ನೊಳಂಬ ಶಿವಮಾರ ಎಂಬುವನು ಮೊರಸು ನಾಡನ್ನು ಆಳುತ್ತಿದ್ದ. ಈ ಶಾಸನದಲ್ಲಿ ಸಾಕ್ಷಿಯಾಗಿ ಎರೆಯಪ್ಪನನ್ನು ಹೆಸರಿಸಿದೆ.[11] ಇವನು ಒಂದನೇ ನೀತಿಮಾರ್ಗನಿರ ಬಹುದು. ಹಾಗೆಯೇ ಶಾಸನಗಳನ್ನು ಅವಲೋಕಿಸುವಾಗ ಈ ನೊಳಂಬರು

[9] EC Tumakur Sira 23

[10] EC Vol. Tumakur Sira 28

[11] EC IX Bn 40

ಗಂಗ 6000ಕ್ಕೆ ಒಡೆಯರಾಗಿರುತ್ತಾರೆ.[12] ಮೊದಮೊದಲು ಈ ಗಂಗ 6000ವನ್ನು ಗಂಗರೇ ಆಳುತ್ತಿರುತ್ತಾರೆ. ಶ್ರೀಪುರುಷ ಮಹಾರಾಜನ ಕಾಲದಲ್ಲಿ ಅವನ ಮಗ ದುಗ್ಗಮಾರ ಏರೆಯಪ್ಪ[13] ಈ ಗಂಗ 6000 ವನ್ನು ಆಳುತ್ತಿರುತ್ತಾನೆ. ಅಂದರೆ ಮೊದಮೊದಲು ಈ ಗಂಗ 6000 ವನ್ನು ಗಂಗರಾಜಕುಮಾರರೇ ಆಳುತ್ತಿದ್ದ ರೆಂದಾಯಿತು. ಅನಂತರ ಇದು ಮಹಾಬಲಿ ವಂಶದವರ[14] ಅಧೀನಕ್ಕೆ ಬಂದುದಾಗಿ ತಿಳಿಯುತ್ತದೆ. 'ಮಹಾಬಲಿ ಬಾಣರಸರ್ ಗಂಗ ಆರುಸಾವಿರಮಂ ಆಳುತ್ತಿರೆ......' ಎಂದು ಶಾಸನಗಳು ಸ್ಪಷ್ಟವಾಗಿ ಉಲ್ಲೇಖಿಸುತ್ತವೆ. ಬಾಣರಿಗಿಂತ ಮುಂಚೆ ನೊಳಂಬರು ಸಣ್ಣರಾಜರಾಗಿದ್ದಂತೆ ತಿಳಿದುಬರುತ್ತದೆ. Bn 40ನೇ ಶಾಸನದಲ್ಲಿ (ಸು. 830) ನೊಳಂಬ ಶಿವಮಾರ ಮೊರಸು ನಾಡನ್ನು ಆಳುತ್ತಿದ್ದಂತೆ ತಿಳಿದು ಬರುತ್ತದೆ. ಮುಂದೆ ಗಂಗ ನೊಳಂಬರ ಸಂಬಂಧಗಳು ಮುಂದುವರಿದಾಗ ಬಾಣರ ಅಧೀನದಲ್ಲಿದ್ದ ಗಂಗ 6000 ನೊಳಂಬರ ಅಧೀನಕ್ಕೆ ಬರುತ್ತದೆ. ಬಾಣರ ಮೇಲೆ ಗಂಗ ನೊಳಂಬ ಸೈನ್ಯಗಳೆರಡೂ ಯುದ್ಧಮಾಡಿದ ಉಲ್ಲೇಖ[15] ಸಿಕ್ಕುತ್ತದೆ. ಈ ಶಾಸನದ ಪ್ರಕಾರ ಶ್ರೀಮತ್ ಪೆರ್ಮಾನಡಿ ರಾಜ್ಯವಾಳುತ್ತಿದ್ದಾಗ ನೊಳಂಬಾದಿರಾಜ ಗಂಗ 6000 ವನ್ನು ಆಳುತ್ತಿದ್ದಾಗ ಬೆಂಗದ ರಾಜ ಶ್ರೀಮತ್ ಪೊಂಪೊಲ್ಲವ್ ಒಡೆಯರ್......ಬಾಣರಸರ ವಿರುದ್ಧ ಹೋರಾಡಿದ. ಇವನಿಗೆ ನೊಳಂಬಾದಿ ರಾಜರ ಬಿನ್ನಪದಂತೆ ನೀತಿಮಾರ್ಗ ಪೆರ್ಮಾನಡಿಗಳು ಮತ್ತು ನೊಳಂಬ ರಾಜ ರಿಬ್ಬರೂ ಸೂಟೂರನ್ನು ಕೊಡುತ್ತಾರೆ. ಗಂಗ ನೊಳಂಬ ವಂಶಗಳೆರಡೂ ಈ ದತ್ತಿಯನ್ನು ಕಾಯಬೇಕು ಎಂದು ಈ ಶಾಸನದಲ್ಲಿ ಉಲ್ಲೇಖವಾಗಿದೆ. ಗಂಗ ನೊಳಂಬರ ಸಂಬಂಧಕ್ಕೆ ಕಾರಣ ಅವರ ಮಧ್ಯೆ ಆದ ವಿವಾಹವೂ ಕಾರಣವಿರ ಬಹುದು. ಅಂದರೆ ಈ ಕಾಲಕ್ಕೆ ಗಂಗ 6000 ಬಾಣರ ವಶದಿಂದ ನೊಳಂಬರ ವಶಕ್ಕೆ ಬಂದಿರುತ್ತದೆ. ಮಹೇಂದ್ರನು ಪಟ್ಟಕ್ಕೆ ಬಂದ ಹೊಸದರಲ್ಲಿ ಗಂಗ 6000ಕ್ಕೆ ನೊಳಂಬರೇ ಒಡೆಯರಾಗಿರುತ್ತಾರೆ. ಮಹೇಂದ್ರನ ಕಾಲಕ್ಕೆ ಗಂಗ 6000 ವಿಸ್ತಾರ ವಾಗುತ್ತಾ ಬರುವುದೇ ಅಲ್ಲದೆ ಶಿರಾ ಶಾಸನವನ್ನು ಗಮನಿಸಿದಾಗ ನೊಳಂಬರು ಸ್ವಾತಂತ್ರ್ಯವನ್ನು ಘೋಷಿಸಿರುವಂತೆ ಕಾಣಬರುತ್ತದೆ. ಅದರಲ್ಲಿ ಪಲ್ಲವಕುಲತಿಲಕ, ಪೃಥ್ವೀವಲ್ಲಭ ಇತ್ಯಾದಿ ಬಿರುದುಗಳನ್ನು ಧರಿಸಿರುವುದೇ ಅಲ್ಲದೆ ಚೋರ ಮೊದಲಾದ ದಾಯಿಗರನ್ನು ನಿರ್ಮೂಲ ಮಾಡಿದಂತೆ ಹೇಳಿಕೊಂಡಿದ್ದಾನೆ. ಇದರ ಕಾಲ

---

[12] EC IX HI—9, EC X Kl 79, EC X Br 64

[13] EC X MB 80. AD 767. ECX MB 255 AD 750
EC X Sn 57, AD 770

[14] ECX Kl 235 ಸು. 890., ಅದೇ, Br 48. ಸು. 890, ಅದೇ, Br 86, ಸು. 770

[15] ECX Kl 79. (ಸು 890)

ಕ್ರಿ.ಶ. 878. ಈ ಮಹೇಂದ್ರ ಬಾಣರನ್ನು ಹೋಲಿಸಿ 'ಬಾಣಕುಲ ವಿಧ್ವಂಸನ' ಎಂಬ ಬಿರುದನ್ನು ಧರಿಸುತ್ತಾನೆ. ದಕ್ಷಿಣದಲ್ಲಿ ಧರ್ಮಪುರಿಯವರೆಗೆ ಇವನ ರಾಜ್ಯ ಹಬ್ಬುತ್ತದೆ. ಇವನ ರಾಜಧಾನಿ ಪೆಂಜೆರು (ಹೆಂಜರು) ಅಥವಾ ಈಗಿನ ಹೇಮಾವತಿ. (ಮಡಕಸಿರಾ ತಾಲ್ಲೂಕು) ಇವನು ಎರೆಯಪ್ಪನಿಂದ ಸಾಯುತ್ತಾನೆ. ಇಲ್ಲವೇ ಪರಾಭವಗೊಳ್ಳುತ್ತಾನೆ. ಈ ಊಹೆಗೆ ಕಾರಣ ಎರೆಯಪ್ಪನಿಗಿದ್ದ 'ಮಹೇಂದ್ರಾಂತಕ' ಎಂಬ ಬಿರುದು.

ಗಂಗ ನೊಳಂಬರ ಯುದ್ಧ ಪ್ರಾರಂಭವಾದ ಸೂಚನೆಯನ್ನು ಅನೇಕ ಶಾಸನಗಳು ಹೇಳುತ್ತವೆ. ಈ ಶಾಸನಗಳಲ್ಲಿ 'ಶ್ರೀ ಮಹಾರಾಜ ನಾಡಮೇಗೆ ಮಹಿನ್ದ ಸಮ... ವಲಮುಂ ಎಟ್ಟಿರೆ ಎರೆಯುಮ್ಮರಸನ ಮನೆ ಮಕ್ಕಳು...[16]' 'ಶ್ರೀ ಮಹೇಂದ್ರರಾಜ ಗಂಗರ ಮೇಗೆ ಪರಿಂ ಪರಿಯೆ[17]' ಎಂದಿದೆ. ಇಲ್ಲಿ ಬರುವ ಶ್ರೀಮಹಾರಾಜ ಎರೆಯಪ್ಪ, ಎರಡನೇ ನೀತಿಮಾರ್ಗ. ಮಯಿನ್ದನೇ ನೊಳಂಬ ಬೀರಮಹೇಂದ್ರ. ಬಹುಶಃ ಇವು ಗಂಗ ನೊಳಂಬರ ಯುದ್ಧದ ಮೊದ ಮೊದಲ ಸೂಚನೆಗಳಾಗಿರ ಬಹುದು.

ಮೇಲೆ ಹೇಳಿದ ಮಹೇಂದ್ರನ ಮಗನೇ ಅಯ್ಯಪದೇವ. ತಂದೆಯಂತೆಯೇ ಶೂರ. ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಮಹೇಂದ್ರನ ರಾಜ್ಯವನ್ನು ವಿಸ್ತರಿಸು ತ್ತಾನೆ. ಇವನ ಕಾಲಕ್ಕೆ ಶತ್ರುಗಳ ಹೊಡೆತ ಬಲವಾಗುತ್ತದೆ. ಇವನು ಪೂರ್ವ ಚಾಲುಕ್ಯರು, ಗಂಗರು, ರಾಷ್ಟ್ರಕೂಟರು ಇವರನ್ನೆಲ್ಲಾ ಎದುರಿಸಬೇಕಾಗುತ್ತದೆ. ಇವನು ಪೂರ್ವಚಾಲುಕ್ಯ ಎರಡನೇ ಭೀಮನೊಡನೆ ಯುದ್ಧ ಮಾಡುತ್ತಾನೆ. ಇವನ ನಂತರವೂ ಗಂಗ-ನೊಳಂಬರ ಯುದ್ಧಗಳು ಮುಂದುವರಿಯುತ್ತವೆ.

ಈ ಮೇಲಿನ ಚರಿತ್ರೆಯನ್ನು ಅವಲೋಕಿಸುವಾಗ ಎರೆಯಪ್ಪನಿಗೆ ಸಮಕಾಲೀನ ನಾದ ನೊಳಂಬ ಮಹೇಂದ್ರನೇ ಬೇಗೂರು ಶಾಸನದಲ್ಲಿ ಉಕ್ತನಾದ ಮಹೇಂದ್ರ. ಅಯ್ಯಪದೇವ ಇವನ ಮಗ. ಆದರೆ ಇದಕ್ಕೆ ವಿರೋಧವೂ ಇಲ್ಲದಿಲ್ಲ. ಹೀಗೆ ವಿರುದ್ಧ ವಾದಿಸುವವರಲ್ಲಿ ಫ್ಲೀಟರು ಮುಖ್ಯರು. ಎಪಿಗ್ರಾಫಿಯಾ ಇಂಡಿಕಾ Vol. VI 47 ನೇ ಪುಟದಲ್ಲಿ ಬರೆಯುತ್ತಾ, ಅಯ್ಯಪನು ನೊಳಂಬನೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಅವನನ್ನು ನೊಳಂಬಾದಿರಾಜ ಅಯ್ಯಪದೇವ, ಪಲ್ಲವ-ಕುಲತಿಲಕ,....ಇತ್ಯಾದಿ ಬಿರುದುಗಳಿಂದ ಕರೆದಿದೆ....ವೀರಮಹೇಂದ್ರ ಇಂತಹವನೇ ಎಂದು ಹೇಳಲು ಸಾಧ್ಯವಿಲ್ಲ. ಇವನನ್ನು ನೊಳಂಬ ಮಹೇಂದ್ರನೆಂದು ಗುರುತಿಸು ವುದರಲ್ಲಿ ಸರಿಯಾದ ಕಾರಣವೂ ಇಲ್ಲ. ಹಾಗೆಯೇ ನೋಡಿದರೆ ಈ ಮಹೇಂದ್ರ

---

[16] EC X Sd 101, 102, 103. ಸು. 900

[17] EC X CT. 116. ಸು. 890

ಬಹುಶಃ ಪೂರ್ವಚಾಲುಕ್ಯರ ದೊರೆ ಇರಬಹುದು. ಅವರಲ್ಲಿ ಒಂದನೇ ಅಮ್ಮನಿಗೆ ರಾಜಮಹೇಂದ್ರ ಎಂಬ ಬಿರುದಿರುತ್ತದೆ. ಅವರಲ್ಲಿ ಎರಡನೇ ಅಮ್ಮನಿಗೆ (934-945) ಗಂಡಮಹೇಂದ್ರ ಎಂಬ ಬಿರುದಿರುತ್ತದೆ. ಈ ಪೂರ್ವ ಚಾಳುಕ್ಯರು, ರಾಷ್ಟ್ರಕೂಟ ಮತ್ತು ಪಶ್ಚಿಮ ಗಂಗರೊಡನೆ ಯುದ್ಧ ಮಾಡುತ್ತಲೇ ಇರುತ್ತಾರೆ. ಅಯ್ಯಪ ಎಂಬ ಹೆಸರು ಚಾಳುಕ್ಯ 2ನೇ ಭೀಮನ ಶತ್ರುಗಳ ಪಟ್ಟಿಯಲ್ಲಿ ಬರುತ್ತದೆ. ಆದ್ದರಿಂದ ಈ ಎಲ್ಲಾ ಕಾರಣಗಳಿಂದ ಬೇಗೂರು ಶಾಸನದಲ್ಲಿ ಉಕ್ತನಾಗಿರುವ ವೀರಮಹೇಂದ್ರ ಎಂಬುದು ಚಾಳುಕ್ಯ ಎರಡನೇ ಭೀಮನ ಬಿರುದು. ಈ ಎರಡನೇ ಭೀಮನು ದಂಡೆತ್ತಿ ಬರುವಾಗ ಗಂಗ ನೊಳಂಬರ ಸೈನ್ಯ ಒಂದಾಗಿ ಅವನ ಮೇಲೆ ಯುದ್ಧ ಮಾಡುತ್ತಾರೆ. ಎರೆಯಪ್ಪನ ಕೊನೆಗಾಲದಲ್ಲಿ ಈ ಘಟನೆ ನಡೆದಿರಬಹುದು...... ಲಿಪಿಶಾಸ್ತ್ರ ದೃಷ್ಟಿಯಿಂದ ಬೇಗೂರು ಶಾಸನದ ಕಾಲವನ್ನು 906-907 ಕ್ಕಿಂತ ಮುಂಚೆ ಹಾಕಲು ಸಾಧ್ಯವಿಲ್ಲ. ಈ ವರ್ಷದಿಂದ ಎರೆಯಪ್ಪ ಪಟ್ಟಕ್ಕೆ ಬರುವುದು. ಆದ್ದರಿಂದ ಈ ಮೇಲಿನ ದೃಷ್ಟಿಯಿಂದ ಈ ಶಾಸನದ ಕಾಲವನ್ನು ಇನ್ನೂ ಮೂವತ್ತು ವರ್ಷ ಈಚೆಗೆ ಹಾಕಿದರೂ ಅನ್ಯಾಯವಿಲ್ಲ" ಎಂದಿದ್ದಾರೆ.

ಮೇಲೆ ಹೇಳಿದ ಘಟನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇವುಗಳ ನಿಜಾಂಶ ಹೊರಬರುತ್ತದೆ. ಮೊದಲನೆಯದಾಗಿ ಕಾಲದ ವ್ಯತ್ಯಾಸ. ಬೇಗೂರು ಶಾಸನದ ಎರೆಯಪ್ಪನ ಕಾಲ 907-930. ಎರಡನೇ ಭೀಮನ ಕಾಲ 934-945. ಮಹೇಂದ್ರನ ಕಾಲ (ಕರ್ಣಾಟಕ ಪರಂಪರೆಯ ಪ್ರಕಾರ) 860-895. ಅಯ್ಯಪನ ಕಾಲ 919-925. ಇವರಿಬ್ಬರ ಮಧ್ಯೆ ನೊಲಪಯ್ಯನನ್ನು ಹೆಸರಿಸುತ್ತಾರೆ. 2ನೇ ಭೀಮ ಪಟ್ಟಕ್ಕೆ ಬರುವುದಕ್ಕೆ ಮುಂಚೆಯೇ ಎರೆಯಪ್ಪನ ರಾಜ್ಯಭಾರ ಮುಗಿದು ಹೋಗಿ ಅದನ್ನು ರಾಚಮಲ್ಲ ನೋಡಿಕೊಳ್ಳುತ್ತಿರುತ್ತಾನೆ. ಎರೆಯಪ್ಪ ಪಟ್ಟಕ್ಕೆ ಬಂದು ಹಗೆಗಳನ್ನೆಲ್ಲಾ ಸದೆಬಡಿದು ನೊಳಂಬರ ಮೇಲೆ ತುಂಬಿಪಾದಿ ಯುದ್ಧ ಮಾಡುವುದು. ಆದ್ದರಿಂದ ಮಹೇಂದ್ರನ ಕಾಲವನ್ನು 860-895 ಎಂದು ಕೊಟ್ಟರೂ ಅದನ್ನು ಇನ್ನೂ ಮುಂದಕ್ಕೆ ಎಳೆಯಬಹುದು. ಅಂದರೆ ಸು 910ರ ವರೆಗೂ ಆತ ಜೀವಿಸಿದ್ದನೆನ್ನಬಹುದು. ಅಯ್ಯಪನ ಕಾಲವನ್ನು 919-925 ಎಂದಿದ್ದರೂ ಅದನ್ನು ಇನ್ನೂ ಮುಂದಕ್ಕೆ ಎಳೆಯಬಹುದು. ಕ್ರಿ.ಶ. 949ರ ಶಾಸನವೊಂದರಲ್ಲಿ,[18] 'ಪಲ್ಲವ ಕುಲತಿಲಕ' ಇತ್ಯಾದಿ ಬಿರುದುಗಳುಳ್ಳ ಅಯ್ಯಪದೇವ ಬದುಕಿದ್ದ ಸೂಚನೆಗಳು ಕಂಡು ಬರುತ್ತವೆ. ಹಾಗಾದಲ್ಲಿ ಅಯ್ಯಪನು ಚಾಳುಕ್ಯ ಎರಡನೇ ಭೀಮನಿಂದ ಸಾಯಲಿಲ್ಲ ಎನ್ನಬೇಕಾಗುತ್ತದೆ. ಏಕೆಂದರೆ ಚಾಳುಕ್ಯ 2ನೇ ಭೀಮನ ಕಾಲ 934-945. ಅಯ್ಯಪನ ಕಾಲವನ್ನು 934-949 ಎನ್ನಬಹುದು.

---

[18] EC. IX Dv. 10

ತುಂಬೆಪಾದಿ ಯುದ್ಧ ಮಹೇಂದ್ರನ ವೃದ್ಧಾಪ್ಯದಲ್ಲಿ ನಡೆದಿರಬೇಕು. ಅದರಲ್ಲಿ ಆತ ಭಾಗವಹಿಸದೆ ಅಯ್ಯಪನನ್ನು ಯುದ್ಧಕ್ಕೆ ಕಳುಹಿಸಿದ್ದ. ಈ ಘಟನೆ ಸು 909–910ರಲ್ಲಿ ನಡೆದಿರಬೇಕು. ಆದ್ದರಿಂದ ಚಾಳುಕ್ಯ ಭೀಮನಿಗೂ ಎರೆಯಪ್ಪನಿಗೂ ಯಾವ ಯುದ್ಧವೂ ನಡೆದಿಲ್ಲ. ಬೇಗೂರು ಶಾಸನದಲ್ಲಿ ಉಲ್ಲೇಖವಾಗಿರುವ ಯುದ್ಧ ನೊಳಂಬ ಮತ್ತು ಗಂಗರಿಗೆ ನಡೆದ ಯುದ್ಧ. ಅದೂ ಅಲ್ಲದೆ 930ರಲ್ಲಿ ರಾಜ್ಯ ತ್ಯಜಿಸಿದ ಎರೆಯಪ್ಪ 945ರ ವರೆಗೆ ಜೀವಿಸಿದ್ದ 'ಗಂಡಮಹೇಂದ್ರ' ಬಿರುದಾಂಕಿತ ಚಾಳುಕ್ಯ ಎರಡನೇ ಭೀಮನಿಂದ ಸತ್ತಿರಲು ಬೇಗೂರು ಶಾಸನದ ಕಾಲವನ್ನು (Bn 83) ಬಿ. ಎಲ್. ರೈಸರು ಸು 890 ಎಂದು ಕೊಟ್ಟಿರುತ್ತಾರೆ. ಆದರೆ ಅದನ್ನು ಇನ್ನೂ ಈಚೆಗೆ ಎಳೆಯಬಹುದು. ಈ ಘಟನೆ 907 ರಿಂದ 910ರ ಒಳಗೆ ನಡೆದಿರಬೇಕು. ಈ ಶಾಸನದ ಕಾಲವನ್ನು ಮೇಲಿನ ಕಾರಣಗಳಿಂದ ಕ್ರಿ. ಶ. 908 ಎನ್ನುವುದು ಉತ್ತಮ.

ಇನ್ನು ಈ ಶಾಸನದಲ್ಲಿ ಉಕ್ತವಾಗಿರುವ ಸ್ಥಳಗಳ ಬಗ್ಗೆ ಹೇಳುವುದಾದರೆ, ಅದರಲ್ಲಿ ಉಕ್ತವಾಗಿರುವ ಬೆಂಪೂರು ಇಂದಿನ ಬೇಗೂರು.[19] ಇದು ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ. ತೊವಗೂರು ಇಂದಿನ ತೋಗೂರು. ಇದು ಬೇಗೂರಿನ ಸಮೀಪದಲ್ಲಿಯೇ ಇದೆ. ಕೂಡಲ್ ಇಂದಿನ ಆನೇಕಲ್ ತಾಲೂಕಿನ ಕೂಡಲು. ಪೂವಿನ ಪುಲ್ಲಿ ಮಙ್ಗಲದ ಬಗ್ಗೆ ಫ್ಲೀಟರು ಬರೆಯುತ್ತಾ ಅದು ಮಾಲೂರು ತಾಲೂಕಿನ ಉಲಿಮಂಗಲವೆಂದು ಹೇಳಿರುತ್ತಾರೆ. ಆದರೆ ಅದು ಬೇರೆ, ಈ ಶಾಸನದ ಪುಲಿ ಮಂಗಲವೇ ಬೇರೆ. ಇದು ಈಗಿನ ಆನೇಕಲ್ ತಾಲೂಕಿನ ಜಿಗಣಿ ಹೋಬಳಿಗೆ ಸೇರಿದ ಹುಲಿಮಂಗಲ. ಬೇಗೂರಿಗೆ ಇದು ಸಮೀಪದಲ್ಲಿದೆ. ಇಗ್ಗಲೂರು ಆನೇಕಲ್ ತಾಲೂಕಿನ ಇಂದಿನ ಇಗ್ಗಲೂರು. ಬೇಗೂರು ಶಾಸನದಲ್ಲಿ ಹೇಳಿರುವ ಉಳಿದ ಊರುಗಳಾದ ದುಗ್ಮನೆಲ್ಮಲ್ಲಿ,[20] ಕೂತನಿಡುನಲ್ಲೂರು, ಕೊಮರನ್ಗುಂವ, ಗಟಿಂಜವಾಗಿಲು,[21] ಎಟ್ಟುಕ್ಕಪ್ಪೆ, ಪರವೂರು, ಸಾರಮು[22] ಈ ಊರುಗಳನ್ನು ಗುರುತಿಸುವುದು ಕಷ್ಟವಾಗಿದೆ. ಈ ಊರುಗಳು ಈಗ ಹಾಳೂರುಗಳಾಗಿರಬಹುದು. ತುಂಬೆಪಾದಿ ಇಂದಿನ ಸಿರಾ ತಾಲೂಕಿನ ತುಂಬಾಡಿ.

ಬೇಗೂರು ಶಾಸನದಲ್ಲಿ ವೀರಮಹೇಂದ್ರ, ಅಯ್ಯಪದೇವ ಇವರಿಬ್ಬರ ಕುಲ ಗೋತ್ರಗಳನ್ನೂ ಹೇಳಿಲ್ಲ. ಆದರೂ ವಿದ್ವಾಂಸರು ಅಯ್ಯಪದೇವನನ್ನು ನೊಳಂಬ

---

19 ಬೆಂಪೂರು > ಬೇಹೂರು > ಬೇಗೂರು. mp > h > g

20 ಈಗಿನ ಗುಳುಕಮಲ್ಲಿ ಇರಬಹುದೆ ?

21 ಈಗಿನ ಗಣಬಾಜನ ಹಳ್ಳಿ ಇರಬಹುದೆ ?

22 ಇಂದಿನ ಬೆಂಗಳೂರು ದಕ್ಷಿಣ ತಾಲೂಕಿನ ಸಾರಕ್ಕಿ ಇರಬಹುದು

ನೆಂದು ಒಪ್ಪಿಕೊಳ್ಳುವಷ್ಟು ಸುಲಭವಾಗಿ ಮಹೇಂದ್ರನನ್ನೂ ನೊಳಂಬನೆಂದು ಒಪ್ಪಿಕೊಳ್ಳುವುದಿಲ್ಲ. ಇದಕ್ಕೆ ಕಾರಣ ಶಾಸನವನ್ನು ಅರ್ಥಮಾಡುವುದರಲ್ಲಿ ಬರುವ ತೊಡಕು. 'ಬೀರ ಮಹೇಂದ್ರನೊಳ್ಕಾದಲೆನ್ದು ಅಯ್ಯಪದೇವಜ್ಗಿ ಸಾಮಂತ ಸಹಿತಂ ದಣ್ಡುವೇಳ್ದೊಡೆ...........' ಎಂದಿದೆ. ಇದನ್ನು ಅರ್ಥೈಸಿದಾಗ ವೀರ ಮಹೇಂದ್ರನ ಸಂಗಡ ಕಾದಲೆಂದು ಅಯ್ಯಪ ದೇವನಿಗೆ ಸಾಮಂತ ಸಹಿತಂ (ಬೆಂಬಲ ವಾಗಿ) ನಾಗತ್ತರನಂ ದಣ್ಡುವೇಳ್ದೊಡೆ...........ಎಂದಾಗುತ್ತದೆ. ಬಹುಶಃ ಲಿಪಿಕಾರನದೊ, ಶಾಸನ ಕರ್ತೃವಿನದೋ, ಯಾರದೋ ದೋಷದಿಂದ ಶಾಸನ ಈ ರೀತಿ ಬಂದಿರಬಹುದು. ಇದನ್ನು ಹೀಗೆ ತಿದ್ದಿ ಅರ್ಥ ಮಾಡಿದರೆ ಯಾವ ತೊಡಕೂ ಇರುವುದಿಲ್ಲ. ಎರೆಯಪ್ಪರಸ ಬೀರಮಹೇಂದ್ರನೊಳ್ಕಾದಲೆನ್ದು ಅಯ್ಯಪ ದೇವ (ಜ್ಗಿದಿರಾಗಿ) ಸಾಮಂತ ಸಹಿತಂ ನಾಗತ್ತರನಂ ದಣ್ಡುವೇಳ್ದೊಡೆ... ಹೀಗೆ ಶಾಸನ ಪಾಠವನ್ನು ಸರಿಪಡಿಸಿ ಕೊಂಡರೆ ಯಾವುದೇ ಬಗೆಯ ವಾದ ವಿವಾದಗಳಿಗೆ ಅವಕಾಶ ಇರುವುದಿಲ್ಲ. ಮತ್ತು ಶಾಸನದ ಬೀರಮಹೇಂದ್ರನೊಳಂಬ ಮಹೇಂದ್ರನಲ್ಲದೆ ಬೇರೆಯಲ್ಲ ಎಂದು ನಿರ್ಧರಿಸಲು ಸಹಾಯವಾಗುತ್ತದೆ. ಹಯವದನರಾಯರು ಮೈಸೂರು ಗೆಜೆಟಿಯರ್‌ನಲ್ಲಿ ಬರೆಯುತ್ತಾ ತುಂಬೆಪಾದಿಯುದ್ಧ ಎರೆಯಪ್ಪನ ಸೇನಾನಿ ನಾಗತ್ತರನಿಗೂ ನೊಳಂಬ ಬೀರಮಹೇಂದ್ರನಿಗೂ ನಡೆದದ್ದೆಂದು ಹೇಳಿ, ನಾಗತ್ತರನ ಕಾಲವನ್ನು ಸು 920 ಎಂದು ಕೊಡುತ್ತಾರೆ. ಅವರೂ ಬಹುಶಃ ಮೇಲೆ ತಿದ್ದಿದ ರೂಪದಲ್ಲಿ ಶಾಸನದ ಭಾಗವನ್ನು ಅರ್ಥೈಸಿರಬೇಕು.

ಕಲ್ನಾಡು : ಕಲ್ನಾಡೆಂಬ ಪದಕ್ಕೆ ಫ್ಲೀಟರು ಪ್ರದೇಶ ಎಂಬ ಅರ್ಥವನ್ನು ಕೊಟ್ಟಿರುತ್ತಾರೆ. (......But a reminiscence of the name of the Kalnad district is perhaps modren Anekal taluka ....) ಆದರೆ ಯಾವುದೇ ಊಹಾಪೋಹಗಳಿಗೆ ಅವಕಾಶವಿಲ್ಲದೆ ಇದನ್ನು ಅರ್ಥೈಸಬಹುದು. ಡಾ॥ ಎಂ. ಚಿದಾನಂದಮೂರ್ತಿಯವರು ತಮ್ಮ ಕ.ಶಾ.ಸಾಂ. ಅಧ್ಯಯನ ಎಂಬ ಗ್ರಂಥದಲ್ಲಿ ಕಲ್ನಾಡೆಂಬುದಕ್ಕೆ ಅರ್ಥವನ್ನು ಕೊಟ್ಟಿದ್ದಾರೆ. ಕಲ್ನಾಡು ಪದದಲ್ಲಿರುವ ನಾಡು ಎಂಬ ಪದಕ್ಕೆ ಇಲ್ಲಿ ಪ್ರದೇಶ ಎಂಬ ಅರ್ಥ ಬರುವುದಿಲ್ಲ. 'ನಾಟು' ಎಂಬ ಪದದ ರೂಪವೇ 'ನಾಡು' ಎಂಬುದು. ನಾಟು ಎಂಬ ಪದಕ್ಕೆ ಅರ್ಥವನ್ನು ಕಲ್ಪಿಸಿದಾಗ ಕಲ್ಲನ್ನು—ಹೂಳು, ಹಾಕು, ಚುಚ್ಚು, ನೆಡು ಎಂಬ ಅರ್ಥ ಬರುತ್ತದೆ. ಇದಕ್ಕೆ ಶಾಸನಗಳಲ್ಲಿ ಆಧಾರವೂ ಇದೆ. ಉದಾಹರಣೆಗೆ ನೋಡುವುದಾದರೆ '...... ಶಿಲಾಶಾಸನ ನಾಲ್ಕು ದಿಕ್ಕು ಮಾಡಿಕೊಂಡು ಇದ್ದೇವೆ'[23] 'ಅಗ್ರಹಾರಕ್ಕೆ ಆಕಿಸ್ತ ಕಲ್ಲು'[24]

[23] Ec IX Nl 22

[24] Ec IX Nl 15

...... ಮಲಾ ಸಮುದ್ರವನು ಕೊಡಗಿಯುಗಿ ಕಲುನಟು ಕೊಟ್ಟರು'[25] '......ವೀರ ವನಭ್ಯಂತರಿಸಿ ಕಲ್ನಾಟು ಗೊಟ್ಟರ್'[26] '......ಕಲಿಯುೂರನಭ್ಯಂತರ ಸಿದ್ಧಿಯಾಗೆ ಕಲ್ನಾಡಿತ್ತನ್[27]......' ಇಲ್ಲಿ ಬಂದಿರುವ ಕಲುನಟು ಕಲ್ನಾಟು ಎಂಬುವುಗಳ ರೂಪವೇ ಕಲ್ನಾಡು.

---

[25] Ec IX Md 78

[26] Ec IX Dv 10

[27] ಮದ್ದಗಿರಿ 71 (ತುಮಕೂರು ಜಿಲ್ಲೆ)

ಆಧಾರ ಗ್ರಂಥಗಳು

1. EC vol IX, X ಮತ್ತು ತುಮಕೂರು ಜಿಲ್ಲೆಯ ಶಾಸನಗಳು.
2. EI vol VI three Westren Ganga inscriptions in Bangalore Musieum by Fleet
3. ಕರ್ನಾಟಕ ಪರಂಪರೆ : (ನೊಳಂಬರು, ಗಂಗರು ಮತ್ತು ಬಾಣರು)
4. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ|| ಎಂ. ಚಿದಾನಂದ ಮೂರ್ತಿ

ವಾತಾವರಣ

ವೈ. ಲಿಂಗರಾಜು

ರವಿಯ ರಂಗಸ್ಥಳವಾದ ನೀಲಾಕಾಶದ ಒಂದು ಬದಿಯಲ್ಲಿ ಕೆಂಪು ಹಳದಿಯಿಂದ ಒಡಿದು ತಿಳಿಶ್ಯಾಮಲ ವರ್ಣಗಳ ಹಿನ್ನೆಲೆಯಲ್ಲಿ ಬೆಳ್ಳಿ ಮೋಡಗಳು ವಿವಿಧಾಕಾರವನ್ನು ತಳೆದು ತೋರುವ ಗಗನ ದೃಶ್ಯಗಳು ಕವಿಗೆ ಸ್ಫೂರ್ತಿದಾಯಕ. ಕೆಲವೊಮ್ಮೆ ಸಂಜೆ ಅಥವಾ ಎಳೆ ಬಿಸಿಲಿನಲ್ಲಿ ಮಳೆ ಬರುವಂತಾಗಿ ಮೈಮನ ಕುಣಿಸುವ ಕಾಮನ ಬಿಲ್ಲು ಕೌತುಕಮಯ. ಕವಿ ಕಲ್ಪಿಸಿ ಹಾಡಿದ ಈ ದೃಶ್ಯಗಳಿಗೆ ಕಾರಣವಾದ ವಾತಾವರಣ ಮಾನವನ ಬಾಳಿಗೂ ಆಧಾರ.

ವಿಜ್ಞಾನ ದಿನೇ ದಿನೇ ಹುಲುಸಾದ ಮರದ ಟೊಂಗೆಗಳು ವಸಂತ ಋತುವಿನಲ್ಲಿ ಕೊನರುವಂತೆ ಕೊನರುತ್ತಿದೆ. ವಿಜ್ಞಾನಿಗಳು ಪ್ರಕೃತಿ ಗೋಚರಗಳನ್ನು ಅರಿತು ಅಭ್ಯಸಿಸಿ ಬಾಳಿಗೆ ಕುತ್ತಾಗಬಲ್ಲ ನೈಸರ್ಗಿಕ ಪ್ರಕ್ರಿಯೆಗಳನ್ನು ನಿಯಂತ್ರಿಸಿ ಮಾನವನ ಬಾಳನ್ನು ಸುಗಮವಾಗಿಸಲು ಯತ್ನಿಸುತ್ತಿದ್ದಾರೆ. ಅಂತಹ ಪ್ರಯತ್ನಗಳಲ್ಲಿ ಕೃತಕ ಮಳೆ ತರಿಸುವುದು ಬಿರುಗಾಳಿ ಹಾಗು ಹವೆಯನ್ನು ನಿಯಂತ್ರಿಸುವುದು ಇತ್ಯಾದಿಗಳು ಮುಖ್ಯವಾದವು. ಇವುಗಳನ್ನರಿಯಲು ವಾತಾವರಣದ ಬಗ್ಗೆ ಹೆಚ್ಚಿನ ಮಾಹಿತಿ ಅಗತ್ಯ. ಈ ಬಗ್ಗೆ ಬಾಹ್ಯಾಕಾಶ ಶೋಧಕರು ಸಂಗ್ರಹಿಸಿದ ವಿವರಗಳು ಹೆಚ್ಚು ಸಹಕಾರಿಯಾಗಿವೆ.

ಸೌರವ್ಯೂಹದ ಗ್ರಹಗಳಲ್ಲೆಲ್ಲಾ ನಮ್ಮ ಭೂಗ್ರಹವೊಂದೇ ಜೀವನಾಧಾರವಾದ ವಾತಾವರಣವನ್ನು ಹೊಂದಿರುವುದು ಎಂದು ಹಲವರ ಮತ. ಭೂಮಿಗಿಂತಲೂ ದೊಡ್ಡ ಗ್ರಹಗಳಾದ ಗುರು, ಶನಿ, ನೆಪ್ಚ್ಯೂನ್‌ಗಳು ಜಲಜನಕದ ವಾತಾವರಣವನ್ನು ಹೊಂದಿವೆ. ಜಲಜನಕದ ಆವರಣದ ಕೆಳಗೆ ವಿಷಪೂರಿತ ಅನಿಲಗಳಾದ ಮೀಥೇನ್ ಮತ್ತು ಅಮೋನಿಯುಗಳಿದ್ದು ಜೀವಿಗಳಿರುವುದು ಸಾಧ್ಯವಿಲ್ಲ ಎಂದಾಗಿದೆ. ಈ ಗ್ರಹಗಳ ಬಗ್ಗೆ ಇರುವ ಮಾಹಿತಿ ಪೂರ್ಣವಲ್ಲದಿದ್ದರೂ ಗಗನಯಾನಿಗಳ ಸಾಹಸದಿಂದ ಹೆಚ್ಚಿನ ಸಂಶೋಧನೆ ಮುಂದುವರಿಯುತ್ತಿದೆ. ಅಂತೆಯೇ ಭೂಮಿಗಿಂತಲೂ ಸಣ್ಣ ಗ್ರಹಗಳ ಬಗ್ಗೆಯೂ ಈಗಿರುವ ಮಾಹಿತಿ ಕಡಿಮೆಯೇ. ಅಮೇರಿಕದ ಮ್ಯಾರಿನರ್-2ರ ಶೋಧನೆಯ ಪ್ರಕಾರ ಶುಕ್ರಗ್ರಹದ ವಾತಾವರಣವು ಇಂಗಾಲದ ಡೈ ಆಕ್ಸೈಡ್ ನಿಂದ ಕೂಡಿದೆ ಎಂದು ತಿಳಿದು ಬಂತು. ಬುಧಗ್ರಹಕ್ಕೆ ವಾತಾವರಣವೇ

ಇದ್ದಂತಿಲ್ಲ. ಮಂಗಳಗ್ರಹಕ್ಕೆ ವಾತಾವರಣವಿದ್ದರೂ ನಮ್ಮ ಭೂಗ್ರಹದ ವಾತಾವರಣಕ್ಕಿಂತಲೂ ಬಹಳ ತೆಳುವಾಗಿರುತ್ತದೆ. ಅಲ್ಲದೆ ಅದರಲ್ಲಿ ಇಂಗಾಲದ-ಡೈ-ಆಕ್ಸೈಡ್ ಮತ್ತು ನೀರಿನ ತುಂತುರು ಇರುವುದಾಗಿ ನಂಬಲಾಗಿದೆ. ಇನ್ನೂ ಬಿಲಿಯಾಂತರ ಮೈಲಿಗಳ ದೂರವಿರುವ ಪ್ಲೂಟೋ ಗ್ರಹಕ್ಕೆ ವಾತಾವರಣ ಇರುವುದೇ ಎಂಬುದು ತಿಳಿಯಲಾಗಿಲ್ಲ. ಇದ್ದುದೇ ಆದ ಪಕ್ಷದಲ್ಲಿ ಅತಿ ಭಾರದ ಅನಿಲಗಳಿಂದ ಕೂಡಿದ್ದು ಅಲ್ಲಿಯ ಪ್ರಪಂಚವು ಅತಿ ತಣ್ಣಗಿರುತ್ತದೆ ಎಂದು ಊಹಿಸಲಾಗಿದೆ.

ಭೂಮಿಯ ಸುತ್ತಲೂ ಇರುವ ವಾತಾವರಣದ ಒಟ್ಟು ತೂಕ ಸುಮಾರು 5, 000, 000, 000, 000, 000 (5×10^{15}) ಟನ್‌ಗಳು. ಒಂದು ಘನಅಡಿ ಗಾಳಿಯು ಒಂದೂಕಾಲು ಔನ್ಸ್‌ಗಳಿಗೂ ಸ್ವಲ್ಪ ಹೆಚ್ಚು ತೂಗುತ್ತಾದರೂ ನಮ್ಮ ದೇಹದೊಳಗಿನ ಒತ್ತಡ ಗಾಳಿಯ ಭಾರದ ಅನುಭವವನ್ನು ನೀಡದಂತೆ ತಡೆಯುತ್ತದೆ. ವಾತಾವರಣದಲ್ಲಿರುವ ಅನಿಲಗಳಲ್ಲಿ ಶೇಕಡ 99 ಭಾಗ ಆಮ್ಲಜನಕ ಮತ್ತು ಸಾರಜನಕದಿಂದ ಕೂಡಿರುತ್ತದೆ. ಜೊತೆಗೆ ಓಜೋನ್, ಅಮೋನಿಯ, ಜಲಜನಕದ ಸಲ್ಫೈಡ್, ಗಂಧಕದ ಡೈ ಆಕ್ಸೈಡ್, ಕಾರ್ಬನ್ ಮಾನಾಕ್ಸೈಡ್ ಮತ್ತು ರೇಡಾನ್ ಇವುಗಳೂ ಇದ್ದು ಬೇರೆ ಬೇರೆ ಸ್ಥಳಗಳಲ್ಲಿ ಇವುಗಳ ಪ್ರಮಾಣದಲ್ಲಿ ವ್ಯತ್ಯಾಸ ಮತ್ತು ಮುಖ್ಯವಾಗಿ ಧೂಳು ಹಾಗೂ ನೀರಿನ ತುಂತುರುಗಳ ಪ್ರಮಾಣ ಗಗನ ದೃಶ್ಯಗಳಲ್ಲಿ ವೈವಿಧ್ಯತೆಯನ್ನುಂಟುಮಾಡುತ್ತವೆ.

ಭೂಮಿಯ ಉಗಮವನ್ನು ವಿವರಿಸುವ ಸಿದ್ಧಾಂತದ ಪ್ರಕಾರ ವಾತಾವರಣವು ಭೂಮಿಯ ಉಗಮಕ್ಕೂ ಮೊದಲೇ ಇದ್ದು ಭೂಮಿಯೂ ರೂಪುಗೊಂಡ, ಮೂಲಗ್ರಹದ ಒಂದು ಭಾಗವಾಗಿತ್ತು. ಈ ಮೂಲಗ್ರಹದ ಶೇಕಡ 95 ಭಾಗ ಜಲಜನಕ ಮತ್ತು ಹೀಲಿಯಂನಿಂದ ಮಾತ್ರ ಕೂಡಿತ್ತು. ಭೂ ಗ್ರಹದ ನಿರ್ಮಾಣದುದ್ದಕ್ಕೂ ಬಹುವಾಗಿ ಅನಿಲಗಳು ಪ್ರಜ್ವಲನೆಯಿಂದಲೇ ಇಲ್ಲವಾದವು. ಹಾಗೆಯೇ ಉಳಿದು ಬಂದ ಜಲಜನಕ ಮತ್ತು ಹೀಲಿಯಂ ಎಲ್ಲವೂ ಮೂಲದಿಂದಲೂ ಉಳಿದು ಬಂದವು ಎನ್ನುವುದಕ್ಕಿಂತಲೂ ಭೂಮಿಯ ಶಿಲೆಗಳಿಂದ ಬಿಡುಗಡೆ ಹೊಂದಿ ಬಂದವು ಎನ್ನಬಹುದು.

ಮತ್ತೊಂದು ಸಿದ್ಧಾಂತದ ಪ್ರಕಾರ ಮೊದಲಿಗೆ ಭೂಮಿಯ ಸುತ್ತಲೂ ವಾತಾವರಣವೇ ಇಲ್ಲದಿದ್ದು ಆಗ ಆಕಾಶವು ಕಪ್ಪಾದ ಹಿನ್ನೆಲೆಯನ್ನು ಹೊಂದಿ ನಕ್ಷತ್ರಗಳು ಪ್ರಕಾಶಮಾನವಾಗಿ ಕಾಣುತ್ತಿದ್ದವು. ನಂತರ ಭೂಮಿಯ ಆಳವಾದ ಬಿರುಕುಗಳಿಂದ ಹೊರಬಂದ ಅನಿಲಗಳು ಭೂಮಿಯ ಹೊರಗೆ ಆಕಾಶದಲ್ಲಿ ಸೇರಿಕೊಂಡವು. ನಾನಾ ಅನಿಲಗಳೊಡನೆ ಜ್ವಾಲಾರಸಗಳನ್ನು ಜ್ವಾಲಾಮುಖಿಗಳು ಹೊರಹಾಕಿದವು. ಬಹಳ ಹಗುರವಾದ ಅನಿಲಗಳು ಭೂಮಿಯ ಗುರುತ್ವ

ಶಕ್ತಿಯನ್ನು ದಾಟಿದವು. ಸ್ವಲ್ಪ ಭಾರವಾದ ಅನಿಲಗಳು ಭೂಮಿಯ ಗುರುತ್ವ ಶಕ್ತಿಯ ಹಿಡಿತದಲ್ಲುಳಿದವು. ಕ್ರಮೇಣ ಆಕಾಶವು ತನ್ನದೇ ಆದ ಬಣ್ಣವನ್ನು ತಳೆಯಿತು. ಈ ಆವರಣದಲ್ಲಿ ಧೂಳಿನ ಕಣಗಳು ಹರಡಿದಾಗ ಆಕಾಶದಲ್ಲಿ ಅಪರಿಮಿತ ರಂಗುಂಟಾಯಿತು. ಅಲ್ಲದೆ ಸೂರ್ಯನ ಬೆಳಕೂ ಚದುರಿತು. ಜ್ವಾಲಾಮುಖಿಗಳಲ್ಲಿ ಹೊರ ಹೊಮ್ಮುವ ಅನಿಲಗಳಲ್ಲಿ ಸಾರಜನಕವೂ ಒಂದಾಗಿರುವುದರಿಂದ ಪ್ರಾಚೀನ ಜ್ವಾಲಾಮುಖಿಗಳೇ ಸಾರಜನಕಕ್ಕೆ ಆಗರವೆಂದು ಹೇಳಬಹುದಾಗಿದೆ. ಆಮ್ಲಜನಕವು, ವಾತಾವರಣದಿಂದ ಮೇಲ್ಮಟ್ಟದಲ್ಲಿ ಮಿಂಚು ನೀರಿನ ಕಣಗಳನ್ನು ವಿಭಜಿಸುವುದರಿಂದ, ಉತ್ಪತ್ತಿಯಾಗಿರಬಹುದಾಗಿದೆ. ಈ ಭಾರೀ ಪ್ರಮಾಣದ ಆಮ್ಲಜನಕವೆಲ್ಲವೂ ಅದೇ ರೀತಿಯಲ್ಲಿ ಉತ್ಪತ್ತಿಯಾಗಿರದಿದ್ದರೂ ಪ್ರಾಚೀನ ಸಸ್ಯವರ್ಗದ ಬೇಡಿಕೆಗೆ ಸಾಕಾದಷ್ಟು ಉತ್ಪತ್ತಿಯಾಗಿರಬಹುದು. ಸಸ್ಯಗಳು ವೃದ್ಧಿಯಾದಂತೆಲ್ಲಾ ಅವು ಬೆಳೆಯುವಾಗ ವಾತಾವರಣದಲ್ಲಿನ ಇಂಗಾಲದ ಡೈಆಕ್ಸೈಡನ್ನು ಉಪಯೋಗಿಸಿ ಆಮ್ಲಜನಕವನ್ನು ಬಿಟ್ಟು ಕೊಟ್ಟಿರುತ್ತದೆ. ಸಸ್ಯಗಳು ಕೊಳೆತಾಗ ಮತ್ತು ಬೆಂಕಿ ಉರಿಯುವಾಗ ಇಂಗಾಲದ ಡೈ ಆಕ್ಸೈಡ್ ಮತ್ತಿತರ ಅನಿಲಗಳು ವಾತಾವರಣವನ್ನು ಸೇರುತ್ತವೆ.

ಮುಖ್ಯ ಆಹಾರಗಳ ಮೂಲವಸ್ತುವಾದ ಸಾರಜನಕವು ವಾತಾವರಣದಲ್ಲಿ ಯಥೇಚ್ಛವಾಗಿದೆ. ಆದರೆ ಈ ಸಾರಜನಕವು ರಾಸಾಯನಿಕ ಜಡತೆಯನ್ನು ಹೊಂದಿರುವುದರಿಂದ ಪ್ರಾಣಿ ಹಾಗೂ ಸಸ್ಯಗಳು ನೇರವಾಗಿ ಇದನ್ನು ಬಳಸುವಂತಿಲ್ಲ. ಅದನ್ನು ಉಪಯೋಗ ರೂಪಕ್ಕೆ ತರಲು ಮುಖ್ಯ ನಿಯೋಗಿಗಳೆಂದರೆ ಕೆಲವು ಸಸ್ಯಗಳ ಬೇರಿನಲ್ಲಿರುವ ಬ್ಯಾಕ್ಟೀರಿಯಾಗಳು. ಹೀಗೆ ಪರಿವರ್ತಿತವಾದ ಸಾರಜನಕವನ್ನು ಸಸ್ಯಗಳು ಉಪಯೋಗಿಸಬಹುದಾಗಿದ್ದು ಆ ಸಸ್ಯಗಳನ್ನು ಪ್ರಾಣಿಗಳು ತಿನ್ನುವುದರಿಂದ ಆ ಸಾರಜನಕವನ್ನು ಪಡೆಯಬಹುದಾಗಿರುತ್ತದೆ. ಪುನಃ ಪ್ರಾಣಿ ಸತ್ತನಂತರ ಆ ಸಾರಜನಕವು ಭೂಮಿಗೆ ಹಿಂತಿರುಗುತ್ತದೆ. ಗಾಳಿಯಲ್ಲಿನ ಸಾರಜನಕವು ಸಸ್ಯ ಹಾಗೂ ಪ್ರಾಣಿಗಳ ಮೂಲಕ ಮತ್ತು ಭೂವೈಜ್ಞಾನಿಕ ಚಕ್ರೀಯ ಪ್ರಕ್ರಿಯೆಗಳ ಅಂತರ್‌ವ್ಯವಹಾರದಿಂದಾಗಿ ಉಪಯುಕ್ತವೂ, ಪುನಃ ಭರ್ತಿಯೂ ಆಗುತ್ತಿರುತ್ತದೆ.

ನಾವು ಭೂಮಿಯ ಮೇಲ್ಮೈನಿಂದ ದೂರ ಸರಿದಂತೆ ವಾತಾವರಣದ ಗಾಳಿಯೂ ಬೇರೆ ಬೇರೆ ಪದರುಗಳಲ್ಲಿ ಜೋಡಣೆ ಹೊಂದಿರುತ್ತದೆ. ಈ ಜೋಡಣೆಯನ್ನು ಇನ್ಫ್ರಾರೆಡ್ ವೀಕ್ಷಣ ದೂರದರ್ಶಕವನ್ನು ಅಳವಡಿಸಿದ ಉಪಗ್ರಹದಿಂದ ಕಾಣಬಹುದು. ಈ ಉಪಗ್ರಹಕ್ಕೆ ಟೈರಾಸ್ (Television Infrared Observation Satellite) ಎಂದು ಹೆಸರು. ಈ ಕೃತಕ ಉಪಗ್ರಹದಿಂದ ಭೂಮಿಯ ಸುತ್ತಲೂ ಛಾಯಾ ಚಿತ್ರಗಳನ್ನು ತೆಗೆಯಲಾಗಿದೆ. ಮತ್ತೆ ಕೆಲವು

ಉಪಗ್ರಹಗಳು ಬೇರೆ ಬೇರೆ ಎತ್ತರಗಳಲ್ಲಿ ನಡೆಸಿದ ಶೋಧನೆಗಳಿಂದ ಈ ಪದರುಗಳು ಗೊತ್ತಾದ ಒಂದು ಹಂತದಲ್ಲಿ ಬೇರ್ಪಟ್ಟಿರುವುದಿಲ್ಲವೆಂದು ತಿಳಿದು ಬಂದಿದೆ. ಶಾಖ ಮತ್ತು ಸಂಯೋಜನೆಯಲ್ಲಿ ಸಮತೆಯಿರುವ ಭಾಗವನ್ನು ಅವಲೋಕಿಸಬಹುದಾದರೂ ಈ ಭಾಗಗಳು ಎಲ್ಲಿ ಮುಗಿದು ಎಲ್ಲಿ ಪ್ರಾರಂಭವಾಗುತ್ತವೆ ಎಂಬುದನ್ನು ತಿಳಿಯು ಲಾಗುವುದಿಲ್ಲ. ಆದರೂ ಸಹ ಸ್ಪಷ್ಟ ವ್ಯತ್ಯಾಸವುಳ್ಳ ಆರು ಪದರಗಳನ್ನು ಈ ವಾತಾವರಣದಲ್ಲಿ ಕಾಣಬಹುದು. ಅವೇ ಟ್ರೊಪೊಸ್ಫಿಯರ್, ಸ್ಟ್ರಾಟೋ ಸ್ಫಿಯರ್, ಕಿಮೊ ಸ್ಫಿಯರ್, ಐಯನೊ ಸ್ಫಿಯರ್, ಮೀಸೋಸ್ಫಿಯರ್ ಮತ್ತು ಎಕ್ಸೊ ಸ್ಫಿಯರ್‌ಗಳು.

ಟ್ರೊಪೊಸ್ಫಿಯರ್ ಒಂಬತ್ತರಿಂದ ಹತ್ತು ಮೈಲಿಗಳವರೆಗೂ ಹರಡಿದ್ದು ಶೇಕಡ 75 ಭಾಗ ಗಾಳಿಯಿಂದ ತುಂಬಿರುವುದು. ನಾವು ಅನುಭವಿಸುವ ಹವಾ ಗುಣವು ಈ ಭಾಗದ್ದೇ. ಇದರ ನಂತರ 32 ಮೈಲಿಗಳಷ್ಟು ದೂರ ಸ್ಟ್ರಾಟೋ ಸ್ಫಿಯರ್ ಇರುತ್ತದೆ. ಇದರ ನಂತರ ಕಿಮೋ ಸ್ಫಿಯರ್ ಇದು 50 ಮೈಲಿಗಳ ದೂರ ಹರಡಿದೆ. ಈ ಭಾಗದಲ್ಲಿನ ಅಣುಗಳಲ್ಲಿ ಎಲೆಕ್ಟ್ರಾನುಗಳ ವಿನಿಮಯ ನಡೆ ಯುತ್ತಿರುತ್ತದೆ. ಉದಾಹರಣೆಗೆ: ಆಮ್ಲಜನಕದ ಪರಮಾಣುವಿನಿಂದ ನಾವು ಉಪಯೋಗಿಸಲನುಕೂಲವಾಗಿರುವ ಆಮ್ಲಜನಕವು ಉಂಟಾಗುತ್ತದೆ. ಎರಡು ಪರಮಾಣುಗಳಿಂದ ಆಮ್ಲಜನಕದ ಅಣುವು ವಿಭಾಗ ಹೊಂದಿ ಪುನಃ ಸೇರುತ್ತವೆ. ಈ ಸ್ಥಳದಲ್ಲಿ ನೀರಿನ ಅಣುಗಳು ಸೌರ ವಿಕಿರಣತೆಯಿಂದ ಜಲಜನಕದ ಮತ್ತು ಆಮ್ಲಜನಕದ ಅಪೂರ್ಣ ಮೂಲಧಾತುವಾಗಿ ಬೇರ್ಪಡುತ್ತದೆ. ನಂತರ ಮತ್ತೊಂದು ವಿದ್ಯುದ್‌ವಾಹೀ ಜಲಜನಕದ ಕಣವನ್ನು ಸೇರಿ ನೀರಾಗಿ ಪರಿವರ್ತಿತ ವಾಗುತ್ತದೆ.

ಪರಮಾಣುವಿನ ಹೊರಕೋಶದಿಂದ ಎಲೆಕ್ಟ್ರಾನುಗಳನ್ನು ಹೊರಕ್ಕೆ ತರುವ ಕಾರ್ಯವಾದ ಐಯೋನೀಕರಣವು ಕಿಮೋ ಸ್ಫಿಯರಿನಲ್ಲೇ ಪ್ರಾರಂಭವಾಗುತ್ತದೆ. ಈ ಗೋಳವನ್ನು ದಾಟಿದ ನಂತರ ಸುಮಾರು 250 ಮೈಲ್ಲಿಗಳವರೆಗೂ ಈ ಕಾರ್ಯ ಅತಿಯಾದ ತೀವ್ರತೆಯಿಂದಿರುತ್ತದೆ. ಈ ಭಾಗಕ್ಕೆ ಐಯನೋಸ್ಫಿಯರ್ ಎಂದು ಹೆಸರು. ಸೂರ್ಯನಿಂದ ಬರುವ ಅತಿ ನೀಲ ಕಿರಣಗಳು (Solar altraviolet radiation) ಪರಮಾಣುಗಳಿಂದ ಎಲೆಕ್ಟ್ರಾನುಗಳನ್ನು ರಭಸವಾಗಿ ಬೇರ್ಪಡಿಸುತ್ತದೆ. ಈ ಋಣವಿದ್ಯುತ್ ಕೋಶಗಳು ಮತ್ತು ಇದರ ಪರಮಾಣು ರೂಪ ಸೌರವಿಕಿರಣ ಗಳೊಡನೆ ಉಂಟಾಗುವ ಚಟುವಟಿಕೆಗಳನ್ನು ಭೂಕಾಂತಧೃವ ಪ್ರಭೆಯು (Aurora) ತೋರಿಸುತ್ತದೆ. ವಿದ್ಯುತ್ ಚಟುವಟಿಕೆಯುಳ್ಳ ಈ ಐಯನೋಸ್ಫಿಯರ್‌ನ ಪದರುಗಳು ರೇಡಿಯೋ ಅಲೆಗಳನ್ನು ಭೂಮಿಗೆ ಪ್ರತಿಫಲಿಸಿ ದರ್ಪಣದಂತೆ

ವರ್ತಿಸುತ್ತವೆ. ಹೀಗೆ ರೇಡಿಯೋ ಅಲೆಗಳು ಹಿಂದಕ್ಕೆ ಬಂದ ಅನುಭವವು ತಿಳಿದು ಬಂದದ್ದು ಈ ಶತಮಾನದ ಪ್ರಾರಂಭದಲ್ಲೇ.

ಜಗತ್ತಿಗೆ ರೇಡಿಯೋವನ್ನು ನೀಡಿದ ಮಾರ್ಕೋನಿ ಮಹಾಶಯ ಮೊಟ್ಟ ಮೊದಲಿಗೆ ರೇಡಿಯೋ ಸಂದೇಶವೊಂದನ್ನು ಇಂಗ್ಲೆಂಡಿನಿಂದ ನ್ಯೂಫೌಂಡ್‌ಲೆಂಡಿಗೆ ಕಳುಹಿಸಿದ. ರೇಡಿಯೋ ಅಲೆಗಳು ಸರಳರೇಖೆಯಲ್ಲಿ ಪ್ರವಹಿಸುವುದರಿಂದ ಅವನು ಕಳುಹಿಸಿದ ಅಂತರವು ಅತಿಯಾಗಿ ದಿಗಂತದ ಸುತ್ತಲೂ ಈ ಅಲೆಯು ಪ್ರವಹಿಸ ಲಾರದು, ಆದರಿಂದ ಆ ಸಂದೇಶವು ತಲುಪುವುದಿಲ್ಲ ಎಂದು ಹಲವರು ಶಂಕಿಸು ತ್ತಿದ್ದರು. ಆದರೆ ಅವನ ಆ ಸಂದೇಶವು ದಿಗಂತವನ್ನು ಮೀರಿ ಕೇಳಿಸುತ್ತಿತ್ತು. ಅದಾದ ಆರು ತಿಂಗಳ ನಂತರ ಹಾರ್ವರ್ಡ್ ವಿಶ್ವ ವಿದ್ಯಾಲಯದ ಡಾ.ಎ.ಇ. ಕೆನ್ನೆಲಿ ಎಂಬುವರೂ, ಸ್ವಲ್ಪ ಕಾಲಾನಂತರ ಇಂಗ್ಲೆಂಡಿನ ಆಲಿವರ್ ಹೆವಿಸೈಡ್ ಎಂಬುವರೂ ಅದಕ್ಕೆ ತಕ್ಕ ವಿವರಣೆಯನ್ನು ನೀಡಿದರು. ಅವರ ಪ್ರಕಾರ ವಾತಾವರಣದ ಒಂದು ಪದರದಲ್ಲೇ ಕನ್ನಡಿಯು ಬೆಳಕು ಪ್ರತಿಫಲನ ಹೊಂದುವಂತೆ ಪುಟವಿಟ್ಟು ನೆಗೆ ಯುತ್ತದೆ. ಸುಮಾರು 1939ರ ವರೆಗೆ ಇದನ್ನು ಪುನರ್‌ಪರಿಶೀಲನೆ ಮಾಡಿರಲಿಲ್ಲ. ಕೆನ್ನೆಲಿ ಮತ್ತು ಹೆವಿಸೈಡ್ ಒಂದು ರೇಡಿಯೋ ಸಂಕೇತವನ್ನು ಮೇಲಕ್ಕೆ ಕಳಿಸಿ ಹದಿನೇಳು ಮೈಲಿ ದೂರದಲ್ಲಿನ ಕೆಳಭಾಗದ ರೆಕಾರ್ಡಿಂಗ್ ಕೇಂದ್ರದಲ್ಲಿ ಅದನ್ನು ಪಡೆದಾಗ ಇದರ ಅರಿವಾಯಿತು. ಪುಟವಿಟ್ಟ ಆ ಪದರಕ್ಕೆ "ಕೆನ್ನೆಲಿ ಹೈವಿಸೈಡ್ ಲೇಯರ್" ಎಂದು ಹೆಸರಾಯಿತು. ಈ ಪದರವು ಐಯಾನು ಗೋಳದ ಕೆಳಪದರ ವಾಗುತ್ತದೆ. ಸಂದೇಶವನ್ನು ಕಳಿಸಿದ ಕೋನ ಮತ್ತು ಅದು ತೆಗೆದುಕೊಂಡ ವೇಳೆ ಯನ್ನು ಲೆಕ್ಕಿಸಿ ಐಯಾನು ಗೋಳದ ಕೆಳಪದರ 62 ಮೈಲಿಗಳಷ್ಟು ಎತ್ತರದಲ್ಲಿದೆ ಯೆಂದು ತಿಳಿಯಲಾಯಿತು.

ಮುಂದೆ ನಡೆಸಿದ ಪರಿಶೀಲನೆಗಳು ರೇಡಿಯೋ ಅಲೆಗಳನ್ನು ಭಿನ್ನ ತರಂಗಾಂತರ ದಲ್ಲಿ ಪ್ರತಿ ಫಲಿಸುವ ಹಲವಾರು ಪ್ರತ್ಯೇಕ ಪದರುಗಳನ್ನು ಐಯಾನುಗೋಳವು ಒಳಗೊಂಡಿದೆ ಎಂಬುದನ್ನು ವಿವರಿಸಿದವು. ಕೃತಕ ಗ್ರಹಗಳಲ್ಲಿ ಉಪಯೋಗಿಸಿದ ಕೆಲವು ಸಲಕರಣೆಗಳ ಸಹಾಯದಿಂದ ಹಲವಾರು ಸಾವಿರ ಮೈಲಿಗಳವರೆಗಿನ ವಾತಾ ವರಣದ ಸಂಯೋಜನೆಯ ವಿಧಾನವನ್ನು ತಿಳಿಯಲಾಯಿತು.

ತರುವಾಯದ ಸಂಶೋಧನಾರ್ಥ ಉಪಗ್ರಹಗಳು 3000 ಮೈಲಿಗಳಿಂದ 40,000 ಮೈಲಿಗಳವರೆಗಿನ ಸ್ಥಳಗಳಲ್ಲಿರುವ ಬೇರೆ ಬೇರೆ ಶಕ್ತಿಯ ಹಂತಗಳನ್ನು ತಿಳಿಸಿದವು. ಈ ಸಂಪೂರ್ಣ ಭಾಗವನ್ನು ಕಾಂತೀಯ ಗೋಳ (Magnetosphere) ಎಂದು ಕರೆಯಲಾಯಿತು. ಈ ಪ್ರದೇಶವು ಕಾಂತೀಯ ಕ್ಷೇತ್ರಕ್ಕೆ ಒಳಗಾಗಿದ್ದು ವಿದ್ಯುದ್ವಾಹೀ ಕಣಗಳಿಗೆ ಬಾಧಕವಾಗುವುದಿಲ್ಲ. ಈ ಪ್ರದೇಶದಲ್ಲಿ ಹೇರಳವಾದ

ಪ್ರೋಟಾನ್ ಮತ್ತು ಎಲೆಕ್ಟ್ರಾನುಗಳು ಅನೇಕ ಶಕ್ತಿ ಹಂತಗಳಲ್ಲಿವೆ. 40,000 ಮೈಲಿಗಳಿಂದಾಚೆಗೆ ಭೂಮಿಯ ಕಾಂತೀಯ ಕ್ಷೇತ್ರವು ಕೆಲವು ವೇಳೆ ಬಹಳ ಶಕ್ತಿಯುತವಾಗಿಯೂ ಮತ್ತೆ ಕೆಲವು ವೇಳೆ ಬಹಳ ಕಡಿಮೆ ಶಕ್ತಿಯುಳ್ಳದ್ದಾಗಿರುತ್ತದೆ. ಈ ಕ್ಷೇತ್ರವನ್ನು ವಿಜ್ಞಾನಿಗಳು 'ಭೂಮಿ ಮತ್ತು ಸೂರ್ಯರ ಆಕರ್ಷಣ ಶಕ್ತಿಯ ಮಿಲನದ ಸ್ಥಳ' ವೆಂದು ನಂಬುತ್ತಾರೆ.

ನಾವು ತಿಳಿದಂತೆ ಭೂಮಿಯು ಮೇಲೆ ಮೇಲೆ ಹೋಗುತ್ತಾ ಶಾಖವು ಒಂದೇ ಸಮನೆ ಇಳಿಯುವುದಿಲ್ಲ. ಕೆಳಮಟ್ಟದ ಗಾಳಿಯಲ್ಲಿ ಈ ಇಳಿತ ಎಂಟು ಮೈಲಿಗಳವರೆಗೂ ಒಂದೇ ಸಮನಿರುತ್ತದೆ. ಈ ಪ್ರದೇಶದಲ್ಲಿನ ಗಾಳಿಯು ಭೂಮಿಯು ಶಾಖದಿಂದ ಕಾಯುತ್ತಿರುತ್ತದೆ. ಸ್ಟ್ರಾಟೋ ಸ್ಫಿಯರ್‌ನಲ್ಲಿ ಸೊನ್ನೆಗಿಂತಲೂ 70 ಡಿಗ್ರಿ ಕಡಿಮೆ ಶಾಖವಿರುತ್ತದೆ. ನಂತರ ಅದು ನಿಧಾನವಾಗಿ ಏರಿ 32 ಮೈಲಿ ಎತ್ತರದಲ್ಲಿ ಸುಮಾರು 50 ಡಿಗ್ರಿಗಳಷ್ಟು ಶಾಖವನ್ನು ಹೊಂದಿರುತ್ತವೆ. ಓಜೋನ್ ಪದರವು ಸೂರ್ಯನಿಂದ ಬಂದ ಶಾಖವನ್ನು ಹೀರಿಕೊಳ್ಳುತ್ತದೆ. ಈ ಹಂತಕ್ಕೂ ಮೇಲೆ ಸುಮಾರು 50 ರಿಂದ 70 ಮೈಲಿಗಳವರೆಗೂ ಓಜೋನ್ ಇಲ್ಲದೆ ಶಾಖ ಮತ್ತೊಮ್ಮೆ ಇಳಿದು ಸುಮಾರು ಸೊನ್ನೆಗಿಂತಲೂ 120 ಡಿಗ್ರಿಗಳವರೆಗೆ ಕಡಿಮೆಯಾಗುತ್ತದೆ. ಪುನಃ ಎತ್ತರ ಹೆಚ್ಚಿದಂತೆ ಶಾಖ ಹೆಚ್ಚುತ್ತದೆ. ಇದಕ್ಕೆ ಕಾರಣ ಐಯಾನುಗಳು ನೀಲವರ್ಣಾತೀತ ಕಿರಣಗಳನ್ನು ಹೀರಿಕೊಳ್ಳುವುದೇ ಇರಬಹುದು. 375 ಮೈಲಿಗಳಲ್ಲಿ ಶಾಖವು 2400 ಡಿಗ್ರಿಗಳಿಗೆ ಏರುತ್ತದೆ. ಆದರೆ ಆ ಸ್ಥಳದಲ್ಲಿ ಆ ಶಾಖವು ಇಲ್ಲಿಯಂತೆ ಪರಿಣಾಮ ಉಂಟು ಮಾಡುವುದಿಲ್ಲ. ಏಕೆಂದರೆ ನಾವು ಅನುಭವಿಸುವ ಶಾಖವು ಪರಮಾಣುಗಳ ಚಲನೆಯಿಂದುಂಟಾಗುವ ಅನುಭವ. ಆ ಸ್ಥಳದಲ್ಲಿನ ಪರಮಾಣುಗಳ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ. ಇಲ್ಲಿ ನಾವು ಪರಮಾಣುಗಳ ಗತಿಯ ಮಿಲನ ಮತ್ತು ಅವುಗಳ ಸಂಖ್ಯೆಯಿಂದ ಶಾಖವನ್ನು ಅನುಭವಿಸುತ್ತೇವೆ ಭೂಮಿಯ ಮೇಲ್ಮೈನಲ್ಲಿ ದಶಲಕ್ಷಗಳಿಗೂ ಮೀರಿದ ಪರಮಾಣುಗಳ ಚಲನೆ ಮತ್ತು ಅವುಗಳ ಸಂಘಟ್ಟಿಸುವಿಕೆಯಿಂದಲೂ ಇಷ್ಟು ಶಾಖವನ್ನು ನಾವು ಸದಾ ಅನುಭವಿಸುತ್ತೇವೆ. ಆದರೆ ಅಂತರಿಕ್ಷದಲ್ಲಿ ಪರಮಾಣುಗಳ ಸಂಖ್ಯೆ ಬಹಳ ಕಡಿಮೆ.

ವಾತಾವರಣವು ಸೂರ್ಯನಿಂದ ಬರುವ ಕೆಲವು ಮಾರಕ ಕಿರಣಗಳನ್ನು ತಡೆಹಿಡಿದು ಪ್ರಾಣಿಗಳನ್ನು ಕಾಪಾಡುತ್ತವೆ. ಸೂರ್ಯನಿಂದ ಬರುವ ವಿದ್ಯುತ್ ಕಾಂತೀಯ ಕಿರಣವು ಕ್ಷ ಕಿರಣ, ಗಾಮಾ ಕಿರಣ, ಬೆಳಕಿನ ಕಿರಣ ರಕ್ತವರ್ಣಾತೀತ ಕಿರಣ ಮತ್ತು ಉದ್ದವಾದ ಶಾಖದ ಅಲೆಗಳನ್ನು ಹೊತ್ತು ತರುತ್ತದೆ. ಇವುಗಳಲ್ಲಿ ಬೆಳಕಿನ ಕಿರಣ ಮತ್ತು ನೀಲವರ್ಣಾತೀತ ಕಿರಣಗಳು ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ವಾತಾವರಣದ ಮೇಲ್ಭಾಗದಲ್ಲಿ ನಡೆಯುವ ಸೋಸುವಿಕೆಯಿಂದ 'ಕ್ಷ' ಮತ್ತು ನೀಲವರ್ಣಾತೀತ ಕಿರಣಗಳು ಭೂಮಿಗೆ ತಲುಪದೇ ಅಲ್ಲಿಯೇ ನಿಲ್ಲುತ್ತದೆ. ಆದರೂ

ಅತಿ ಸೂಕ್ಷ್ಮವಾದ ನೀಲವರ್ಣಾತೀತ ಕಿರಣಗಳು ತಲುಪಬಹುದಾಗಿದ್ದು ಅವುಗಳಿಂದ ನಮಗುಂಟಾಗುವ ತೊಂದರೆ ಕಡಿಮೆಯಾಗಿರುತ್ತದೆ. ಇಲ್ಲದೇ ಹೋದಲ್ಲಿ ಭೂಮಿಯ ಮೇಲೆ ಪ್ರಾಣಿ ಮತ್ತು ಸಸ್ಯ ವರ್ಗಗಳು ಬಾಳಲು ಸಾಧ್ಯವಿರುತ್ತಿರಲಿಲ್ಲ. ಈ ಕಿರಣಗಳಿಗೆ ತುತ್ತಾಗಿಯೇ ಬೇಸಿಗೆಯಲ್ಲಿ ಸೂರ್ಯನ ತಾಪಕ್ಕೆ ಕೆಲವು ಜನರು ಸಾಯುವುದು.

ಭೂ ಭಾಗದಲ್ಲಿ ನಾವು ಪಡೆಯುವ ಸೌರ ಶಕ್ತಿಯುತ ಬೆಳಕು ಮತ್ತು ರಕ್ತವರ್ಣಾತೀತ ಕಿರಣಗಳ ರೂಪದಲ್ಲಿರುತ್ತವೆ. ಇವುಗಳಲ್ಲಿ ಕೆಲವು ಭಾಗವು ವಾತಾವರಣದ ಮೇಲ್ಭಾಗದಲ್ಲಿರುವ ಪರಮಾಣುಗಳು ಮತ್ತು ನೀರಿನ ತುಂತುರು ಹಾಗೂ ಧೂಳಿನ ಕಿರಣಗಳಿಂದ ಚದುರಲ್ಪಡುತ್ತವೆ. ಕೆಳ ವಾತಾವರಣದಲ್ಲಿ ಪರಮಾಣುಗಳು ಸಾಂದ್ರವಾಗಿದ್ದು ಶಾಖವನ್ನು ನೇರವಾಗಿ ಹೀರಿಕೊಳ್ಳುತ್ತವೆ. ಈ ಭಾಗದಲ್ಲಿ ವಾತಾವರಣದ ಹೆಚ್ಚಿನ ಶಾಖವು ಶಾಖದಿಂದಿರುವ ಭೂಮಿಯ ಸಂಪರ್ಕದಿಂದ ಉಂಟಾಗಿರುತ್ತವೆ. ಭೂಮಿಯ ಮೇಲ್ಮೈನಿಂದ ಶಾಖಕಿರಣಗಳು ಪ್ರತಿಫಲನ ಹೊಂದುತ್ತವೆ. ಈ ಶಕ್ತಿಯ ಹೆಚ್ಚಿನ ಭಾಗವು ಶಿಲೆ ಮಣ್ಣು ಮತ್ತು ಸಸ್ಯ ವರ್ಗದಿಂದ ಹೀರಲ್ಪಡುತ್ತಿರುತ್ತದೆ.

ಒಂದು ರೀತಿಯ ರಕ್ಷಾ ಕವಚದಂತಿರುವ ವಾತಾವರಣದಿಂದಾಗಿ ಭೂಮಿಯು ತನ್ನಲ್ಲಿನ ಜೀವಕೋಟಿಗೆ ಬೇಕಾದಷ್ಟು ಶಾಖ ಒತ್ತಡಗಳನ್ನು ಪಡೆದಿರುವ ಸೌರ ಮಂಡಲದ ಏಕಮೇವ ಗ್ರಹವಾಗಿದೆ.

19ನೆಯ ಶತಮಾನದ ಐತಿಹಾಸಿಕಮತ್ತು ತೌಲನಿಕ ಭಾಷಾ ವಿಜ್ಞಾನ

ಲಿಂಗದೇವರು ಹಳೆಮನೆ

19 ನೆಯ ಶತಮಾನ ಐತಿಹಾಸಿಕ ಮತ್ತು ತೌಲನಿಕ ಭಾಷಾ ಅಧ್ಯಯನದ ದೃಷ್ಟಿಯಿಂದ ಸ್ವರ್ಣಯುಗವೆಂದು ಪರಿಗಣಿಸಲ್ಪಟ್ಟಿದೆ. ಕರಾರುವಾಕ್ಕಾಗಿ ಹೇಳುವುದಾದರೆ, ಆಧುನಿಕ ತೌಲನಿಕ ವಿಧಾನವು ಸರ್ ವಿಲಿಯಂ ಜೋನ್ಸ್ ಎಂಬ ಆಂಗ್ಲ ವಿದ್ವಾಂಸ 1786 ರಲ್ಲಿ 'ಬಂಗಾಳ್ ಏಷಿಯಾಟಿಕ್ ಸೊಸೈಟಿ' ಯಲ್ಲಿ ಮಾಡಿದ ಭಾಷಣದಿಂದ ಆರಂಭವಾಯಿತೆನ್ನಬಹುದು. ಆ ಭಾಷಣದಲ್ಲಿ ಅವನು ಸಂಸ್ಕೃತ, ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಧಾತುಗಳಲ್ಲಿ ಮತ್ತು ವ್ಯಾಕರಣ ವ್ಯವಸ್ಥೆಯಲ್ಲಿರುವ ಸಾದೃಶ್ಯವನ್ನು ಎತ್ತಿ ತೋರಿಸಿದನು. ಆದರೆ ಪ್ರಪ್ರಥಮ ವ್ಯವಸ್ಥಾಬದ್ಧವಾದ ಅಧ್ಯಯನ ನಡೆದದ್ದು 'ರಾಸ್‌ಮಸ್‌ರಾಸ್ಕ್' ಎಂಬ ಡೇನಿಷ್ ವಿದ್ವಾಂಸನಿಂದ. ರಾಸ್ಕ್ 1818 ರಲ್ಲಿ ತನ್ನ ಬಹುಮಾನಿತ ಪ್ರಬಂಧವಾದ "ಪ್ರಾಚೀನ ನಾರ್ಡಿಕ್ ಅಥವ ಐಸ್ಲೆಂಟಿಕ್ ಭಾಷೆಯ ಉಗಮ" ಎಂಬುದನ್ನು ಪ್ರಕಟಿಸಿದ. ಈ ಪ್ರಬಂಧದಲ್ಲಿ ರಾಸ್ಕ್ ಕೆಲವೇ ವಿವರಗಳನ್ನೋ ಅಥವ ಪದಗಳನ್ನೋ ಆಯ್ದುಕೊಂಡು ಅವುಗಳನ್ನು ಬೇರೆ ಭಾಷೆಗಳೊಂದಿಗೆ ಹೋಲಿಸದೆ, ಕ್ರಮಬದ್ಧವಾದ ಸೂಕ್ಷ್ಮ ವಿಶ್ಲೇಷಣೆಯನ್ನು ನಡೆಸಿದ್ದಾನೆ. ಅವನು ಪದಗಳ ಅನುರೂಪತೆ ಎಂಬುವುದು ಒಂದೇ ಮೂಲದಿಂದ ಅಥವ ಭಾಷಾ ಸಂಪರ್ಕದಿಂದ ಉಂಟಾದದ್ದಲ್ಲ ಎಂಬುದನ್ನು ತನ್ನ ಸಂಶೋಧನಾ ಅನುಭವದಿಂದ ಎತ್ತಿ ತೋರಿಸಿದ್ದಾನೆ. ಈ ರೀತಿಯ ಅನುರೂಪತೆ ಆಕಸ್ಮಿಕದಿಂದಾಗಲೀ, ಪರಭಾಷಾ ಸ್ವೀಕರಣದಿಂದಾಗಲೀ ಆಗಿರಬಹುದು. ಪ್ರತ್ಯಯ ಸ್ವೀಕರಣವಾಗಲೀ, ವ್ಯುತ್ಪತ್ತಿ ವಿಧಾನ ಸ್ವೀಕರಣವಾಗಲೀ ಭಾಷೆಯಲ್ಲಿ ಅಪರೂಪವಾಗಿ ಕಂಡುಬರುತ್ತದೆಂಬುದನ್ನು ಗಮನಿಸಿದ ರಾಸ್ಕ್ ಪದಗಳ ಅನುರೂಪತೆಯನ್ನು ಕಂಡುಕೊಳ್ಳಲು ಎರಡು ವಿಧಾನಗಳನ್ನು ಕೊಟ್ಟಿದ್ದಾನೆ. (1) ಭಾಷೆಗಳ ಮೂಲ ರೂಪವನ್ನು ಗಮನಿಸುವುದು. (2) ಅವುಗಳ ಶಾಬ್ದಿಕ ಅನುರೂಪತೆ (Sound Correspondance) ಯನ್ನು ಗಮನಿಸುವುದು.

ಐತಿಹಾಸಿಕ-ಜೈವಿಕ ಸಂಶೋಧನಾ ವಿಧಾನವನ್ನೇ ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ತೌಲನಿಕ ವ್ಯಾಕರಣವೊಂದನ್ನು ಜೇಕಬ್ ಗ್ರಿಮ್ (1785–1863) ಎಂಬ ಜರ್ಮನ್ ವಿದ್ವಾಂಸ ಮೊಟ್ಟಮೊದಲಿಗೆ 19ನೆಯ ಶತಮಾನದಲ್ಲಿ ಬರೆದನು. ಅವನು

ತನ್ನ ವ್ಯಾಕರಣದ ಮೊದಲನೆಯ ಸಂಪುಟದಲ್ಲಿ ಬೇರೆ ಬೇರೆ ಭಾಷೆಯ ಪದಗಳ ಪಟ್ಟಿಯನ್ನೂ, ಜರ್ಮನ್ ಮತ್ತು ಜರ್ಮನೇತರ (ಸಂಬಂಧಿತ) ಭಾಷೆಗಳ ಎರಡು ನಿಯತ ಧ್ವನಿ ಸಾದೃಶ್ಯ (Phonetic Correspondence) ವಿವರಣೆಯನ್ನೂ ಕೊಟ್ಟಿದ್ದಾನೆ. ಈ ನಿಯತ ಧ್ವನಿ ಸಾದೃಶ್ಯದ ವೈಚಿತ್ರ್ಯದ ಮೇಲೆ ಗ್ರಿಮ್ ಒಂದಾದ ಮೇಲೊಂದರಂತೆ ಹೇಳಿಕೆಗಳನ್ನು ಕೊಟ್ಟಿದ್ದಾನೆ. ಈ ಹೇಳಿಕೆಗಳೇ ಮುಂದೆ 'ಗ್ರಿಮ್‌ನ ಸಿದ್ಧಾಂತ' ಎಂಬ ಹೆಸರಿನಿಂದ ಪ್ರಸಿದ್ಧಿಯಾದವು. ಗ್ರಿಮ್‌ನ ಈ ಸಿದ್ಧಾಂತ ಜರ್ಮನ್ ಧ್ವನಿ ಸಾದೃಶ್ಯಕ್ಕಷ್ಟೇ ಸೀಮಿತವಾಗದೆ, ಜರ್ಮನ್ ಮತ್ತು ಇಂಡೋ ಯೂರೋಪಿಯನ್ ಭಾಷೆಗಳಿಗಿರುವ ಸಂಬಂಧವನ್ನು ತಿಳಿಸುತ್ತದೆ. ಈ ದೃಷ್ಟಿಯಲ್ಲಿ ಗ್ರಿಮ್, ರಾಸ್ಕನಿಗಿಂತಲೂ ಹೆಚ್ಚು ಪ್ರಗತಿಯನ್ನು ತೋರಿಸಿದ್ದಾನೆ. ಈ ಜರ್ಮನ್ ವಿದ್ವಾಂಸನ ಕೊಡುಗೆ ತನ್ನ ವಾದವನ್ನು ಮಂಡಿಸುವುದರಲ್ಲಿ ಇರುವುದಕ್ಕಿಂತ ಹೆಚ್ಚಾಗಿ, ಪ್ರಾಚೀನ ಇಂಡೋ-ಯೂರೋಪಿಯನ್‌ನಿಂದ ಪ್ರಾಚೀನ ಜರ್ಮನ್‌ಗೆ ಮತ್ತು Old High German ಗೆ ಇರುವ 'ವ್ಯಂಜನ ಪಲ್ಲಟ'ವನ್ನು ಸೂತ್ರಬದ್ಧವಾಗಿ ತಿಳಿಸುವುದರಲ್ಲಿ ಅಡಗಿದೆ. ಮೊದಲನೆಯ ಪಲ್ಲಟವನ್ನು ಅವನೇ ಪ್ರಥಮ ಧ್ವನಿ ಪಲ್ಲಟ (First Sound Shift) ಎಂದೂ, ಎರಡನೆಯದನ್ನು ದ್ವಿತೀಯ ಧ್ವನಿ ಪಲ್ಲಟ (Second Sound Shift) ಎಂದೂ ಕರೆದಿದ್ದಾನೆ. ಸರಳವಾಗಿ ಅವನ ಧ್ವನಿ ಪಲ್ಲಟ ತತ್ವವನ್ನು ಕೆಳಕಂಡಂತೆ ತೋರಿಸಬಹುದು.



ಇದರ ವಿವರಣ ರೂಪವನ್ನು ಕೆಳಗೆ ಕೊಡಲಾಗಿದೆ.

ಪ್ರಥಮ ಧ್ವನಿ ಪಲ್ಲಟ ಇಂಡೊ ಯೂರೋಪಿಯನ್‌ನಿಂದ ಪ್ರಾಚೀನ ಜರ್ಮನ್ ಭಾಷೆಗೆ :

ಇಂಡೊ ಯೂರೋಪಿಯನ್	T	M	A
ಪ್ರಾಚೀನ ಜರ್ಮನ್	A	T	M

ದ್ವಿತೀಯ ಧ್ವನಿ ಪಲ್ಲಟ ಪ್ರಾಚೀನ ಜರ್ಮನ್ ಭಾಷೆಯಿಂದ Old High German ಭಾಷೆಗೆ :

ಪ್ರಾಚೀನ ಜರ್ಮನ್	A	T	M
Old High German	M	A	T

T ಎಂದರೆ ಅಘೋಷ ಸ್ಪರ್ಶಗಳು (Voiceless stops)
A ,, ಅನುಘರ್ಷಗಳು (Affricates)
M ,, ಘೋಷ ಸ್ಪರ್ಶಗಳು (Voiced stops)

ಉದಾಹರಣೆಗಳು :

ಗ್ರೀಕ್ :	phrator	deka	thygater
ಗೋಥಿಕ್ :	bropar	taihum	dauhtar
Old High German :	bruoder	zehan	tohter.

ಗ್ರಿಮ್‌ನ ಈ 'ಧ್ವನಿ ಬದಲಾವಣೆ'ಯು ಸಿದ್ಧಾಂತ ಕೆಲವು ದಶಕಗಳ ಮೇಲೆ ವಿದ್ವಾಂಸರನ್ನು ಚಿಂತನೆಗೀಡುಮಾಡಿ "ಧ್ವನಿ ಸಿದ್ಧಾಂತಕ್ಕೆ ಅಪವಾದವಿಲ್ಲ"ಎಂಬ ಕ್ರಾಂತಿಕಾರಿ ಘೋಷಣೆಗೆ ದಾರಿ ಮಾಡಿಕೊಟ್ಟಿತು.

ಸಂಸ್ಕೃತ ಭಾಷೆಯ ಬಗೆಗಿದ್ದ ಹೆಚ್ಚಿನ ಆಸಕ್ತಿ ಮತ್ತು ಕುತೂಹಲ ವಿದ್ವಾಂಸರನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸಿ, ಆಳವಾದ ತೌಲನಿಕ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿತು. ಸ್ಪಷ್ಟವಾಗಿ ಹೇಳುವುದಾದರೆ ಇಂಡೊ ಯೂರೋಪಿಯನ್ ಭಾಷೆಯ ಬಗೆಗಿನ ತೌಲನಿಕ ಅಧ್ಯಯನ ಸಂಸ್ಕೃತ ಭಾಷೆಯ ಮುಖಾಂತರವೇ ಆರಂಭವಾಯಿತು. ಫ್ರಾನ್ಸ್ ಬಾಪ್ (1791–1867) ಎಂಬ ಜರ್ಮನ್ ಪ್ರೊಫೆಸರ್ ಸಂಸ್ಕೃತ, ಜೆಂಡ್, ಗ್ರೀಕ್, ಲ್ಯಾಟಿನ್, ಲಿಥೂಸಿಯನ್ ಗೋಥಿಕ್, ಜರ್ಮನ್, ಇಂಡಿಕ್ ಮತ್ತು ಇರಾನಿಯನ್ ಭಾಷೆಗಳ ಆಳವಾದ ಅಧ್ಯಯನ ನಡೆಸಿ ತೌಲನಿಕ ವ್ಯಾಕರಣವೊಂದನ್ನು ಬರೆದನು. ಬಾಪ್‌ನ ಮುಖ್ಯ ಆಸಕ್ತಿ ಇದ್ದುದು, 'ಆಕೃತಿ ವಿಜ್ಞಾನ' (Morphology)ದಲ್ಲಿ. ಇವನು ಮೊದಲು ಸಂಯುಕ್ತ ಪದಗಳನ್ನು ವಿಶ್ಲೇಷಿಸಿ ಪ್ರತ್ಯಯಗಳನ್ನು ಪ್ರಕೃತಿಯಿಂದ ಬೇರ್ಪಡಿಸಿದ ಮೇಲೆ ಅವುಗಳ ಮೂಲವನ್ನೂ, ಮೂಲಾರ್ಥವನ್ನೂ ಕಂಡುಹಿಡಿಯಲು ಪ್ರಯತ್ನಪಟ್ಟ.

19 ನೆಯ ಶತಮಾನದ ಅತ್ಯಂತ ಶ್ರೇಷ್ಠ ಪಂಡಿತನೆಂದರೆ ಆಗಸ್ಟ್‌ಶ್ಲೀಷರ್ (1821–68). ಭಾಷಾ ವಿಜ್ಞಾನಕ್ಕೆ ಇವನ ಮೂರು ಗಮನಾರ್ಹ ಕೊಡುಗೆಗಳೆಂದರೆ, (1) ಭಾಷಾ ಸಂಬಂಧ ಸಿದ್ಧಾಂತ. (2) ಮೂಲರೂಪವನ್ನು ಪುನರ್ ನಿರ್ಮಿಸುವ (re-construct) 'ತೌಲನಿಕ ವಿಧಾನ' ಸಿದ್ಧಾಂತ. (3) ಭಾಷಾ ವರ್ಗೀಕರಣ ವ್ಯವಸ್ಥೆ. ಒಂದೇ ಸಾದೃಶ್ಯವುಳ್ಳ ಎರಡು ಭಾಷೆಗಳನ್ನೇನಾದರೂ ಕಂಡರೆ, ಅವೆರಡೂ ಒಂದು ಕಾಲದಲ್ಲಿ ಒಂದೇ ಭಾಷೆಯಾಗಿದ್ದವೆಂದು ನಿರ್ಧರಿಸುತ್ತಿದ್ದ. ಈ ರೀತಿಯ ವಿಶ್ಲೇಷಣೆಯನ್ನು ಸೂಕ್ಷ್ಮವಾಗಿ ಮಾಡಿದ ಅನಂತರವೇ ಆತ ವೈಜ್ಞಾನಿಕ

ವಾಗಿ ಇನ್ನು ಪೃಥಕ್ಕರಿಸುವುದು ಸಾಧ್ಯವಿಲ್ಲವೆಂಬ ನಿರ್ಧಾರಕ್ಕೆ ಬರುತ್ತಿದ್ದ. ಇಷ್ಟೆಲ್ಲಾ ಹೆಣಗುವುದಕ್ಕೆ ಇವನಿಗಿದ್ದ ಧ್ಯೇಯುವೊಂದೆ : ಪ್ರಾಚೀನ ಭಾಷಾ ರೂಪವೊಂದನ್ನು ಕಂಡುಕೊಳ್ಳುವುದು. ಮುಖ್ಯವಾಗಿ ಇವನು ಇಂಡೊ ಯೂರೋಪಿಯನ್ ವಂಶ ವೃಕ್ಷವನ್ನು ಆಲೋಕಿಸಿ ಆ ಭಾಷೆಗಳನ್ನೆಲ್ಲಾ ಒಳಗೊಂಡಂತೆ ನಕಾಶೆಯೊಂದನ್ನು ತಯಾರಿಸಿದ. ಆದರೆ ಶ್ಲೀಷರನ ಈ ರೀತಿಯ ಅಧ್ಯಯನ ವಿಧಾನ ಬಹಳಷ್ಟು ಗಹನವಾದ ಆಕ್ಷೇಪಣೆಗಳಿಗೆ ದಾರಿಮಾಡಿಕೊಟ್ಟಿತು.

ಶ್ಲೀಷರನ 'ಭಾಷಾ ವರ್ಗೀಕರಣ' ಸಿದ್ಧಾಂತದ ಮೇಲೆ ಹೆಗಲ್‌ನ ತತ್ವಜ್ಞಾನ ನಿಚ್ಚಳವಾದ ಪ್ರಭಾವ ಬೀರಿದೆ. ಈತನ ಪ್ರಕಾರ ಭಾಷೆ 'ಅರ್ಥ ಮತ್ತು ರೂಪ' (Meaning and Form) ಗಳನ್ನು ಒಳಗೊಂಡದ್ದು. ಅರ್ಥವಿಲ್ಲದ ಭಾಷೆ ಇಲ್ಲದ್ದ ರಿಂದ, ಮೇಲೆ ಹೇಳಿದ ಭಾಷೆಯ ಎರಡು ಮೂಲ ಸಾಮಗ್ರಿಗಳು ಭಾಷೆಯಲ್ಲಿ ಮೂರು ವಿಧವಾದ ಭಾಗಗಳನ್ನು ಮಾಡಲು ಅನುವು ಮಾಡಿಕೊಟ್ಟಿವೆ. ಮೊದಲ ನೆಯ ಭಾಗ ಒಂದೇ ಮೊತ್ತದಲ್ಲಿ ಭಾಷಾ ಅರ್ಥವನ್ನು ಕೊಡುವ ವ್ಯಾಕರಣ ರೂಪ ವುಳ್ಳ ಪದಗಳನ್ನು ಒಳಗೊಂಡಿದೆ; ಎರಡನೆಯ ಭಾಗ ಭಾಷಾ ವಿಜ್ಞಾನದ ಅಂಶ ವಿರುವ ಪದ ಮತ್ತು ರಚನಾತ್ಮಕ ಅರ್ಥವುಳ್ಳ ದೇಶೀಯ ನುಡಿಗಟ್ಟನ್ನು ಒಳ ಗೊಂಡಿದೆ. ಆದರೆ ಇಲ್ಲಿ ರಚನಾತ್ಮಕ ವಿಧಾನ (formative process) ಬಹಳ ನಿಖರವಾಗಿರಬೇಕು. ರಚನಾತ್ಮಕ ಮೂಲ ಧಾತುಗಳು (formative elements) ನಿಯತವಾಗಿರಬೇಕು. ಇದನ್ನೇ ಇವನು 'ಸಂಯೋಗ ಪ್ರಧಾನ' (Agglutinative) ಎಂದು ಕರೆದನು. ಮೂರನೆಯ ಭಾಗದಲ್ಲಿನ ಭಾಷೆಗಳಲ್ಲಿ ಅರ್ಥ ಮತ್ತು ರೂಪಗಳು ಪ್ರಾತ್ಯಾಯಿಕವಾಗಿಯೋ ಅಥವಾ ಒಂದಕ್ಕೊಂದು ಕೊಂಡಿ ಹಾಕಿ ಕೊಂಡಂತೆಯೋ ಇವೆ. ಈ ರೀತಿಯ ಭಾಷೆಗಳಲ್ಲಿ ಬೇರೆ ಬೇರೆ ಪ್ರತ್ಯಯ ಗಳನ್ನು ಸೇರಿಸುವುದರಿಂದ ಬೇರೆ ಬೇರೆ ಅರ್ಥ ಸ್ಫುರಿಸುತ್ತದೆ. ಇದನ್ನು 'ಪ್ರತ್ಯಯ ಪ್ರಧಾನ' (inflexional) ಎಂದು ಕರೆದನು. ಶ್ಲೀಷರನ ಪ್ರಕಾರ ಮೊದಲನೆಯದು ವಿವಿಕ್ತಗುಣಗಳನ್ನು ಪಡೆದಿದ್ದು ಕ್ರಮೇಣ ಅದು "ಸಂಯೋಗ ಪ್ರಧಾನ" ಸ್ಥಿತಿಗೆ ಬಂತು. ಕಟ್ಟಕಡೆಗೆ ಮನುಷ್ಯನ ಬೌದ್ಧಿಕ ಶಕ್ತಿ ಮತ್ತು ಪ್ರಗತಿ ಯುತ ಪರಿಸರದಿಂದ ಅರ್ಥಕ್ಕೂ ರೂಪಕ್ಕೂ ಇರುವ ಸಂಬಂಧವನ್ನು ಕಂಡುಕೊಳ್ಳು ವಂತಾಯಿತು ; ಹೀಗೆ ಭಾಷೆ 'ಪ್ರತ್ಯಯ ಪ್ರಧಾನ' ಸ್ಥಿತಿಯನ್ನು ಮುಟ್ಟಿತು. ಎಷ್ಟೇ ವಿರೋಧ ಮತ್ತು ಆಗ್ರಹಗಳಿದ್ದರೂ ಶ್ಲೀಷರನ ಈ ಸಿದ್ಧಾಂತ ಮುಂದಿನ ಭಾಷಾ ವಿಜ್ಞಾನಿಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ಬಹಳಷ್ಟು ಭಾಷಾ ವಿಜ್ಞಾನಿ ಗಳು ಶ್ಲೀಷರನ ಇಂಡೊ ಯುರೋಪಿಯನ್ ಭಾಷೆಯ ಪುನರ್‌ರಚನೆಯನ್ನು ಅಂಗೀ ಕರಿಸಿದ್ದಾರಲ್ಲದೆ, ಇಂದೂ ಅವನ ಪರಿಷ್ಕೃತ ಸಿದ್ಧಾಂತವನ್ನು ತಮ್ಮ ಅಧ್ಯಯನಕ್ಕೆ ಅಳವಡಿಸಿಕೊಳ್ಳುತ್ತಿದ್ದಾರೆ.

ಆಗಸ್ಟ್ ಫಿಕ್ಸ್ (1833-1916) ಎಂಬುವನು ಮೊದಲ ಬಾರಿಗೆ 'ಇಂಡೊ ಯೂರೋಪಿಯನ್ ಭಾಷೆಗಳ ತೌಲನಿಕ ನಿಘಂಟು' ಒಂದನ್ನು ರಚಿಸಿದನು. ಈ ನಿಘಂಟಿನ ಪೂರ್ವಭಾವಿ ತಯಾರಿಕೆಗೆ ಅನುಕೂಲವಾಗಿ ಈತ ಶ್ಲೀಷರನ ಇಂಡೊ ಯೂರೋಪಿಯನ್ ವಂಶವೃಕ್ಷವನ್ನೂ, ಭಾಷಾ-ಬಾಂಧವ್ಯವನ್ನು ಕಂಡು ಹಿಡಿಯಲು ಅನುಸರಿಸುವ ವಿಧಾನಗಳನ್ನೂ ಬಳಸಿಕೊಂಡಿದ್ದಾನೆ.

ಫರ್ಡಿನೆಂಡ್ ಡೀ ಸಸೂರ್ (1879) ಎಂಬ ಸ್ವಿಸ್ ವಿದ್ವಾಂಸ 'ಇಂಡೊ ಯೂರೋಪಿಯನ್ ಭಾಷೆಗಳ ಪ್ರಾಚೀನ ಸ್ವರಗಳು: ಒಂದು ವಿವೇಚನೆ' ಎಂಬ ಪ್ರಬಂಧವನ್ನು ಪ್ರಕಟಿಸಿದನು. ಇಡೀ ಪ್ರಬಂಧವನ್ನು ಇಂಡೊ ಯೂರೋಪಿಯನ್ ಧ್ವನಿಶಾಸ್ತ್ರದ ಪುನರ್‌ರಚನೆಗಾಗಿಯೇ ಮೀಸಲಾಗಿಟ್ಟಿದ್ದಾನೆ. ಮುಖ್ಯವಾಗಿ 'ಎ' ಮತ್ತು 'ಒ' ಸ್ವರವ್ಯತ್ಯಯ (Ablaut)ದ ರಚನಾತ್ಮಕ ವಿಧಾನದಿಂದ ಸಸೂರ್ ಪ್ರಭಾವಿತನಾಗಿದ್ದನು. ಈ 'ಎ' ಮತ್ತು 'ಒ' ಸ್ವರಗಳು ಒಂದೆಡೆ ವ್ಯತ್ಯಯವಾದರೆ ಇನ್ನೊಂದೆಡೆ ಬಿದ್ದುಹೋಗುತ್ತಿದ್ದವು. ಅಷ್ಟೇ ಅಲ್ಲದೆ ಈ 'ಎ' 'ಒ' ಸ್ವರಗಳು 'ಇ' 'ಉ' ಸ್ವರಗಳೊಡನೆ ಸೇರಿ ಸಂಧ್ಯಕ್ಷರವಾಗಿಯೂ, ಘೋಷ ವರ್ಣಗಳಾದ ಮ್, ನ್, ಲ್ ಮತ್ತು ರ್ ಗಳೊಡನೆಯೂ ಸೇರುತ್ತಿದ್ದವು. ಈ ವಿಚಿತ್ರ ನಡವಳಿಕೆಯನ್ನು ಗಮನಿಸಿದ ಸಸೂರ್, ಧ್ವನಿನಾಳಯುಕ್ತ ಘೋಷ (Laryngeal Sonants) ಗಳ ಪ್ರಭಾವದಿಂದ ಹಿಂದಿನ ಪೂರ್ವ ಸ್ವರಗಳು (Preceeding front vowels) ಪಶ್ಚಸ್ವರಗಳಾಗಿ–'ಅ' ಅಥವಾ 'ಒ'–ಬದಲಾಗುತ್ತವೆಂದು ಹೇಳಿ, 'ಅ' ಮತ್ತು 'ಒ' ಎಂಬ ಎರಡು ಧ್ವನಿಮಾಗಳನ್ನೇ ಪುನರ್‌ರಚಿಸಿದ. ಒತ್ತಿನ (stress) ಕೊರತೆಯಿಂದ ಪೂರ್ವ ಸ್ವರಗಳು ಬಿದ್ದುಹೋಗುತ್ತವೆಂದೂ, ಆಗ ಧ್ವನಿನಾಳ ಉಚ್ಚಾರಣಾಭಿಮುಖವಾಗುತ್ತದೆಂದೂ ಸಸೂರ್ ತಿಳಿಸಿದ. ಇಂಡಿಕ್ ಭಾಷೆಯೊಂದನ್ನುಳಿದು ಬೇರೆಲ್ಲಾ ಇಂಡೊ ಯುರೋಪಿಯನ್ ಭಾಷೆಗಳಲ್ಲಿ ಈ ಧ್ವನಿನಾಳ–'ಅ' ಸ್ವರದ ವರ್ಣವಿನ್ಯಾಸವನ್ನು ಹೊಂದಿದೆ; ಆದರೆ ಇಂಡಿಕ್ ಭಾಷೆಯಲ್ಲಿ '–ಇ' ಇದರ ಪ್ರತಿನಿಧಿ. ಸಸೂರ್‌ನಿಂದ ರೂಪಿತಗೊಂಡ ಈ 'ಧ್ವನಿನಾಳ ಸಿದ್ಧಾಂತ' (Laryngeal theory) ಇಂದು ಇಂಡೊ-ಯೂರೋಪಿಯನ್ ತೌಲನಿಕ ಭಾಷಾ ಅಧ್ಯಯನಗಳ ವಲಯದಲ್ಲಿ ಬಹಳ ವಿವಾದಾಸ್ಪದವಾಗಿದೆ.

1875ರಲ್ಲಿ ಕಾರ್ಲ್ ವರ್ನರ್ ಎಂಬ ಡೇನಿಷ್ ವಿದ್ವಾಂಸ ಗ್ರಿಮ್‌ನ ಸಿದ್ಧಾಂತದ ಬಗೆಗಿನ ಅನಿಯತ ಸ್ಥಿತಿಯ ಅಪವಾದಗಳನ್ನು ತೋರಿಸಿಕೊಡುವುದರಲ್ಲಿ ಯಶಸ್ವಿಯಾದ. ಅವನು ತೋರಿಸಿದಂಥ ಮುಖ್ಯ ಸಂಗತಿಯೆಂದರೆ ಇಂಡೊ ಯೂರೋಪಿಯನ್ ಭಾಷೆಗಳಲ್ಲಿನ ಸ್ವರಾಘಾತ (Accent). ಸ್ವರಾಘಾತದ ಪ್ರಾಮುಖ್ಯತೆಯನ್ನು ಗಮನಿಸಿದ ಮೇಲೆ ವರ್ನರನು ತನ್ನ ಅಧ್ಯಯನಕ್ಕೆ ಅನುರೂಪತೆಯಿರುವ ಶಬ್ದಗಳನ್ನು ಮಾತ್ರ ಆರಿಸಿಕೊಳ್ಳದೆ, ಪದದಲ್ಲಿನ ವ್ಯಂಜನ ಗುಚ್ಛ

ಗಳನ್ನೂ, ಅಕ್ಷರಗಳನ್ನೂ ಮತ್ತು ಪದಕ್ಕೂ ಸ್ವರಾಘಾತಕ್ಕೂ ಇರುವ ಸಂಬಂಧ ವನ್ನೂ ವಿಶೇಷವಾಗಿ ವಿಶ್ಲೇಷಿಸಿದ. ಈ ವಿಶ್ಲೇಷಣೆಯಿಂದ ವರ್ನರ್ ಧ್ವನಿ ಯೆಂಬುದು ವ್ಯವಸ್ಥೆಯಲ್ಲಿನ ಒಂದು ವ್ಯವಸ್ಥಾಬದ್ಧ ಘಟಕವೆಂದು ಹೇಳಿ, 'ಧ್ವನಿ ಅನುರೂಪತೆ'ಯನ್ನು ವಿವರವಾಗಿ ತಿಳಿಸುವುದರಲ್ಲಿ ಯಶಸ್ವಿಯಾದ.

ಮುಂದೆ 'ನವ-ವೈಯಾಕರಣಿ'ಗಳ (Neo-Grammarians) ಪಂಥ ಆರಂಭ ವಾಯಿತು. 19ನೆಯ ಶತಮಾನದ ಭಾಷಾ ವಿಜ್ಞಾನಿಗಳು ರೂಪ ಸಾಮ್ಯವನ್ನು (Analogy) ಒಂದು ವಿಧಾನ ಮತ್ತು ವಿಚಾರ (thought and process) ವೆಂದು ಪರಿಗಣಿಸಿದರು. ಇವುಗಳಿಂದ ಮತ್ತು ಧ್ವನಿ ಬದಲಾವಣಾ ವಿಧಾನಗಳಿಂದ ಅವರು ಭಾಷೆಗಳ 'ಜೀವನ ರಹಸ್ಯ'ವನ್ನು ಕಂಡು ಹಿಡಿದರು. ಭಾಷೆಗಳನ್ನು ಒಂದು ರೀತಿಯ ಜೀವಿಗಳೆಂದು ಪರಿಗಣಿಸಿದರು. ಅವುಗಳು ತಮ್ಮದೇ ಆದ ಜೀವನ ನಿಯಮಗಳನ್ನು ಹೊಂದಿವೆ. ಆ ನಿಯಮಗಳೆಂದರೆ ಭಾಷೆಯ ಉನ್ನತಿ ಮತ್ತು ಅವನತಿ. ಭಾಷಾ ಪರಿವರ್ತನೆಗೆ ಮುಖ್ಯ ಕಾರಣವೆಂದರೆ 'ಧ್ವನಿ ನಿಯಮ' 'ಧ್ವನಿ ನಿಯಮ'ಗಳಿಗೆ ಅಪವಾದವಿಲ್ಲ ಎಂಬ ಉಕ್ತಿ ಆಗಲೆ ಪ್ರಸಿದ್ಧವಾಗಿತ್ತು. ಹಾಗೇನಾದರೂ ಪ್ರತ್ಯಕ್ಷ ಅಪವಾದ ಕಂಡು ಬಂದಲ್ಲಿ ಅದು ರೂಪಸಾಮ್ಯದಿಂದಾದ ಬದಲಾವಣೆ ಯೆಂದು ಪರಿಗಣಿಸಲ್ಪಟ್ಟಿತು. ರೂಪ ಸಾಮ್ಯವೆಂಬುದು 'ಜಾಗೃತ ಒತ್ತಡ'ವಿದ್ದಂತೆ; ಒಮ್ಮೊಮ್ಮೆ ಇದು ಧ್ವನಿ ಬದಲಾವಣೆಯ ಕ್ರಿಯೆಗೆ ತಡೆಯೊಡ್ಡಲೂಬಹುದು. ಈ ದಿಸೆಯಲ್ಲಿ ಗ್ರಾಸ್‌ಮನ್ ಮತ್ತು ವರ್ನರ್, ಗ್ರಿಮ್‌ನ ಸಿದ್ಧಾಂತಕ್ಕೆ ಅಪವಾದವನ್ನು ಸ್ಪಷ್ಟೀಕರಣಗೊಳಿಸುವುದರ ಮೂಲಕ 'ನವ ವೈಯಾಕರಣಿ' ಗಳಿಗೆ ಭಾಷಾ ಅಧ್ಯಯನಕ್ಕೇ ಹೊಸ ಶಾಸ್ತ್ರವೊಂದನ್ನು ಸ್ಥಾಪಿಸಬಲ್ಲೆವೆಂಬ ಆತ್ಮಪ್ರತ್ಯಯವನ್ನು ತಂದುಕೊಟ್ಟರು. ಭಾಷಾವಿಜ್ಞಾನಿಗಳಲ್ಲಿ ಉತ್ಸಾಹದ ವಾತಾವರಣ ಏರ್ಪಟ್ಟು ಜೀವ ವಿಜ್ಞಾನ ಮುಂತಾದ ಬೇರೆ ಶಾಸ್ತ್ರ ವಿಷಯಗಳಷ್ಟೇ 'ಭಾಷಾಶಾಸ್ತ್ರ' ಮುಂದುವರಿಯಬೇಕೆಂಬ ಛಲ ಅಂಕುರಿಸಿತು. ನಿಜಕ್ಕೂ ಭಾಷಾಶಾಸ್ತ್ರದಲ್ಲಿನ ಈ ಘಟ್ಟ ಐತಿಹಾಸಿಕವಾಗಿ ಪ್ರಮುಖವೆಂದು ಪರಿಗಣಿಸಲ್ಪಟ್ಟಿದೆ.

'ನವ ವೈಯಾಕರಣಿ'ಗಳ ಹೊಸ ಸಿದ್ಧಾಂತದಿಂದ ಸಿಡಿದೆದ್ದ ಕೆಲವು ಭಾಷಾ ವಿಜ್ಞಾನಿಗಳು ಧ್ವನಿ ಬದಲಾವಣೆಯಲ್ಲಾಗುವ ರೂಪಸಾಮ್ಯವನ್ನು ಊಹಿಸುವುದು ಸಾಧ್ಯವಿಲ್ಲವೆಂದೂ, ಈ ಒಂದು ಗುಣವೇ ಭಾಷಾ ಅಧ್ಯಯನವು ವಿಜ್ಞಾನಗಳ ಪಟ್ಟಿ ಯಲ್ಲಿ ಸೇರಲು ಅನರ್ಹವಾಗಿದೆಯೆಂದೂ ಉಗ್ರವಾಗಿ ವಾದಿಸಿದರು.

ಈ ಶತಮಾನದ ವಿದ್ವಾಂಸರಲ್ಲಿ ಪರಸ್ಪರ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ವಿವರಣಾತ್ಮಕ ಭಾಷಾಶಾಸ್ತ್ರದ ಕ್ಷೇತ್ರದಲ್ಲಿ ಅದ್ಭುತ ಪ್ರಗತಿ ಉಂಟಾಯಿತು. ಈ ನಿಟ್ಟಿನಲ್ಲಿ ಸಂಸ್ಕೃತ, ಲ್ಯಾಟಿನ್, ಗ್ರೀಕ್, ಪರ್ಶಿಯನ್ ಮತ್ತು ಜರ್ಮನ್

ಭಾಷೆಗಳ ಕೃದ್ವ್ಯವಸ್ಥೆ (Verbal system) ಗಳ ಸಂಶೋಧನೆ ಮತ್ತು ವ್ಯವಸ್ಥಾಬದ್ಧ ತೌಲನಿಕ ಅಧ್ಯಯನ (ಬಾಪ್ 1816); ಜರ್ಮನ್ ಭಾಷಾ ಬಾಂಧವ್ಯಗಳ ಸಂಶೋಧನೆ (ರಾಸ್ಕ್ 1818 ಮತ್ತು ಗ್ರಿಮ್ 1819); ಇಂಡೊ ಯುರೋಪಿಯನ್ ಭಾಷೆಗಳಲ್ಲಿ ಶಬ್ದ ನಿಷ್ಪತ್ತಿ ಸಂಶೋಧನೆ (ಪಾಟ್); ಇಂಡೊ ಯುರೋಪಿಯನ್ ಭಾಷೆಗಳ ತುಲನಾತ್ಮಕ ವ್ಯಾಕರಣ (ಶ್ಲೀಷರ್ 1861, ಬ್ರೂಗ್‌ಮನ್ 1866); ಸಸೂರ್ ಮತ್ತು ವರ್ನರರ ಸಂಶೋಧನೆಗಳು; ಕೆಲವು ವಿದ್ವಾಂಸರಿಂದ ನಡೆದ ಸೆಲ್ಟಿಕ್, ರೋಮನ್ ಮತ್ತು ಸ್ಲೇವಿಕ್ ಭಾಷೆಗಳ ವಿವರಣಾತ್ಮಕ ವ್ಯಾಕರಣಗಳನ್ನು ಒಂದು ಮೊತ್ತವಾಗಿಯೂ, ಧ್ವನಿ ಉಚ್ಚಾರಣೆಯುಲ್ಲಾದ ವ್ಯವಸ್ಥಾಬದ್ಧ ಪ್ರಗತಿಯನ್ನು ಇನ್ನೊಂದು ಮೊತ್ತವಾಗಿಯೂ ಗುರುತಿಸಬಹುದು.

19ನೆಯ ಶತಮಾನದಲ್ಲಿ ನಡೆದ ಈ ಭಾಷಾ ಚಟುವಟಿಕೆಗಳಿಂದ ದಕ್ಕಿದ ಫಲಿತಾಂಶ 20ನೆಯ ಶತಮಾನದ ಭಾಷಾ ವಿಜ್ಞಾನಿಗಳಿಗೆ ಭಾಷಾಮೂಲಗಳನ್ನು ಕರಾರುವಾಕ್ಕಾಗಿ ತಿಳಿಯಲು, ಭಾಷಾ ಬಾಂಧವ್ಯವನ್ನು ವಿವರಿಸಲು ಸಹಾಯವಾಯಿತು.

ಗ್ರಂಥಋಣ

1. Perspectives in Linguistics : John T. Watermann
2. Introduction to General Linguistics : Francis P Dinneen

ಪುರ ವರ್ಣನ

ಎಚ್. ಎಸ್. ವೆಂಕಟೇಶಮೂರ್ತಿ

ಮೊನ್ನೆ ಪತ್ರಿಕೆಯೊಂದರಲ್ಲಿ ಅಚ್ಚಾದಂತೆ
ನಮ್ಮೂರು ಒಂದು ಸುಂದರ ಗ್ರಾಮ ಲಾಲಿಸಿ
ತಗ್ಗಿಗಿಳಿಯದೆ ಎತ್ತರಕ್ಕೆ (ಹೊಗೆ) ಏರುವುದು
ನೀರು ಹೊಯ್ದರೆ ಮಲ್ಲಿಗೆ ಮೊಗ್ಗು ಅರಳುವುದು !

ಹಚ್ಚ ಎಂದರೆ ನಾಯಿ ಬಗುಳುವುದು ಲೊಚಗುಟ್ಟಿದರೆ
ಬಾಲ ಗುಂಡಾಡುವುದು ಮೈನೆರೆತ ಹುಡುಗಿಯರ
ಬಾಡಿ ಬಿಗಿಯಾಗುವುದು ಹೇನು ಹೆಕ್ಕಲು ಬಿಚ್ಚಿ
ಮಾರುದ್ದ ಮುಡಿಯುಂಟು ಲಂಗಕ್ಕೆ ಗೆಜ್ಜೆಗಳ

ಹಚ್ಚಿ ಧ್ವನಿಸುವುದುಂಟು ಕೈಮೇಲೆ ಗೌರಿಮುಡಿ
ಹಚ್ಚೆ ಹೊಯ್ಸಿದ್ದುಂಟು ನಮ್ಮಜ್ಜಿಗಳು ಅದನು
ಸುಕ್ಕು ಮುಚ್ಚುವುದೀಗ ಹೆಣವ ಹೂಳುವರಿಲ್ಲ
ಎದ್ದು ಬಂದಾವೆಂದು ಮೇಲೆ ಮುಳ್ಳಿನ ಕೊಂಪೆ
ಕಲ್ಲು ಚಪ್ಪಡಿ ಎಳೆದು ಹುಗ್ಗಿ ಮಾಡುವುದೂ ನಿಜ

ನಿಮ್ಮ ಕಡೆ ಹೇಗುಂಟೊ ಗೊತ್ತಿಲ್ಲ ನಮ್ಮ ಕಡೆ
ಗಂಡ ಹೆಂಡಿರ ನಡುವೆ ಪಿಳ್ಳೆಗಳು ಅಡ್ಡಾಗಿ
ಉಚ್ಚೆ ಹೊಯ್ಯುವುದುಂಟು ಹಗಲು ಹಾಸಿಗೆಯಲ್ಲಿ
ಚಿತ್ರವಾಗುವುದುಂಟು ಮೇಲೆ ಆಕಾಶಕ್ಕೆ

ಎತ್ತಿದರೆ ತಲೆ ಅಬ್ಬ ಎಂಥ ವೈಭವ ಅಲ್ಲಿ
ತಿಳಿಯಾದ ನೀಲಿ ಹಾರುವ ಮೋಡ ತೇಲುವ ಹಕ್ಕಿ
ರಾತ್ರಿ ಅರಳುವ ಅಸಂಖ್ಯಾತ ನಕ್ಷತ್ರಗಳು
ಹತ್ತು ಹೆಜ್ಜೆಗೆ ಮುಗ್ಗರಿಸಿ ಮೂರುರುಳಾಗಿ

ದಿಂಡು ಗೆಡಿದಿರೊ ಒಂದು ಶರಣಾರ್ತಿ ದೇವರಿಗೆ
ರಂಗಪ್ಪ ಮಾಸ್ತೆಮ್ಮ ಕೆರೆ ಕೋಡಿ ಕೆಂಚಮ್ಮ
ದೂರದಲ್ಲಿ ಬೈಲು ಬಸವ, ಮರೆತಿದ್ದೆ
ಮರದಲ್ಲಿ ಕೆತ್ತಿಟ್ಟ ಕೊಲ್ಲಾಪುರದ ಲಕ್ಷ್ಮಿ

ಕೊಲ್ಲಾಪುರದ ಲಕ್ಷ್ಮಿ ಇಲ್ಯಾಕೆ ಬಂದಳೋ
ಮಾರಿ ಹಬ್ಬದಲ್ಲೆಷ್ಟು ಕೋಣಗಳ ತಿಂದಳೋ

* *

ಬಸ್ಸಿಳಿದು ನೇರ ಸಾವಿರ ಹೆಜ್ಜೆ ಮುಂದೆ ಘ
ಕ್ಕನೆ ಎಡಕ್ಕೆ, ಕೆಸರಿನ ಹಾವು. ಸ್ವಲ್ಪ ಸ
ರ್ತನ...ರೆಕ್ಕೆ ಬಡಿತ...ನೇಗಿಲು ಗಾಡಿ ಎತ್ತುಗಳು
ಅಲ್ಲಲ್ಲಿ ಬಲ ಎಡಾ ಎಡ ಬಲಾ ಬಲ ಎಡಃ

ವಟ್ಟಾಗಿ ಸಾಗುವುವು ನಮ್ಮೂರ ಬೀದಿಗಳು
ಎರಡೂ ಪಕ್ಕ ಚರಂಡಿ ಅಲ್ಲಲ್ಲಿ ಅಣೆಕಟ್ಟೆ
ಮಲೆತು ನಾರುವ ಕೊಚ್ಚೆ ಪಚ್ಚನೆಯ ಜೊಂಡುಗಳು
ಅಲ್ಲಿ ಹೇಲುವ ಮಕ್ಕಳ ಸಾಲು ಕುಂಡೆಗಳು

ಮುಂದೆ ಗೋಲಿಗೆ ಪನ್ನ ನಿಮಿರು ಚಿನ್ನಿಗೆ ಬದ್ದ
ಅಲ್ಲಲ್ಲಿ ಓಡಾಡುವಂಥ ಕಾರಂಜಿಗಳು
ಬೆರಳ ಪಿಚಕಾರಿಗಳು ಚಿತ್ರಮಯ ದಾರಿಗಳು
ಕೊಡಪಾನ ಟೊಂಕದಲಿ ಹೊತ್ತಂಥ ನಾರಿಗಳು

ಅವರ ಪಟ್ಟಾಪಟ್ಟಿ ಬೆವರಿಟ್ಟ ಸೀರೆಗಳು
ತೊಯ್ದು ತೆಗವಿನ ತೊಡೆ ಜೋಲಿ ಹಿಡಿಯುವ ನಡೆ
ತುಂಬಿ ತೊನೆಯುವ ಮೊಲೆ ಹೊತ್ತಿಸುವ ಕಿಚ್ಚುಗಳು
ಕೋಟೆ ಆಚೆಗೆ ಅಗಳು ಅಲ್ಲಿ ಮಲೆಯುವ ನೀರು

ಒಟಗುಡುವ ಕಪ್ಪೆಗಳು ಹದ್ದುಗಳು ಕಾಗೆಗಳು
ನೆಗೆದು ಬಿದ್ದಿರುವೊಂದು ದಿಕ್ಕೆಟ್ಟ ನಾಯಿಯ ತೆರಕೊಂಡ ಬಾಯಿಯ

ಒಳಹೊಕ್ಕು ಹೊರಬರುವ ನೊಣಗಳೋ ನೊಣಗಳು
ವಾಕರಿಸಿ ಮುನ್ನಡೆವ ಜನಗಳೋ ಜನಗಳು

* *

ಶೆಟ್ಟಿಯಂಗಡಿಯಲ್ಲಿ ಬೆವರಿ ನಾರುವ ಬೆನ್ನ
ಅವನ ಮಿರಿಮಿರಿ ಬಣ್ಣ ಅವನ ಪಿಳಿಪಿಳಿ ಕಣ್ಣ
ಕೊನೆಗೆ ಕಟ್ಟಿದ ಪಿಸುರ ನೋಡಬೇಕು
ಅಲ್ಲಿ ಹೊಗೆಗಳ ಕನಸು ವರ್ತುಲಗಳು

ಊದುಗೊಳವೆಯು ಶಂಖ ಬಾಣಲಿಯು ತಳಮಳ
ಬೀಡಿ ಹೊಗೆ ಬಿಡುವ ಬಗೆ ಹಲವು ಹನ್ನೊಂದು ನಗೆ
ಒಳಗೆ ಮನೆ ಮನೆಯಲ್ಲಿ ಮೆತ್ತನೆಯ ಮೈಗಳ
ರಾತ್ರಿ ಅಟ್ಟದ ಮೇಲೆ ಧಿಮ್ಮಿಥಕ ಥೈಗಳ

ಬೆಳಗು ಅಗಳಿನ ಆಚೆ ನಿರ್ಲಜ್ಜ ಬೈಗಳ
ಹಾಡು ಹಗಲಲ್ಲಿ ಬೋಡಜ್ಜಿಗಳ ಸುಯ್ಗಳ
ಗೆಜ್ಜೆವಸ್ತ್ರದ ಹೊಸೆತ ಶಾಸ್ತ್ರಿಗಳ ಕರಿಬೇವು
ತಮ್ಮ ಪಿತ್ತಲ ಪಾಳುಗೋಡೆ ಬರಿಸುವುದೆಂಬ

ಶಂಕೆಗಳ ಫಲವಾಗಿ ಅಂಕೆಗಳ ಫಲವಾಗಿ
ಭುಗಿಲೆಂಬ ಕಿಚ್ಚುಗಳ ಊರೆ ಹೊತ್ತುರಿವಂಥ
ಪಾರ್ಟಿಗಳ ಕಾರ್ಯಗಳ ಲಾಟಿ ಕೋಲಾಟಗಳ
ಕೋರ್ಟಿನೋಡಾಟಗಳ ಕೊನೆಯಿರದ ಕಾಟಗಳ

ಸಿರಿವಂತರೊಳಮನೆಯ ಸಾಫಾದ ಕಾಟುಗಳ
ಅವರ ಹಚ್ಚನೆ ಹೊಟ್ಟೆ ಬೆಮರಿಸುವ ಕೋಟುಗಳ
ಒಳಗಿರುವ ನೋಟುಗಳ ಫಲವೇನು ಗುರುವೆ ?
ಸಮದರ್ಶಿ ಒಳಗೊಳಗೆ ಯಾರ ಕಡೆಗಿರುವೆ ?

* *

ಊರ ಹೊರಗಿದೆ ಕೆರೆ ಆಸುಪಾಸಲ್ಲಿ ಅದು
ಬಲು ದೊಡ್ಡದೈ ! ತುಂಬಿ ತುಳುಕುವುದು ಮಳೆಗಾಲ

ಬತ್ತಿ ಬರಡಾಗುವುದು ಬಿರಿದು ಬೇಸಗೆಯಲ್ಲಿ
ಒಣಗುವುವು ಫಸಲುಗಳು ಶಾಸ್ತ್ರಿಗಳ ಮನೆಯಲ್ಲಿ

ಬೇರಿಳಿದ ಅಂಡಿಗರು ಅಂಗೈಯ ಹೊಲದಲ್ಲೆ
ಬೇಸಾಯ ಮಾಡುವರು ಬೆರಳುಗಳ ತುದಿಯಲ್ಲೆ
ಎಲೆಯೊಡೆದು ಗಿಡಬೆಳೆದು ಚಾಪೆಯುಡಿ ಫಲಿಸುವುದು
ಮುದ್ದೆಗಳು ಸೆಡವಾಗಿ ಹೆಂಡಿರಿಗೆ ರೇಗುವುದು

ಅತ್ತ ದೇವಾಲಯದ ಪೌಳಿಯಲಿ ಬಾಲಕರು
ಗಡ್ಡ ಶುರುವಾದವರು ಹದ ಬಿಸಿಲ ಕಾಯುವರು
ಹಾಡು ಹಗಲಲ್ಲೇನೆ ಕಂಭಗಳ ಹಾಯುವರು
ಕೆನೆಯುವರು ಬಗುಳುವರು ಲೊಚಗುಟ್ಟಿ ಸಾಯುವರು

ಬಲ್ಲಿರಾ ನಾಳೆ ಇವರೇ ಊರ ಹಿರಿಯರು
ಹಳ್ಳಿಯ ಸಮಸ್ತರು ನಮ್ಮೂರ ರಸಿಕರು
ಗೌಡರು ಪಟೇಲರು ಶೆಟ್ಟಿ ಸವಕಾರರು
ಪಂಚರು ಪ್ಯಾಂಟರು ಪೈಜಾಮ ಜುಬ್ಬರು
ಹೂಸಿದರೆ ಗಬ್ಬರು......

ತನ್ಮಧ್ಯೆ......

ಕಕ್ಕಸಿನ ಆಚೆ ಉಪ್ಪೆಯ ಮೆಳೆಯಲ್ಲೊಂದು ಬ
ಣ್ಣದ ಮುಷ್ಟಿಯಲ್ಲಿ ಜಿನುಗುವ ನಾಡ
ಕಾದ ಕಬ್ಬಿಣವನ್ನು ಕಮ್ಮಾರ ತದ್ದಾನ ತಾಳ
ಥಳಥಳ ಕೆಚ್ಚನೆ ಚಿಗುರು ಹೊಲದಲ್ಲಿ

ಉತ್ತ ಸಾಲುಗಳಲ್ಲಿ ಆಸೆಗಳು ಅತ್ತ ಊ
ರಾಚೆ ಎಲ ಎಲಾ ಆಕಾಶ ಬೀಸುವ ಗಾಳಿ
ಸ್ವಲ್ಪ ಛಳಿ...... ಹುಲ್ಲು ಬಣವೆಯ ಹಿಂದೆ
ಬೆಚ್ಚನೆಯ ಉಸಿರಾಟ......ಇಷ್ಟು ಸಾಕು.

ಮುಪ್ಪಿನಯ್ಯನ ಆಚರಣೆಯ ಸಂಬಂಧದ ವಚನಗಳು – ಒಂದು ಪರಿಚಯ

ಎಸ್. ಶಿವಣ್ಣ

ಆಚರಣೆಯ ಸಂಬಂಧದ ವಚನಗಳ ಸಂಕಲನಕಾರ ಮುಪ್ಪಿನಯ್ಯ. ಸಂಕಲನದ ಆದಿ, ಅಂತ್ಯಗಳಲ್ಲಿ ಬರುವ ಹೆಸರನ್ನು ಬಿಟ್ಟರೆ ಕೃತಿಕಾರನ ಬಗೆಗೆ ಮತ್ತಾವ ಸಂಗತಿಯು ತಿಳಿದುಬರುವುದಿಲ್ಲ. 'ಕರ್ಣಾಟಕ ಕವಿ ಚರಿತೆ'ಕಾರರಾದ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು 'ಕವಿ ಚರಿತೆ'ಯ ದ್ವಿತೀಯ ಸಂಪುಟದಲ್ಲಿ ಮುಪ್ಪಿನಯ್ಯನ ಕಾಲವನ್ನು ಸು. 1700 ಎಂದಿರುವರು. (ಪುಟ. 555) ಈತನ ಸಂಕಲನದಲ್ಲಿ 66 ವಚನಕಾರರು ಹಾಗೂ ವಚನಕಾರ್ತಿಯರ 275 ವಚನಗಳಿವೆ. (ವಿವರಗಳಿಗೆ ಅನುಬಂಧ ನೋಡಿ)

ಇಲ್ಲಿನ ವಚನಗಳಲ್ಲಿ ಬಸವಪೂರ್ವ ಯುಗದ ವಚನಕಾರರಾದ ಜೇಡರ ದಾಸಿಮಯ್ಯ, ಸಕಲೇಶ ಮಾದರಸರ ವಚನಗಳಿವೆ. ಬಸವಾದಿಗಳ ಹಾಗೂ ಅವರ ಸಮಕಾಲೀನರ ವಚನಗಳು ವಿಪುಲವಾಗಿವೆ. ಬಸವೋತ್ತರ ಕಾಲದ, ಅಂದರೆ ಸುಮಾರು ಹದಿನೈದು ಮತ್ತು ಹದಿನಾರನೆಯ ಶತಮಾನದ ಸಂಕ್ರಮಣ ಕಾಲದಲ್ಲಿ ಜೀವಿಸಿದ್ದ ತೋಂಟದ ಸಿದ್ಧಲಿಂಗಯತಿ, ಸ್ವತಂತ್ರ ಸಿದ್ಧಲಿಂಗೇಶ್ವರ, ಸುತ್ತೂರು ಮಠದ ಘನಲಿಂಗದೇವರ ವಚನಗಳು ಇಲ್ಲಿ ಸಮಾವೇಶಗೊಂಡಿವೆ.

ಈ ಸಂಕಲನದಲ್ಲಿ ಕವಿ ಚರಿತೆಕಾರರಿಗೆ ದೊರೆಯದ ಈ ಕೆಳಗಿನ 5 ಹೊಸ ವಚನಾಂಕಿತಗಳಿವೆ.

1. ಆತುರ ವೈರಿ ಮಲ್ಲೇಶ್ವರ
2. ಏಕೋರಾಮೇಶ್ವರಲಿಂಗ
3. ಕಲಹಪ್ರಿಯ ಕಂಜಳಧರ ರಾಮನಾಥ
4. ಘನ ಗುರು ಸೋಮನಾಥ ಲಿಂಗ
5. ಮಹಾಘನ ಸೋಮೇಶ್ವರಾ

ಅನುಬಂಧ

ಕ್ರಮಸಂಖ್ಯೆ	ವಚನಾಂಕಿತ	ವಚನಕಾರ	ಕಾಲ	ವಚನ ಸಂಖ್ಯೆ
1	ಅರ್ಕೇಶ್ವರಲಿಂಗ	ಮಧುವಯ್ಯ	1160	9
2	ಅಮಲೇಶ್ವರಲಿಂಗ	ಆಯ್ದಕ್ಕಿ ಮಾರಯ್ಯ	1160	3
3	ಅಲೇಖನಾಥ ಶೂನ್ಯಕಲ್ಲಿನೊಳಗಿದ್ದು	ಭಂಡಾರಿ ಶಾಂತರಸ	1160	1
4	ಅಂಬಿಗ ಚೌಡಯ್ಯ	ಅಂಬಿಗರ ಚವುಡಯ್ಯ	1160	17
5	ಆತುರ ವೈರಿ ಮಲ್ಲೇಶ್ವರ	?	?	1
6	ಆತುರ ವೈರಿ ಮಾರೇಶ್ವರ	ನಗೆಯಮಾರಿ ತಂದೆ	1160	1
7	ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ	ಶಿವಲೆಂಕ ಮಂಚಣ್ಣ	1160	8
8	ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ	ಉರಿಲಿಂಗ ಪೆದ್ದಿ	1180	3
9	ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ	ರಾಣಿ ಮಹಾದೇವಿ	1160	3
10	ಏಕೋ ರಾಮೇಶ್ವರ ಲಿಂಗ	?	?	1
11	ಏಣಾಂಕಧರ ಸೋಮೇಶ್ವರ	ಬಿಬ್ಬಿ ಬಾಚಯ್ಯ	1150	2
12	ಐಘಟದೂರ ರಾಮೇಶ್ವರ ಲಿಂಗ	ಮೇಜಿ³ಮಿಂಡಯ್ಯ	1100	8
13	ಐಘಟೇಶ್ವರ ಲಿಂಗ	ಸತ್ತಿಗೆಯ ಕಾಯಕದ ಮಾರಿ ತಂದೆ	1165	1
14	ಕದಂಬ ಲಿಂಗ	ಕಂಭದ ಮಾರಿತಂದೆ	1165	1
15	ಕಪಿಲ ಸಿದ್ಧಮಲ್ಲೇಶ	ಸಿದ್ಧರಾಮ	1160	2
16	ಕಲಹಪ್ರಿಯ ಕಂಜಳಧರ ರಾಮನಾಥ			1
17	ಕಲಿದೇವರ ದೇವ	ಮಡಿವಾಳ ಮಾಚಯ್ಯ	1160	2

18	ಕಾಮಧೂಮ ಧೂಳೇಶ್ವರ	ಮಾದರ ದೂಳಯ್ಯ	1160	4
19	ಕಾಲಾಂತಕ ಭೀಮೇಶ್ವರ ಲಿಂಗ	ಡಕ್ಕೆಯ ಬೊಮ್ಮಣ್ಣ	1160	3
20	ಕೂಡಲ ಚೆನ್ನಸಂಗಮದೇವಾ	ಚೆನ್ನಬಸವ	1160	30
21	ಕೂಡಲ ಸಂಗಮದೇವಾ	ಬಸವ	1160	12
22	ಗುಡಿವೊಡೆಯ ಗುಮ್ಮಟನಾಥನ ಅಗಮ್ಯೇಶ್ವರ ಲಿಂಗ	ಮನುಮುನಿ ಗುಮ್ಮಟದೇವ	1160	3
23	ಗೋಪತಿನಾಥ ವಿಶ್ವೇಶ್ವರ ಲಿಂಗ	ತುರುಗಾಹಿ ರಾಮಣ್ಣ	1160	1
24	ಗೋಹೇಶ್ವರಾ	ಪ್ರಭುದೇವ	1160	23
25	ಘನಗುರು ಸೋಮನಾಥ ಲಿಂಗ	?	?	1
26	ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ	ಘನ ಲಿಂಗದೇವ	1500	1
27	ಚೆನ್ನಬಸವಣ್ಣ ಪ್ರಿಯ ಕಮಳೇಶ್ವರ ಲಿಂಗ	ಕನ್ನಡಿ ಕಾಯಕದ ಅಮ್ಮಿದೇವಯ್ಯ	1160	1
28	ಚೆನ್ನಬಸವಣ್ಣ ಪ್ರಿಯ ಭೋಗ ಮಲ್ಲಿಕಾರ್ಜುನ ಲಿಂಗ	ಪ್ರಸಾದಿ ಭೋಗಣ್ಣ	1160	6
29	ಚೆನ್ನಮಲ್ಲಿಕಾರ್ಜುನಾ	ಮಹಾದೇವಿಯಕ್ಕ	1160	9
30	ಜಾಂಬೇಶ್ವರ	ರಾಯಸದ ಮಂಚಣ್ಣ	1160	1
31	ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದು ಸತ್ಯವೆನ್ನಿರಣ್ಣಾ	ಗಾವುದಿ ಮಾಚಯ್ಯ	1160	1
32	ದಸರೇಶ್ವರ ಲಿಂಗ	ದಸರಯ್ಯ	1160	1
33	ನಂದಗೋಪಿಯ ಕಂದ ಪ್ರಿಯ ನಿಸ್ಸಂಗ ಲಿಂಗ ರಾಮನಾಥ	?	?	1
34	ನಾರಾಯಣ ಪ್ರಿಯ ರಾಮನಾಥ	ಗುಪ್ತ ಮಂಚಣ್ಣ	1160	4
35	ನಾಸ್ತಿನಾಥ	ಗೊಗ್ಗವ್ವೆ	1160	1
36	ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ	ಸ್ವತಂತ್ರ ಸಿದ್ಧಲಿಂಗೇಶ್ವರ	1500	7
37	ನಿಷ್ಕಳಂಕ ಮಲ್ಲಿಕಾರ್ಜುನಾ	ಮೋಳಿಗೆ ಮಾರಯ್ಯ	1160	18
38	ನಿಃಕಳಂಕ ಕೂಡಲ ಚೆನ್ನಸಂಗಮದೇವಾ	ಹಡಪದ ರೇಚಣ್ಣ	1160	1
39	ಪುಣ್ಯಾರಣ್ಯ ದಹನ ಭೀಮೇಶ್ವರ ಲಿಂಗಾ	ಕೋಲ ಶಾಂತಯ್ಯ	1160	3

ಕ್ರಮಸಂಖ್ಯೆ	ವಚನಾಂಕಿತ	ವಚನಕಾರ	ಕಾಲ	ಸಂಖ್ಯೆ
40	ಬಸವಣ್ಣಪ್ರಿಯ ಚೆನ್ನಸಂಗಯ್ಯ	ಅಕ್ಕ ನಾಗಮ್ಮ	1160	1
41	ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರ ಲಿಂಗಾ	ಬಾಚಿ ಕಾಯಕದ ಬಸವಪ್ಪ	1160	2
42	ಬಂಕೇಶ್ವರಲಿಂಗ	ಸುಂಕದ ಬಂಕಣ್ಣ	1160	2
43	ಮಕರಧ್ವಜ ವೈರಿ ಮಾರೇಶ್ವರ	ಕನ್ನದ ಮಾರಿತಂದೆ	1160	1
44	ಮನಸಂದಿತ್ತು ಮಾರೇಶ್ವರ	ಮನ ಸಂದ ಮಾರಿತಂದೆ	1160	7
45	ಮರುಳು ಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗ	ವೈದ್ಯ ಸಂಗಣ್ಣ	1160	2
46	ಮಹಾಘನ ಸೋಮೇಶ್ವರಾ	?	?	1
47	ಮಹಾಲಿಂಗ ಕಲ್ಲೇಶ್ವರಾ	ಹಾವಿನ ಹಾಳ ಕಲ್ಲಯ್ಯ	1176	4
48	ಮಹಾಲಿಂಗ ಗಜೇಶ್ವರಾ	ಗಜೇಶ ಮಸಣಯ್ಯ	1160	1
49	ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ	ತೋಂಟದ ಸಿದ್ಧಲಿಂಗ	1500	2
50	ಮಹಾಲಿಂಗ ಚೆನ್ನರಾಮ	ಮೈದುನ ರಾಮಯ್ಯ	1160	1
51	ಮಾರೇಶ್ವರಾ	ಮಾರೇಶ್ವರೊಡೆಯ ಅಥವಾ ತಂಗಟೂರು ಮಾರಯ್ಯ	1160	2
52	ಮೇಖಲೇಶ್ವರ ಲಿಂಗ	ಕಲಕೇತ ಬೊಮ್ಮಯ್ಯ	1160	1
53	ರಾಮನಾಥ	ದೇವರ ದಾಸಿಮಯ್ಯ	1040	1
54	ರೇಕಣ್ಣಪ್ರಿಯ ನಾಗಿನಾಥ	ಬಹುರೂಪಿ ಚೌಡಯ್ಯ	1160	1
55	ವೀರ ಶೂರ ರಾಮೇಶ್ವರ ಲಿಂಗ	ಬಾಲ ಬೊಮ್ಮಣ್ಣ	1160	1
56	ಶಂಭುಗಿಂದಿತ್ತ ಸ್ವಯಂಭುಗಿಂದತ್ತ ಅತಿಬಳನೋಡಾ ಮಾತುಳಂಗ ಮಧುಕೇಶ್ವರನು	ದಾಸೋಹದ ಸಂಗಣ್ಣ	1160	11
57	ಶಂಭುಜಕ್ಕೇಶ್ವರಾ	ಸತ್ಯಕ್ಕ	1160	1

58	ಸಕಳೇಶ್ವರಾ	ಸಕಲೇಶ ಮಾದರಸ	1150	4
59	ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ	ಸಗರದ ಬೊಮ್ಮಣ್ಣ	1160	2
60	ಸದಾಶಿವಮೂರ್ತಿ ಲಿಂಗ	ಅರಿವಿನ ಮಾರಿ ತಂದೆ	1160	5
61	ಸದ್ಗುರು ಸಂಗ ನಿರಂಗ ಲಿಂಗ	ಕನ್ನಡಿ ಕಾಯಕದ ರೆಮ್ಮವ್ವ	?	1
62	ಸದ್ಯೋಜಾತ ಲಿಂಗ	ಅವಸರದ ರೇಕಣ್ಣ	1160	10
63	ಸಂಗನ ಬಸವಣ್ಣ + ಬ್ರಹ್ಮೇಶ್ವರಲಿಂಗ	ಬಾಹೂರ ಬೊಮ್ಮಯ್ಯ?	1160	2
64	ಸಿಮ್ಮಲಿಗೆ ಚೆನ್ನರಾಮ	ಸಿಮ್ಮಲಿಗೆ ಚೆನ್ನಯ್ಯ	1160	5
65	ಸೊಡ್ಡಳಾ ಮಹಾದಾನಿ	ಸೊಡ್ಡಳ ಬಾಚರಸ	1160	1
66	ಸೌರಾಷ್ಟ್ರ ಸೋಮೇಶ್ವರಾ	ಆದಯ್ಯ	1150	7
				275

ವಾಣಿಜ್ಯ ಬ್ಯಾಂಕುಗಳ ಸಂಪನ್ಮೂಲಗಳ ಉಪಯೋಗ

ಟಿ. ಬಿ. ಚಂದ್ರಶೇಖರಯ್ಯ

ವಾಣಿಜ್ಯ ಬ್ಯಾಂಕು ಮತ್ತು ಇತರ ಹಣಕಾಸಿನ ಸಂಸ್ಥೆಗಳು ಒಂದು ದೇಶದ ಆರ್ಥಿಕಾಭಿವೃದ್ಧಿಯೊಂದಿಗೇ ಬೆಳೆದು ಬಂದ ಸಂಸ್ಥೆಗಳು. ಉತ್ಪಾದನಾ ಚಟುವಟಿಕೆ ವಿಕಾಸಗೊಂಡಂತೆ ಹಣಕಾಸಿನ ಸಂಸ್ಥೆಗಳ ಸ್ವರೂಪ ಮತ್ತು ಗಾತ್ರಗಳೂ ಬದಲಾಗುತ್ತಾ ಹೋಗುವುವು. ಆರ್ಥಿಕ ಪ್ರಗತಿಯ ನಿರಂತರತೆಗೆ ಈ ಸಂಸ್ಥೆಗಳ ಸೇವೆಗಳ ಅವಶ್ಯಕತೆ ಅನಿವಾರ್ಯವಾಗುವುದು. ಕೈಗಾರಿಕೆಯಲ್ಲಿ ಮುಂದುವರಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬಹುಕಾಲದಿಂದ ಸಾಂಪ್ರದಾಯಿಕವಾಗಿ ಬೆಳೆದು ಬಂದ ವಾಣಿಜ್ಯ ಬ್ಯಾಂಕುಗಳು ಪ್ರಮುಖವಾಗಿ ಖಾಸಗೀ ಬಂಡವಾಳದಿಂದಲೇ ಸ್ಥಾಪಿಸಲ್ಪಟ್ಟರೂ ಲಾಭಾರ್ಜನೆಯ ಗುರಿಯಿಂದ ಅವುಗಳ ದೃಷ್ಟಿ ದೂರವಾಗಲಿಲ್ಲ. ಒಂದು ರೀತಿಯಲ್ಲಿ ಅವು ಸಾಮಾಜಿಕ ಆರ್ಥಿಕ ಅಭಿವೃದ್ಧಿಗೂ ನೆರವಾದವು. ಕೇವಲ ಉಳಿತಾಯಗಳನ್ನು ಸಂಗ್ರಹಿಸುವ ಕಾರ್ಯವೇ ಅಲ್ಲದೆ, ಸಂಗ್ರಹಿಸಿದ ಹಣವನ್ನು ದೇಶದ ವಿವಿಧ ಆರ್ಥಿಕ ಕ್ಷೇತ್ರಗಳಿಗೆ ಸಾಲಗಳ ಮೂಲಕ ವಿತರಣೆ ಮಾಡಿ ಉತ್ಪಾದನಾ ಕಾರ್ಯಗಳಿಗೆ ಅವು ಸಹಾಯಕವಾದವು.

ಇಂತಹ ಬ್ಯಾಂಕುಗಳು ತಮ್ಮ ಕಾರ್ಯವಿಧಾನದಲ್ಲಿ ಮೂರು ಮುಖ್ಯ ಉದ್ದೇಶಗಳನ್ನು ಹೊಂದಿರುತ್ತವೆ : ತಾನು ಸಾಲ ನೀಡುವ ಕಾರ್ಯಾಚರಣೆಗಳಿಂದ ಲಾಭವನ್ನು ಗರಿಷ್ಠಗೊಳಿಸುವುದು ; ಬ್ಯಾಂಕಿಂಗ್ ಸಂಸ್ಥೆಗಳ ಮೂಲಕ ಹರಿದು ಬರುವ ಉಳಿತಾಯಗಳನ್ನು ಅತ್ಯಧಿಕವಾಗುವಂತೆ ಮಾಡುವುದು. ಸಾಲವಾಗಿ ಕೊಟ್ಟ ಹಣಕ್ಕೆ ಭದ್ರತೆ ಇರುವಂತೆ ಎಚ್ಚರಿಕೆ ವಹಿಸಿ, ಕೊಟ್ಟ ಸಾಲವು ಆದಷ್ಟು ಮಟ್ಟಿಗೆ ಸದುಪಯೋಗವಾಗುವಂತೆ ನೋಡಿಕೊಳ್ಳುವುದು. ಈ ಉದ್ದೇಶಗಳು ಸಾಧಿತವಾಗಬೇಕಾದರೆ ಬ್ಯಾಂಕುಗಳು ಅಭಿವೃದ್ಧಿ ಪಥದ ಹಿಂಬಾಲಕರಾಗಿರಬೇಕಾಗುತ್ತದೆ. ಎಂದರೆ ಎಲ್ಲಿ ಅಭಿವೃದ್ಧಿ ಆಗಿದೆಯೋ ಅಲ್ಲಿಗೆ ಧಾವಿಸಿದ ಬ್ಯಾಂಕಿಗೆ ಹೆಚ್ಚು ಲಾಭ, ಹೆಚ್ಚು ಭದ್ರತೆ. ಅನಭಿವೃದ್ಧ ಕ್ಷೇತ್ರಗಳು ಇಂತಹ ಬ್ಯಾಂಕುಗಳನ್ನು ಆಕರ್ಷಿಸಲಾರವು.

ನಮ್ಮ ದೇಶದ ಅಭಿವೃದ್ಧಿ ವಿಧಾನದಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ವಹಿಸಿರುವ ಪಾತ್ರವು ಮೇಲೆ ತಿಳಿಸಿದ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ವ್ಯಕ್ತವಾಗುವ ಪಾತ್ರಕ್ಕಿಂತ ಭಿನ್ನವಾದುದು. ನಮ್ಮ ಬ್ಯಾಂಕುಗಳು ಅಭಿವೃದ್ಧಿಯಲ್ಲಿ ಪಾಲುದಾರರಾಗು

ವುದರ ಜೊತೆಗೆ, ಅಭಿವೃದ್ಧಿಯ ಪ್ರಮುಖ ಸಾಧನಗಳೂ ಆಗಬೇಕಾಗಿದೆ. ಇತ್ತೀಚೆಗೆ ಇವು ಆರ್ಥಿಕ ವಿಕಾಸ ಮತ್ತು ಸಾಮಾಜಿಕ ನ್ಯಾಯಗಳೆರಡನ್ನೂ ಒಟ್ಟಿಗೇ ಸಾಧಿಸಬೇಕೆಂದೂ ಒತ್ತಿ ಹೇಳಲಾಗುತ್ತಿದೆ. ಈ ದೃಷ್ಟಿಯಿಂದ ನಮ್ಮ ಬ್ಯಾಂಕುಗಳ ಸಾಧನೆಯನ್ನು ಅಳೆಯುವಾಗ ಅವು ಎಷ್ಟು ಲಾಭ ಸಂಪಾದಿಸಿವೆ ಎಂಬುದನ್ನು ಪರಿಗಣಿಸುವುದಕ್ಕಿಂತ ಅವು ತಮಗೆ ವಹಿಸಿದ ಕಾರ್ಯಗಳನ್ನು ಎಷ್ಟು ತೃಪ್ತಿಕರವಾಗಿ ನಿರ್ವಹಿಸಿವೆ ಎಂಬುದನ್ನು ಕಂಡುಕೊಳ್ಳಬೇಕೆಂದು ಹೇಳಲಾಗುತ್ತಿದೆ.

ಆರ್ಥಿಕ–ಸಾಮಾಜಿಕ ಪರಿವರ್ತನೆಯಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಲು ಬ್ಯಾಂಕುಗಳು ತಾವು ಸೇವೆ ಸಲ್ಲಿಸಬೇಕೆಂದಿರುವ ಸ್ಥಳದಲ್ಲೆ ಇರುವುದು ಸೂಕ್ತ. ಒಂದು ಗ್ರಾಮ ಪ್ರದೇಶಕ್ಕೆ ಒಂದು ಬ್ಯಾಂಕಿನ ಶಾಖೆ ಬಂದಿತೆಂದರೆ ಅದು ತನ್ನ ಸುತ್ತ ಮುತ್ತಲಿನ ಜನರಿಂದ ಠೇವಣಿಗಳನ್ನು ಸಂಗ್ರಹಿಸಲು ಸಾಧ್ಯವಾಗುವುದು. ಒಮ್ಮೆ ಸಂಗ್ರಹ ಕಾರ್ಯ ಯಶಸ್ವಿಯಾದರೆ, ಮುಂದಿನ ಹೆಜ್ಜೆ, ಈ ಹಣವನ್ನು ಹೇಗೆ ಆ ಪ್ರದೇಶದ ಅಭಿವೃದ್ಧಿಗೆ ಉಪಯೋಗಿಸ ಬೇಕೆನ್ನುವುದು. ನಮ್ಮ ದೇಶದ ಬಹು ಪಾಲು ಜನರಿಗೆ ಬ್ಯಾಂಕಿಂಗ್ ಸೌಲಭ್ಯಗಳನ್ನು ಪಡೆದುಕೊಳ್ಳುವ ಅವಕಾಶಗಳೇ ಇಲ್ಲ. ಅನೇಕರಿಗೆ ಹಣಕಾಸಿನ ನೆರವು ಪಡೆಯುವ ಅವಶ್ಯಕತೆ ಇದ್ದರೂ ತಮ್ಮ ಅವಶ್ಯಕತೆಗಳನ್ನು ಬ್ಯಾಂಕು ಒಪ್ಪುವ ರೀತಿಯಲ್ಲಿ ತಿಳಿಸುವ ಶಿಕ್ಷಣವಾಗಲೀ, ಅನು ಭವವಾಗಲೀ ಇಲ್ಲ. ಇದು ಸಾಧ್ಯವಾಗಬೇಕಾದರೆ ಜನರು ಬ್ಯಾಂಕುಗಳನ್ನು ಅರಸಿ ಬರುವ ಸ್ಥಿತಿ ಬದಲಾಗಿ ಬ್ಯಾಂಕುಗಳು ಜನರನ್ನು ಅರಸಿ ಹೋಗಬೇಕಾಗುತ್ತದೆ. ಇಲ್ಲಿ ಬ್ಯಾಂಕಿಂಗ್ ಉದ್ಯಮ ಸಾಂಪ್ರದಾಯಿಕತೆಯನ್ನು ತೊರೆದು ಮುಂದುವರಿಯ ಬೇಕು. ಅಲ್ಲದೆ ಒಂದು ಗೊತ್ತಾದ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸಲು, ಬ್ಯಾಂಕು ಆ ಪ್ರದೇಶದ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಸಮೀಕ್ಷೆ ನಡೆಸಬೇಕು. ಈ ಸಮೀಕ್ಷೆಯ ಬೆಳಕಿನಲ್ಲಿ ಅದು ಅಭಿವೃದ್ಧಿ ಮತ್ತು ಯೋಜನಾ ಕಾರ್ಯದಲ್ಲಿ ತೊಡಗಿರುವ ಇತರ ಸಂಸ್ಥೆಗಳ ಜೊತೆಗೆ ಸಹಕರಿಸಿ ತನ್ನದೇ ಆದ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಕೆಲವು ವಿಭಾಗಗಳಿಗಾಗಿ ವಿವರವಾದ ಸಾಧ್ಯತಾ ವರದಿಗಳನ್ನು ತಯಾರಿಸಬೇಕು. ಇಂತಹ ಕಾರ್ಯವೂ ಸಾಂಪ್ರದಾಯಿಕವಾದ ಬ್ಯಾಂಕಿಂಗ್ ವಿಧಾನಗಳಿಗೆ ಅಪರಿಚಿತವಾದದು.

ಕೇವಲ ಲಾಭಗಳಿಕೆಯ ಗುರಿಯನ್ನೇ ಇಟ್ಟುಕೊಂಡ ಸಾಂಪ್ರದಾಯಿಕ ಬ್ಯಾಂಕು ಗಳು, ಅಭಿವೃದ್ಧಿ ಯೋಜನೆಗಳಿಗೆ ಅವಶ್ಯಕವಾದ ಹೊಸ ವಿಧಾನಗಳನ್ನು ಅನುಸರಿ ಸುತ್ತವೆಂದು ನಿರೀಕ್ಷಿಸುವುದು ತಪ್ಪಾಗುವುದು. ಆದರೂ ಕೆಲವು ವರ್ಷಗಳಿಂದ ಭಾರತೀಯ ಬ್ಯಾಂಕುಗಳು ಸಾಂಪ್ರದಾಯಿಕ ಕಟ್ಟುಪಾಡುಗಳಿಂದ ಹೊರಬಂದು ಬ್ಯಾಂಕಿಂಗ್ ಉದ್ಯಮದಲ್ಲಿ ಹೊಸ ಮಾರ್ಗವನ್ನು ಪ್ರಕಟಿಸಿದವು. ಬಹು ಕಾಲದಿಂದ ತಮ್ಮ ಸಂಪನ್ಮೂಲಗಳನ್ನು ಕೈಗಾರಿಕೆ ಮತ್ತು ವ್ಯಾಪಾರ ಕ್ಷೇತ್ರಗಳಿಗೆ

ಬಹುವಾಗಿ ಉಪಯೋಗಿಸುತ್ತಿದ್ದುದು ನಂತರ ಸಣ್ಣ ಕೈಗಾರಿಕೆಗಳಿಗೂ, ಸಣ್ಣ ವ್ಯಾಪಾರಿಗಳಿಗೂ ಪ್ಲಾಂಟೇಷನ್‌ಗಳಿಗೂ ಸಾಲ ಕೊಡುವುದು ಪ್ರಾರಂಭವಾಯಿತು. ಚಿಕ್ಕ ಊರುಗಳಲ್ಲೂ ಗ್ರಾಮಾಂತರ ವ್ಯಾಪಾರ ಕೇಂದ್ರಗಳಲ್ಲೂ ಬ್ಯಾಂಕಿನ ಶಾಖೆಗಳನ್ನು ತೆರೆಯುವುದು ಪ್ರಾರಂಭವಾಯಿತು. ಆದರೂ ದೇಶದ ಅವಶ್ಯಕತೆಗಳಿಗೂ ಬ್ಯಾಂಕುಗಳು ಸಾಧಿಸಿದ ಹೊಸ ಕ್ರಮಗಳಿಗೂ ಬಹಳವಾದ ಅಂತರವಿತ್ತು. 1954 ರಲ್ಲಿ ರಿಸರ್ವ್ ಬ್ಯಾಂಕು ಸ್ಥಾಪಿಸಿದ ಒಂದು ಸಮಿತಿಯ ವರದಿಯಂತೆ, ಗ್ರಾಮ ಪ್ರದೇಶಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ಬ್ಯಾಂಕ್ ಸೌಲಭ್ಯವನ್ನು ಕಲ್ಪಿಸಬೇಕಾದ ಅವಶ್ಯಕತೆಗಳನ್ನು ತಿಳಿಸಲಾಗಿತ್ತು. ಇದು ಸಾಧಿತವಾಗಬೇಕಾದರೆ ಸಮಿತಿ ಸೂಚಿಸಿದ ಮಾರ್ಗ ಇದು : ದೇಶಾದ್ಯಂತ ಶಾಖೆಗಳನ್ನು ಉಳ್ಳ ಸರ್ಕಾರದ ಒಡೆತನದಲ್ಲಿರುವ ಸುಭದ್ರ ವಾಣಿಜ್ಯ ಬ್ಯಾಂಕೊಂದರ ಸ್ಥಾಪನೆ. ಈ ಬ್ಯಾಂಕು ತಾನು ಅಸ್ತಿತ್ವಕ್ಕೆ ಬಂದ ಮೇಲೆ ಗ್ರಾಮಾಂತರ ಸಾಲ ಸೌಕರ್ಯಗಳನ್ನು ಒದಗಿಸುವ ಇತರ ಬ್ಯಾಂಕು ಮತ್ತು ಸಹಕಾರ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು. ಬ್ಯಾಂಕಿಂಗ್ ವ್ಯವಹಾರದ ನಿಯಮಗಳನ್ನು ಮೀರದಂತೆ ಇದ್ದು ಕೇಂದ್ರ ಸರ್ಕಾರ ಮತ್ತು ರಿಸರ್ವ್ ಬ್ಯಾಂಕು ಪ್ರಕಟಿಸುವ ರಾಷ್ಟ್ರೀಯ ನೀತಿಗಳಿಗೆ ಹೊಂದಿಕೊಂಡು ಕೆಲಸಮಾಡುವುದು. ಈ ಉದ್ದೇಶಗಳನ್ನು ಸಾಧಿಸಲು ಸಮಿತಿಯು ಆಗಿನ ಅತಿ ದೊಡ್ಡ ವಾಣಿಜ್ಯ ಬ್ಯಾಂಕ್ ಆಗಿದ್ದ ಇಂಪೀರಿಯಲ್ ಬ್ಯಾಂಕಿನ ರಾಷ್ಟ್ರೀಕರಣಕ್ಕೆ ಶಿಫಾರಸು ಮಾಡಿತು. ಈ ಶಿಫಾರಸನ್ನು ಭಾರತ ಸರ್ಕಾರವು ಒಪ್ಪಿ 1955 ಇಂಪೀರಿಯಲ್ ಬ್ಯಾಂಕನ್ನು ತಾನೇ ವಹಿಸಿಕೊಂಡು 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ' ಎಂಬ ಹೊಸ ಹೆಸರಿನಿಂದ ಸರ್ಕಾರಿ ವಲಯದ ಬ್ಯಾಂಕಿಂಗ್ ಉದ್ಯಮಕ್ಕೆ ದಾರಿ ಮಾಡಿತು. 1959ರಲ್ಲಿ ಹಿಂದಿನ ದೇಶೀಯ ಸಂಸ್ಥಾನಗಳಲ್ಲಿ ಸ್ಥಾಪಿತವಾಗಿ ಕೆಲಸ ಮಾಡುತ್ತಿದ್ದ ಬ್ಯಾಂಕುಗಳನ್ನೂ ರಾಷ್ಟ್ರೀಕರಿಸಿ ಅವುಗಳನ್ನೂ ಸ್ಟೇಟ್ ಬ್ಯಾಂಕಿನ ಅಧೀನ ಬ್ಯಾಂಕುಗಳನ್ನಾಗಿ ಮಾಡಲಾಯಿತು.

ಹೀಗೆ ವಿಸ್ತೃತಗೊಂಡ ಸ್ಟೇಟ್ ಬ್ಯಾಂಕಿನ ಉದಯವು ದೇಶದ ಬ್ಯಾಂಕಿಂಗ್ ಉದ್ಯಮದ ಮೇಲೆ ಬಹು ಒಳ್ಳೆಯ ಪರಿಣಾಮವನ್ನು ಉಂಟುಮಾಡಿತು. ಸಾಮಾಜಿಕ ಅಭಿವೃದ್ಧಿಯೇ ಮುಖ್ಯ ಗುರಿಯಾಗಿ ಉಳ್ಳ ಸರ್ಕಾರಿ ವಲಯದ ಬ್ಯಾಂಕುಗಳಿಗೂ, ಖಾಸಗೀ ಲಾಭಕ್ಕಾಗಿ ಕೆಲಸ ಮಾಡುತ್ತಿದ್ದ ಇತರ ಬ್ಯಾಂಕುಗಳಿಗೂ ಒಂದು ರೀತಿಯ ಪೈಪೋಟಿ ಉಂಟಾಯಿತು. ಐದು ವರ್ಷಗಳಲ್ಲಿ ಸುಮಾರು 400 ಶಾಖೆಗಳನ್ನು, ಅದರಲ್ಲೂ ನಗರ ಪ್ರದೇಶದಿಂದ ಹೊರಗೆ, ತೆರೆಯಬೇಕೆಂದಿದ್ದ ಕಾರ್ಯವನ್ನು ಸ್ಟೇಟ್ ಬ್ಯಾಂಕು ಕ್ರಮವಾಗಿ ಮುಂದುವರಿಸುತ್ತಿದ್ದಂತೆ, ಇತರ ಬ್ಯಾಂಕುಗಳು ಸುಮ್ಮನೇ ಕೂರುವಂತಿರಲಿಲ್ಲ. ಸೂಕ್ತವಾದ ದಿಸೆಯಲ್ಲಿ ಬ್ಯಾಂಕ್ ಶಾಖೆಗಳನ್ನು ತೆರೆಯಲು ಅನುಕೂಲವಾಗುವಂತೆ 1960 ರಿಂದ ರಿಸರ್ವ್ ಬ್ಯಾಂಕು ಉದಾರವಾಗಿ ಬ್ಯಾಂಕು

ಗಳಿಗೆ ಲೈಸೆನ್ಸ್ ನೀಡುತ್ತಾ ಬಂದಿತು. ಇಡೀ ದೇಶದಲ್ಲಿ 1961 ರಿಂದ 1969ರ ವರೆಗೆ ಬ್ಯಾಂಕ್ ಶಾಖೆಗಳ ಸಂಖ್ಯೆ 5000 ದಿಂದ 8262ಕ್ಕೆ ಏರಿತು. ದೇಶದ 14 ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿದ ಮೇಲೆ ಬ್ಯಾಂಕು ಶಾಖೆಗಳ ವಿಸ್ತರಣಾ ಕಾರ್ಯವು ಮುಂದುವರೆದು ಅವುಗಳ ಒಟ್ಟು ಸಂಖ್ಯೆ 1972ರ ಜೂನ್ ವೇಳೆಗೆ 13620 ಆಯಿತು. 1973ರ ಏಪ್ರಿಲ್ ಕೊನೆಗೆ 15124 ಆಯಿತು. ಒಟ್ಟು ಸಂಖ್ಯೆಯಲ್ಲಿ ಗ್ರಾಮ ಪ್ರದೇಶಗಳಲ್ಲಿ ಸ್ಥಾಪಿತವಾದ ಬ್ಯಾಂಕುಗಳು ಶೇ. 36.2 ರಷ್ಟಾಗಿದ್ದವು.

ದೇಶಾದ್ಯಂತ ದೊಡ್ಡ ಪ್ರಮಾಣದಲ್ಲಿ ಬ್ಯಾಂಕಿಂಗ್ ಶಾಖೆಗಳನ್ನು ಕೆಲವೇ ವರ್ಷಗಳಲ್ಲಿ ತೆರೆದುದು ಆರ್ಥಿಕಾಭಿವೃದ್ಧಿಗೆ ಒಂದು ದೊಡ್ಡ ನೆರವು ನೀಡಿದಂತೆ. ದೇಶದ ಉಳಿತಾಯಗಳನ್ನು ಸಂಗ್ರಹಿಸಲು ಪ್ರಥಮ ಹೆಜ್ಜೆ. ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವ ವ್ಯವಧಾನ, ಸಂಪನ್ಮೂಲಗಳನ್ನು ಬೆಳೆಸಿಕೊಳ್ಳುವುದನ್ನು ಅವಲಂಬಿಸಿದೆ. ಈ ದೃಷ್ಟಿಯಿಂದ ನಮ್ಮ ವಾಣಿಜ್ಯ ಬ್ಯಾಂಕು ಸಾಧಿಸಿದ ಪ್ರಗತಿ ತೃಪ್ತಿದಾಯಕವಾಗಿದೆ. 1951 ರಲ್ಲಿ ವಾಣಿಜ್ಯ ಬ್ಯಾಂಕುಗಳಲ್ಲಿ ಇದ್ದ ಠೇವಣಿಗಳ ಮೊತ್ತ 835 ಕೋಟಿ ರೂ.ಗಳು. 1969ರ ವೇಳೆಗೆ ಇದು 4338 ಕೋಟಿ ರೂಪಾಯಿ ಗಳಿಗೆ ಏರಿತು. 1973 ರ ಜೂನ್ ವೇಳೆಗೆ 9018 ಕೋಟಿ ರೂ. ಗಳಷ್ಟಾಯಿತು. 1969ರಲ್ಲಿ ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣವಾದಾಗಿನಿಂದ ಹೆಚ್ಚಾಗಿರುವ ಠೇವಣಿಗಳ ವಿವರಗಳು ಈ ರೀತಿ ಇವೆ :

ಜೂನ್ 30ಕ್ಕೆ ಕೊನೆಯಾಗುವ ವರ್ಷ	ಠೇವಣಿಗಳು (ಕೋಟಿ ರೂ.ಗಳಲ್ಲಿ)	ಹಿಂದಿನ ವರ್ಷಕ್ಕಿಂತ ಎಷ್ಟು ಹೆಚ್ಚು (ಕೋಟಿ ರೂ.ಗಳಲ್ಲಿ)
1969	4646	677
1970	5275	629
1971	6216	942
1972	7596	1380
1973	9018	1422

ಹೊಸ ಶಾಖೆಗಳಲ್ಲಿ ಠೇವಣಿಗಳ ಶೇಖರಣೆಯು ಗಣನೀಯವಾಗಿಯೇ ಇದೆ. 1969ರ ಜೂನ್‌ನಿಂದ 1972ರ ಜೂನ್ ವರೆಗೆ ಎಲ್ಲಾ ಬ್ಯಾಂಕ್ ಶಾಖೆಗಳಲ್ಲೂ ಹೆಚ್ಚಾಗಿ ಸಂಗ್ರಹವಾದ 2950 ಕೋಟಿ ರೂಪಾಯಿಗಳ ಪೈಕಿ, ಹೊಸದಾಗಿ ತೆರೆದ ಶಾಖೆಗಳಲ್ಲಿ 548 ಕೋಟಿ ರೂಪಾಯಿಗಳಷ್ಟಿತ್ತು. ಗ್ರಾಮ ಪ್ರದೇಶಗಳಲ್ಲಿ ಮತ್ತು

ಚಿಕ್ಕ ಊರುಗಳಲ್ಲಿ ತೆರೆಯಲಾದ ಶಾಖೆಗಳಿಂದಲೇ 283 ಕೋಟಿ ರೂಪಾಯಿಗಳಷ್ಟು ಠೇವಣಿ ಸಂಗ್ರಹವಾಗಿತ್ತು.

ಬ್ಯಾಂಕುಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡ ಪ್ರಮಾಣದಲ್ಲೇ ಅವುಗಳು ಸರ್ಕಾರಕ್ಕೆ ಮತ್ತು ಖಾಸಗೀ ಕ್ಷೇತ್ರಕ್ಕೆ ನೆರವಾಗುವ ಶಕ್ತಿಯನ್ನೂ ಹೆಚ್ಚಿಸಿಕೊಂಡವು. ಠೇವಣಿಗಳು ಹೆಚ್ಚು ಶೇಖರವಾಗುವುದಕ್ಕೆ ಜನರ ಹಣದ ವರಮಾನ ಹೆಚ್ಚಿದುದೂ, ಸ್ವಲ್ಪಮಟ್ಟಿಗೆ ಉಳಿತಾಯದ ಶಕ್ತಿ ಬೆಳೆದುದೂ, ಬ್ಯಾಂಕ್ ಶಾಖೆಗಳ ವಿಸ್ತರಣವೂ, ಸರ್ಕಾರೀ ವಲಯದ ಬ್ಯಾಂಕುಗಳ ಬಗ್ಗೆ ಜನರು ಬೆಳೆಸಿಕೊಂಡ ವಿಶ್ವಾಸವೂ ಕಾರಣವಾದವು. ಈ ಅನುಕೂಲಕರವಾದ ಸ್ಥಿತಿಯನ್ನು ಮುಟ್ಟಿದ ಬ್ಯಾಂಕುಗಳು ತಮ್ಮಲ್ಲಿನ ಸಂಪನ್ಮೂಲಗಳನ್ನು ಎರಡು ಮುಖ್ಯ ಉದ್ದೇಶಗಳಿಗೆ ಉಪಯೋಗಿಸಲು ಸಾಧ್ಯ: (1) ಸರ್ಕಾರದ ಹಾಗೂ ಇತರ ಮಾನ್ಯತೆ ಪಡೆದ ಸಾಲ ಪತ್ರಗಳಲ್ಲಿ ಹಣ ತೊಡಗಿಸುವುದಕ್ಕೆ, (2) ಖಾಸಗೀ ಮತ್ತು ಸರಕಾರೀ ಉದ್ಯಮಗಳಿಗೆ ಸಾಲ ಮತ್ತು ಮುಂಗಡಗಳನ್ನು ನೀಡುವುದಕ್ಕೆ ಸರ್ಕಾರೀ ಸಾಲ ಪತ್ರಗಳನ್ನು ಹೆಚ್ಚಾಗಿ ಕೊಳ್ಳುವುದರ ಮೂಲಕ ವಾಣಿಜ್ಯ ಬ್ಯಾಂಕುಗಳು ದೇಶದ ಉಳಿತಾಯಗಳನ್ನು ಹೆಚ್ಚಾಗಿ ಸರ್ಕಾರದ ಅಭಿವೃದ್ಧಿ ವೆಚ್ಚಗಳಿಗಾಗಿ ಹರಿಸುತ್ತವೆ. ಖಾಸಗೀ ಉದ್ಯಮಗಳಿಗೆ ಸಾಲ ನೀಡುವಾಗ ಆದಷ್ಟುಮಟ್ಟಿಗೆ ಉತ್ಪಾದನೆಯನ್ನು ಹೆಚ್ಚಿಸುವ ಚಟುವಟಿಕೆಗಳನ್ನು ಆರಿಸಿಕೊಳ್ಳಬೇಕಾಗುತ್ತದೆ. ಆದರೆ ಈ ನೆರವು ಕೇವಲ ಒಂದೆರಡು ರೀತಿಯ ಉದ್ಯಮಗಳಿಗೇ ದೊರೆಯುವಂತಾಗಬಾರದು. ನಮ್ಮ ದೇಶದಲ್ಲಿ ಕಳೆದ ಹಲವಾರು ವರ್ಷಗಳಿಂದ ಆರ್ಥಿಕ ರಂಗದ ಎಲ್ಲಾ ಕ್ಷೇತ್ರಗಳಿಗೂ ಸಮರ್ಪಕವಾಗಿ ಸಾಲಗಳ ಸೌಕರ್ಯ ದೊರೆಯಲಿಲ್ಲ. ಇದನ್ನು ಕೆಳಗಿನ ಪಟ್ಟಿಯಿಂದ ಕಾಣಬಹುದು :

ವಿವಿಧ ಕ್ಷೇತ್ರಗಳಿಗೆ ಬ್ಯಾಂಕ್ ಸಾಲಗಳ ವಿತರಣೆ

ಕ್ಷೇತ್ರ	1951ರ ಮಾರ್ಚ್ ಮೊಬಲಗು	1951ರ ಮಾರ್ಚ್ ಶೇ. ಪ್ರಮಾಣ	1968ರ ಮಾರ್ಚ್ ಮೊಬಲಗು	1968ರ ಮಾರ್ಚ್ ಶೇ. ಪ್ರಮಾಣ
	(ಕೋಟಿ ರೂ.ಗಳಲ್ಲಿ)			
ಕೈಗಾರಿಕೆ	199	34.0	2067	67.5
ವಾಣಿಜ್ಯ	211	36.0	588	19.2
ಹಣದ ವ್ಯವಹಾರಗಳು	74	12.7	84	2.7
ವೈಯಕ್ತಿಕ ಸಾಲ	40	6.8	113	3.7
ವ್ಯವಸಾಯ	12	2.1	67	2.2
ಇತರೆ	49	8.4	144	4.7
	585	100.0	3064	100.0

ಈ ಪರಿಸ್ಥಿತಿಗೆ ಕೆಲವು ಕಾರಣಗಳೂ ಇರಬಹುದು. ತೀವ್ರಗತಿಯಿಂದ ನಡೆಯುತ್ತಿದ್ದ ದೇಶದ ಕೈಗಾರಿಕೀಕರಣವು ಸಹಜವಾಗಿ ಕೈಗಾರಿಕೆಗಳ ಸಾಲದ ಅವಶ್ಯಕತೆಯನ್ನು ಹೆಚ್ಚಿಸಿತು. ವ್ಯವಸಾಯದಲ್ಲಿ ಆಧುನಿಕ ವಿಧಾನಗಳು ಇನ್ನೂ ರೂಢಿಗೆ ಬರದೇ ಇದ್ದಾಗ ರೈತರ ಸಾಲಮರುಪಾವತಿಶಕ್ತಿ ಕಡಿಮೆ ಇದ್ದು ಬ್ಯಾಂಕುಗಳು ಈ ಕ್ಷೇತ್ರದಲ್ಲಿ ಧೈರ್ಯವಾಗಿ ಪ್ರವೇಶಿಸುವಂತಿರಲಿಲ್ಲ. ಅಲ್ಲದೆ ವ್ಯವಸಾಯದ ಸಾಲಗಳ ಅವಶ್ಯಕತೆಯನ್ನು ತುಂಬಲು ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಸರ್ಕಾರ ಮತ್ತು ರಿಸರ್ವ್ ಬ್ಯಾಂಕು ಅಗಾಧ ಪ್ರಯತ್ನಗಳನ್ನು ನಡೆಸುತ್ತಿದ್ದವು.

ಭಾರತದಲ್ಲಿ ಆರ್ಥಿಕಾಭಿವೃದ್ಧಿ ಎಲ್ಲಾ ಕ್ಷೇತ್ರಗಳಲ್ಲೂ ಕಂಡುಬರುತ್ತಿರುವಾಗ ವಾಣಿಜ್ಯ ಬ್ಯಾಂಕುಗಳು ತಾವು ನೀಡಬಹುದಾದ ಸೌಲಭ್ಯಗಳನ್ನು ಎಲ್ಲ ವರ್ಗಗಳಿಗೂ ವಿಸ್ತರಿಸಬೇಕಾಗುತ್ತದೆ. ಮುಖ್ಯವಾಗಿ ಸರ್ಕಾರೀ ವಲಯದಲ್ಲಿರುವ ಬ್ಯಾಂಕುಗಳು ಯೋಜನೆಯಲ್ಲಿ ಆದ್ಯತೆ ಪಡೆದ ಕ್ಷೇತ್ರಗಳಿಗೆ ಸಾಲ ನೀಡಬೇಕಾಗುತ್ತದೆ. ಎಲ್ಲಾ ಬ್ಯಾಂಕುಗಳ ಸಾಲ ನೀಡಿಕೆ ನೀತಿಯನ್ನೂ ನಿರ್ಧರಿಸುವಾಗ ರಾಷ್ಟ್ರೀಯ ಮಟ್ಟದಲ್ಲಿ ರಿಸರ್ವ್ ಬ್ಯಾಂಕಿನ ನೇತೃತ್ವದಲ್ಲಿ ದೇಶದ ಆರ್ಥಿಕ ಯೋಜನೆಗಳ ಅವಶ್ಯಕತೆಗಳಿಗೆ ಬ್ಯಾಂಕುಗಳ ಸಾಲ ನೀತಿಯನ್ನು ಸಮನ್ವಯಗೊಳಿಸಲಾಗುತ್ತಿದೆ. ದೊಡ್ಡ ಉದ್ದಿಮೆಗಳು ಮತ್ತು ವಾಣಿಜ್ಯ ವಲಯಕ್ಕೆ ಅಗತ್ಯವಾದ ಸಾಲಗಳನ್ನು ಮುಂದುವರಿಸಿಕೊಂಡು ಬರುವುದೇ ಅಲ್ಲದೆ, ಸಮಾಜದ ಕಿರಿಯ ಉದ್ದಿಮೆದಾರರಿಗೆ, ಅನನುಕೂಲ ವರ್ಗಗಳಿಗೆ ಬ್ಯಾಂಕುಗಳ ಸೇವೆ ದೊರೆಯುವಂತಾಗಬೇಕೆಂಬುದೂ ಸರ್ಕಾರದ ಉದ್ದೇಶ. ಉದಾಹರಣೆಗೆ, ಸಣ್ಣ ರೈತರು, ಸಣ್ಣ ಪ್ರಮಾಣದ ತಯಾರಿಕೆಗಾರರು, ಚಿಲ್ಲರೆ ವ್ಯಾಪಾರಿಗಳು, ಸ್ವಉದ್ಯೋಗಿಗಳು, ಸಾರಿಗೆ ವ್ಯವಸಾಯ ನಡೆಸುವವರು. 1969 ರಿಂದ, ಆದ್ಯತೆ ಪಡೆದ ವ್ಯವಸಾಯ, ಸಣ್ಣ ಕೈಗಾರಿಕೆ, ರಫ್ತು ವ್ಯಾಪಾರ ಮುಂತಾದ ಚಟುವಟಿಕೆಗಳಿಗೆ ನೀಡಿದ ಮೊತ್ತವು 1969 ರ ಜೂನ್‌ನಲ್ಲಿ 441 ಕೋಟಿ ರೂ. ಗಳಿದ್ದುದು 1972 ರ ಸೆಪ್ಟೆಂಬರ್ ವೇಳೆಗೆ 1080 ಕೋಟಿ ರೂ.ಗಳಾಯಿತು. ಕಳೆದ ವರ್ಷದ ಮಧ್ಯಭಾಗದಲ್ಲಿ ಸಾಲ ಮುಂಗಡಗಳಿಗೆ ಒಟ್ಟು ಸುಮಾರು 6400 ಕೋಟಿ ರೂ.ಗಳು ವಿತರಣೆಯಾದುವು. ಸರ್ಕಾರದ ಸಾಲಪತ್ರಗಳಲ್ಲಿ ಸುಮಾರು 2,200 ಕೋಟಿ ರೂ.ಗಳನ್ನು ತೊಡಗಿಸಲು ಸಾಧ್ಯವಾಯಿತು. ವಾಣಿಜ್ಯ ಬ್ಯಾಂಕುಗಳು ಇತ್ತೀಚಿನ ವರ್ಷಗಳಲ್ಲಿ ಆಹಾರ ಧಾನ್ಯಗಳನ್ನು ಕೊಳ್ಳುವುದರಲ್ಲಿ ಕಾಪು ದಾಸ್ತಾನನ್ನು ಇಟ್ಟುಕೊಳ್ಳುವುದರಲ್ಲಿ ತೊಡಗಿರುವ ಭಾರತದ ಆಹಾರ ಕಾರ್ಪೊರೇಷನ್ನಿಗೂ, ರಾಜ್ಯ ಸರ್ಕಾರಗಳಿಗೂ, ಸಹಕಾರ ಸಂಸ್ಥೆಗಳಿಗೂ ಗಣನೀಯ ಪ್ರಮಾಣದಲ್ಲಿ ಸಾಲಗಳನ್ನು ನೀಡುತ್ತಿವೆ. ವ್ಯವಸಾಯದ ಬಂಡವಾಳ ಹೂಡಿಕೆಗಾಗಿ ಮಧ್ಯಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ವ್ಯವಸಾಯ ರೀ-ಫೈನಾನ್ಸ್ ಕಾರ್ಪೊರೇಷನ್ನಿನ ನೆರವಿನಿಂದ ನೀಡಲು ಪ್ರಾರಂಭಿಸಿದೆ.

ಉದಾಹರಣೆಗೆ, ಸಣ್ಣ ನೀರಾವರಿ, ಭೂ ಅಭಿವೃದ್ಧಿ, ಕೃಷಿ ಯಾಂತ್ರೀಕರಣ, ಪ್ಲಾಂಟೇಷನ್‌ಗಳು, ಹೈನುಗಾರಿಕೆ, ತೋಟಗಾರಿಕೆ, ಕೋಳಿಸಾಕಣೆ ಮುಂತಾದುವು.

ದೇಶದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕಾದ ಬ್ಯಾಂಕುಗಳಿಗೆ ಹೊಸ ಕರ್ತವ್ಯ ಮತ್ತು ಜವಾಬ್ದಾರಿಗಳು ಪ್ರಾಪ್ತವಾದಾಗ ಆರಂಭದ ವರ್ಷಗಳಲ್ಲಿ ಆಡಳಿತ ಸಮಸ್ಯೆಗಳು ತಲೆದೋರಿ ಪ್ರಗತಿ ನಿಧಾನವಾಗಬಹುದು. ಆದರೆ ಇವು ಕಾಲಕ್ರಮದಲ್ಲಿ ನಿವಾರಿಸಲಾರದ ಸಮಸ್ಯೆಗಳೇನಲ್ಲ. ನಮ್ಮ ವಾಣಿಜ್ಯ ಬ್ಯಾಂಕುಗಳು, ಬ್ಯಾಂಕ್ ಶಾಖೆಗಳನ್ನು ದೇಶದ ವಿವಿಧ ಭಾಗಗಳಲ್ಲಿ ಕೆಲವೇ ವರ್ಷಗಳಲ್ಲಿ ತೆರೆದು ದಕ್ಷತೆಯನ್ನು ತೃಪ್ತಿಕರವಾದ ಮಟ್ಟದಲ್ಲಿ ಉಳಿಸಿಕೊಂಡು ಬಂದಿರುವುದು ದೊಡ್ಡ ಸಾಧನೆಯೇ ಸರಿ. ಹೊಸ ಕರ್ತವ್ಯಗಳನ್ನು ನಿರ್ವಹಿಸಲು ಬೇಕಾದ ತರಪೇತಿಯನ್ನು ನೌಕರರಿಗೆ ಒದಗಿಸಲು ಬ್ಯಾಂಕುಗಳು ಪ್ರತ್ಯೇಕ ಇಲಾಖೆಗಳನ್ನು ಸ್ಥಾಪಿಸಿಕೊಂಡಿವೆ. ಹೊಸದಾಗಿ ಸಾಲ ಪಡೆಯಲು ಇಚ್ಛಿಸುವ ಜನರಿಗೆ ಸೂಕ್ತ ಸಲಹೆಗಳನ್ನು ನೀಡುವುದಕ್ಕೂ, ಕೊಟ್ಟ ಸಾಲವು ಸದುಪಯೋಗವಾಯಿತೇ ಎಂಬುದನ್ನು ತಿಳಿಯಲೂ ಸಾಕಷ್ಟು ಏರ್ಪಾಡುಗಳಾಗಿವೆ. ಹೊಸದಾಗಿ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುವಲ್ಲಿ, ಸಮಾಜದ ದುರ್ಬಲ ವರ್ಗಗಳ ಹಿತವನ್ನು ಸಾಧಿಸುವಲ್ಲಿ ಬ್ಯಾಂಕುಗಳು ಉದಾರ ನೀತಿಯನ್ನು ಅನುಸರಿಸಬೇಕಾದ ಕಾಲ ಈಗ ಬಂದಿದೆ.

ಬೇಂದ್ರೆಯವರ 'ಪಾತರಗಿತ್ತಿ ಪಕ್ಕ'

ಕೆ. ಎಸ್. ಮಧುಸೂದನ

ಬೇಂದ್ರೆಯವರ ಪ್ರಸಿದ್ಧ ಕವಿತೆಗಳಲ್ಲಿ ಅವರ ' ಪಾತರಗಿತ್ತಿ ಪಕ್ಕ ' ಕವಿತೆಯೂ ಒಂದು. ಪಾತರಗಿತ್ತಿ ಎಂದರೆ ಚಿಟ್ಟೆ ಎಂಬ ಅರ್ಥವು ಉತ್ತರ ಕರ್ನಾಟಕದಲ್ಲಿ ಪ್ರಚುರವಾಗಿದೆ. ಚಿಟ್ಟೆಯ ಸ್ವಚ್ಛಂದ ವಿಲಾಸದ ಗತಿಯನ್ನು ಕುರಿತ ಸ್ವಾರಸ್ಯ ಪೂರ್ಣವಾದ ಕವಿತೆ ಇದು. ಎರಡೆರಡು ಪಾದಗಳ ವೃಂದದ ಕೊಂಚ ದೀರ್ಘ ಕವಿತೆಯಾದ ಇದರಲ್ಲಿ ಪ್ರಾಸಾಧಿಕ್ಯ ಎದ್ದು ಕಾಣುವ ಅಂಶ. ಇದನ್ನು ಕೆಲವರು ದೋಷವೆನ್ನುತ್ತಾರೆ. ಆದರೆ ಲಯಬದ್ಧವಾಗಿ ಹಾರುತ್ತಾ ಕ್ರಮವಾದ ರೆಕ್ಕೆಯ ಬಡಿತದ ಮೂಲಕ ವಿವಿಧ ಪುಷ್ಪಗಳ ಬಳಿಗೆ ಸಾಗಿ ಮಧುವನ್ನು ಹೀರುವ 'ಪಾತರಗಿತ್ತಿ' ಯನ್ನು ವಸ್ತುವಾಗಿ ಉಳ್ಳ ಈ ಕವಿತೆಗೆ ಈ ಪ್ರಾಸಾಧಿಕ್ಯ ಪೋಷಕ ಗುಣವಾಗಿ ಬಂದಿದೆಯೇ ಹೊರತು ದೋಷವಾಗಿ ಅಲ್ಲ.

ಮೊದಲು ಪಾತರಗಿತ್ತಿಯ ವರ್ಣ ವೈವಿಧ್ಯವನ್ನು ವಿಧ ವಿಧವಾಗಿ ವರ್ಣಿಸಿ, ನಂತರ, ಮುಟ್ಟಿದರೆ ಅಳಿದು ಹೋಗುವ, ನಯ ನಾಜೂಕಿನ ಕುಶಲ ಕಲೆಗಾರಿಕೆಯಿಂದ ನಿಬಿಡವಾದ ಅದರ ತೆಳುವಾದ ಸೂಕ್ಷ್ಮವಾದ ರೆಕ್ಕೆಗಳನ್ನು ವರ್ಣಿಸಿದ್ದಾರೆ. ಈ ವರ್ಣನೆಗಳನ್ನು ಗಮನಿಸಿದಾಗ ನಮಗೆ ಬೇಂದ್ರೆಯವರ ಅನುಭವ ವೈಶಾಲ್ಯ, ಅವರ ಸೂಕ್ಷ್ಮ ದೃಷ್ಟಿಗಳು ಅರಿವಿಗೆ ಬರುತ್ತವೆ. ಬಹುಶಃ ಚಿಕ್ಕ ಮಕ್ಕಳು ಮಾತ್ರ ಗಮನಿಸಬಹುದಾದ, ಹಿರಿಯರು ಗಮನಿಸದಿರುವ ಪತಂಗದ ಹಾರುವಿಕೆಯನ್ನು ಕವಿ ಬೇಂದ್ರೆಯವರು ಮುಗ್ಧರಾಗಿ ಅದರ ಹಾರಾಟಕ್ಕೆ ಮಾರುಹೋಗಿ, ಕುತೂಹಲದ ಕಣ್ಣುಗಳಿಂದ ಕಂಡು, ಆ ಅನುಭವವನ್ನು ಕಾವ್ಯಾನುಭವವಾಗಿ ಮಾರ್ಪಡಿಸಿದ್ದಾರೆ.

ಅದರ ವರ್ಣವೈವಿಧ್ಯವನ್ನು ಕುರಿತು ಹೇಳುತ್ತಾ, ಅದರ ರೆಕ್ಕೆಗಳ ಮೇಲೆ ತುಂಬಿ ಹೋಗಿರುವ ಅರಿಶಿನ ಬಣ್ಣ ಹಸಿರು ಬಣ್ಣಗಳನ್ನು ಚಿನ್ನದ ಚಿಕ್ಕೆಗೆ ಹೋಲಿಸಿ, ಬಿಳಿಯ ಚಿಕ್ಕೆಯನ್ನು ಗೃಹಿಣಿಯ ಮನೆಯ ಮುಂದೆ ರಂಗೋಲಿಗಾಗಿ ಇಡುವ ಬಿಳಿಯ ಚುಕ್ಕೆ (ಬೆಳ್ಳಿ ಅಕ್ಕಿ) ಎಂದಿದ್ದಾರೆ. ಈ ಭಾವ ' ಸುತ್ತೂ ಕುಂಕುಮದೆಳೆ ' ಎಂಬ ಸಾಲಿನಲ್ಲಿ ಆ ಚುಕ್ಕೆಗಳ ಸುತ್ತಲೂ ಇರುವ ಕೆಂಪು ಎಳೆಯನ್ನು ಸೂಚಿಸುವಾಗ ಸ್ಪಷ್ಟವಾಗುತ್ತದೆ.

ಪತಂಗದ ಸೂಕ್ಷ್ಮವಾದ ನಯನಾಜೂಕಾದ ತೆಳು ರೆಕ್ಕೆಗಳನ್ನು ಕುರಿತು ಕವಿಗೆ ಬೆರಗು, ವಿಸ್ಮಯ. ನಡುವೆ ನವಿಲುಗಣ್ಣುಗಳನ್ನು ಉಳ್ಳ, ಹೂವಿನ ದಳಕ್ಕಿಂತ ತೆಳುವಾದ ಕೋಮಲವಾದ, ಪಾರದರ್ಶಕದಂತಿರುವ, ಗಾಳಿಯ ಕೆನೆಯಲ್ಲಿ ಮಾಡಿರುವರೇನೋ ಎನ್ನಿಸುವ, ಮುಟ್ಟಿದರೆ ಹಾಳಾಗಿ ಬಿಡಬಹುದು ನೋಡಿಮಾತ್ರ ಇದರ ಚೆಲುವನ್ನಾಸ್ವಾದಿಸಬೇಕು ಎನ್ನುವ ಭಾವವನ್ನು ಬಿತ್ತುವ, ರೇಷಿಮೆಯಂಥ ಅದರ ನಯವಾದ ಪಕ್ಕವನ್ನು ಮಾಡಿದವರು ಯಾರು ಎಂದು ಸೃಷ್ಟಿಕರ್ತನ ಕಡೆಗೆ ಕವಿಯ ದೃಷ್ಟಿ ಹೊರಳಿದೆ. 'ರೇಷಿಮೆ ಪಕ್ಕನಯ । ಮುಟ್ಟಲಾರೆ ಭಯ ।' ಎಂಬ ಸಾಲುಗಳು ಪಾತರಗಿತ್ತಿಯ ಪಕ್ಕಗಳ ಸೂಕ್ಷ್ಮವನ್ನು ಸಮರ್ಥವಾಗಿ ವರ್ಣಿಸಿರುವ ರೀತಿ ಹಾಗೂ ಕವಿಯ ಭಾವಾನುಭವದ, ಅಭಿವ್ಯಕ್ತಿಯಲ್ಲಿನ ಅಭಿನಯ.

ಮುಂದೆ ಪಾತರಗಿತ್ತಿಯು ಹಾರಾಡುತ್ತಾ ತಾನು ಸಂದರ್ಶಿಸುವ ಅನೇಕ ಹೂಗಳಲ್ಲಿನ ಮಧುವನ್ನು ಹೀರುವುದನ್ನು ಬಗೆಬಗೆಯಾದ ರೀತಿಯಲ್ಲಿ ಕವಿಗಳು ನಿರೂಪಿಸಿದ್ದಾರೆ. ಈ ಸಂದರ್ಭದಲ್ಲಿ ಪಾತರಗಿತ್ತಿಯು ರಮಿಸುವ ನಾನಾ ಪುಷ್ಪಗಳ ಸಮೂಹವು ಹರಿಹರನು ತನ್ನ ಪುಷ್ಪ ರಗಳೆಯಲ್ಲಿ ಹೇಳುವ ಅನೇಕ ಹೂಗಳನ್ನು ನೆನಪಿಗೆ ತರುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಅಂಶ ಬೇಂದ್ರೆಯವರ ನಿರೂಪಣಾ ಕ್ರಮ. ಪಾತರಗಿತ್ತಿಯು ಅನೇಕ ಹೂಗಳ ಬಳಿ ಹೋಗಿ ರಮಿಸುವುದು ವಿರಮಿಸುವುದು ಅವರು ಹೇಳುವ ವಿಷಯ. ಈ ಒಂದೇ ಅಂಶವನ್ನು ಅವರು, ಅದು ಬೇರೆ ಬೇರೆ ಪುಷ್ಪಗಳ ಬಳಿಗೆ ಹೋಗಿದ್ದನ್ನು ಬೇರೆ ಬೇರೆ ರೀತಿಯಲ್ಲಿ ಹೇಳಿದ್ದಾರೆ. ಸೊಂಪಾದ ಬನ ಬನಗಳಲ್ಲಿ ಅಡಿ ತನ್ನ ಪಕ್ಷಗಳನ್ನು ಹೂಗಳ ಪರಾಗ ಕಂಪುಗಳಿಂದ ತೊಯಿಸಿಕೊಂಡು. ಸ್ವಭಾವತಃ ಲಯಪೂರ್ಣ ನಡಿಗೆಯ ವಿನ್ಯಾಸವುಳ್ಳ ಪಾತರಗಿತ್ತಿಯು ಹುಲ್ಲುಗಾವಲಿನಲ್ಲಿ ಮಾತ್ರ ತನ್ನ ಸ್ವಭಾವಕ್ಕೆ ವಿರುದ್ಧವಾದ, ವಿಲಕ್ಷಣವಾದ, ತಾಳಲಯಗಳಿಲ್ಲದ ಹಾರಾಟದಲ್ಲಿ ಹಳ್ಳಿಯ ಹುಡುಗಿಯ ಹಾಗೆ ಮುಗ್ಧವಾದ ರೀತಿಯಲ್ಲಿ ಗೊಂದಲದ ಆಟದಲ್ಲಿ ನಿರತವಾಗಿದೆ ಎಂದು ಕವಿ ಹೇಳುತ್ತಾರೆ. ಸೂರ್ಯಕಾಂತಿ ಹೂವಿನ ಮಧುಪಾನದ ಜತೆಯಲ್ಲಿಯೇ ಧೂಳಿನ ಸ್ನಾನ ಮಾಡಿಕೊಳ್ಳುತ್ತಾ ಸಾಗುವ ಇದಕ್ಕೆ ತುರುಬಿ ಹಾಗೂ ತುಂಬೆ ಹೂಗಳ ತೋಟದಲ್ಲಿ ದಿನ ನಿತ್ಯದ ಊಟವಂತೆ.

ಈ ಪಾತರಗಿತ್ತಿ ತನ್ನ ಅಸ್ತಿತ್ವಕ್ಕೆ ಅಪಾಯಕಾರಿಯಾಗಿರುವ ಕೆಲವು ಹೂಬಳ್ಳಿಗಳನ್ನು ಉಳಿದು ಇನ್ನು ಮಿಕ್ಕೆಲ್ಲ ಹೂಗಳಲ್ಲಿ ಭೇದ ಭಾವ ಎಣಿಸುವುದಿಲ್ಲ. ಕಳ್ಳಿ ಹೂವಿನ ಅಂಚಿನ ನೀರನ್ನು ಕುಡಿದು, ಮೋಜು ಮನರಂಜನೆಗಳಿಗಾಗಿ ನಾಯಿಕೊಡೆಯ ಮೇಲೆ ಕೂತು, ರುದ್ರಗಂಟಿಯನ್ನು ಮೂಸಿ ನೋಡಿ ವಿಷ್ಣುಗಂಟಿಯನ್ನು ಹಾಯ್ದು, ಒಂದು ಗಳಿಗೆ ಹೇಸಿಗೆ ಹೂವಿನ ಬಳಿಗೂ ಹೋಗಿ, ಹುರುಪಿಗಾಗಿ ಮದಗುಣಿಕೆ ಮದ್ದನ್ನು ಮೆದ್ದು, ಕಾಡಿನ ಗಿಡಗಂಟಿಗಳಲ್ಲಿಯೂ ಪರಿಮಳವನ್ನು

ಪಡೆದು ಅದರ ಅಮೃತವನ್ನು ಕುಡಿದು, ಸೀಗೆ ಬಳ್ಳಿಯನ್ನು ತಾಗಿ ಪಕ್ಕಗಳನ್ನು ನೋಯಿಸಿಕೊಂಡು, ಓಂದಿನ ಅನುಭವಗಳು ಕಲಿಸಿದ ಪಾಠದಿಂದಾಗಿ ಗೊರಟಿಗೆಯ ಬಳಿಗೆ ಹೋಗದೆ ದೂರದಿಂದಲೇ ಅದಕ್ಕೆ ವಂದಿಸಿ, ಮಾಲಿಂಗನ ಬಳ್ಳಿಯ ತೂಗು ಮಂಚದಲ್ಲಿ ಉಯ್ಯಾಲೆ ಆಡಿ ದಣಿಯುವ ಪಾತರಗಿತ್ತಿಯ ಚಿತ್ರ ಉತ್ಸಾಹಪೂರ್ಣ ವಾಗಿ ಚಿತ್ರಿತವಾಗಿದೆ. ಅಡೆತಡೆ ಇಲ್ಲದೆ ಸಾಲುಗಳು ಪಾತರಗಿತ್ತಿಯ ಉಲ್ಲಾಸ ಉತ್ಸಾಹ ಚಂಚಲತೆ ವೇಗಗಳಂತೆಯೇ ಸಾಗುವುದನ್ನು, ಚಿಟ್ಟೆಯ ಚಟುವಟಿಕೆ ಚುರುಕುತನ ಅದರ ಸಂಭ್ರಮದ ಹಾರಾಟಗಳನ್ನು ಉಚಿತವಾದ ಲಯದಲ್ಲಿ ಹಿಡಿ ದಿಟ್ಟಿರುವುದನ್ನು ಗಮನಿಸಬಹುದು.

ಚಿಟ್ಟೆಯ, ತನ್ನ ಜೀವನವನ್ನು ಕುರಿತ ಆಸೆ ಹಾಗೂ ತನ್ನ ಶತ್ರುಗಳು ಆಕ್ರಮಣ ನಡೆಸಬಹುದಾದ ಭೀತಿ – ಈ ಅಂಶಗಳು ಚಿಟ್ಟೆಯು 'ಬೇಲೀ ಬಳ್ಳಿ ಯೊಳಗ। ಅದರ ನೆರಳ ತಳಗ।' ನಿದ್ದೆಗೆ ಉರುಳಾಡುವುದನ್ನು ಕವಿ ಹೇಳಿದಾಗ ವ್ಯಕ್ತವಾಗುತ್ತದೆ. ನಿದ್ದೆಯಲ್ಲಿಯೂ ಸಹ ಅದು ತನ್ನ ರೆಕ್ಕೆಗಳನ್ನು ಲಯಪೂರ್ಣವಾಗಿ ಬಡಿಯುತ್ತಿತ್ತು ಎನ್ನುವ ಅಂಶವನ್ನು ಕವಿ 'ಪಗಡಿ ಪಕ್ಕಾ ಆಡಿ' ಎಂಬ ಮಾತಿನ ಮೂಲಕ ಸೂಚಿಸಿದ್ದಾರೆ. ಹೂ ಬೇಟೆಯ ಹಾಗೂ ಹೂ ಭೇಟಿಯ ಹಾದಿಯಲ್ಲಿ ಗುಲಾಬಾಕ್ಷಿ ಹೂವಿನ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು, ಅದರ ಪರಾಗದಲ್ಲಿದ್ದೇನೆಂದು ಅಲ್ಲಿಂದ ಹೋಗುವಾಗ ಹಾರುತ್ತಲೇ 'ಮುಂದಿನಸಲ ನೀನು ಗಂಡು ಸಂತಾನವನ್ನು ಪಡೆ' ಎಂದು ಆ ಹೂವಿಗೆ ಹರಸಿ, ಕಾಡು ಮಲ್ಲಿಗೆಯಲ್ಲೂ ಒಂದಿಷ್ಟು ಕಂಪನ್ನುಂಡು ಹುಲ್ಲಿನ ಹೊಲದಲ್ಲಿನ ರಸದುಂಬಿದ ಕಾಳನ್ನು ತಿನ್ನುವ ಈ ಚಿಟ್ಟೆಯ ಮುಂದಿನ ಗತಿಗೆ ನಿರೀಕ್ಷಿತವಾದರೂ ಅನಿರೀಕ್ಷಿತವಾದ ತಿರುವನ್ನು ಬೇಂದ್ರೆ ಯವರು ಕೊಟ್ಟಿದ್ದಾರೆ. ನಾಲ್ಕು-ಆರರ ತಾಳದಲ್ಲಿ ತಕತಕ ಹಾರುವ ಈ ಚಿಟ್ಟೆಯು ಮೇಲೆ ಹೇಳಿದ ತನ್ನ ಎಲ್ಲಾ ಕೆಲಸಗಳನ್ನೂ ಒಂದಿಷ್ಟು ಸದ್ದಿಲ್ಲದೆ, ಆದರೆ ಆಕರ್ಷ ಣೀಯವಾಗುವಂತೆ ಮಾಡಿ, ನೋಡಿದವರಿಗೆ ಕೈಗೆ ಸಿಕ್ಕಿಬಿಟ್ಟಿತೇನೋ ಎಂಬ ಆಸೆ ಹುಟ್ಟಿಸಿ ಹಿಡಿಯಲು ಹೋದಾಗ ಮಾತ್ರ ಸಿಗದೆ, ಕಂಡೂ ಕಾಣದಂತೆ ಗಾಳಿಯಲ್ಲಿ ಕೂಡಿ ಸಿಕ್ಕಲ್ಲಿ ಓಡುವ ಇದರ ಮುಂದಿನ ಓಟ ಎಲ್ಲಿಗೆ ಎಂಬ ತನ್ನ ಪ್ರಶ್ನೆಗೇ ಕವಿಯು ಉತ್ತರಿಸಿರುವ ರೀತಿ ಮಾರ್ಮಿಕವಾಗಿದೆ. ಕವನದ ಗತಿಗೆ ತಟಕ್ಕನೆ ಮುಕ್ತಾಯ ವನ್ನೊದಗಿಸಿ ಧ್ವನಿ ಪರಂಪರೆಯನ್ನು ಪಸರಿಸುತ್ತದೆ. ಅತ್ಯಂತ ಸಂಭ್ರಮದಿಂದ ತನ್ನ ಆಯುಸ್ಸು ಕ್ಷಣಿಕವಾದರೂ ಉಲ್ಲಾಸ ಉತ್ಸಾಹ ಚಂಚಲತೆ ಚಟುವಟಿಕೆ ಚುರುಕುತನಗಳಿಂದ ಹಾರಾಡುವ ಈ ಪಾತರಗಿತ್ತಿಯ ಮುಂದಿನ ಓಟ 'ನಂದನದ ತೋಟ!' 'ಅದರ ಮರಣದ ಮಾತನ್ನೇ ಎತ್ತದೆ ಹೀಗೆ ದೇವಲೋಕದ ನಂದನವನದ ವಿಹಾರರೂಪವಾಗಿ ಅದನ್ನು ಮಾರ್ಪಡಿಸಿ ಕವನದ ಮುಖ್ಯ ಭಾವಕ್ಕೆ ಅತಿಶಯದ ಮೆರುಗಿನ ಮುಕ್ತಾಯವನ್ನು ಕೊಟ್ಟಿರುವುದು ಕವಿಯ ಉಜ್ವಲ ಪ್ರತಿಭೆಗೆ ಸಾಕ್ಷಿ'

ಎಂಬ ತೀ. ನಂ. ಶ್ರೀಯವರ ಮಾತುಗಳನ್ನು ಈ ಸಂದರ್ಭದಲ್ಲಿ ನೆನೆಯಬಹುದಾಗಿದೆ. ಹಾಗೆಯೇ, 'ಅದ್ಭುತ ರಮ್ಯವಾಗಿರುವ ಈ ಅಂತ್ಯಚರಣಗಳು ಒಂದು ವಿಷಯವನ್ನು ಬಾಯಿಬಿಟ್ಟು ನೇರವಾಗಿ ಹೇಳುವುದಕ್ಕಿಂತ ವ್ಯಂಗ್ಯವಾಗಿ ಸೂಚಿಸುವ ಅಂಬಿಕಾತನಯ ದತ್ತರ ಪದ್ಧತಿಯನ್ನು ನಮಗೆ ಮನದಟ್ಟು ಮಾಡಿಸುತ್ತದೆ' ಎಂಬ ಮಿರ್ಜಿ ಅಣ್ಣಾ ರಾಯರ ಮಾತೂ ಗಮನೀಯವಾಗಿದೆ.

ಸ್ಲೈಡ್ ರೂಲು

ಕ. ರಾ. ಮೋಹನ್


ನಮ್ಮ ಜೀವನದಿಂದ ಗಣಿತವನ್ನು ತೆಗೆದು ಹಾಕಿದರೆ ನಾಗರೀಕತೆ ಒಮ್ಮೆಗೇ ಸಾವಿರಾರು ವರ್ಷಗಳ ಹಿಂದೆ ಹೋಗುತ್ತದೆ. ಗಣಿತವಿಲ್ಲದೆ ಇಂದು ಬದುಕಿಲ್ಲ. ಸಾವಿರಾರು ವರ್ಷಗಳಿಂದ ಮನುಷ್ಯ ಕೂಡುವುದು, ಕಳೆಯುವುದು, ಗುಣಿಸುವುದು ಮತ್ತು ಭಾಗಿಸುವುದನ್ನು ಮಾಡುತ್ತಲೇ ಇದ್ದಾನೆ. ಈ ಮೂಲ ಪ್ರತಿಕ್ರಿಯೆಗಳಿಂದ ಅನೇಕ ಕ್ಲಿಷ್ಟ ಗಣಿತ ಸಮಸ್ಯೆಗಳನ್ನು ಬಗೆಹರಿಸುವುದು ಸಾಧ್ಯ. ಆದ್ದರಿಂದ ಇವುಗಳನ್ನು ಆದಷ್ಟು ಸರಳಗೊಳಿಸಿಕೊಳ್ಳುವುದರತ್ತ ಮನುಷ್ಯ ಗಮನ ಹರಿಸಿದ್ದಾನೆ. ಇದಕ್ಕಾಗಿ ಸಾಧನಗಳನ್ನು ನಿರ್ಮಿಸಿದ್ದಾನೆ. ಇಂಥ ಒಂದು ಸಾಧನ ಸ್ಲೈಡ್ ರೂಲ್.

ಗುಣಿಸುವುದಕ್ಕಿಂತ ಕೂಡುವುದು ಸುಲಭ. 486 ಮತ್ತು 573 ಗಳನ್ನು ಗುಣಿಸುವುದಕ್ಕಿಂತ ಕೂಡುವುದು ಸುಲಭವಲ್ಲವೆ ? ಯಾವುದಾದರೂ ವಿಧಾನದಿಂದ ಗುಣಿಸುವ ಕ್ರಿಯೆಯನ್ನು ಕೂಡುವುದರ ಮೂಲಕ ಸುಲಭವಾಗಿ ನಡೆಸುವುದು ಸಾಧ್ಯವಾದರೆ ಗಣಿತದ ಕೆಲಸ ಹಗುರವಾಗುತ್ತದೆ. ಆದರೆ ಇದು ಸಾಧ್ಯವೆ ? ಸಾಧ್ಯವಾಗುವುದಾದರೆ ಹೇಗೆ ? ಎಂಬ ಪ್ರಶ್ನೆಗಳು ಬಹಳ ಕಾಲದಿಂದ ಗಣಿತಜ್ಞರನ್ನು ಕೊರೆಯುತ್ತಿತ್ತು.

ಪ್ರತಿಘಾತಗಳ ಕಲ್ಪನೆ ತಿಳಿಯುವವರೆಗೆ ಈ ದಿಶೆಯಲ್ಲಿ ಗಣಿತ ಮುಂದುವರೆಯಲಿಲ್ಲ. 1614 ರಲ್ಲಿ ಮರ್ಚಿಸ್ಟನ್ನಿನ ಜ್ಹಾನ್ ನೇಫಿಯರ್ ಎಂಬುವನು ಪ್ರತಿಘಾತಗಳ ಕಲ್ಪನೆಯನ್ನು ಮುಂದಿಟ್ಟನು. 4×6 ಎಂಬುದನ್ನು $\log(4 \times 6)$ ಎಂಬ ರೂಪದಲ್ಲಿ ಬರೆದರೆ ಇದು $\log 4 \times \log 6$ ಎಂದಾಗುತ್ತದೆ. ಹೀಗೆ ಪ್ರತಿಘಾತಗಳ ಸಹಾಯದಿಂದ ಗುಣಾಕಾರವನ್ನು ಸಂಕಲನ ಕ್ರಿಯೆಯಾಗಿ ಮಾರ್ಪಡಿಸಬಹುದು.

ಈ ವಿಷಯ ತಿಳಿದ ಮೇಲೆ ಇದನ್ನು ಆಚರಣೆಯಲ್ಲಿ ತರುವುದು ಹೇಗೆ ಎಂಬ ಯೋಚನೆ ಪ್ರಾರಂಭವಾಯಿತು. 1620 ರಲ್ಲಿ ಎಡ್ಮಂಡ್ ಗುಂಟರ್ ಒಂದು ಸರಳ ರೇಖೆಯ ಮೇಲೆ ಪ್ರತಿಘಾತಗಳನ್ನು ಗುರುತಿಸಿದ. ಇದರ ಮೇಲೆ ಉದ್ದಗಳನ್ನು ಕೈವಾರಗಳ ಸಹಾಯದಿಂದ ಅಳೆದ. ಈ ಉದ್ದಗಳ ಸಂಕಲನದಿಂದ ಗುಣಲಬ್ಧಗಳನ್ನು ಮತ್ತು ವ್ಯವಕಲನದಿಂದ ಭಾಗಲಬ್ಧಗಳನ್ನು ತಿಳಿಯುವುದು ಸಾಧ್ಯವಾಯಿತು.

ಇದನ್ನೇ ಮಾರ್ಪಡಿಸಿ ವಿಲಿಯಂ ಔಟ್ರೆಡ್ ಒಂದರ ತುದಿಯಲ್ಲಿ ಇನ್ನೊಂದು ಜಾರುವಂತೆ ಇರುವ ಜಾರುವ ಗುಂಟರ್ ರೇಖೆಗಳನ್ನು 1621 ರಲ್ಲಿ ನಿರ್ಮಿಸಿದ. ಇದರಿಂದ ಕೈವಾರದ ಅಗತ್ಯ ತಪ್ಪಿತು. ಇದು ಒಂದು ರೀತಿಯ ಸ್ಲೈಡ್ ರೂಲ್.



ಚಿತ್ರ 1

ಆದರೆ ಸ್ಥಿರವಾಗಿರುವ ಎರಡು ಪಟ್ಟಿಗಳ ನಡುವೆ ಜಾರುವ ಪಟ್ಟಿ ಇರುವ ಪ್ರಥಮ ಸ್ಲೈಡ್ ರೂಲ್ ನಿರ್ಮಿಸಿದವನು ರಾಬರ್ಟ್ ಬಿಸಾಕರ್. ಇದು ಆದದ್ದು 1654 ರಲ್ಲಿ. ಇದೇ ದಿಕ್ಕಿನಲ್ಲಿ ಮುಂದುವರೆದು 1657ರಲ್ಲಿ ಸೆತ್ ಪಾರ್ಟ್ರಿಡ್ಜ್, 1677 ರಲ್ಲಿ ಹೆನ್ರಿ ಕೊಗ್ಗೇಶಾಲ್, 1683 ರಲ್ಲಿ ಥಾಮಸ್ ಎವೆರಾರ್ಡ್ ಸ್ಲೈಡ್ ರೂಲಿನಲ್ಲಿ ಮಾರ್ಪಾಟುಗಳನ್ನು ತಂದರು. ಹದಿನೆಂಟನೆಯ ಶತಮಾನದಲ್ಲಿ ಸ್ಲೈಡ್ ರೂಲಿನ ಉಪಯೋಗ ಹೆಚ್ಚು ಜನಪ್ರಿಯವಾಯಿತು.

ಆದರೆ ಮೇಲೆ ಹೇಳಿದ ಯಾವ ಸಾಧನವೂ ಆಧುನಿಕ ಸ್ಲೈಡ್‌ರೂಲನ್ನು ಹೋಲುತ್ತಿರಲಿಲ್ಲ. ಆಧುನಿಕ ಸ್ಲೈಡ್‌ರೂಲನ್ನು ಹೋಲುವ ಸಾಧನವನ್ನು 1859 ರಲ್ಲಿ ನಿರ್ಮಿಸಿದ ಕೀರ್ತಿ ಫ್ರಾನ್ಸಿನ ಅಮೆಡೀ ಮನ್ಹೆಯಿಮ್‌ಗೆ ಸೇರುತ್ತದೆ.

ಇದುವರೆಗೆ ಸ್ಲೈಡ್‌ರೂಲನ್ನು ಜಾಕಾಯಿ ಮರದಲ್ಲಿ ಮಾಡುತ್ತಿದ್ದರು. ತವರ ಅಥವ ಗಂತದಲ್ಲೂ ಆಗಾಗ್ಗೆ ತಯಾರಾಗುತ್ತಿತ್ತು. 1886 ರಲ್ಲಿ ಜರ್ಮನಿಯ ಡೆನ್ನೆರ್ಟ್ ಮತ್ತು ಪೇಪ್ ರೂಲಿನ ನಿಷ್ಪಷ್ಟತೆಯ ಕಡೆಗೂ ಗಮನ ಕೊಟ್ಟು ಬಿಳಿಯ ಸೆಲ್ಯುಲಾಯಿಡ್ ಉಪಯೋಗಿಸಿದರು.

1890ಕ್ಕೆ ಮುಂಚೆ ಸ್ಲೈಡ್‌ರೂಲುಗಳು ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ತಯಾರಾಗುತ್ತಿದ್ದವು. ಇವುಗಳ ತಯಾರಿಕೆಗೆ ಅಮೆರಿಕದ ಸಂಯುಕ್ತ ಸಂಸ್ಥಾನಗಳು ಇನ್ನೂ ಕೈಹಾಕಿರಲಿಲ್ಲ. ಆದರೆ ಅಮೆರಿಕದ ವಿಲಿಯಂ ಕಾಕ್ಸ್ ಸ್ಲೈಡ್ ರೂಲಿನ ಎರಡು ಬದಿಗಳಲ್ಲೂ ಗುರ್ತುಗಳನ್ನು ಮಾಡಲು ಪ್ರಾರಂಭಿಸಿ, ಇವರ ತಯಾರಿಕೆಗೆ ಚಾಲನೆ ಕೊಟ್ಟ. 1940–1950 ರ ದಶಕದಲ್ಲಿ ಮಾನದಂಡದ ಜೋಡಣೆಯಲ್ಲಿ ಹೆಚ್ಚಿನ ಸುಧಾರಣೆ ಕಂಡು ಬಂತು. ಚಕ್ರಾಕಾರದ ರೂಲುಗಳು ಸಹ ಕಾಣಿಸಿಕೊಂಡವು.


ಆಧುನಿಕ ಸ್ಲೈಡ್‌ರೂಲ್ ಸಾಪೇಕ್ಷ ಚಲನೆ ಸಾಧ್ಯವಿರುವ ಗುರ್ತುಗಳಿರುವ ಮಾನದಂಡಗಳಿರುವ ರೂಲ್. ಇದರ ಸಹಾಯದಿಂದ ಸರಳ ಲೆಕ್ಕಾಚಾರಗಳನ್ನು

ಯಾಂತ್ರಿಕವಾಗಿ ಶೀಘ್ರವಾಗಿ ನಡೆಸಬಹುದು. ಇದು ಐದು ಅಥವ ಹತ್ತು ಅಂಗುಲ ಉದ್ದಗಳಲ್ಲಿ ಸಿಕ್ಕುತ್ತವೆ. ಈ ಲೇಖನದಲ್ಲಿ ತಿಳಿಸಿರುವ ವಿವರಗಳು 10 ಅಂಗುಲ ಉದ್ದದ ಶಿಷ್ಟ ರೂಲಿಗೆ ಹೊಂದುತ್ತದೆ.

ನಮ್ಮ ದೇಶದಲ್ಲಿ ಇದರ ಬಳಕೆ ಕಡಿಮೆ. ವಿದ್ಯಾಸಂಸ್ಥೆಗಳ ಮಟ್ಟಿಗೆ ಹೇಳುವುದಾದರೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾತ್ರ ಇದನ್ನು ಉಪಯೋಗಿಸುತ್ತಾರೆ. ಇತರ ಕಡೆ ಇದರ ಹೆಸರು ಕೇಳಿದವರೂ ಕಡಿಮೆಯೆ. ಆದರೆ ಈ ಸಾಧನವನ್ನು ಇನ್ನೂ ವಿಸ್ತಾರ ಕ್ಷೇತ್ರಗಳಲ್ಲಿ ಲಾಭದಾಯಕವಾಗಿ ಬಳಸ ಬಹುದು. (ಅತ್ಯಂತ ನಿಷ್ಕೃಷ್ಟತೆ ಅಗತ್ಯವಾಗಿರುವ ಕಡೆ ಇದರ ಬಳಕೆ ಸಲ್ಲ. ದಶಮಾಂಶ ಬಿಂದುವಿನ ನಂತರದ ಎರಡು ಸ್ಥಾನಗಳ ನಿಷ್ಕೃಷ್ಟತೆ ಮಾತ್ರ ಇದು ಸಾಧಿಸಬಲ್ಲದು). ಇದು ಪ್ರತಿಘಾತಗಳ ತತ್ವವನ್ನು ಆಧರಿಸಿರುವುದರಿಂದ ಆ ವಿಷಯ ತಿಳಿಯದೆ ಬಳಕೆ ಹೇಗೊ ಏನೊ ಎಂದು ಕೆಲವರು ಅನುಮಾನಿಸಬಹುದು. ಆದರೆ ಈ ಭಯ ನಿರಾಧಾರವಾದದ್ದು. ಅಂತರ್ದಹನ ಎಂಜಿನುಗಳ ಬಗ್ಗೆ ಏನೂ ತಿಳಿಯದೆಯೇ ಒಳ್ಳೆಯ ಮೋಟಾರ್‌ಕಾರ್ ಚಾಲಕನಾಗುವುದು ಸಾಧ್ಯವಿರುವಂತೆ ಪ್ರತಿಘಾತಗಳ ಬಗ್ಗೆ ತಿಳಿಯದೆಯೇ ಸ್ಲೈಡ್‌ರೂಲನ್ನು ಉಪಯೋಗಿಸಬಹುದು. ಈಗಿನ ಬೆಲೆಯಲ್ಲಿ ಒಳ್ಳೆಯ ಸ್ಲೈಡ್‌ರೂಲ್ ಒಂದಕ್ಕೆ ಸುಮಾರು 120 ರೂಪಾಯಿ ತಗಲುತ್ತದೆ.

ಸ್ಲೈಡ್‌ರೂಲ್ ನೋಡುವುದಕ್ಕೆ ಸಾಧಾರಣ ಇಂಚುಪಟ್ಟಿಯಂತೆಯೇ ಇರುತ್ತದೆ (ಚಿತ್ರ 2). ನಡುವೆ ಉದ್ದಕ್ಕೆ ತಗ್ಗಿರುತ್ತದೆ. ತಗ್ಗಿನ ಎರಡೂ ಕಡೆ ಇರುವ ಹಳಿಗಳಲ್ಲಿ ಜಾರುವ ಪಟ್ಟಿ ಇರುತ್ತದೆ. ಚಿತ್ರದಲ್ಲಿ ತೋರಿಸಿರುವ ರೂಲಿನಲ್ಲಿ A, B, C ಮತ್ತು D ಎಂಬ ನಾಲ್ಕು ಮಾನದಂಡಗಳಿವೆ. ಆದರೆ ಏಳು ಮತ್ತು ಅದಕ್ಕೂ ಹೆಚ್ಚು ಮಾನದಂಡಗಳಿರುವ ರೂಲುಗಳೂ ಉಂಟು. ಕೆಲವು ರೂಲುಗಳಲ್ಲಿ ಜಾರುವ ಪಟ್ಟಿಯನ್ನು ತಿರುಗಿಸಿ ನೋಡಿದರೆ ಅಲ್ಲಿ ತ್ರಿಕೋನ ಮಿತಿಗೆ ಅಗತ್ಯವಾದ Sin, tan, cos, cot ಮುಂತಾದ ಮಾನದಂಡಗಳು ಕಾಣುತ್ತವೆ. ಮಾನದಂಡಗಳು ಎಲ್ಲ ರೂಲುಗಳಲ್ಲಿ ಒಂದೇ ತರಹ ಇರುವುದಿಲ್ಲ. ಒಂದರಲ್ಲಿ ಹೆಚ್ಚು, ಇನ್ನೊಂದರಲ್ಲಿ ಕಡಿಮೆ ಇರಬಹುದು. ಒಂದೊಂದನ್ನೂ ಒಂದೊಂದು ವಿಶಿಷ್ಟ ಉಪಯೋಗಕ್ಕೆ ಬರುವಂತೆ ರಚಿಸಿರುತ್ತಾರೆ. ಆದರೆ ಎಲ್ಲ ರೂಲುಗಳಲ್ಲಿ ಮುಖ್ಯವಾಗಿ A, B, C ಮತ್ತು D ಮಾನದಂಡಗಳು ಇದ್ದೇ ತೀರಬೇಕು.

A ಮತ್ತು B ಒಂದಕ್ಕೊಂದು ಅಂಟಿದಂತೆ ಇರುವ ಮಾನದಂಡಗಳು. A ಮೇಲಿನ ಸ್ಥಿರ ಪಟ್ಟಿಯ ಕೆಳಭಾಗದಲ್ಲೂ B ಜಾರುವ ಪಟ್ಟಿಯ ಮೇಲ್ಭಾಗದಲ್ಲೂ ಇದೆ. ಇವೆರಡರ ಮಾನದಂಡಗಳು ಸದೃಶವಾಗಿರುತ್ತವೆ. ಇವು 1ರಿಂದ ಪ್ರಾರಂಭ



ಚಿತ್ರ 2 : ಸ್ಲೈಡ್ ರೂಲು

ವಾಗಿ 1, 2, 3……8, 9, 10, 20, 30……100 ಈ ವಿಧದಲ್ಲಿ 100ರಲ್ಲಿ ಮುಕ್ತಾಯವಾಗುತ್ತದೆ.

ಜಾರುವ ಪಟ್ಟಿಯ ತಳದಲ್ಲಿ ಮತ್ತು ಇದಕ್ಕಂಟಿದಂತೆ ಇರುವ ಹಾಗು ಕೆಳಗಿನ ಸ್ಥಿರ ಪಟ್ಟಿಯ ಮೇಲ್ಭಾಗದಲ್ಲಿರುವ ಮಾನದಂಡಗಳು C ಮತ್ತು D. ಇವೆರಡರ ಗುರ್ತುಗಳು ಸದೃಶ. 1, 1.1, 1.2……2, 3, 4 ……10 ಎಂಬ ಗುರ್ತುಗಳನ್ನು ಇಲ್ಲಿ ಕಾಣಬಹುದು. A ಮಾನದಂಡ ಬೆಲೆಯಲ್ಲಿ D ಯ ಎರಡರಷ್ಟಿರುವುದನ್ನು ಗಮನಿಸಬಹುದು. ಎಂದರೆ D ಯಲ್ಲಿ 3 ಗುರ್ತಿಗೆ ನೇರವಾಗಿ A ಮಾನದಂಡದಲ್ಲಿ ನೋಡಿದರೆ ಅಲ್ಲಿ 9 ಎಂದು ಗುರ್ತಿರುತ್ತದೆ.

ಕೆಲವು ರೂಲುಗಳಲ್ಲಿ ಪ್ರತಿಘಾತೀಯ ಹಾಗು log–log ಮಾನದಂಡಗಳಿರುತ್ತವೆ. ಇವೆಲ್ಲ ಮಾನದಂಡಗಳ ಮೇಲೆ ಜಾರುವಂತೆ ಒಂದು ಪಾರದರ್ಶಕ ತೆರೆ ಇರುತ್ತದೆ. ಇಲ್ಲಿ ಒಂದು ಕೇಶರೇಖೆಯನ್ನು ಗುರ್ತಿಸಿರುತ್ತಾರೆ. ತೆರೆಯನ್ನು ಜಾರಿಸಿ ಕೇಶರೇಖೆ ಬೇಕಾದ ಗುರ್ತಿನ ಮೇಲೆ ನಿಲ್ಲುವಂತೆ ಮಾಡಬಹುದು.

ಕೆಲವು ಗಣಿತ ಪ್ರಕ್ರಿಯೆಗಳು

ಗುಣಾಕಾರ : ಇದಕ್ಕೆ C ಮತ್ತು D ಮಾನದಂಡಗಳು ಸಹಾಯಕ ಲೆಕ್ಕಾಚಾರಕ್ಕೆ $12 \times .32$, 1.2×3.2, 0.012×0.032, 020×320 ಎಲ್ಲ ಒಂದೇ ಎಂಬುದು ಗಮನಾರ್ಹ. ಬಂದ ಫಲಿತಾಂಶದಲ್ಲಿ ಸಮಸ್ಯೆಗೆ ತಕ್ಕಂತೆ ಸೂಕ್ತ ಸ್ಥಳದಲ್ಲಿ ದಶಮಾಂಶ ಬಿಂದುವನ್ನಿಟ್ಟು ಸರಿಯಾದ ಉತ್ತರ ಪಡೆಯಬೇಕು.

ಈಗ 120×320ರ ಗುಣಲಬ್ಧ ಬೇಕೆಂದು ಭಾವಿಸಿ. ಇದಕ್ಕೆ Dಯಲ್ಲಿ 1.2 ಹುಡುಕಿ ಇದಕ್ಕೆ Cಯ 1ನ್ನು ಹೊಂದಿಸಿ. Cಯಲ್ಲಿ 3.2 ಹುಡುಕಿ. ಇದಕ್ಕೆ ಹೊಂದಿಕೊಂಡಂತೆ Dಯಲ್ಲಿರುವ 3.84 ಎಂಬುದೇ ಬೇಕಾದ ಸಂಖ್ಯೆ. ಅಂದಾಜಿನಿಂದ 120×320ರ ಗುಣಲಬ್ಧ 5 ಸ್ಥಾನಗಳ ಸಂಖ್ಯೆ ಎಂದು ತಿಳಿಯುತ್ತದೆ. ಆದ್ದರಿಂದ

ಈ ಸಮಸ್ಯೆಗೆ ಸರಿಯಾದ ಉತ್ತರ 38400. ಈ ಪ್ರಕ್ರಿಯೆಗಳನ್ನು ನಡೆಸಲು ಅಗತ್ಯವಾದರೆ ತೆರೆಯನ್ನು ಜಾರಿಸಿ ಕೇಶರೇಖೆಯನ್ನು ಗುರ್ತಿಗೆ ಇಟ್ಟುಕೊಳ್ಳಬಹುದು. ಈ ಪ್ರಕ್ರಿಯೆಗಳನ್ನು ಸಂಕ್ಷಿಪ್ತವಾಗಿ 1.2Dಗೆ Cಯ 3.2ಕ್ಕೆ × D ಯಲ್ಲಿ × ನ ಬೆಲೆ 3.84 ಓದಿ ಎಂದು ಹೇಳಬಹುದು. ಇಲ್ಲಿ × ಎಂದರೆ ಕೇಶರೇಖೆಯಿರುವ ಗುರ್ತು.

ಭಾಗಾಹಾರ : ಸಮಸ್ಯೆ $584 \div 326$

ಉತ್ತರ 584 Dಗೆ 326 C. 1C ಕೆಳಗೆ Dಯಲ್ಲಿ 1.79 ಎಂದು ಓದಿ.

(C 1) ಎಂಬ ಮಾನದಂಡವಿದ್ದರೆ ಇದರ ವಿಲೋಮ ಸಂಖ್ಯೆಗಳ ಗುಣಾಕಾರ ಸಾಧ್ಯವಾಗುತ್ತದೆ.

ಉದಾಹರಣೆಗೆ $\frac{584}{326}$ ನ್ನು $584 \times \frac{1}{326}$ ಎಂದೂ ಬರೆಯಬಹುದು. (C 1) ಮಾನದಂಡದಲ್ಲಿ 326 ನೋಡಿದರೆ ಅದು 1/326ಕ್ಕೆ ಸಮಾನಾಗುತ್ತದೆ.

ಇದೇ ರೀತಿ ಗುಣಾಕಾರ ಮತ್ತು ಭಾಗಾಹಾರ ಇವೆರಡೂ ಇರುವ ಸಮಸ್ಯೆಗಳನ್ನು ಬಿಡಿಸಬಹುದು. ಉದಾಹರಣೆಗೆ ಸಮಸ್ಯೆ $(8 \times 3) \div 4$. ಉತ್ತರ 8Dಗೆ 10C. 3Cಗೆ × . × ಗೆ 4C. 10C ಕೆಳಗೆ 6D ಎಂದು ಓದಿ. ಇನ್ನೊಂದು ಉದಾಹರಣೆ $\frac{8.21 \times 14.74 \times 29.12 \times 77.53 \times 50.16}{18.6 \times 32.74 \times 0.605 \times 482}$

ಪರಿಹಾರ × ನ್ನು 821Dಗೆ ಜೋಡಿಸಿ, × ಗೆ 186C, 1474ಕ್ಕೆ ×, × ಗೆ 3274C, 2912Cಗೆ ×, × ಗೆ 605 7753ಕ್ಕೆ ×, × ಗೆ 482C, 5016Cಗೆ × × ಕೆಳಗೆ Dಯಲ್ಲಿ 772 ಎಂದು ಓದಿ. (ಇಲ್ಲಿ ದಶಮಾಂಶ ಬಿಂದುಗಳನ್ನು ಕಡೆಗಣಿಸಲಾಗಿದೆ) ಅಂದಾಜಿನ ಮೇಲೆ ಉತ್ತರ ಎರಡು ಸ್ಥಾನಗಳ ಸಂಖ್ಯೆ ಎಂದು ತಿಳಿಯುತ್ತದೆ. ಆದ್ದರಿಂದ ಬೇಕಾದ ಉತ್ತರ 77.2.

ವರ್ಗ ಮತ್ತು ವರ್ಗಮೂಲಗಳು: ಹಿಂದೆ ಹೇಳಿದಂತೆ A,D ಮಾನದಂಡದ ಎರಡರಷ್ಟಿದೆ. D ಮಾನದಂಡದ ಯಾವುದೇ ಸಂಖ್ಯೆಗೆ Aಯಲ್ಲಿ ವರ್ಗವೂ, A ಮಾನ ದಂಡದ ಯಾವುದೇ ಸಂಖ್ಯೆಗೆ Dಯಲ್ಲಿ ವರ್ಗಮೂಲವೂ ದೊರೆಯುತ್ತದೆ. ಉದಾಹರಣೆಗೆ 15.25ರ ವರ್ಗ ತಿಳಿಯಲು D ಮಾನದಂಡದಲ್ಲಿ 15.25ಕ್ಕೆ ಕೇಶ ರೇಖೆ ಸರಿಸಿ. × ನ್ನು Aಯಲ್ಲಿ ಓದಿ.ಅದು 2.34 ಉತ್ತರ. ಇದೇ ರೀತಿ 256ರ ವರ್ಗಮೂಲ ಕಂಡು ಹಿಡಿಯಲು 256 Aಗೆ × × ಕೆಳಗೆ Dಯಲ್ಲಿ ಉತ್ತರ 26 ಎಂದು ಓದಬೇಕು.

ಮೂರರ ಘಾತ ಮತ್ತು ಘಾತ ಮೂಲಗಳು: K ಎಂಬ ಮಾನದಂಡವಿದ್ದರೆ ಇದರಲ್ಲಿ ನೇರವಾಗಿ ಮೂರರ ಘಾತ ದೊರೆಯುತ್ತದೆ. ಇಲ್ಲದಿದ್ದರೆ A,B,C ಮತ್ತು

Dಗಳ ಸಹಾಯದಿಂದ ಪಡೆಯಬೇಕು. ಉದಾಹರಣೆಗೆ 2^3 ರ ಬೆಲೆ (ಎರಡರ ಘಾತ ಮೂರು ಎಂದು ಓದಬೇಕು) Dಯಲ್ಲಿ 2ಕ್ಕೆ ಹೊಂದುವಂತೆ 1C ಸರಿಸಿ. ಈ ಸ್ಥಿತಿಯಲ್ಲಿ Bಯು 2ಕ್ಕೆ ಹೊಂದಿಕೊಂಡಿರುವ ಸ್ಥಳದಲ್ಲಿ Aಯಲ್ಲಿ ಉತ್ತರ 8

ಇದೇ ರೀತಿ [ಎಂಟರ ತೃತೀಯ ಘಾತ ಮೂಲ] Aಯಲ್ಲಿ 8. ಜಾರುವ ಪಟ್ಟಿಸರಿಸಿ, 8ರ ಕೆಳಗೆ Bಯು ಯಾವ ಸಂಖ್ಯೆ ಬರುತ್ತದೋ ಅದೇ Dಸಂಖ್ಯೆಗೆ 1C ಬರುವಂತೆ ಹೊಂದಿಸಿ. ಆಗ 1C ಕೆಳಗೆ Dಯಲ್ಲಿರುವ ಸಂಖ್ಯೆಯೇ [ಅಥವಾ A8ರ ಕೆಳಗೆ B ಯಲ್ಲಿರುವ ಸಂಖ್ಯೆಯೇ] ಉತ್ತರ. ಅದು ಇಲ್ಲಿ 2.

ಇತರ ಘಾತ ಮತ್ತು ಘಾತ ಮೂಲಗಳು : ಉದಾಹರಣೆಗೆ 2^5, $X = 2^5$ಇರಲಿ ಆಗ $\log x = 5\log 2$; $\log(\log x) = \log 5 + \log(\log 2)$. ಈ ಲೆಕ್ಕ ಮಾಡಲು log log ಮಾನದಂಡಬೇಕು.

ಇತರ ಸಮಸ್ಯೆಗಳು : ತ್ರಿಕೋನಮಿತಿ ಮತ್ತು ನೌಕಾಯಾನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ತ್ರಿಕೋನ ಮಿತಿಯ ಮಾನದಂಡಗಳಿದ್ದರೆ ಸುಲಭವಾಗಿ ಬಿಡಿಸಬಹುದು. ವಿದ್ಯುತ್ ಶಿಲ್ಪಕ್ಕೆ ಸಂಬಂಧಿಸಿದ ಕೆಲವು ವಿಶೇಷ ಸಮಸ್ಯೆಗಳನ್ನು ಬಗೆಹರಿಸಲು ಕೆಲವು ಸ್ಲೈಡ್ ರೂಲುಗಳಲ್ಲಿ ಪ್ರತ್ಯೇಕ ಮಾನದಂಡಗಳಿರುತ್ತವೆ. ಇದೇ ರೀತಿ ಹೆಚ್ಚಿನ ಉಪಯುಕ್ತ ಮಾನದಂಡಗಳಿರುವ ವಿಶೇಷ ಸಮಸ್ಯೆಗಳಿಗೆ ಅನುಕೂಲವೆನಿಸುವ ವಿವಿಧ ರೀತಿಯ ಸ್ಲೈಡ್ ರೂಲುಗಳು ಬಳಕೆಯಲ್ಲಿವೆ.

1. ಪಂಪಭಾರತದ ವರದಾ ನದಿ—'ಒಂದು ಪ್ರತಿಕ್ರಿಯೆ'ಗೆ ಒಂದು ಉತ್ತರ

'ಸಾಧನೆ' ಪತ್ರಿಕೆಯ 2ನೆಯ ಸಂಪುಟದ 4ನೆಯ ಸಂಚಿಕೆಯಲ್ಲಿ 'ಮಂಥನ' ವಿಭಾಗದಲ್ಲಿ ನನ್ನ ಲೇಖನ 'ಪಂಪಭಾರತದ ವರದಾನದಿ'[1] ಇದಕ್ಕೆ ಪ್ರತಿಕ್ರಿಯೆಯಾಗಿ ಒಂದು ಲೇಖನ ಬಂದಿದೆ. ಖಂಡನೆಗಳು, ಮಂಡನೆಗಳು, ನಡೆಯಬೇಕಾದದ್ದೆ. ಪ್ರೊ. ಡಿ. ಎಲ್. ನರಸಿಂಹಾಚಾರ್ಯರು ಪಂಪಭಾರತದಲ್ಲಿನ ವರದಾ ನದಿ ಬನವಾಸಿ ಪ್ರದೇಶದ್ದೆಂದು ಹೇಳಿದ್ದಾರೆ, ಕಾರಣ ಲಕ್ಷ್ಮೀತಾತಾಚಾರ್ಯರಿಗೂ (ಪ್ರತಿಕ್ರಿಯೆಕಾರರು) ಅದು ಬನವಾಸಿ ದೇಶದ್ದು ! ನನ್ನ ಲೇಖನದ ಸಾರ, 'ಅರಿಕೇಸರಿಯ ರಾಜ್ಯದ ಎಲ್ಲೆಯಲ್ಲೆ ಇದ್ದ ವರದಾನದಿಯನ್ನು ಪಂಪನು ಹೇಳಿದ್ದಾನೆ' ಎಂಬುದು ಗೌಣ !! ಇದಕ್ಕೆ ಕಾರಣ ಅವರು ಪಂಪನು ಬನವಾಸಿ ದೇಶದವನು ಎಂಬ ತಂದ್ರಾಳು ಸ್ಥಿತಿಯಲ್ಲಿರುವುದು. ಪಂಪನ ಆಶ್ರಯದಾತನಾದ ಅರಿಕೇಸರಿಯ ರಾಜ್ಯದ ಎಲ್ಲೆ, ಆ ಎಲ್ಲೆಯಲ್ಲಿ ವರದಾ ನದಿ ಇದ್ದಿತೊ ಇಲ್ಲವೊ— ಈ ವಿಷಯಗಳ ಬಗೆಗೆ ಲೇಖಕರು ಒಂದು 'ಚ'ಕಾರ ವನ್ನೂ ಬರೆದಿಲ್ಲ.[2] ತೋಲನ ದೃಷ್ಟಿಯಿಂದ. ಇತಿಹಾಸದ ವಿಮರ್ಶೆಯಲ್ಲಿ ಚರಿತ್ರೆಯ ಎರಡು ಕಣ್ಣುಗಳಾದ 'ಕಾಲಾನುಪೂರ್ವಿ ಮತ್ತು ಭೂಗೋಳ'[3] ಇವುಗಳನ್ನು ವಿಮರ್ಶಕ ಅಲಕ್ಷಿಸಬಾರದು. ಪಂಪನಿಗೆ ಬನವಾಸಿಯ ಸೌಂದರ್ಯದ ವಿನಾ ನೆಲದ ವಾಸನೆಯಿಲ್ಲ. ಅವನ ಮಣ್ಣಿನ ವಾಸನೆಯೆಲ್ಲ ಸಪಾದಲಕ್ಷ ಕ್ಷಿತಿಯಲ್ಲಿ. ಪಂಪನು ಬನವಾಸಿಯಲ್ಲೆ ಇರಲು ನೆಲೆವೀಡೊಂದನ್ನು (ಅಗ್ರಹಾರವನ್ನು) ಬಯಸಿದ್ದರೆ, ಆತನು ಅಲ್ಲಿ ಪಡೆಯಬಹುದಾಗಿತ್ತು. ಏಕೆಂದರೆ ರಾಷ್ಟ್ರಕೂಟ ಬದ್ದೆಗನನ್ನು ಸಾಮ್ರಾಟನನ್ನಾಗಿ ಮಾಡಿದ ಬಲವಂತ—ಅರಿಕೇಸರಿ. ಪಂಪನು ಪಡೆದ ಅಗ್ರಹಾರ 'ಧರ್ಮಪುರ' ಇದ್ದುದು ಸಬ್ಬಿನಾಡಿನಲ್ಲಿ—ಸಪಾದಲಕ್ಷಕ್ಷಿತಿಯಲ್ಲಿ !![4] ಕುರಜಾಂಗಣನಾದ ವರ್ಣನೆಯ ಸಪಾದ

[1] 'ಸಾಧನೆ' ಸಂಪುಟ 2, ಸಂಚಿಕೆ 3, ಪು. 92-96

[2] ಅದೇ ಸಂಚಿಕೆ 4, 'ಮಂಥನ' -ಪು. 205-209

[3] 'Chronology and geography'- Early History of the Deccan (Ed. yazdani) p. 151

[4] ಜಿನವಲ್ಲಭನ ಗಂಗಾಧರದ ಶಿಲಾ ಶಾಸನ (1) ಪ್ರ. ಕ. 50-3, ಪು. 23-41
(2) ಪ್ರ. 53-4, ಪು 73-83

ಲಕ್ಷ್ಮೀತಾತಾಚಾರ್ಯರ ವರ್ಣನೆ (ಅಭೇದರೂಪಕ-ತಂತ್ರದ ಮೂಲಕ), ಸಹೃದಯ ಲೋಕ, ನನ್ನ ಹಾಗೂ ಪ್ರತಿಕ್ರಿಯೆಕಾರರ ಲೇಖನಗಳನ್ನು ಸಮತೋಲನ ದೃಷ್ಟಿಯಿಂದ ಅವಲೋಕಿಸಬೇಕೆಂಬುದಷ್ಟೆ ನನ್ನ ಆಶೆ. ಏಕೆಂದರೆ ಪ್ರತಿಕ್ರಿಯೆ ಲೇಖನದಲ್ಲಿ ಸಮತೂಕದ ದೃಷ್ಟಿಯಿಂದ ವಿಷಯಗಳನ್ನು ಪರಿಶೀಲಿಸಿಲ್ಲ. ಈ ವಿಷಯವನ್ನು ಅಭ್ಯಾಸಿಗಳ ಗಮನಕ್ಕೆ ತರುವುದೇ ಈ ಉತ್ತರದ ಗುರಿ.

1. ಲಕ್ಷ್ಮೀತಾತಾಚಾರ್ಯರ ಪ್ರಕಾರ ಪಂಪನು ಬನವಾಸಿಯ ವರದಾ ನದಿಯನ್ನು ಸ್ತುತಿಸಿದ್ದಾನೆ. ಅದು ಬಹು ಪ್ರಸಿದ್ಧ. ನಾನು ತೋರಿಸಿದ ಅರಿಕೇಸರಿಯ ರಾಜ್ಯದ ಸೀಮೆಯಲ್ಲಿಯೇ ಇದ್ದ ವರದಾ ನದಿ ಅಪ್ರಸಿದ್ಧ. ಗೋದಾವರಿಗೆ ಪೈನಗಂಗೆಯ ಮೂಲಕ ಬಂದು ಸೇರುವ ಈ ವರದಾ ಉಪನದಿ ಅವರಿಗೆ ಅಲ್ಪವಾಗಿ ಕಂಡಿದೆ: **ಅಂತಹ ಅಲ್ಪವಾದ ನದಿ ಪ್ರಸಿದ್ಧವಾದ ವರದಾನದಿ ಹೇಗಾದೀತು ? 'ಪ್ರಸಿದ್ಧ ವರದಾ ಪುಣ್ಯಾಂಬು' ಎಂಬ ಪಂಪ ಮಹಾಕವಿಯ ಉಲ್ಲೇಖವನ್ನಾದರೂ ಹೇಗೆ ಸಮರ್ಥಿಸುವುದು ?** ಎಂದು ಮುಂತಾಗಿ ಪ್ರಶ್ನಿಸಿದ್ದಾರೆ.[5] ಈ ಪ್ರಶ್ನೆಗಳಿಗೆ ಉತ್ತರ, ನನ್ನ ಮೂಲ ಲೇಖನದಲ್ಲಿಯೇ ಇದೆ! ಅದನ್ನಿಲ್ಲಿ ಉದ್ಧರಿಸುವೆ: [ಅರಿಕೇಸರಿಯ ರಾಜ್ಯದ ಭೂಭಾಗದಲ್ಲಿಯ] **ಈ ವರದಾ ಕಾಲಿದಾಸನ ಕಾಲದಿಂದಲೂ ಪ್ರಸಿದ್ಧ. ಅಂತೆಯೇ ಅದರಲ್ಲಿನ ನೀರನ್ನು 'ಪ್ರಸಿದ್ಧ ವರದಾ ಪುಣ್ಯಾಂಬು' ಎಂದು ಪಂಪನು ಹೇಳಿದ್ದಾನೆ.**[6] ಎಂಬುದು ನನ್ನ ಹೇಳಿಕೆಗೆ ಕಾಲಿದಾಸನ ಕೃತಿ 'ಮಾಲವಿಕಾಗ್ನಿಮಿತ್ರ' ನಾಟಕವೇ ಸಾಕ್ಷಿ :

ಪರಭೃತ ಕಲ ವ್ಯಾಹರೇಷು ತ್ವಮಾತ್ತರತಿರ್ಮಧುಂ
ನಯಸಿ ವಿದಿಶಾ ತೀರೋದ್ಯಾನ್ನೇಷ್ವನಂಗ ಇವಾಂಗವಾನ್ ||
ವಿಜಯಕರಿಣಾಮಾಲಾನತ್ವಂ ಗತೈಃ ಪ್ರಬಲಸ್ಯ ತೇ
ವರದ !ವರದಾರೊಧೋ ವೃಕ್ಷೈಃ ಸಹಾವನತೋ ರಿಪುಃ ||[7]

[ಕೋಗಿಲೆಯ ಸವಿಯುಲಿಯೊಳೆಸೆಯುವ ಚಾರು ವಿದಿಶಾತೀರದುಪವನದೆ
ತಳೆದು ರತಿಯನು ಚೈತ್ರದಾನಂದವನು ಭೋಗಿಸು ಮನಸಿಜನ ತೆರದೆ
ಪ್ರಬಲ ಪಡೆಗಳ ನಿನ್ನ ವಿಜಯೇಭಂಗಳರಿಶಿರತತಿಯ ತಾಂ ಭರದೆ
ಬಗ್ಗಿಸಿರ್ಪವು ವರದ ! ವರದಾಲಾನ ತರುಗಳ ಬಗ್ಗಿಸುವ ತೆರದೆ][8]

---

[5] ಸಾಧನೆ, ಸಂ. 2, ಸಂಚಿಕೆ 4, ಪು. 208

[6] ಅದೇ ಸಂಚಿಕೆ-3, ಪು. 95

[7] ಕಾಲಿದಾಸ, ಮಾಲವಿಕಾಗ್ನಿಮಿತ್ರ ನಾಟಕ, ಅಂಕ-5, ಪದ್ಯ-1, (ಕನ್ನಡ ಕಾಳಿದಾಸ ಮಹಾಸಂಪುಟ, ಪು. 1034)

[8] ಅದೇ ಗ್ರಂಥ [ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರ ಅನುವಾದ] ಪು. 44

ನಾನು ವಿವರಿಸಿದ ಈ 'ವರದಾ' ಮಹಾಭಾರತದ ಕಾಲದಿಂದಲೂ ಪ್ರಸಿದ್ಧ.[9] ಐತಿಹಾಸಿಕ ಯುಗದಲ್ಲಿ ವಿಚಾರಿಸಿದರೆ ಅದು 'ವಾಕೌಟಕ' ರಾಜರ ಕಾಲದಿಂದಲೂ ಪ್ರಸಿದ್ಧ.[10] ಆದುದರಿಂದ ಇಂದು ಅದಕ್ಕೆ ನಾನು ಹೊಸದಾಗಿ ಪ್ರಸಿದ್ಧಿಯನ್ನು ಸೃಷ್ಟಿಸಿ ಕೊಡಬೇಕಾಗಿಲ್ಲವೆಂದು ವಿನಮ್ರನಾಗಿ ತಿಳಿಸುವೆ. 'ಅಶ್ಮಕ' ಸಪಾದಲಕ್ಷ ಕ್ಷಿತಿಗೊಡೆಯನಾದ ಅರಿಕೇಸರಿಯ ರಾಜ್ಯದ ಭೂಭಾಗದಲ್ಲಿನ ಈ ವರದಾ ನದಿ ಪಂಪನಿಗೆ (ಅರಿಕೇಸರಿಯ ಆಸ್ಥಾನದ ಮಹಾಕವಿಗೆ) ಬನವಾಸಿಯ ವರದಾ ನದಿಗಿಂತಲೂ ಹೆಚ್ಚು ಸುಪರಿಚಿತ. ಪಂಪನು, ತಾನು ಬಾಳಿ ಬದುಕಿದ ಸಪಾದಲಕ್ಷಕ್ಷಿತಿಯಲ್ಲಿನ ವರದಾ ನದಿಯನ್ನು ಸ್ತುತಿಸಿದ್ದಾನೆಂದರೆ ತಪ್ಪೆ ?

2. ಲಕ್ಷ್ಮೀತಾತಾಚಾರ್ಯರ ಪ್ರಕಾರ ವರದಾ ನದಿಯ ಪ್ರಸಕ್ತಿಯನ್ನುಳ್ಳ ಈ "ರಂಗತ್ತುಂಗತರಂಗ...... ಜಯಶ್ರೀಯುಮಂ" ಪದ್ಯದಲ್ಲಿ ಪಾಠ ದೋಷವೆ ಇಲ್ಲ![11] ನಮಗಾದರೊ 'ಊರ್ಜಿತ' ಎಂದು ನಿರೂಪಿಸುವುದಕ್ಕೆ ಒಂದು ಪ್ರತಿಯಲ್ಲೂ ಆಧಾರವಿಲ್ಲ. 'ಊರ್ಜಿತ' ಎಂಬುದು ಪರಿಷತ್ತಿನ ಸಂಪಾದಕ ನಿಯೋಜಿತ ಪಾಠ (Emendation) ನಿಯೋಜಿತ ಪಾಠದ ಅವಶ್ಯಕತೆ ಯಾವಾಗ ? ನಿಯೋಜಿತ ಪಾಠ ಕವಿಪಾಠ ಆಗಬಹುದೆ ? ಸುಜನರು ಇದನ್ನು ಪರಿಶೀಲಿಸಬೇಕು. ನಾನು ನಿರೂಪಿಸಿದ 'ಸಂಗತ್ಯೋರ್ಚಿತ' ಎಂಬುದು ಒಂದು ಪ್ರತಿಯ ಪಾಠ (ಘ)[12]. ಇನ್ನು ಮಿಕ್ಕಿನ ಪ್ರತಿಗಳಲ್ಲೂ ಇದಕ್ಕೆ ಹತ್ತಿರದ ರೂಪದ ಅಪಪಾಠಗಳೇ ಇವೆ: **ತ್ಯಂಚಿತ** (ಕ) ತ್ಯೆಂಚಿತ (ಖ) **ತ್ಯೊಚಿತ** (ಗ) 'ಗ' ಪ್ರತಿಯಲ್ಲಿ ಆರ್‍ಕಾ (೯) ವೊತ್ತಿನ ಸ್ಖಾಲಿತ್ಯ ಮಾತ್ರವಿದೆ. ಅಷ್ಟನ್ನು ಪೂರೈಸಿಕೊಂಡರೆ ನಮ್ಮ ನಿರೂಪಣೆಗೆ ಇನ್ನೊಂದು ಪ್ರತಿಯ ಬಲ ಉಂಟಾಗುತ್ತದೆ. 'ಖ' ಪ್ರತಿಯು ಎಲ್ಲಕ್ಕಿಂತಲೂ ಆಧುನಿಕವೆಂದು ತೋರುವುದರಿಂದ[13] ಅದಕ್ಕೆ ಸಂಪಾದನಾ ಶಾಸ್ತ್ರದಲ್ಲಿ ಬೆಲೆ ಕಡಿಮೆ. ಪ್ರತಿಕ್ರಿಯೆಕಾರರು 'ಊರ್ಜಿತ' ಇದು ಕವಿಪಾಠವೆಂದು ನಿರೂಪಿಸಿದ್ದಾರೆ. ಇದಕ್ಕೆ

---

9 ನೋಡಿ, 'ಪುರಾಣನಾಮ ಚೂಡಾಮಣಿ'-ವರದಾ ನದಿ

10 Prof. V. V. Mirashe, C.I.I. Vol. V, Introduction, p. xxxii

11 ಸಾಧನೆ, ಸಂ. 2, ಸಂಚಿಕೆ-4. p. 205– ಇಲ್ಲಿ ಅಚ್ಚಾದ ಪದ್ಯವನ್ನು ನೋಡಿ, ಒಂದಾದರೂ ಕಂಸವಿಲ್ಲ !!

12 ಪಂಪನ ಕಾಲಕ್ಕೆ 'ಎ,ಏ ಮತ್ತು ಒ,ಓ,' ಇವುಗಳನ್ನು ಸಂದರ್ಭಾನುಸಾರ ಹ್ರಸ್ವ ದೀರ್ಘ ರೂಪಗಳಿಂದ ಸ್ವೀಕರಿಸುತ್ತಿದ್ದರು. ಈ ಹ್ರಸ್ವ 'ಎ, ಒ' ಗಳಿಗೆ ಚಾಕ್ಷುಷ ರೂಪವೇ ಇದ್ದಿಲ್ಲ. ಕಾರಣ ಆ ಕಾಲಕ್ಕೆ 'ತ್ಯೊರ್ಚಿತ' ಮತ್ತು 'ತ್ಯೋರ್ಚಿತ' ಇವುಗಳಿಗೆ ಏಕ ರೂಪವೇ ಇದ್ದಿತು. ವಿಶೇಷ ವಿಚಾರಕ್ಕೆ ನೋಡಿ: ಕನ್ನಡ ವರ್ಣಗಳು–ಒಂದು ವಿವೇಚನೆ' ಕ. ಸಾ. ಪ. ಪತ್ರಿಕೆ-ಸಂಪುಟ 57, ಸಂಚಿಕೆ-3.

13 ವಿ. ವಿಜಯ, ಉಪೋದ್ಘಾತ, ಪುಟ viii

ಆಧಾರವೇನು ? ನನ್ನ ಈ ಬರವಣಿಗೆಗೆ ಸಾಕ್ಷಿ ಪರಿಷತ್ತಿನಿಂದ ಪ್ರಕಟವಾದ ವಿಕ್ರಮಾರ್ಜುನ ವಿಜಯ (ಪಂಪಭಾರತ)ದ ಪು. 410 ರಲ್ಲಿನ ಪದ್ಯ ಮತ್ತು ಅದರ ಅಡಿ ಟಿಪ್ಪಣಿಗಳು.

3. ನನ್ನ ಪ್ರಕಾರ "ವರದಾ ಪುಣ್ಯಾಂಬು ಗೋದಾವರೀ ಸಂಗತ್ಯೋರ್ಜಿತ ವಾರಿಸಾರ" ಇದು ಒಂದು ಘಟಕ. ಲಕ್ಷ್ಮೀತಾತಾಚಾರ್ಯರ ಪ್ರಕಾರ ಇಲ್ಲಿ ಎರಡು ಘಟಕಗಳು : (1) ವರದಾ ಪುಣ್ಯಾಂಬು (2) ಗೋದಾವರೀ ಸಂಗತ್ಯೋರ್ಜಿತ ವಾರಿ– ಅಥವಾ ಪೂಜ್ಯ ಡಿ. ಎಲ್. ಎನ್. ಅವರು ಹೇಳಿರುವ 'ಸಂಗತ್ಯೂರ್ಜಿತ ವಾರಿ- ಇವುಗಳಲ್ಲಿ ಒಂದು ಪಾಠ ಸರಿ. ಅರ್ಥಾತ್ ಅವರಿಗೆ ಇಲ್ಲಿನ ಪಾಠದ ಬಗೆಗೆ ಖಚಿತತೆ ಇಲ್ಲ. 'ಊರ್ಜಿತ' ಎಂಬುದು ಕವಿಪಾಠ! ಮತ್ತು ಡಿ. ಎಲ್. ಎನ್. ಅವರ ವಿವರಣೆ ಸಂಪೂರ್ಣ ಸರಿಯಾಗಿದೆ.[14] ಪ್ರತಿಕ್ರಿಯೆಕಾರರು ಡಿ. ಎಲ್. ಎನ್. ಅವರ ವಿವರಣೆಯನ್ನೇ ಸರಿಯಾಗಿ ಪರಿಶೀಲಿಸಿಲ್ಲ. ಏಕೆಂದರೆ ಆ ವಿವರಣೆಯಲ್ಲಿ ಸ್ಪಷ್ಟ ವಾಗಿ ಕ್ಲೇಶವಿದೆ : ಗೋದಾವರೀ ಸಂಗತ್ಯೂರ್ಜಿತವಾರಿ-ಗೋದಾವರೀ ನದಿಯಲ್ಲಿ ಸೇರಿರುವ ವರ್ಧಿಸುತ್ತಿರುವ ನೀರು.[15] ಪ್ರತಿಯೊಂದು ನದಿಯಲ್ಲೂ ನೀರು ಇದ್ದಿತಷ್ಟೆ ? ವಸ್ತುಸ್ಥಿತಿಯು ಹೀಗಿರುವಾಗ "ಗೋದಾವರೀ ನದಿಯಲ್ಲಿ ಸೇರಿರುವ ವರ್ಧಿಸುತ್ತಿರುವ ನೀರು" ಎಂಬ ಮಾತಿನಲ್ಲಿ **ಸೇರಿರುವ** ಇದಕ್ಕೆ ಏನು ಅರ್ಥ ಹೇಳ ಬೇಕು ? 'ಸೇರಿರುವ' ಎಂಬ ಪದಪ್ರಯೋಗವೇಕೆ ? ಇದರ ವೈಶಿಷ್ಟ್ಯವೇನು ? ಯಾವುದು ಬಂದು ಸೇರಿತು ? 'ಸೇರಿರುವ' ಎಂಬ ಮಾತಿನಲ್ಲಿ ಇನ್ನೊಂದು ನದಿಯನ್ನು ಸೂಚಿಸುವುದಿಲ್ಲವೆ ? ಇನ್ನೊಂದು ನದಿ ಬಂದು ಸೇರಿದ್ದರೆ ಅದು ಯಾವುದು ? ಕೇವಲ ಗೋದಾವರೀ ನದಿಯೊಂದನ್ನೆ ಹೇಳುವುದು ಕವಿಗೆ ಇಚ್ಛೆ ಯಾಗಿದ್ದರೆ 'ಸೇರಿರುವ' ಎಂಬ ಅರ್ಥದ ಸಂಗತ್ಯೂರ್ಜಿತ ಶಬ್ದ ಪ್ರಯೋಗವೇಕೆ ? ನಮಗಂತೂ ಹೀಗೆ ಸೇರಿರುವ ನದಿ 'ವರದಾ' ಎಂಬುದು ಸ್ಪಷ್ಟ. ಇದು ಸರಿ ಯಾದರೆ ಈ 'ವರದಾ' ನಾವು ತೋರಿಸಿರುವ ಗೋದಾವರೀ ನದಿಯ ಉಪನದಿ 'ವರದಾ'ವೇ ವಿನಾ ಬನವಾಸಿ ದೇಶದ ವರದಾ ನದಿಯಲ್ಲ. ಇನ್ನು ನಾನು ಹೇಳಿರುವ ಪಾಠ "ವರದಾ ಪುಣ್ಯಾಂಬು ಗೋದಾವರೀ ಸಂಗತ್ಯೋರ್ಜಿತ ವಾರಿ ಸಾರ" ಇದರಲ್ಲಿ ವ್ಯಾಕರಣ ದೋಷಗಳಿವೆಯೆಂದು ಕೆಲ ಹೇಳಿಕೆಗಳನ್ನು ಇತ್ತಿದ್ದಾರೆ. ಈ ಘಟಕವಲ್ಲಿ 'ವರದಾ' ಇದು 'ಆ' ಕಾರಾಂತ ಸ್ತ್ರೀಲಿಂಗ ಶಬ್ದ ; ಗೋದಾವರೀ- ಇದು 'ಈ' ಕಾರಾಂತ ಸ್ತ್ರೀಲಿಂಗ ಶಬ್ದ. ಈ ಎರಡನ್ನು ಒಂದಾಗಿಸಿ ಕೊಂಡಿರುವ 'ಸಂಗತ್ಯೋಃ' ಇದು 'ಗಚ್ಛ' ಎಂಬ ಅಂಗವನ್ನು ಹೊಂದಿದ 'ಗಮ್' ಧಾತು

---

[14] ಸಾಧನೆ, ಸಂಪುಟ 2, ಸಂಚಿಕೆ 3, ಪುಟ-209

[15] ಪ್ರೊ। ಡಿ.ಎಲ್.ಎನ್., ಪಂಪಭಾರತದೀಪಿಕೆ, ಪು. 564-65

'ಸಂ' ಎಂಬ ಉಪಸರ್ಗ ಮತ್ತು 'ಚಿ' ಎಂಬ ಕೃದಂತ ಪ್ರತ್ಯಯವನ್ನು ಹೊಂದಿಕೊಂಡು ಆದ ಕೃನ್ನಾಮ ಪದ. ಈ ಕೃನ್ನಾಮಕ್ಕೆ ಎರಡೂ ಸ್ತ್ರೀಲಿಂಗ ಶಬ್ದಗಳನ್ನು ಸೂಚಿಸುವ ಶಕ್ತಿ ಬರಬೇಕಾದರೆ, ಈ ಸ್ತ್ರೀಲಿಂಗ ಶಬ್ದಗಳ ಷಷ್ಠೀ 'ಸುಪ್' ಪ್ರತ್ಯಯದ ದ್ವಿವಚನದ 'ಯೋಃ' ಬರಬೇಕಾಗುತ್ತದೆ- ಇನ್ನೊಂದಲ್ಲ. ಇಲ್ಲಿನ ವಿಸರ್ಗದ ಮುಂದೆ 'ಅರ್ಚಿತ'[16] ದ 'ಅ' ಬರುವುದರಿಂದ ವಿಸರ್ಗ ಲೋಪವಾಗುತ್ತದೆ. ಕಾರಣ 'ಸಂಗತ್ಯೋರ್ಚಿತ' ಇದು ಸಾಧುವಾದ ರೂಪವೇ. ಎರಡೂ ನದಿಗಳ ನೀರು ಬೆರೆತು ಒಂದಾಗುವುದರಿಂದ ಅನಂತರದಲ್ಲಿ ಆ ಎರಡು ವಾರಿಗಳು ಒಂದು 'ವಾರಿ' ಆಗುತ್ತದೆ. ಅಂತೆಯೇ 'ವಾರಿ' ಎಂಬುದು ಏಕವಚನದಲ್ಲಿದೆ. ತರುವಾಯದಲ್ಲಿ ಬಂದಿರುವ 'ಸಾರ' ಇದು ಅವ್ಯಯದಂತೆ ವರ್ತಿಸಿದೆ 'ಸದಾ' ಇತ್ಯಾದಿಗಳ ಹಾಗೆ.[17] ಅವ್ಯಯಕ್ಕೆ ವಿಭಕ್ತಿಗಳ ಅವಶ್ಯಕತೆಯಿಲ್ಲವಷ್ಟೆ? ಆದುದರಿಂದ ಪ್ರತಿಕ್ರಿಯೆಕಾರರು ಸೂಚಿಸುವಂತೆ ಇಲ್ಲಿ ಪ್ರಥಮಾ ವಿಭಕ್ತಿಯ ಅವಶ್ಯಕತೆಯಿಲ್ಲ. ಅತ ಏವ ನನ್ನ ನಿರೂಪಣೆಯಲ್ಲಿ, ಸ್ವೀಕರಿಸಿದ ಪಾಠದಲ್ಲಿ, ವ್ಯಾಕರಣ ದೋಷಗಳು ಲಕ್ಷ್ಮೀತಾತಾಚಾರ್ಯರು ಆರೋಪಿಸಿದಂತೆ ಇಲ್ಲ.

ಸೀತಾರಾಮ ಜಾಗೀರದಾರ

---

16 'ಅರ್ಚಿತ' ಇದು ಕೃದಂತ

17 ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ। ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥ - ಇಲ್ಲಿ 'ನಮಸ್' ಮತ್ತು 'ಸದಾ'-ಇವು ಅವ್ಯಯಗಳು

2. 'ಚಿಕ್ಕ' ಪದ ವಿವೇಚನೆ

ದ್ರಾವಿಡ ಭಾಷೆಗಳಲ್ಲಿ 'ಕ್' ಕಾರದ ಬೆಳವಣಿಗೆಯ ಹಿನ್ನೆಲೆಯಲ್ಲಿ[1] 'ಚಿಕ್ಕ' ಪದದಲ್ಲಿರುವ 'ಚ' ಕಾರವು ಮೂಲ ದ್ರಾವಿಡ ಭಾಷೆಯಲ್ಲಿ 'ಚ್' ಕಾರವಾಗಿಯೇ ಇದ್ದಿತೋ ಅಥವಾ 'ಕ್' ಕಾರವಾಗಿದ್ದಿತೋ ಎಂಬ ಸಮಸ್ಯೆಯನ್ನು ವಿಚಾರಿಸುವಾಗ 'ಕ್' ಕಾರ ಆದಿಯಲ್ಲಿದ್ದರೆ ಮೂಲ ದ್ರಾವಿಡ 'ಕ್' ವನ್ನು ಉಳಿಸಿಕೊಂಡು ಬಂದಿರುವ

---

1 ಪೂರ್ವದ್ರಾವಿಡ ಪದಾದಿಯ 'ಕ' ಕಾರದ ಮುಂದೆ ಪೂರ್ವ ಸ್ವರಗಳು ಬಂದಿದ್ದರೆ, ಹಾಗೂ ಈ ಪೂರ್ವ ಸ್ವರಗಳ ಮುಂದೆ ಮೂರ್ಧನ್ಯ ವ್ಯಂಜನಗಳು ಇರದಿದ್ದರೆ, ತಮಿಳು ಮಲಯಾಳಂ ಭಾಷೆಗಳಲ್ಲಿ ಶಬ್ದಾದಿಯ 'ಕ್' ಕಾರವು 'ಚ್' ಕಾರವಾಗಿ ಪರಿವರ್ತಿತವಾಗುತ್ತದೆ. ತೆಲುಗಿನಲ್ಲಿ 'ಕ್' ದ ಮುಂದೆ ಪೂರ್ವ ಸ್ವರಗಳಿದ್ದು ಅವುಗಳ ಮುಂದೆ ಮೂರ್ಧನ್ಯ ವ್ಯಂಜನಗಳು ಬಂದರೂ ನಿಯಮಿತ ಕ್ > ಚ್ ಬದಲಾವಣೆ ಕಂಡುಬರುತ್ತದೆ. ಕನ್ನಡವು ಈ ಪರಿಸರದಲ್ಲಿ ಮೂಲ 'ಕ್' ವನ್ನು ಉಳಿಸಿಕೊಂಡಿದೆ. ಕನ್ನಡದಂತೆ 'ಕ್' ವನ್ನು ಉಳಿಸಿಕೊಂಡು ಬಂದ ಭಾಷೆಗಳಲ್ಲಿ ತೋಡ, ಕೋಟ, ತುಳು,

ಕನ್ನಡ ಭಾಷೆಯಲ್ಲಿ ಈ ಪದಾದಿಯಲ್ಲಿ 'ಕ್' ದ ಬದಲು 'ಚ್' ಏಕೆ ಉಳಿದಿದೆ? ಮೂಲ ದ್ರಾವಿಡದಲ್ಲಿಯೇ ಈ ಪದವು ಆದಿಯಲ್ಲಿ 'ಚ್' ವನ್ನು ಹೊಂದಿದ್ದು, ಕನ್ನಡ ತಮಿಳು ತೆಲುಗುಗಳಿಗೆ ಅದು ಯಥಾವತ್ತಾಗಿ ಇಳಿದು ಬಂದಿದ್ದರೆ, ಅದರ ಬೆಳವಣಿಗೆಯ ಘಟ್ಟಗಳೇನಾದರೂ ಇವೆಯೆ ? ಎಂಬ ಪ್ರಶ್ನೆಗಳು ಎದುರಾಗುತ್ತವೆ.

ಕಿಟೆಲ್ಲರು ತಮ್ಮ ಶಬ್ದಕೋಶದಲ್ಲಿ 'ಚಿಕ್ಕ' ಪದಕ್ಕೆ ಈ ಕೆಳಗಿನಂತೆ ನಿಷ್ಪತ್ತಿ ಹೇಳಿದ್ದಾರೆ :

Cikka (from ಚಿಱು) = ಚೀಗ, ಚೀಕು little, small[2]...

(ಚಿಕ್ಕ ಪದವು 'ಚಿಱು' ಎಂಬ ಪದದಿಂದ ಬಂದಿದೆಯೆಂಬುದನ್ನು ಇದು ವಿವರಿಸುತ್ತದೆ)

ಈ ವಿವರಣೆ ಸಮರ್ಪಕವಲ್ಲವೆಂದು ಸುಪ್ರಸಿದ್ಧ ದ್ರಾವಿಡ ಭಾಷಾ ವಿಜ್ಞಾನಿಗಳಾದ ಪ್ರೊ. ಟಿ. ಬರೊ ಅವರು ಅಭಿಪ್ರಾಯಪಟ್ಟಿದ್ದಾರೆ. ಅವರು 'ಚಿಕ್ಕ' ಪದವು 'ಚಿಱು' ಪದದಿಂದ ಬಂದಿಲ್ಲವೆಂಬುದನ್ನು ಸಮರ್ಥಿಸಿ ಈ ಪದದಲ್ಲಿರುವ 'ಚ' ಕಾರವು ಮೂಲ ದ್ರಾವಿಡದ್ದಾಗಿದೆಯಲ್ಲದೆ ಇದು 'ಚಿಱು' ಅಥವಾ 'ಕಿಱು' ಈ ಪದಗಳಿಗೆ ಸಂಬಂಧಿಸಿಲ್ಲವೆಂದು ಸ್ಪಷ್ಟೀಕರಿಸಿದ್ದಾರೆ.[3]

ಕೊಡಗು ಭಾಷೆಗಳೂ ಸೇರುತ್ತವೆ. ತಾಲವ್ಯೀಕರಣ ಪ್ರತಿಕ್ರಿಯೆಯನ್ನು ಈ ರೀತಿ ಸಂಕ್ಷೇಪವಾಗಿ ಸೂಚಿಸಬಹುದು :

* ಕ್-[-ಇ, ಈ, -ಎ, ಏ,-ವ್ಯಂಜನ [ಮೂರ್ಧನ್ಯದ ಹೊರತಾಗಿ] > ಚ್-(ತಮಿಳು, ಮಲೆಯಾಳಂಗಳಲ್ಲಿ)

* ಕ್-[-ಇ, ಈ- ಎ, ಏ- ವ್ಯಂಜನ > ಚ್ -ತೆಲುಗಿನಲ್ಲಿ.

[2] Kittel : Kannada English Dictionary, Vol. II (1969) Page 642

[3] The commonest word for 'small' in Kannada is Cikka. Kittel derives this from Ciru [Kiru] comparing for the Suffix Malayalam Cerukkan, boy, Lad. This cannot be correct because K- does not become C in Kannada except in rare dialectal forms. Thus Ciru occurs rarely probably due to the influence of Telugu or Tamil, but the regular and usual form is Kiru.

In the case of Cikka on the other hand no trace of K- appears so that C- here must be regarded as original and the word can have no connection with Ciru < Kiru.

T. Burrow collected papers on Dravidian Linguistics, Page 34

ಕಿಟೆಲ್ಲರು ಎರಡು (ಚಿಱು ಹಾಗೂ ಚಿಕ್ಕ) ಸಮಾನಾರ್ಥಕ ಬೇರೆ ಬೇರೆ ಶಬ್ದಗಳನ್ನು ಎತ್ತಿಕೊಂಡು ಚಿಕ್ಕ ಪದದ ನಿಷ್ಪತ್ತಿಯನ್ನು ಹೇಳಹೊರಟು ಎಡವಿವರೆ, ಟಿ. ಬರೊ ಅವರು 'ಚಿಕ್ಕ' ಪದದಲ್ಲಿಯ 'ಚ' ಕಾರವು ಮೂಲದ್ರಾವಿಡದ್ದೆಂದು ಮಾತ್ರ ಹೇಳಿದರೆ ಹೊರತು ಇಡೀ ಪದವು ಮೂಲದಿಂದ ಕನ್ನಡ ಹಾಗೂ ಇನ್ನಿತರ ದ್ರಾವಿಡ ಭಾಷೆಗಳಲ್ಲಿ ಇಳಿದುಬಂದ ಬಗೆಯನ್ನು ವಿವೇಚಿಸಲಿಲ್ಲ.

ಪ್ರೊ. ಎಂ. ಬಿ. ಎಮಿನೊ ಅವರು ಚಿಕ್ಕದು ಎಂಬ ಅರ್ಥವುಳ್ಳ ದ್ರಾವಿಡ ಪದಗಳ ಬಗೆಗೆ ವಿವರಿಸಿದ್ದರೂ 'ಚಿಕ್ಕ' ಪದ ನಿಷ್ಪತ್ತಿಯ ಬಗೆಗೆ ಪ್ರಸ್ತಾಪಿಸಿಲ್ಲ.[4] ಅವರು 'ಕಿಱು' ಪದದ ಈ ಕೆಳಗಿನ ಸಂವಾದಿ ಶಬ್ದಗಳನ್ನು ನೀಡಿದ್ದಾರೆ[5] :

ತಮಿಳು/ಮಲೆಯಾಳಂ,	ಕೋಟ,	ತೋಡ,	ಕನ್ನಡ,	ತುಳು,	ತೆಲುಗು.
ಚಿಱು	ಕಿರ್	ಕಿಱ್	ಕಿಱು/ಕಿಱಿ	ಕಿರು/ಕಿರಿ	ಚಿಱು

ಇದು ಕಿಱು > ಚಿಱು ಆಗಿದೆಯೆಂಬುದನ್ನೇ ಸಮರ್ಥಿಸುತ್ತದೆ.

ಹಂಪ ನಾಗರಾಜಯ್ಯ ಅವರು 'ವಾಸ್ತವವಾಗಿ ಈ ಪದ ಕನ್ನಡದಲ್ಲಿ 'ಕ್' ಕಾರದ ಧ್ವನಿ ನಿಯಮಗಳಿಗೆ ಒಂದು ಅಪವಾದದಂತೆ ಇದೆಯೆಂದು ಹೇಳಬಹುದೇ ಹೊರತು ಕಿಱು > ಚಿಱು ಆಯಿತೆಂದು ಹೇಳಲು ಸಾಧ್ಯವಿಲ್ಲ'[6] ಎಂದು ವಿವರಿಸಿ ಕಿಱು, ಚಿಱು ಪದಗಳು ಪರಸ್ಪರ ಸಂಬಂಧವನ್ನು ಹೊಂದಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರಲ್ಲದೆ ಕಿಟೆಲ್ಲರ ವಿವರಣೆಯನ್ನು ಅಲ್ಲಗಳೆದಿದ್ದಾರೆ. ಒಟ್ಟಿನಲ್ಲಿ 'ಚಿಕ್ಕ' ಪದವು ಈವರೆಗೆ ಅನೇಕ ಪಂಡಿತರ ಗಮನವನ್ನು ಸೆಳೆದಿದ್ದರೂ ಅದರ ಸಮರ್ಪಕವಾದ ವಿವೇಚನೆ ಆಗದೇ ಉಳಿದಿದೆಯೆನ್ನಬಹುದು.

'ಚಿಱು' ಪದಕ್ಕೂ 'ಚಿಕ್ಕ' ಪದಕ್ಕೂ ಸಂಬಂಧವಿಲ್ಲವೆಂಬುದನ್ನು ಒಪ್ಪಬಹುದೇ ಹೊರತು ಕಿಱು > ಚಿಱು ಆಯಿತೆನ್ನುವುದನ್ನು ಅಲ್ಲಗಳೆಯುವುದಾಗಲಿ 'ಚಿಕ್ಕ' ಪದ 'ಕ್' ಕಾರ ಧ್ವನಿ ನಿಯಮಗಳಿಗೆ ಒಂದು ಅಪವಾದವೆಂದು ಹೇಳುವುದಾಗಲಿ ನಮಗೆ ಸರಿಯೆಂದು ತೋರುವುದಿಲ್ಲ. ತಾಲವ್ಯೀಕರಣದ ನಿಯಮಕ್ಕನುಗುಣವಾಗಿಯೇ ಕಿಱು > ಚಿಱು ಆಗಲು ಸಾಧ್ಯವೆಂಬುದು ಸ್ಪಷ್ಟವಾಗಿದೆ. ಇಂತಹ ಉದಾಹರಣೆಗಳೂ ದೊರೆಯುವುದರಿಂದ ಇದನ್ನು ಸಮರ್ಥಿಸದಾಬಹುಗಿದೆ.

---

[4] M. B. Emeneau—Dravidian Linguistics Ethnology and Folk tales Collected Papers. Page 58

[5] ಅದೇ, ಪುಟ 48

[6] ಹಂಪನಾ : ದ್ರಾವಿಡ ಭಾಷಾವಿಜ್ಞಾನ (ದ್ವಿತೀಯ ಮುದ್ರಣ) ಪುಟ 381

ಮೂಲ ದ್ರಾವಿಡ	ಕನ್ನಡ	ತಮಿಳು	ಮಲೆಯಾಳಂ	ತೆಲುಗು
ಕೀ	ಕೀ(ವು)	ಚೀ	ಚೀ	ಚೀಮು
ಕಿರಿ 'ನಗು'	ಕಿರಿ	ಚಿರಿ	ಚಿರಿ	—[8]

ಮೂಲ ದ್ರಾವಿಡ 'ಕಿಱು' ಪದದಿಂದ ಬಂದ ಕನ್ನಡದ ಕಿಱು ಪದವು ಈಗಲೂ ಚಿಕ್ಕದು ಎಂಬರ್ಥದಲ್ಲಿ ಬಳಕೆಯಲ್ಲಿರುವುದನ್ನೂ ಗಮನಿಸಬೇಕು. 'ಕಿಱು' ಪದದ ಸಂವಾದಿ ಪದಗಳು ತಮಿಳು, ಮಲೆಯಾಳಂ, ತೆಲುಗುಗಳಲ್ಲಿ ದೊರೆಯುತ್ತವೆ.

ಕನ್ನಡ	ತಮಿಳು	ಮಲೆಯಾಳಂ	ತೆಲುಗು
ಕಿಱು	ಚಿಱು	ಚಿಱ್ಱು	ಚಿಱು[9]

'ಕಿಱು' ಹಾಗೂ 'ಚಿಕ್ಕ' ಪದಗಳು ಸಮಾನ ಅರ್ಥವನ್ನು ಹೊಂದಿದ್ದರೂ ಅವೆರಡೂ ಬೇರೆ ಬೇರೆ ಪದಗಳೆಂಬುದು ಸ್ಪಷ್ಟವಾಗಿದೆ. ಆದುದರಿಂದ ಕಿಟೆಲ್ಲರು ಹೇಳುವ 'ಕಿಱು' ಪದವು 'ಚಿಕ್ಕ' ಪದರೂಪಕ್ಕೆ ಏನೂ ಸಂಬಂಧಿಸಿಲ್ಲ.

ತಮಿಳು, ಮಲೆಯಾಳಂ, ಕನ್ನಡ ಮುಂತಾದ ಭಾಷೆಗಳಲ್ಲಿ 'ಚಿಕ್ಕ' ಪದವು ಒಂದೇ ರೂಪ ಹಾಗೂ ಅರ್ಥದಲ್ಲಿರುವುದನ್ನು ಇಲ್ಲಿ ಲಕ್ಷಿಸಬೇಕು.

ಕನ್ನಡ	ತಮಿಳು	ಮಲೆಯಾಳಂ	ಕೊಡಗು	ತುಳು	ತೆಲುಗು
ಚಿಕ್ಕ	ಚಿಕ್ಕ	ಚಿಕ್ಕ	ಚಿಕ್ಕ	ಚಿಕ್ಕ	ಚಿಕಿಚಿಕಿ[10]

ಇದಲ್ಲದೆ ಸಂಸ್ಕೃತ, ಪ್ರಾಕೃತ ಮುಂತಾದ ಇಂಡೋ ಆರ್ಯನ್ ಭಾಷೆಗಳಲ್ಲಿ ಕೂಡ 'ಚಿಕ್ಕ' ಎಂಬ ರೂಪವೇ ದ್ರಾವಿಡ ಭಾಷೆಯಿಂದ ಸ್ವೀಕರಿಸಲ್ಪಟ್ಟಿದೆ.[11] ಈ ಕಾರಣಗಳಿಂದ 'ಚಿಕ್ಕ' ಪದವು ಮೂಲ ದ್ರಾವಿಡ ಭಾಷೆಯಲ್ಲಿ ಇದ್ದ ಸ್ವತಂತ್ರ ಪದವೆಂಬುದು ಖಚಿತವಾಗುತ್ತದೆ. ಕನ್ನಡ ಭಾಷೆಯು ಈ ಪದವನ್ನು ಮೂಲದಲ್ಲಿ ಇದ್ದಂತೆ ಇಟ್ಟುಕೊಂಡಿದೆ. ಮೂಲದಲ್ಲಿ ಪದಾದಿಯಲ್ಲಿ 'ಚ' ಕಾರ ಇರುವುದರಿಂದ

---

[7] DED 1337

[8] ಮೂಲದ್ರಾವಿಡ 'ಕಿರಿ' ಪದಕ್ಕೆ ತೆಲುಗಿನಲ್ಲಿ 'ಕೀರು' ಎಂಬ ಸಂವಾದಿ ಪದವನ್ನು ಪ್ರೊ. ಎಮಿನೊ ಅವರು ನೀಡಿದ್ದಾರೆ. DED ಯಲ್ಲಿ ತೆಲುಗು ಸಂವಾದಿ ಪದದ ಪ್ರಸ್ತಾಪ ಇಲ್ಲ. (DED 1304)

[9] DED 1326

[10] DED 2057

[11] Prof. T. Burrow: Collected papers on Dravidian Linguistics (Foot Note), Page 34

ಇತರ ಭಾಷೆಗಳು 'ಚಿಕ್ಕ' ಪದದಲ್ಲಿಯ 'ಚ' ವನ್ನು ಚಕಾರವತ್ತಾಗಿ ಯಥಾವತ್ತಾಗಿ ಇಟ್ಟುಕೊಂಡವು.

ಚಿಕ್ಕವು ಎಂಬ ಅರ್ಥವುಳ್ಳ, ಹಾಗೂ 'ಚ' ಕಾರವನ್ನು ಪದಾದಿಯಲ್ಲಿ ಉಳಿಸಿಕೊಂಡು ಬಂದ ಇಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

ತಮಿಳು	ಕನ್ನಡ	ತೆಲುಗು
ಚಿಟ್ಟು	ಚಿಟ್ಟು	ಚಿಟ್ಟಿ[12]
ಚಿನ್ನ	ಚಿಣ್ಣ	ಚಿನ್ನ[13]

ಮೂಲ ದ್ರಾವಿಡ 'ಚ' ಕಾರವನ್ನು ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳು ಪದಾದಿಯಲ್ಲಿ ಉಳಿಸಿಕೊಂಡು ಬಂದಿರುವುದು ಸ್ಪಷ್ಟವಾಗಿದೆ.

ತಮಿಳು	ಕನ್ನಡ	ತೆಲುಗು
ಚಿಪ್ಪಿ	ಚಿಪ್ಪು (ಶಿಂಪಿ)	ಚಿಪ್ಪ
ಚಿಲ್ಲಜ್ಜೈ	ಚಿಲ್ಲಜಿ	ಚಿಲ್ಲರ
ಚಿಮಿಂಟು	ಚಿಮುಟು	—
ಚಿಮಿಲಿ	ಚಿಮ್ಮಂಡೆ	ಚಿಮ್ಮಟಿ
ಚೆಂಬು	ಚಿಮ್ಮು	ಚಿಮ್ಮು
ಚೆಂಬು	ಚೆಂಬು	ಚೆಂಬು
ಚೆಲ್ವಂ	ಚೆಲ್ವು	ಚೆಲ್ವುಮು
ಚೀರು	ಚೀರು	ಚೀರು
ಚೆಕ್ಕಲ	ಚೆಕ್ಕೆ	ಚೆಕ್ಕು

ಇತ್ಯಾದಿ.

'ಚಿಕ್ಕ' ಪದವೂ ಈ ಉದಾಹರಣೆಗಳ ಸಾಲಿನಲ್ಲಿ ನಿಲ್ಲುವುದರಲ್ಲಿ ಸಂದೇಹವಿಲ್ಲ.

ಎಸ್. ಡಿ. ಸವದತ್ತಿಮಠ

---

[12] DED 2073

[13] DED 2135

3. ' ರಗಳೆ ' ಎಂದರೇನು ?

ಕನ್ನಡದಲ್ಲಿ 'ರಗಳೆ' ಎಂದು ಪ್ರಸಿದ್ಧವಾಗಿರುವ ಛಂದೋಪ್ರಕಾರದ ಮೂಲ ಸಂಸ್ಕೃತದಲ್ಲೆ, ಪ್ರಾಕೃತದಲ್ಲೆ ಅಥವಾ ಕನ್ನಡದಲ್ಲೆ ಎಂಬುದು ಇಲ್ಲಿಯವರೆಗೆ ಜಟಿಲ ಸಮಸ್ಯೆಯಾಗಿಯೇ ಉಳಿದಿದೆ. ಈ ಸಮಸ್ಯೆಯನ್ನು ಬಿಡಿಸಲು ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದೂ ಇದೆ. ಆಂಶಿಕವಾಗಿ ವಿದ್ವಾಂಸರು ರಗಳೆಯ ಮೂಲ ಪ್ರಾಕೃತವೆಂದು ಒಪ್ಪಿದ್ದಾರೆ.

ರಗಳೆಯ ಮೂಲದ ವಿಷಯ ಎಷ್ಟು ಸಮಸ್ಯಾತ್ಮಕವಾಗಿ ಪರಿಣಮಿಸಿದೆಯೋ ಆ ಶಬ್ದದ ಅರ್ಥದ ವಿಷಯದಲ್ಲಿಯೂ ಸಮಸ್ಯೆ ಉಳಿದಿದೆ. ನಾಗವರ್ಮನು 'ರಗಳೆ' ಎಂದೂ 'ರಘಟಾ' ಎಂದೂ ಪ್ರಯೋಗಿಸಿದ್ದಾನೆ. ಕೇಶಿರಾಜನು ರಘಟಾ ಎಂಬ ಸಂಸ್ಕೃತ ಶಬ್ದದ ತದ್ಭವ 'ರಗಳೆ' ಎಂದು ಹೇಳಿದ್ದಾನೆ. ಜಯಕೀರ್ತಿ ತನ್ನ ಛಂದೋನುಶಾಸನದಲ್ಲಿ 'ರಘಟಾ' ಎಂದು ಪ್ರಯೋಗಿಸಿದ್ದಾನೆ. ಆದರೆ ಸಂಸ್ಕೃತದಲ್ಲಿ 'ರಘಟಾ' ಎಂಬ ಶಬ್ದ ಇಲ್ಲ. ಹೀಗಾಗಿ 'ರಗಳೆ' ಎಂಬ ಕನ್ನಡದ ಶಬ್ದದ ಸಂಸ್ಕೃತೀಕರಣ ಗೊಳಿಸಿ 'ರಘಟಾ' ಎಂದು ಹೇಳಲಾಗಿದೆ ಎಂದು ವಿದ್ವಾಂಸರು ಹೇಳುತ್ತಾರೆ.

ಕವಿರಾಜಮಾರ್ಗಕಾರ ರಗಳೆಯ (ರಘಟೆಯ) ಪ್ರಸ್ತಾಪ ಮಾಡಿಲ್ಲ. ಇದರಿಂದಾಗಿ ಕವಿರಾಜಮಾರ್ಗಕಾರನಿಗಿಂತ ಹಿಂದೆ ಈ ರಗಳೆ ಎಂಬುದು ಇರಲಿಕ್ಕಿಲ್ಲ ಎಂದು ಹೇಳಬಹುದು. ಈ ರಗಳೆಯ ಮೊಟ್ಟಮೊದಲ ಪ್ರಯೋಗ ನಮಗೆ ಸಿಕ್ಕುವುದು ಪಂಪನ ಕಾವ್ಯಗಳಲ್ಲಿ. ಅಂದಮೇಲೆ ಸದ್ಯಕ್ಕೆ ರಗಳೆಗೆ ಮೂಲ ಪಂಪನ ಕಾವ್ಯ. ಆದರೆ ಈ ಶಬ್ದದ ನಿಷ್ಪತ್ತಿ ಏನು ? ಅದರ ಅರ್ಥವೇನು ? ಎಂಬ ವಿಷಯದಲ್ಲಿ ಸಾಕಷ್ಟು ಅಭಿಪ್ರಾಯಗಳು ವ್ಯಕ್ತವಾಗಿವೆ. ಬಹುಶಃ ರಗಳೆ ಎಂಬ ಶಬ್ದಕ್ಕೆ ಮೊಟ್ಟಮೊದಲು ಅರ್ಥಕಟ್ಟಲು ಪ್ರಯತ್ನಿಸಿದವರು ದಿ॥ ಮುಳಿಯ ತಿಮ್ಮಪ್ಪಯ್ಯನವರೆಂದು ತೋರುತ್ತದೆ. ಅವರು ತಮ್ಮ ನಾಡೋಜ ಪಂಪ, ಪುಟ 279 ರಲ್ಲಿ 'ಅರಘಟ-ಏತ' ಎಂದು ಅರ್ಥಹೇಳಿ, ಏತದಿಂದ ನೀರು ಎತ್ತುತ್ತಿರುವಾಗ ಹಾಡುವ ಹಾಡಾಗಿರಬೇಕು ಎಂದು ಹೇಳಿ ಅದರ ನಿಷ್ಪತ್ತಿಯನ್ನು ಅರಘಟ > ರಹಟ > ರಘಟಾ > ರಗಳೆ ಎಂದು ತೋರಿಸಿಕೊಟ್ಟಿದ್ದಾರೆ. ಆದರೆ ಅವರ ಹೇಳಿಕೆಯಲ್ಲಿನ ಘಕಾರ ಹಕಾರವಾಗುತ್ತದೆ ಎಂಬುದನ್ನು ವಿದ್ವಾಂಸರು ಒಪ್ಪಿಲ್ಲ.

ಶ್ರೀ ಸೀತಾರಾಮ್ ಜಾಗಿರದಾರರು ರಗಟ/ರಗತಿ ಎಂಬ ಶಬ್ದಗಳಿಗೆ ಸಂದೇಹ, ಸಂಶಯ ಎಂಬರ್ಥ ಇದೆ ಎಂದು ಹೇಳಿ, ಈ ರಗಟೆ ಅಥವಾ ರಗತಿ ಶಬ್ದವೇ ರಘಟಾ ಆಗಿರಬಹುದೆಂದು ಹೇಳುತ್ತಾರೆ. ಅವರು ಹೇಳಿದ ರೀತಿ ಹೀಗಿದೆ—

ರಘ[ಟಾ] < ರಗಟಿ/ರಗತಿ = ಸಂದೇಹ, ಸಂಶಯ (ರಗಟಿ/ರಗತಿ—ಪ್ರಾಕೃತ)— Monier Williams Sanskrit Dictionary pp 860.

ರಗಟೆ। ರಗತಿ ಎಂಬ ಪ್ರಾಕೃತ ಶಬ್ದವು ಸಂಸ್ಕೃತಕ್ಕೆ ಬರುವಾಗ 'ರಘಟಾ' ಎಂಬ ರೂಪ ತಳೆದು ಮತ್ತೆ ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ 'ರಗಳೆ' ಎಂದು ತದ್ಭವರೂಪ ತಳೆದಿದೆ. [ರಗಟೆ। ರಗತಿ > ರಘಟಾ (ಸಂ) > ರಗಳೆ ; 'ಘ > ಗ', ಟ > (ಳ)' ಆಗುವುದು ರೂಢಿ. ಉದಾ : ಘಟಿಕಾ > ಗಳಿಗೆ] ಪಜ್ಝಟಿಗೆಗೂ ಹದಿನಾರು ಮಾತ್ರೆ, ಅಲ್ಲಿಲ್ಲಪಕ್ಕೂ ಹದಿನಾರು ಮಾತ್ರೆ ಮತ್ತೆ ಕೆಲವು ಸಂಸ್ಕೃತ ವೃತ್ತಗಳಿಗೂ ಪಾದವೊಂದಕ್ಕೆ ೧೬ ಮಾತ್ರೆಗಳು. ಮಂದಾನಿಲ, ಮಟ್ಟ ಮತ್ತು ತ್ವರಿತ ಎಂಬ ಮೂರು ಬಗೆಯ ರಗಳೆಗಳಿಗೂ ಪಾದವೊಂದಕ್ಕೆ ವಿವಿಧ ಬಗೆಯ ನಿಯತವಲ್ಲದ ಚತುಷ್ಕಲಗಳಿಂದ ಕೂಡಿ ಹದಿನಾರು ಮಾತ್ರೆಗಳು ಇರುವುದರಿಂದ ಇವುಗಳ (ಕನ್ನಡ ರಗಳೆಗಳ) ಮೂಲ ಹೀಗೆ ಎಂದು ಹೇಳಲು ಸಂದೇಹಪಡಬೇಕಾದುದ ರಿಂದ ಇವು ರಘಟಾ ಬಂಧಗಳು. ಎಂದರೆ ಸಂದೇಹಮೂಲದ ಚರಣಗಳು ; ಇಂಗ್ಲೀಷಿನಲ್ಲಿ ಹೇಳುವುದಾದರೆ ಅದನ್ನು Feet whose origin is doubtful ಎಂದು ವಿವರಿಸಬಹುದು[1]. ಎಂದರೆ ಬಂಧದ ವಿಷಯದಲ್ಲಿ ಸಂದೇಹವಿದ್ದುದೇ ರಗಳೆ ಎಂದು ಅವರ ಹೇಳಿಕೆ. ಆದರೆ ರಗಳೆಯ ವಿಷಯದಲ್ಲಿ ಅದರ ಸರಿಯಾದ ನಿಷ್ಪತ್ತಿ ತಿಳಿಯದ ನಮಗೆ ಅದು ಸಂದೇಹಾಸ್ಪದವೇ ಹೊರತು, ಅದನ್ನು ಮೊದಲು ಪ್ರಯೋಗಿಸಿದ ಪಂಪನಿಗೆ ಹಾಗೂ ಪಂಪನ ಕಾಲದವರಿಗೆ ಅದು ಸಂದೇಹಾಸ್ಪದ ವಾಗಿತ್ತು ಎಂದು ಹೇಳುವುದು ಸರಿಹೊಂದದ ಮಾತಾಗುತ್ತದೆ. ಪಂಪನಿಗೆ ಆ ಬಂಧದ ವಿಷಯದಲ್ಲಿ ಸಂದೇಹವಿದ್ದಲ್ಲಿ ಅವನಿಗೆ ಅದನ್ನು ಬಳಸಬೇಕಾದ ಪ್ರಮೇಯವಾದರೂ ಏತಕ್ಕಿರಬೇಕಿತ್ತು ? ಆದುದರಿಂದ ಶ್ರೀ ಜಾಗಿದಾರರ ಅಭಿಪ್ರಾಯವೂ ಸಂದೇಹಾಸ್ಪದವಾಗಿಯೇ ಉಳಿಯುತ್ತದೆ.

'ರಗಳೆ' ಶಬ್ದದ ನಿಷ್ಪತ್ತಿಯನ್ನು ಹುಡುಕಬೇಕಾದರೆ ಮೊದಲು ರಗಳೆ ಎಂಬ ಛಂದೋಬಂಧದ ಲಕ್ಷಣವನ್ನು, ಅರ್ಥಮಾಡಿಕೊಳ್ಳಬೇಕಾದುದು ಅವಶ್ಯಕ. ನಾಗವರ್ಮನು 'ರಗಳೆಯ ನಿಯಮಮಂ ಕಂದ ಪದ್ಯದೊಳ್ ಪೇೞ್ವಿಂ' ಎಂದು ಹೇಳಿ ಹೀಗೆ ಹೇಳಿದ್ದಾನೆ—

ಗಣನಿಯಮವಿಪರ್ಯಾಸದೋ ।
ಳೆಣೆವಡೆದೊಳ್ಪಿಸೆದು ಮಾತ್ರೆ ಸಮನಾಗೆ ಗುಣಾ ।
ಗ್ರಣಿಯ ಮತದಿಂದೆ ತಾಳದ ।
ಗಣನೆಗೊಡಂಬಟ್ಟುದದುವೆ ರಘಟಾ ಬಂಧಂ ॥[2]

---

[1] ಪ್ರಬುದ್ಧ ಕರ್ನಾಟಕ. ಸಂಪುಟ 51, ಸಂಚಿಕೆ 1, ಪುಟ 18 ಅಡಿ ಟಿಪ್ಪಣಿ

[2] ನಾಗವರ್ಮ I 'ಛಂದೋಂಬುಧಿ' ಪುಟ 61. (Ed. H. S. Ramaswamy Iyengar)

ಇನ್ನು ಛಂದೋನುಶಾಸನದಲ್ಲಿ ಜಯಕೀರ್ತಿಯು ರಗಳೆಯ ಲಕ್ಷಣವನ್ನು ತಿಳಿಸಿದ ಪದ್ಯ ಹೇಗೆ ಇದೆ

> ಸ್ವಚ್ಛಂದಃ ಸಂಜ್ಞಾ ರಘಟಾ ಮಾತ್ರಾಕ್ಷರ ಸಮೋದಿತಃ
> ಪಾದದ್ವಂದ್ವ ಸಮಾಕೀರ್ಣಾ ಸುಶ್ರಾವ್ಯಾ ಸೈವ ಪದ್ಧತಿಃ ॥ [3]

ಇವರಿಬ್ಬರೂ ಹೇಳಿದ ಲಕ್ಷಣವನ್ನು ಹೀಗೆ ಸಂಕ್ಷೇಪಿಸಬಹುದು

1. ರಗಳೆಗೆ ಪಾದ ನಿರ್ಬಂಧವಿಲ್ಲ
2. ಪ್ರಾಸದ ದೃಷ್ಟಿಯಿಂದ ಪಾದದ್ವಂದ್ವಗಳನ್ನು ಗುರುತಿಸಬಹುದು
3. ಪ್ರತಿಚರಣದಲ್ಲಿ ಮಾತ್ರೆಗಳ ಸಂಖ್ಯೆ ಸಮನಾಗಿದ್ದರೂ ಗಣಯೋಜನೆಯಲ್ಲಿ ವೈವಿಧ್ಯವಿರಬಹುದು
4. ತಾಳಕ್ಕೆ ಒಡಂಬಟ್ಟುದು
5. ಸುಶ್ರಾವ್ಯವಾದುದು
6. ಅಂತ್ಯಪ್ರಾಸ ನಿಯತ

ಇಲ್ಲಿ ಒಂದು ಅಂಶವನ್ನು ಗಮನಿಸತಕ್ಕದ್ದು. 'ಪಾದದ್ವಂದ್ವ ಸಮಾಕೀರ್ಣಾ' ಎಂದು ಜಯಕೀರ್ತಿ ಹೇಳುವ ಮಾತು, ನಾಗವರ್ಮನು 'ಎಣೆವಡೆದೊಳ್ಪೆಸೆದು' ಎಂದು ಹೇಳುವ ಮಾತುಗಳು ಪ್ರಮುಖವಾದುವು. ಇವರಿಬ್ಬರ ಅಭಿಪ್ರಾಯದಂತೆ ರಗಳೆಯಲ್ಲಿ ಎರಡೆರಡು ಸಾಲುಗಳ ಒಂದೊಂದು ದ್ವಂದ್ವಗಳು ಇರುತ್ತವೆ, ಆ ಎರಡೆರಡು ಸಾಲುಗಳು ಎಣೆವಡೆದಿರುತ್ತವೆ. ಈ ರೀತಿ ಎಣೆಗೊಂಡ ಪಾದದ್ವಂದ್ವಗಳು ಮತ್ತೆ-ಮತ್ತೆ ಆವರ್ತನಗೊಳ್ಳುತ್ತವೆ ಎಂಬುದು ರಗಳೆಯಲ್ಲಿ ಕಂಡುಬರುವ ವಿಶಿಷ್ಟತೆ. ಎರಡನೆಯ ವಿಶಿಷ್ಟತೆ ಮೂರು, ನಾಲ್ಕು, ಅಥವಾ ಐದು ಮಾತ್ರೆಗಳ ಗಣಗಳ ಆವರ್ತನವಾಗುವುದು. ಈ ಆವರ್ತನಗೊಳ್ಳುವುದರಿಂದಲೇ ಆ ಛಂದೋ-ರೂಪಕ್ಕೆ ಬಂದ ಹೆಸರು 'ರಗಳೆ' ಎಂಬುದು. ಅಂದ ಮೇಲೆ ರಗಳೆ ಎಂದರೆ ಆವರ್ತನಗೊಳ್ಳುವ ಛಂದೋಬಂಧ ಎಂಬ ಅರ್ಥವೆಂಬುದಾಗಿ ಹೇಳಬಹುದು.

'ರಗಳೆ' ಎಂದರೆ ಬೇಸರಿಕೆಯ ವಿಷಯ ಎಂಬರ್ಥದಲ್ಲಿ ಇಂದು ಪ್ರಯೋಗವಾಗುವುದನ್ನೂ ಗಮನಿಸುವುದು ಒಳಿತು. ಬೇಸರಿಕೆಯ ವಿಷಯವಾಗುವುದು ಯಾವುದು ? ಯಾವುದು ಮತ್ತೆ-ಮತ್ತೆ ಹೇಳಲ್ಪಡುತ್ತದೋ, ಕೇಳಲ್ಪಡುತ್ತದೋ ಅಥವಾ ಮಾಡಲ್ಪಡುತ್ತದೋ ಅದು ಬೇಸರಿಕೆಯನ್ನುಂಟುಮಾಡುವುದು.

---

[3] ಜಯಕೀರ್ತಿಯ ಛಂದೋನುಶಾಸನ ಮತ್ತು ಪ್ರಾಚೀನ ಕನ್ನಡ ಛಂದಸ್ಸು. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ೪೦, ಸಂಚಿಕೆ 1-2, ಪುಟ16

ಅಂದ ಮೇಲೆ ಪುನಃ ಪುನಃ ಹೇಳುವಿಕೆ, ಮಾಡುವಿಕೆ ಯಾವುದರಲ್ಲಿ ಇರುತ್ತದೋ ಅದು ರಗಳೆ ಅಲ್ಲವೆ! ಅದೇ ರೀತಿ ಏಕರೀತಿಯ ಮಾತ್ರಾ ಪರಿಮಿತಿಯುಳ್ಳ ಅಥವಾ ಏಕರೀತಿಯ ಗಣಗಳಿಂದ ಮತ್ತೆ ಮತ್ತೆ ಆವರ್ತನವಾಗುವಂತಿರುವ ಪಾದಗಳು ಪುನಃ ಪುನಃ ಯಾವ ಬಂಧದಲ್ಲಿ ಬರುತ್ತದೋ ಅದೇ ರಘಟಾ ಬಂಧ > ರಗಳೆ ಎಂದು ಹೇಳಬಹುದಲ್ಲವೆ!

ರಗಳೆ ಮಾತ್ರಾಗಣ ಮಟ್ಟದಲ್ಲಿರುವ ಛಂದೋಬಂಧ. ಮಾತ್ರಾಗಣ ನಿಬದ್ಧತೆ ಪ್ರಾಕೃತ ಛಂದಸ್ಸಿನ ವೈಶಿಷ್ಟ್ಯವಾಗಿರುವುದರಿಂದ ಕನ್ನಡದ ಈ ರಗಳೆಯ ಮೂಲವನ್ನು ಪ್ರಾಕೃತದಲ್ಲಿ ಕಂಡುಕೊಳ್ಳಲು ಯತ್ನಿಸಿದ್ದಾರೆ. ಕನ್ನಡವೆಲ್ಲ ಸಂಸ್ಕೃತದ ಪಡಿಯಚ್ಚು ಎನ್ನುವ ಸಂಸ್ಕೃತದ ವೀರವ್ಯಾಮೋಹಿಗಳು ಕನ್ನಡ ರಗಳೆಯ ಉಗಮಕ್ಕಾಗಿ ಸಂಸ್ಕೃತಕ್ಕೆ ಶರಣು ಹೋಗಿದ್ದಾರೆ. ಕರ್ನಾಟ ವಿಷಯ ಜಾತಿಯ ಕೆಲವು ಮಟ್ಟುಗಳು ಕನ್ನಡದ ರಗಳೆಗಳ ಜೊತೆಗೆ ಸಾದೃಶ್ಯವನ್ನು ಪಡೆದಿರುವುದರಿಂದ ರಗಳೆಯ ಆವಿರ್ಭಾವ ಕನ್ನಡದಲ್ಲಿ ಎಂಬುದು ಕೆಲವು ವಿದ್ವಾಂಸರ ಹೇಳಿಕೆ. ಇವುಗಳಲ್ಲಿ ರಗಳೆಯಲ್ಲಿ ಪ್ರಮುಖವಾಗಿ ಮಾತ್ರಾಗಣ ನಿಬದ್ಧತೆ ಇರುವುದರಿಂದಲೂ, ರಗಳೆ ಎಂಬ ಹೆಸರೂ ಪ್ರಾಕೃತ ಮೂಲದಿಂದ ಬಂದುದು ಎಂದು ಹೇಳಲು ಹೆಚ್ಚಿನ ಸಮರ್ಥನೆಯನ್ನು ನೀಡುತ್ತದೆ. ಜೊತೆಗೆ ರಗಳೆಯ ವಿಶಿಷ್ಟತೆಗಳಲ್ಲಿ ಒಂದಾದ ಅಂತ್ಯಪ್ರಾಸವೂ ಈ ಅಭಿಪ್ರಾಯಕ್ಕೆ ಪುಷ್ಟಿಯನ್ನೀಯುತ್ತದೆ. ಈ ಅಂತ್ಯಪ್ರಾಸದ ಪದ್ಧತಿ ಪ್ರಾಕೃತ ಅಥವಾ ಅಪಭ್ರಂಶದ್ದಿರಬೇಕು. ಏಕೆಂದರೆ ಪ್ರಾಕೃತ ಛಂದಸ್ಸನ್ನು ಅನುಸರಿಸಿದ ಹಿಂದೀ ಭಾಷೆಯಲ್ಲಿ ರಚಿತವಾದ ಕಾವ್ಯಗಳ ಛಂದಸ್ಸಿನಲ್ಲಿ ಇರುವುದೆಲ್ಲ ಅಂತ್ಯಪ್ರಾಸವೇ ಪ್ರಧಾನ. ಆದುದರಿಂದ ರಗಳೆ ಎಂಬ ಶಬ್ದದ ಅರ್ಥವನ್ನು ಪ್ರಾಕೃತ ಸಂಬಂಧವುಳ್ಳ ಭಾಷೆಗಳಲ್ಲಿ ಹುಡುಕಲು ಪ್ರಯತ್ನಿಸಿದರೆ ಒಳಿತು.

ಪ್ರಾಕೃತ ಸಂಬಂಧಿತ ಭಾಷೆಗಳಲ್ಲಿ ಒಂದು ಕೊಂಕಣಿ ಭಾಷೆ. ಇದು ದಿ॥ ಮಂ. ಗೋವಿಂದ ಪೈಯವರ ಅಭಿಪ್ರಾಯದಂತೆ ಮಾಗಧಿ ಪ್ರಾಕೃತಕ್ಕೆ ಸಂಬಂಧಿಸಿದ್ದು. ಆದರೆ ನನ್ನ ಅಭಿಪ್ರಾಯದಲ್ಲಿ ಇದು ಶೂರಸೇನಿ ಪ್ರಾಕೃತಕ್ಕೆ ಸಂಬಂಧಿಸಿದ್ದು. ಇರಲಿ, ಪ್ರಕೃತ ಆ ವಿಚಾರ ಬೇಡ. ಒಟ್ಟಿನಲ್ಲಿ ಕೊಂಕಣಿ ಭಾಷೆ ಪ್ರಾಕೃತಕ್ಕೆ ಸಂಬಂಧಿಸಿದ ಭಾಷೆಯೆಂಬುದರಲ್ಲಿ ಸಂಶಯವಿಲ್ಲ. ಈ ಭಾಷೆಯಲ್ಲಿ ಈ ಶಬ್ದವಿದೆಯೆ? ಇದ್ದರೆ ಅದಕ್ಕೆ ಅಲ್ಲಿ ಯಾವ ಅರ್ಥವಿದೆ ಎಂಬುದನ್ನು ಇಲ್ಲಿ ಪರಿಶೀಲಿಸಬಹುದು.

ಮೊಟ್ಟಮೊದಲು ದಿ॥ ಮುಳಿಯ ತಿಮ್ಮಪ್ಪಯ್ಯನವರು ಮಂಡಿಸಿದ ವಾದವನ್ನು ಎತ್ತಿಕೊಳ್ಳಬಹುದು. ಅವರ ಪ್ರಕಾರ 'ಅರಘಟ' ಎಂಬುದರಿಂದ ಬಂದ ಶಬ್ದ 'ರಗಳೆ'. ಅರಘಟ್ಟ ಎಂದರೆ ನೀರೆತ್ತುವ ಯಂತ್ರ. ಅರಘಟ್ಟ, ಅರಘಟ್ಟಕಃ = 1.

a wheel or machine for raising water from a wheel[4]. ಎಂದರೆ ರಾಟೆ. ಇದನ್ನು ಕೆಲವೆಡೆಯಲ್ಲಿ 'ಗಡಗಡೆ' ಎಂದೂ ಕರೆಯುತ್ತಾರೆ. ಕೊಂಕಣಿಯಲ್ಲಿ ಇವನ್ನು 'ರಾಟೊ' ಎಂದೂ 'ಗಾಡೊ' ಎಂದೂ ಹೇಳುತ್ತಾರೆ. ಈ ಅರಘಟ್ಟವು ಒಂದು ಚಕ್ರದಾಕಾರದಲ್ಲಿ ಇರುತ್ತದೆ. ಇದಕ್ಕೆ ಆಗಾಗ್ಗ ಎಣ್ಣೆ ಹಾಕುತ್ತಿದ್ದರೆ ಅದರ ಚಲನೆಯು ಸುಲಭವಾಗಿರುತ್ತದೆ. ಎಲ್ಲಿಯಾದರೂ ಎಣ್ಣೆ ಇಲ್ಲದಿದ್ದರೆ, ಬಿಗಿಕಟ್ಟಿದರೆ ಆಗ ಅದು ಬಹು ತ್ರಾಸದಾಯಕವಾಗುತ್ತದೆ. ಆದರಿಂದಲೇ ಅರಘಟ್ಟ ಎಂಬ ಶಬ್ದವೇ ಕೊಂಕಣಿಯಲ್ಲಿ ಅರ್ಘಟ ಹಾಗೂ ಅರಗಂಟ ಎಂದು ಪ್ರಯೋಗ ಮಾಡುತ್ತಾರೆ. ಈ ಶಬ್ದ ಕೊಂಕಣಿಯ ಪ್ರಭಾವದಿಂದ ತುಳು ಭಾಷೆಯಲ್ಲಿಯೂ ಬಳಕೆಗೆ ಬಂದಿದೆ. ಇದರ ಅರ್ಥ ಹಿಡಿದ ಪಟ್ಟನ್ನು ಬಿಡದ ಹಟಮಾರಿತನ ಸ್ವಭಾವ ಎಂದಾಗಿರುತ್ತದೆ. ಅರಘಟ್ಟವು ಏಕಪ್ರಕಾರವಾಗಿ ಒಂದೇ ನೆಲೆಯಲ್ಲಿ ಸುತ್ತುತ್ತಿದ್ದರೆ ಸರಿ, ಅದು ಬಿಗಿಕಟ್ಟಿದರೆ ಕಷ್ಟವಾಗುತ್ತದೆ. ಹಾಗೆಯೇ ಹಿಡಿದ ಹಟದಲ್ಲಿಯೇ ಬಿಗಿಕಟ್ಟಿ ನಿಂತು ವರ್ತಿಸುವವನೇ ಅರಗಂಟ್ ಆಗಿರುತ್ತಾನೆ. ಆದುದರಿಂದ ಅರಘಟ್ಟ ಎಂಬ ಶಬ್ದದಿಂದ ರಗಳೆ ಬಂದಿದೆ ಎಂದು ಮುಳಿಯ ತಿಮ್ಮಪ್ಪಯ್ಯನವರು ಹೇಳುವ ಮಾತು ಅಷ್ಟು ಸಮಂಜಸವೆನಿಸುವುದಿಲ್ಲ ಎಂದು ಹೇಳಬಹುದು. ಅಂದಮೇಲೆ ಅರಘಟ್ಟಕ್ಕೂ ರಗಳೆಗೂ ಸಂಬಂಧವಿಲ್ಲವೆಂದೇ ಹೇಳಬೇಕಾಗುತ್ತದೆ. ಅಲ್ಲದೆ ಅರಘಟ್ಟ > ರಘಟ್ಟ > ರಹಟ ಎಂದಾಗುವಲ್ಲಿ ಘಕಾರಕ್ಕೆ ಹಕಾರ ಬರುವುದು ಎಂಬುದನ್ನೂ ವಿದ್ವಾಂಸರು ಒಪ್ಪಿಲ್ಲವೆಂಬುದನ್ನು ಮೊದಲೇ ತಿಳಿಸಿದೆ.

ಹಾಗಾದರೆ 'ರಗಳೆ' ಶಬ್ದದ ನಿಷ್ಪತ್ತಿ ಏನು? ಅದರ ಅರ್ಥ ಏನು? ಎಂಬುದು ಮತ್ತೊಮ್ಮೆ ಚಿಂತನೆಗೆ ಅವಕಾಶವನ್ನುಂಟುಮಾಡುತ್ತದೆ. ಕೊಂಕಣಿಯಲ್ಲಿ ರಗಡ, ರಗಡೊ, ಎಂಬಿತ್ಯಾದಿ ಶಬ್ದಗಳು ದಿನಬಳಕೆಯ ಮಾತಿನಲ್ಲಿ ಪ್ರಯೋಗದಲ್ಲಿವೆ. ಇವುಗಳಿಗೆ ರಗಡ=ತಿಕ್ಕು, ಅರೆಯು; ರಗಡೊ=ಅರೆಯುವ ಕಲ್ಲು ಎಂಬಿತ್ಯಾದಿ ಅರ್ಥಗಳಿವೆ. ಹಿಂದೀ ಭಾಷೆಯಲ್ಲಿಯೂ 'ರಗಡ' ಎಂಬುದಕ್ಕೆ ತಿಕ್ಕು, ಅರೆ, ಆವರ್ತನ ಎಂಬ ಅರ್ಥಗಳಿವೆ. ಇದು ಸಂಸ್ಕೃತದ 'ಘರಟ್ಟ' ಎಂಬ ಶಬ್ದವಾಗಿದೆ. ಘರಟ್ಟ ಎಂದರೆ ಅರೆಯುವ ಕಲ್ಲು. ಈ ಘರಟ್ಟ ಎಂಬುದು ಅಕ್ಷರಪಲ್ಲಟಗೊಂಡು ರಘಟ್ಟ > ರಘಟ > ರಗಡ ಎಂದಾಗಿದೆ. ಅರೆಯುವ ಕಲ್ಲಿನಲ್ಲಿ ಅರೆಯುವಾಗ ಅರೆಯುವ ಕಲ್ಲು ಹೇಗೆ ಏಕಪ್ರಕಾರವಾಗಿ ಆವರ್ತನಗೊಳ್ಳುತ್ತದೊ ಅದೇ ರೀತಿ ರಗಳೆಯೆಂಬ ಛಂದೋಬಂಧದಲ್ಲಿಯೂ ಪಾದದ್ವಂದ್ವಗಳ ಆವರ್ತನವಿದೆ. ಹೀಗಾಗಿ 'ರಗಳೆ' ಎಂದರೆ ಆವರ್ತನಗೊಳ್ಳುವ ಛಂದೋರೂಪ ಎಂದು ನಿಷ್ಕರ್ಷವಾಗಿ ಹೇಳಬಹುದಲ್ಲವೆ!

---

[4] Sanskrit—English Dictionary By V. S. Apte M.A. P. 49

ಜಯಕೀರ್ತಿಯ ಪ್ರಾತಿನಂತೆ 'ರಗಳೆ' ಸುಶ್ರಾವ್ಯವಾದುದು. ಅಲ್ಲದೆ 'ರಗಳೆ' ತಾಳದ ಗಣನೆಗೆ ಒಡಂಬಟ್ಟುದು ನಾಗವರ್ಮನ ಅಭಿಪ್ರಾಯದಂತೆ. ಇದರಿಂದ ಇವರಿಬ್ಬರ ಅಭಿಪ್ರಾಯದಂತೆ 'ರಗಳೆ' ಎಂಬುದು ಒಂದು ವಿಧದಲ್ಲಿ ತಾಳದ ಗಣನೆಗೆ ಒಡಂಬಟ್ಟ ಸುಶ್ರಾವ್ಯವಾದ ಧಾಟಿಯುಳ್ಳದ್ದು ಎಂಬುದು ಸ್ಪಷ್ಟ. ಕೊಂಕಣಿ ಭಾಷೆಯನ್ನಾಡುವವರು 'ಒಂದು ಹಾಡನ್ನು ಹಾಡು' ಎನ್ನುವುದಕ್ಕೆ 'ಏಕ ರಡಪ ರ್ಽಡ' ಎಂದು ಹೇಳುವುದಿದೆ. ಇಲ್ಲಿ 'ರಡಪ' ಎಂಬ ಶಬ್ದ ರಗಡ+ಪ (ಭಾವವಾಚಕ ಪ್ರತ್ಯಯ) ಎಂಬುದಾಗಿರಬೇಕು. ಇದು ರಗಡಪ > ರಗ್ಡಪ > ರಡಪ ಎಂಬ ರೂಪ ಹೊಂದಿದೆ. ಆದುದರಿಂದ 'ರಗಡ' ಎಂದರೆ ಆವರ್ತನ, ಆಲಾಪನೆಯುಳ್ಳ ಹಾಡು ಎಂಬರ್ಥವನ್ನು ಮತ್ತಷ್ಟು ಖಚಿತತೆಯು ಕಡೆಗೆ ಒಯ್ಯುತ್ತದೆ.

ಗಢವಾಲದ ಗ್ರಾಮಗೀತಗಳಲ್ಲಿ ಬರುವ ಒಂದು ಪದ್ಯಭಾಗ ಈ ರೀತಿ ಇದೆ

ಬುಣೀ ಜಾಲೀ ಮಾಣೀ
ರಗಡು ನೋಸೂಕಿ ಜಾಣಾ
ರ ಈ ಸ್ಯಲವಾಣೀ ಪಾಣೀ ||

'ಬಿದಿರಿನ ದಬ್ಬೆಗಳಿಂದ ಕಾಳುಗಳನ್ನು ಅಳತೆ ಮಾಡುವ ಬುಟ್ಟಿಗಳನ್ನು ಹೆಣೆಯುತ್ತಿದ್ದೇನೆ. ಸತತ ಸುರಿಯುವ ಮಳೆಯು ಆರಿ ಹೋದೀತು ; ಆದರೆ ನಿರ್ಝರಿಣಿಯ ನೀರು ಬಹುಕಾಲದವರೆಗೂ ಇದ್ದೀತು' ಎಂಬರ್ಥ ಇರುವ ಈ ಗೀತದಲ್ಲಿ ಬರುವ 'ರಗಡು' ಶಬ್ದಕ್ಕೆ 'ಏಕಪ್ರಕಾರವಾಗಿ ಸುರಿಯುವ' ಎಂಬ ಅರ್ಥವಿದೆ. ಇಲ್ಲಿ ಬಂದಿರುವ ಈ ಶಬ್ದದಿಂದಲೂ 'ರಗಳೆ' ಎಂಬುದು ಏಕಪ್ರಕಾರವಾಗಿಯೇ ಮುನ್ನಡೆಯುವ ಚರಣಗಳುಳ್ಳದ್ದು ಎಂದು ಅರ್ಥಪುಷ್ಟಿಯನ್ನು ನೀಡುತ್ತದೆ.

ಹೀಗೆ ಈ ಎಲ್ಲ ಆಧಾರಗಳಿಂದ ರಗಳೆಯೆಂಬುದು ಸಂಸ್ಕೃತದ 'ಘರಟ್ಟ' ಎಂಬ ಶಬ್ದದಿಂದ ನಿಷ್ಪನ್ನವಾದ ರೂಪವೆಂದೂ ಅದರ ಅರ್ಥ ಏಕಪ್ರಕಾರವಾಗಿ ಮುಂದೆ ಸಾಗುವ, ಆವರ್ತನಗೊಳ್ಳುವಂತಹದ್ದು ಎಂದೂ ನಿಸ್ಸಂಕೋಚವಾಗಿ ಹೇಳಬಹುದು. ಎಂದರೆ ಆವರ್ತನವುಳ್ಳ ಮಾತ್ರಾಗಣ ಹಾಗೂ ಚರಣಗಳುಳ್ಳ ಹಾಗೂ ಏಕಪ್ರಕಾರವಾಗಿ ಮುಂದೆ ಸಾಗುವ ಬಂಧ ರಘಟಾ ಬಂಧ > ರಗಳೆ ಎಂಬುದರಲ್ಲಿ ಸಂಶಯವಿಲ್ಲ.

ಎಂ. ಮಾಧವ ಪೈ

ಸಂಪಾದಕೀಯ

ತಾಮ್ರಪಟ ಸಮರ್ಪಣೆ

24–1–1974ರಂದು ನಡೆದ ಸಮಾರಂಭವೊಂದರಲ್ಲಿ ತೀರ್ಥಹಳ್ಳಿ ತಾಲೂಕಿನ ಭುವನಗಿರಿ ದುರ್ಗದ ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಕನ್ನಡ ಅಧ್ಯಯನ ಕೇಂದ್ರಕ್ಕೆ ತಮ್ಮ ಮಠದಲ್ಲಿದ್ದ ಸುಮಾರು ಎಪ್ಪತ್ತು ತಾಮ್ರಪಟಗಳನ್ನು ಕೊಡುಗೆಯಾಗಿ ನೀಡಿದರು. ಮಾನ್ಯ ಉಪಕುಲಪತಿ ಡಾ. ಎಚ್. ನರಸಿಂಹಯ್ಯ ಅವರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭಕ್ಕೆ ಮಾನ್ಯ ವಿದ್ಯಾಸಚಿವರಾದ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಭುವನಗಿರಿ ದುರ್ಗದ ಮಹಾಮಹತ್ತಿನ ಮಠವು ಕೆಳದಿ ವಂಶದ ರಾಜ ಗುರುಗಳ ಪೀಠವಾಗಿದ್ದಿತು. ಆ ವಂಶದ ದೊರೆಗಳು ಆ ಮಠಕ್ಕೆ ಬಿಟ್ಟುಕೊಟ್ಟ ದತ್ತಿಗಳ ವಿಷಯವು ಈ ತ್ರಾಮಪಟಗಳಲ್ಲಿದೆ. ಆ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಪರಿಸ್ಥಿತಿಗಳನ್ನು ಅಧ್ಯಯನ ಮಾಡುವ ಇತಿಹಾಸದ ವಿದ್ಯಾರ್ಥಿಗಳಿಗೆ ಇವು ಅಮೂಲ್ಯ ಗಣಿ. ಇವುಗಳಲ್ಲಿ ಬಹುಭಾಗ ಈಗಾಗಲೇ ಎಪಿಗ್ರಫಿಯ ಕರ್ನಾಟಕ ಮುಂತಾದ ಕಡೆ ಪ್ರಕಟವಾಗಿವೆ.

ಶ್ರೀ ಸ್ವಾಮಿಗಳು ತಾಮ್ರಪಟಗಳ ಜೊತೆಗೆ ನೂರಾರು ಕಡತಗಳನ್ನೂ ದಾನ ಮಾಡಿದ್ದಾರೆ.

ಇದೇ ಸಮಾರಂಭದಲ್ಲಿ ಪ್ರೊ. ಕ. ವೆಂ. ರಾಘವಾಚಾರ್ಯರು ದಿವಂಗತ "ಶ್ರೀ" ಯವರ ಹೆಸರಿನಲ್ಲಿ ಐದು ಸಾವಿರ ರೂಪಾಯಿಗಳನ್ನೂ, ಡಿ. ಎಲ್. ಎನ್. ಸ್ಮಾರಕ ನಿಧಿ ಸಮಿತಿಯವರು ಮೂರು ಸಾವಿರ ರೂಪಾಯಿಗಳನ್ನೂ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು.

ಏಕಲಿಪಿಯ ಬಗ್ಗೆ ವಿಚಾರ ಗೋಷ್ಠಿ

ಇದೇ ವರ್ಷ ಫೆಬ್ರವರಿ 25 – 26ರಂದು ಏಕಲಿಪಿಯ ಬಗ್ಗೆ ಒಂದು ವಿಚಾರ ಗೋಷ್ಠಿ ನಡೆಯಿತು. ಇದನ್ನು ತಿರುವನಂತಪುರದ ದ್ರಾವಿಡ ಭಾಷಾ ವಿಜ್ಞಾನ ಸಂಸ್ಥೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರಗಳು



ಭುವನಗಿರಿ ದುರ್ಗದ ಸ್ವಾಮೀಜಿ ಉಪಕುಲಪತಿ ಡಾ. ಎಚ್. ನರಸಿಂಹಯ್ಯ ಅವರಿಗೆ
ತಾಮ್ರಪಟ ಅರ್ಪಿಸುತ್ತಿರುವುದು



'ಏಕಲಿಪಿ' ವಿಚಾರಗೋಷ್ಠಿಯ ಸಮಾರಂಭ : ದ್ರಾವಿಡ ಭಾಷಾ ವಿಜ್ಞಾನ ಸಂಘದ ಕಾರ್ಯದರ್ಶಿ
ಡಾ. ವಿ. ಐ. ಸುಬ್ರಹ್ಮಣ್ಯಂ ಅವರು ಮಾತನಾಡುತ್ತಿರುವುದು
ಕುಳಿತಿರುವವರು : ವಿದ್ಯಾಸಚಿವೆ ಶ್ರೀಮತಿ ಈವಾ ವಾಜ್.
ಕುಲಸಚಿವ ಶ್ರೀ ಎಲ್. ಸೂರ್ಯಪ್ರಸಾದ್ ಮತ್ತು ಡಾ. ಜಿ. ಎಸ್. ಶಿವರುದ್ರಪ್ಪ



ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು 'ವಿಮರ್ಶೆಯ ನೆಲೆ–ಬೆಲೆ' ವಿಚಾರ ಸಂಕಿರಣದ ಸಂದರ್ಭದಲ್ಲಿ 'ಪಂಪ : ಒಂದು ಅಧ್ಯಯನ' ಮತ್ತು 'ಸಾಹಿತ್ಯ ವಾರ್ಷಿಕ 1972' ಕೃತಿಗಳನ್ನು ಬಿಡುಗಡೆ ಮಾಡಿದರು. ಚಿತ್ರದಲ್ಲಿ ಉಪಕುಲಪತಿ ಡಾ. ಎಚ್. ನರಸಿಂಹಯ್ಯ, ಸಚಿವೆ ಡಾ. ಸರೋಜಿನಿ ಮಹಿಷಿ ಮತ್ತು ಡಾ. ಜಿ. ಎಸ್. ಶಿವರುದ್ರಪ್ಪ ಅವರನ್ನು ಕಾಣಬಹುದು.

ಒಟ್ಟಿಗೆ ಸೇರಿ ಏರ್ಪಡಿಸಿದ್ದುವು. ಈ ವಿಚಾರಗೋಷ್ಠಿಯನ್ನು ನಡೆಸಲು ಕರ್ನಾಟಕ ಸರಕಾರವು ದ್ರಾವಿಡ ಭಾಷಾ ವಿಜ್ಞಾನ ಸಂಘಕ್ಕೆ ಧನ ಸಹಾಯವನ್ನು ಮಾಡಿದೆ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

25ನೇ ತಾರೀಕು ವಿಚಾರಗೋಷ್ಠಿಯನ್ನು ಉದ್ಘಾಟಿಸಬೇಕಾಗಿದ್ದ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ್ ಅರಸುರವರು ಬರಲಾಗದೇ ಇದ್ದುದರಿಂದ ಉಪ ಮಂತ್ರಿ ಶ್ರೀಮತಿ ಈವಾ ವಾಜ್ ಅವರು ಆಗಮಿಸಿ ಉದ್ಘಾಟನಾ ಭಾಷಣವನ್ನು ಮಾಡಿದರು. ಉಪಕುಲಪತಿ ಡಾ. ಎಚ್. ನರಸಿಂಹಯ್ಯನವರ ಬದಲು ರಿಜಿಸ್ಟ್ರಾರ್ ಶ್ರೀ ಎಲ್. ಸೂರ್ಯಪ್ರಸಾದ್ ಅವರು ಅಧ್ಯಕ್ಷತೆ ವಹಿಸಿದ್ದರು.

25 – 26ರಂದು ನಡೆದ ಮೂರು ವಿಚಾರಗೋಷ್ಠಿಗಳಲ್ಲಿ ಒಟ್ಟು ಹದಿಮೂರು ಪ್ರಬಂಧಗಳು ಚರ್ಚಿಸಲ್ಪಟ್ಟುವು. ಇವುಗಳು ಸ್ಥೂಲವಾಗಿ ಮೂರು ವರ್ಗಕ್ಕೆ ಸೇರ್ಪಡೆಯಾಗುತ್ತವೆ: (i) ಭಾರತಕ್ಕೆ ಏಕಲಿಪಿಯು ಅಗತ್ಯವಿದೆಯೇ ? (ii) ದೇವ ನಾಗರಿ ಏಕಲಿಪಿಯಾಗಲು ಸಾಧ್ಯವೇ ? (iii) ರೋಮನ್ ಲಿಪಿಯನ್ನೇ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡು ಬಳಸಿದರೆ ಆಗದೇ ?

ಏಕಲಿಪಿಯು ಅಗತ್ಯದ ಬಗ್ಗೆ ಅಂತಹ ಭಿನ್ನಾಭಿಪ್ರಾಯಗಳು ಬರದಿದ್ದರೂ, ದೇವನಾಗರಿ ಮತ್ತು ರೋಮನ್ ಲಿಪಿಗಳ ಬಳಕೆಯ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಗಳು ಬಂದುವು ಮತ್ತು ಅದು ಸಹಜವೇ. ಏಕಲಿಪಿಯ ಬಗ್ಗೆ ಇನ್ನೂ ಹೆಚ್ಚಿನ ಜಿಜ್ಞಾಸೆ ನಡೆದು, ಸರ್ಕಾರ ಈ ಬಗ್ಗೆ ಒಂದು ನಿಶ್ಚಿತ ನಿಲುವನ್ನು ತಳೆಯುವಂತೆ ಮಾಡುವ ಅಗತ್ಯವಿದೆ. "ಸಾಧನೆ"ಯ ಸಂಪಾದಕರಲ್ಲೊಬ್ಬರ (ಡಾ. ಎಂ. ಚಿದಾನಂದ ಮೂರ್ತಿ) ವೈಯಕ್ತಿಕ ಅಭಿಪ್ರಾಯದಲ್ಲಿ – ಕೆಲವು ಬದಲಾವಣೆಗಳೊಡನೆ ರೋಮನ್ ಲಿಪಿಯನ್ನು ಏಕಲಿಪಿಯಾಗಿ ಅಂಗೀಕರಿಸುವುದೇ ಸದ್ಯಕ್ಕೆ ಅತ್ಯುತ್ತಮವಾದ ಮಾರ್ಗ.

ಮೂರು ಗೋಷ್ಠಿಗಳ ಅಧ್ಯಕ್ಷತೆಯನ್ನು ಪ್ರೊ. ಎಂ. ಪಿ. ಎಲ್. ಶಾಸ್ತ್ರಿ, ಡಾ. ಎನ್. ವಿ. ತೀರ್ಥ ಮತ್ತು ಪ್ರೊ. ಸ್ಯಾಮುಯೆಲ್ ಮಥಾಯ್ ವಹಿಸಿದ್ದರು. ವಿಚಾರಗೋಷ್ಠಿಗಳಲ್ಲಿ ಎಲ್. ಎಸ್. ವಾಕಂಕರ್ (ಬೊಂಬಾಯಿ), ಕೆ. ಸುಬ್ಬ ರಾಮಪ್ಪ (ಮೈಸೂರು), ಪಿ. ಸಿ. ಗಣೇಶಸುಂದರಂ (ಬೆಂಗಳೂರು), ಎಚ್. ಎಸ್. ಬಿಳಿಗಿರಿ (ಪೂನ), ಪಿ. ಕೋದಂಡರಾವ್ (ಬೆಂಗಳೂರು), ವಿ. ರಾಘವನ್ (ಮದ್ರಾಸ್) ಡೇನಿಯಲ್ ಲತೀಫ (ದೆಹಲಿ), ದೊಡ್ಡನರಸಿಂಹ (ಬೆಂಗಳೂರು), ವಿ. ಐ. ಸುಬ್ರಹ್ಮಣ್ಯಂ (ತಿರುವಾಂಕೂರು), ಕೆ. ಮಹಾದೇವಶಾಸ್ತ್ರಿ (ಅನಂತಪುರ) ಮುಂತಾದವರು ಭಾಗವಹಿಸಿದ್ದರು.

ಕನ್ನಡ ವಿಮರ್ಶೆಯ ನೆಲೆ–ಬೆಲೆ: ಒಂದು ವಿಚಾರ ಸಂಕಿರಣ

ಹೊಸಗನ್ನಡ ವಿಮರ್ಶಾಸಾಹಿತ್ಯಕ್ಕೆ ಅರ್ಧ ಶತಮಾನದ ಇತಿಹಾಸವಿದೆ. ಈ ಐವತ್ತು ವರ್ಷಗಳಲ್ಲಿ ಕನ್ನಡ ವಿಮರ್ಶೆಯನ್ನು ರೂಪಿಸಿದ ಪ್ರೇರಣೆ ಪ್ರಭಾವಗಳು ಯಾವುವು? ಸ್ವಾತಂತ್ರ್ಯ ಪೂರ್ವದ ವಿಮರ್ಶೆಯ ರೀತಿಗೂ, ಸ್ವಾತಂತ್ರ್ಯೋತ್ತರ ವಿಮರ್ಶೆಯ ರೀತಿಗೂ ಏನಾದರೂ ವ್ಯತ್ಯಾಸಗಳಿವೆಯೆ? ನಮ್ಮ ಸಮಕಾಲೀನ ವಿಮರ್ಶೆಗೆ ಪರಂಪರೆಯ ಹಿನ್ನೆಲೆ ಏನಾದರೂ ಇದೆಯೆ, ಅಥವಾ ಅದು ಕೇವಲ ಪಾಶ್ಚಾತ್ಯದ ಅನುಕರಣವಾಗಿದೆಯೆ? ಸಮಕಾಲೀನ ವಿಮರ್ಶಕನ ಸಮಸ್ಯೆಗಳು ಯಾವುವು? ನಮ್ಮ ಲೇಖಕರು ಹಾಗೂ ಪತ್ರಿಕೆಗಳು ವಿಮರ್ಶನ ಸಾಹಿತ್ಯದ ಬೆಳವಣಿಗೆಯಲ್ಲಿ ವಹಿಸಿರುವ ಪಾತ್ರವೇನು? ಒಟ್ಟಿನಲ್ಲಿ ನಮ್ಮ ಅರ್ಧ ಶತಮಾನದ ವಿಮರ್ಶೆಯ ನೆಲೆ–ಬೆಲೆಗಳು ಯಾವುವು? ಈ ಎಲ್ಲ ಪ್ರಶ್ನೆಗಳನ್ನು ಬಿಚ್ಚುಮನಸ್ಸಿನಿಂದ ಚರ್ಚಿಸುವ ಸಲುವಾಗಿ ಕನ್ನಡ ಅಧ್ಯಯನ ಕೇಂದ್ರವು 1974ನೆ ಜನವರಿ 18, 19 ಮತ್ತು 20ರಂದು ಮೂರು ದಿನಗಳ ಒಂದು ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸಿತು.

ಈ ವಿಚಾರ ಸಂಕಿರಣದ ಉದ್ಘಾಟನೆಯನ್ನು, ಜನವರಿ 18ರಂದು ಬೆಳಿಗ್ಗೆ ಹನ್ನೊಂದು ಗಂಟೆಗೆ, ಭಾರತ ಸರ್ಕಾರದ ಪ್ರವಾಸೋದ್ಯಮ ಖಾತೆಯ ಮತ್ತು ನಾಗರಿಕ ವಿಮಾನಯಾನ ಖಾತೆಯ ರಾಜ್ಯ ಸಚಿವೆ ಡಾ. ಸರೋಜಿನಿ ಮಹಿಷಿಯವರು ಉದ್ಘಾಟಿಸಿದರು. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು, ಕನ್ನಡ ಅಧ್ಯಯನ ಕೇಂದ್ರವು ಕಳೆದ ವರ್ಷ ಕವಿ ಪಂಪನನ್ನು ಕುರಿತು ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಲೇಖನಗಳ ಸಂಗ್ರಹ 'ಪಂಪ: ಒಂದು ಅಧ್ಯಯನ' ಎಂಬ ಕೃತಿಯನ್ನೂ ಮತ್ತು 'ಸಾಹಿತ್ಯ ವಾರ್ಷಿಕ 1972' ಎಂಬ ಕೃತಿಯನ್ನೂ ಬಿಡುಗಡೆ ಮಾಡಿದರು. ಉಪಕುಲಪತಿ ಡಾ. ಎಚ್. ನರಸಿಂಹಯ್ಯನವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಅನಂತರ ತಾ॥ 18ರ ಮಧ್ಯಾಹ್ನದಿಂದ, ತಾ॥ 20ರ ಸಂಜೆಯ ತನಕ ಐದು ಗೋಷ್ಠಿಗಳಲ್ಲಿ ಹರಹಿಗೊಂಡ ಈ ಸಂಕಿರಣವನ್ನು ಅನುಕ್ರಮವಾಗಿ ಡಾ. ರಂ. ಶ್ರೀ. ಮುಗಳಿ, ಡಾ. ಹಾ. ಮಾ. ನಾಯಕ್, ಡಾ. ಪ್ರಭುಶಂಕರ, ಶ್ರೀ ಜಿ. ಪಿ. ರಾಜರತ್ನಂ ಮತ್ತು ಡಾ. ಎಸ್. ಎಲ್. ಭೈರಪ್ಪ ಇವರು ಅಧ್ಯಕ್ಷತೆ ವಹಿಸಿ ನಡೆಯಿಸಿಕೊಟ್ಟರು.

ಕನ್ನಡ ನಾಡಿನ ಲೇಖಕರು, ವಿಮರ್ಶಕರು ಮತ್ತು ವಿಚಾರವಂತರು ಕೂಡಿ ನಡೆಯಿಸಿದ ಈ ವಿಚಾರ ಸಂಕಿರಣದಲ್ಲಿ ಒಟ್ಟು ಹದಿಮೂರು ಲೇಖನಗಳು ಮಂಡಿತವಾದವು. ಲೇಖನಗಳನ್ನು ಕುರಿತು ಸಾಕಷ್ಟು ಚರ್ಚೆಗಳು ನಡೆದವು.

ಕನ್ನಡ ಅಧ್ಯಯನ ಕೇಂದ್ರ ನಡೆಯಿಸಿದ ವಿಚಾರ ಸಂಕಿರಣಗಳಲ್ಲಿ ಇದು ನಾಲ್ಕನೆಯದು. ಹಿಂದಿನ ಮೂರು ಸಂಕಿರಣಗಳು ಯಾವ ಉದ್ದೇಶದಿಂದ ಏರ್ಪಟ್ಟವೋ, ಅದೇ ಉದ್ದೇಶದಿಂದಲೇ ಈ ನಾಲ್ಕನೆಯ ವಿಚಾರ ಸಂಕಿರಣವೂ ಏರ್ಪಟ್ಟಿತು. ಈ ಸಂಕಿರಣದಲ್ಲಿ ಮಂಡಿತವಾದ ಈ ಎಲ್ಲ ಲೇಖನಗಳು ಪುಸ್ತಕ ರೂಪದಲ್ಲಿ ಪ್ರಕಟವಾದಾಗ ಇಂಥ ಸಂಕಿರಣಗಳ ಪ್ರಯೋಜನವೇನು ಎನ್ನುವುದು ಹೆಚ್ಚು ಸ್ಫುಟವಾಗುವುದಲ್ಲದೆ, ಕನ್ನಡ ವಿಮರ್ಶೆಯ ಬೆಳವಣಿಗೆಯಲ್ಲಿ ಕನ್ನಡ ಅಧ್ಯಯನ ಕೇಂದ್ರ ವಹಿಸುತ್ತಿರುವ ಪಾತ್ರವೇನು ಎನ್ನುವುದು ಮನವರಿಕೆಯಾದೀತು.

ವಿ. ಸೀ. ಯವರಿಗೆ ಅಭಿನಂದನೆ

ಕೇಂದ್ರ ಸಾಹಿತ್ಯ ಅಕ್ಯಾಡಮಿಯು, ಶ್ರೀ ವಿ. ಸೀತಾರಾಮಯ್ಯನವರ 'ಅರಲು–ಬರಲು' ಎಂಬ ಕವನ ಸಂಗ್ರಹಕ್ಕೆ ಐದು ಸಾವಿರ ರೂ.ಗಳ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕವಿಯಾಗಿ, ವಿಮರ್ಶಕರಾಗಿ, ಸಮಕಾಲೀನ ಸಾಹಿತ್ಯದ ಪ್ರೇರಕ ಶಕ್ತಿಯಾಗಿ ಮನೆಮಾತಾಗಿರುವ ಶ್ರೀ ವಿ. ಸೀತಾರಾಮಯ್ಯನವರನ್ನು, ಈ ಸಂದರ್ಭದಲ್ಲಿ 'ಸಾಧನೆ'ಯು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಈ ಸಂಚಿಕೆಯ ಲೇಖಕರು

ಡಾ. ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಎ. ಶ್ರೀಪಾದ	ಕನ್ನಡ ಅಧ್ಯಾಪಕ ವಿಜಯ ಕಾಲೇಜು ಬೆಂಗಳೂರು 560004
ಬಿ. ಜಿ. ಎಲ್. ಸ್ವಾಮಿ	ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ ಪ್ರೆಸಿಡೆನ್ಸಿ ಕಾಲೇಜು ಮದ್ರಾಸ್
ಎಚ್. ಚನ್ನಬಸವಯ್ಯ	ಸಮಾಜಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560009
ವೈ. ರಾಜಶೇಖರ್	33, 15ನೇ ಕ್ರಾಸ್, 3ನೇ ಬ್ಲಾಕ್ ಜಯನಗರ, ಬೆಂಗಳೂರು 560011
ಎಂ. ಎನ್. ಜೈಪ್ರಕಾಶ್	ರಥಬೀದಿ, ತೀರ್ಥಹಳ್ಳಿ ಶಿವಮೊಗ್ಗಾ ಜಿಲ್ಲೆ
ಎನ್. ರಂಗನಾಥ ಶರ್ಮಾ	'ಜಾನಕಿ ಕೃಪ', 831, 4ನೇ ಮೇನ್ ಹೊಸಹಳ್ಳಿ, ಬೆಂಗಳೂರು 560040
ಎಸ್. ವೆಂಕಟೇಶಮೂರ್ತಿ	ಅಧ್ಯಾಪಕ, ರಸಾಯನ ಶಾಸ್ತ್ರ ವಿಭಾಗ ನ್ಯಾಷನಲ್ ಕಾಲೇಜು ಬಸವನಗುಡಿ, ಬೆಂಗಳೂರು 560004

ಕೆ. ವಿ. ಶ್ರೀನಿವಾಸ ಪ್ರಭು	ಸೀನಿಯರ್ ಎಂ.ಎ. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಜಯಸುದರ್ಶನ	769, 5ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು 560039
ದೇವರ ಕೊಂಡಾರೆಡ್ಡಿ	ಕನ್ನಡ ಅಧ್ಯಾಪಕ ಸರ್ಕಾರಿ ಜೂನಿಯರ್ ಕಾಲೇಜು ಗುಂಡ್ಲುಪೇಟೆ
ವೈ. ಲಿಂಗರಾಜು	452, 18ನೇ ಮೇನ್ 4ನೇ ಬ್ಲಾಕ್ ಟಿ., ಜಯನಗರ ಬೆಂಗಳೂರು 560011
ಲಿಂಗದೇವರು ಹಳೇಮನೆ	ಭಾರತೀಯ ಭಾಷಾ ಸಂಸ್ಥಾನ ಮಾನಸಗಂಗೋತ್ರಿ, ಮೈಸೂರು 570006
ಎಚ್. ಎಸ್. ವೆಂಕಟೇಶಮೂರ್ತಿ	ಕನ್ನಡ ಅಧ್ಯಾಪಕ ಸೆಯಿಂಟ್ ಜೋಸೆಫ್ಸ್ ಕಾಲೇಜ್ 73, ಬ್ರಿಗೇಡ್ ರೋಡ್ ಬೆಂಗಳೂರು 560025
ಎಸ್. ಶಿವಣ್ಣ	ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಟಿ. ಬಿ. ಚಂದ್ರಶೇಖರ್	ಅರ್ಥಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಕೆ. ಎಸ್. ಮಧುಸೂದನ	ಕನ್ನಡ ಅಧ್ಯಾಪಕರು ಆಚಾರ್ಯ ಪಾಠಶಾಲಾ ಸಂಜೆ ಕಾಲೇಜು ಬೆಂಗಳೂರು 560019

ಕ. ರಾ. ಮೋಹನ್	43, 1ನೇ ಬ್ಲಾಕ್ ಜಯನಗರ, ಬೆಂಗಳೂರು 560028
ಸೀತಾರಾಮ ಜಾಗೀರದಾರ	ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಎಸ್. ಡಿ. ಸವದತ್ತಿಮಠ	ಸಂಶೋಧನಾ ಸಹಾಯಕ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಗುಲ್ಬರ್ಗ 5
ಎಂ. ಮಾಧವ ಪೈ	ಕನ್ನಡ ಅಧ್ಯಾಪಕ ಜಿ 236, ಪೇಪರ್ ಟೌನ್ ಭದ್ರಾವತಿ

ಬೆಂಗಳೂರು
ವಿಶ್ವವಿದ್ಯಾಲಯದ ಪ್ರಕಟಣೆಗಳ ವಿವರಗಳಿಗೆ
ದಯವಿಟ್ಟು ವ್ಯವಹರಿಸಿ :

ಉಪ-ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ